ಕಿಂಡಯ್ಯ ಸ್ವಾಮಿ

ಶ್ರೀ ಗುರುಮಲ್ಲೇಶ್ವರ ಗ್ರಂಥ ರತ್ನಮಾಲಾ–ಸಂಖ್ಯೆ ೨

ನಾನಾ ಕವಿಗಳಕೃತ

ಬಸವ ಚೆನ್ನಬಸವಾದಿ

# ಕಾಲಜ್ಞಾನ ಸಂಗ್ರಹ

ಭಾಗ – ೧

ಸಂಪಾದಕರು:
ಶ್ರೀ ಶಿವಬಸವಸ್ವಾಮಿಗಳು



ಶಿವಶರಣ ವಾಙ್ಮಯ ಪ್ರಕಾಶ ಕಾರ್ಯಾಲಯ,
ಮೈಸೂರು
೧೯೪೬.

ಮೊದಲನೆಯ ಮುದ್ರಣ: ೧೯೪೬

ಈ ಗ್ರಂಥದ ಎಲ್ಲಾ ಹಕ್ಕುಗಳನ್ನು ಸಂಪಾದಕರದಾಗಿ ಇರಿಸಲಾಗಿದೆ.
(All Rights reserved by Editor)

ಮುದ್ರಣಕಾರರು:
ಆರ್. ಎನ್. ಹೆಬ್ಬು,
ಉಷಾ ಪ್ರೆಸ್, ಮೈಸೂರು



ರುದ್ರಮುನಿ, ಚೆನ್ನಬಸವ, ಮಡಿವಾಳ, ನೀಲಾಂಬೆ ಇವರು ಭವಿಷತ್ ಆಲೋಚಿಸುವಿಕೆ.

ದೇವನೂರು ಮಠದ ಮೊದಲನೆಯ ಸ್ಥಾಪಿತರು



ಶ್ರೀಮನ್ನಿರಂಜನ ಲಿಂಗ ಚಕ್ರವರ್ತಿ ಮುಪ್ಪಿನ ಮಹಾಸ್ವಾಮಿಯು

## ಸಮರ್ಪಣ

ಬಸವಾದಿ ಪ್ರಮಥರ ನಡೆನುಡಿಯ ಕೈಕೊಂಡು ಬಹು
ವೈರಾಗ್ಯದಿಂ ಆಚರಿಸಿ ತೋರಿದ ಶ್ರೀಮನ್ನಿರಂಜನ
ಲಿಂಗ ಚಕ್ರವರ್ತಿ **ಮುಪ್ಪಿನ** ಮಹಾಸ್ವಾಮಿ
ಯವರ ನೆನಹಿಗಾಗಿ ಅವರ ಚರಣ
ದ್ವಯಕ್ಕೆ ಈ ಕಾಲಜ್ಞಾನ ಸಂಗ್ರಹ
ಗ್ರಂಥವನ್ನು ಭಕ್ತಿಯ
ಮು ಡಿ ಪಾ ಗಿ
ಅರ್ಪಿಸಿದೆ.

*

ಸಂಪಾದಕರು :
**ದೇವನೂರು ಮಠ**



ಶಿವಶರಣ ವಾಙ್ಮಯ ಪ್ರಕಾಶ ಕಾರ್ಯಾಲಯದ
ಪ್ರಕಟಣೆಗಳ ಸ್ಮಾರಕಾಧಿಷ್ಠಾನರೂ,
ದಕ್ಷಿಣಕರ್ನಾಟಕದಲ್ಲಿ ಸದ್ಭಕ್ತಿ ತಳಹದಿಯ ಸ್ಥಾಪಿಸಿದ
ಶ್ರೀ ಗುರುಮಲ್ಲೇಶ್ವರ
ಮಹಾಸ್ವಾಮಿಯವರು
ದೇವನೂರು ಮಠ



ಂಥವನ್ನು ವಿಮರ್ಶಿಸಿನೋಡಿ ನನ್ನನ್ನು ಪ್ರೋತ್ಸಾಹಿಸಿದ ಚಿತ್ರಕಲ್ ರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ುರುಘರಾಜೇಂದ್ರ ಮಹಾಸ್ವಾಮಿಯವರು ಮತ್ತು ಧಾರವಾಡದ ್ರೀಮನ್ನಿರಂಜನ ಮೃತ್ಯುಂಜಯ ಮಹಾಸ್ವಾಮಿಯವರು, ಗಳೂರು ಸರ್ಪಭೂಷಣ ಮಠದ ಶ್ರೀಮನ್ನಿರಂಜನ ಮಹಾದೇವ ್ವಾಮಿಯವರು, ಪ್ರೊ. ಶಿ. ಶಿ. ಬಸವನಾಳ ಎಂ. ಎ. ಧಾರವಾಡ. ವಸಾಹೇಬ, ಬಿ. ಎ. ಎಲ್, ಎಲ್, ಬಿ. ಹಳಕಟ್ಟಿ. ಶ್ರೀವರ್ಮಾ ಹರ್ಡೇಕರ ಂಜಪ್ಪ, ಹಾಲವಟ್ಟಿ. ಪಂಡಿತ ನಾಗಭೂಷಣಶಾಸ್ತ್ರಿಗಳು ಗದಗ. ಾ. ಪ್ರೊ. ಎಂ. ಸಿದ್ಧಲಿಂಗಯ್ಯ, ಎಂ. ಎ. ಬಿ. ಟಿ. ಪಿ. ಹೆಚ್, ಡಿ. ಮಹಾ ಾಜರವರ ಕಾಲೇಜ್ ಮೈಸೂರು. ಇವರೇ ಮೊದಲಾದ ಮಹನೀಯರು ುಂದಿನ ಸಾಹಿತ್ಯದ ಬೆಳವಣಿಗೆಯ ಅಪೇಕ್ಷಕರಾಗಿ ತಮ್ಮ ಸಲಹಾಭಿಪ್ರಾಯ ಳನ್ನು ವ್ಯಕ್ತಪಡಿಸಿರುತ್ತಾರೆ. ಇಂಥ ಉಜ್ವಲ ರಾಷ್ಟ್ರೀಯ ಸಾಹಿತ್ಯ ್ರೇಮಿಗಳಿಗೆಲ್ಲ ಈ ಗ್ರಂಥವು ಸಹ ಆದರಣೀಯವಾಗುವುದೆಂದು ನಂಬಿದ್ದೇನೆ.

ಮುಂದಿನ ಗ್ರಂಥ ಪ್ರಕಟಣೆಗಳ ಶೋಧನೆಯ ಸಿದ್ಧತೆ ನಡೆದಿದೆ. ಗಿನ ಪ್ರತಿಯೊಂದು ಸಾಮಗ್ರಿಗಳ ಅಭಾವದ ಅನಾನುಕೂಲತೆಯ ದೆಸೆ ಿಂದ ಸಾಹಿತ್ಯದ ಮುನ್ನಡೆ ಹಿಂದಕ್ಕೆ ಜರಿಯುತ್ತಲಿದೆ. ಇದನ್ನು ಬುಡ ೇಲಾಗುವಂತೆ ಸೆಳೆದು ಹೊರಗಿಡುವ ಭಾರ ಮುಕ್ಕಾಲು ಭಾಗ ಸಾಹಿತ್ಯ ್ರೇಮಿಗಳ ಧನ ಸಲಹೆಯನ್ನೇ ಅವಲಂಬಿಸಿರುವುದು.

ಮೈಸೂರು
೮-೧೨-೧೯೪೬

ಸಂಪಾದಕರು:
ಶ್ರೀ ಶಿವಬಸವಸ್ವಾಮಿಗಳು

# ಮುನ್ನುಡಿ

ಹಿಂದೊಮ್ಮೆ ಬಹು ವೈಭವದಿಂದ ಮೆರೆದ ನಮ್ಮ ಕನ್ನಡನಾಡು
ಕಾಲದವರೆಗೆ ಸುಪ್ತಾವಸ್ಥೆಯಲ್ಲಿದ್ದು ಪುನಃ ಎಚ್ಚತ್ತಿದೆ. ಈಗ ಅಲ್ಲಲ್ಲಿ ನಡ
ಚಟವಟಿಕೆಗಳು ಎಚ್ಚರದ ಕುರುಹುಗಳು. ಜನಜೀವನದ ಪ್ರತೀತವಾ
ಸಾಹಿತ್ಯದ ಸಂಶೋಧನೆ ಹಾಗೂ ರಚನೆಯ ಕಾರ್ಯವು ತೀವ್ರವಾಗದಿದ್ದರ
ಮಂದವಾಗಿಯಾದರೂ ನಡೆದಿರುವದು ಸಂತೋಷದ ಸಂಗತಿಯು.

ಶ್ರೀ ಶಿವಬಸವಸ್ವಾಮಿಗಳವರು ಶರಣ ತತ್ವ ಪ್ರಚಾರದಂತಹ ಘನವಾ
ಕಾರ್ಯ ಕೈಕೊಂಡದ್ದು ಮಠಾಧಿಪತಿಗಳಿಗೆಲ್ಲಾ ಅನುಕರಣೀಯವಾಗಿದೆ. ಇವ
ಇಷ್ಟರಲ್ಲಿಯೇ ಸಂಪಾದಿಸಿದ "ಶರಣ ಲೀಲಾಮೃತ" ಗ್ರಂಥವು ರಸಿಕರಾ
ಸಾಹಿತಿಗಳ ಮನವನ್ನು ಸೆರೆಹಿಡಿಯುವಷ್ಟು ಒಳಹೊರಗೂ ಮುದ್ದಾಗಿ
ವದು. ಈಗ "ಕಾಲಜ್ಞಾನ ಸಂಗ್ರಹ" ಎಂಬ ಗ್ರಂಥವು ಶುದ್ಧ ಮುದ್ದಾಗಿ ಹೊ
ಟಿದೆ. ಇನ್ನೂ ಅನೇಕ ಉಪಯುಕ್ತ ಗ್ರಂಥಗಳು ಶ್ರೀಗಳವರ ಪರಿಶ್ರಮ
ಫಲವಾಗಿ ಹೊರಬಿದ್ದು ಕನ್ನಡಿಗರ ಜ್ಞಾನಾಭಿವೃದ್ಧಿಗೆ ನೆರವಾಗುವವೆಂ
ನಂಬಿದ್ದೇವೆ.

ಭಾರತ ದೇಶವು ಮಹಾಪುರುಷರ ಲೀಲಾ ಭೂಮಿಯೆಂದು ಹೊರನಾ
ನವರು ಕೂಡಾ ಹೇಳಿರುವುದುಂಟು. ಭಾರತದ ಇತಿಹಾಸಪುಟಗಳೆಲ್ಲಾ ಮಹ
ಪುರುಷರ ಜೀವನಚರಿತ್ರೆಗಳಿಂದ ತುಂಬಿಹೋಗಿವೆ. ಅದರಲ್ಲಿಯೂ ನಮ
ಕನ್ನಡನಾಡು ಒಂದು ವಿಶಿಷ್ಟ ಸ್ಥಾನವನ್ನು ಮಾನವನ್ನು ಪಡೆದಿದೆ. ಆಧ್ಯಾ
ತ್ಮಿಕ ಜ್ಞಾನದ ಬೆಳವಣಿಗೆಗೆ ಹುಲುಸಾದ ಭೂಮಿಯಂತಿರುವುದು.

ನಮ್ಮೀ ಕನ್ನಡ ನಾಡಿನಲ್ಲಿ ಬಸವಾದಿ ಶರಣರು ಮಾಡಿದ ಕ್ರಾಂತಿಯ
ಅಭೂತಪೂರ್ವವಾದುದು. ಇವರು ಪ್ರಪಂಚವನ್ನು ಅಲ್ಲಗಳೆಯುವ ಗೊಡ
ವೇದಾಂತಿಗಳಂತೆ ಶುಷ್ಕಜ್ಞಾನವಾದಿಗಳಾಗಿರಲಿಲ್ಲ. ಅಥವಾ ಕರ್ಮದ ಜಂಜಾ



ಳಲ್ಲಿ ಸಿಕ್ಕಿ ಬಳಲುವ ಮಡ್ಡು ಸಿದ್ಧಾಂತಿಗಳಂತೆ ಕರ್ಮಠರಾಗಿರಲಿಲ್ಲ. ಆದರೆ ದುಃಖಮಯವೆಂದು ಹೇಳಿಸಿಕೊಳ್ಳುವ ಜಗತ್ತನ್ನೇ ಸುಖಮಯ ಕೈಲಾಸವನ್ನಾಗಿ ಮಾಡುವ ಕರ್ಮಕೌಶಲ್ಯವುಳ್ಳವರಾಗಿದ್ದರು. ಮಾಯಿಕಪ್ರಪಂಚವನ್ನು ಶಿವಪ್ರಪಂಚವನ್ನಾಗಿಮಾಡಿ ಭೋಗ ಸುಖವನ್ನೇ ಯೋಗ ಸುಖರೂಪದಲ್ಲಿ ಮಾರ್ಪಡಿಸುವ ಶರಣರ ಲಿಂಗಯೋಗಾನುಭವವು ತತ್ವಜ್ಞಾನಿಗಳ ತಲೆದೂಗಿಸುವಂತಹದಾಗಿದೆ. ಇತ್ತೀಚಿಗೆ ವಿಜ್ಞಾನಿಗಳ ಸಂಶೋಧನೆಯ ಕಹಿಫಲವನ್ನು ಜಗತ್ತು ಅನಿವಾರ್ಯವಾಗಿ ಅನುಭೋಗಿಸುವ ಪ್ರಸಂಗ ಬಂದೊದಗಿದೆ. ಮಾನವ ಜಗತ್ತು ಮಹಾವಿಪತ್ತಿನ ಕಾಡುಗಿಚ್ಚಿನಲ್ಲಿ ಬಿದ್ದು ವಿಲಿ ವಿಲಿ ಒದ್ದಾಡುವದನ್ನು ನೋಡಿದ ಕೆಲಜನ ಶಾಂತಿಪ್ರಿಯರು ಶಾಂತಿ ಪರಿಷತ್ತನ್ನು ಕೂಡಿಸಿ ಜಗತ್ತಿನ ಶಾಂತಿಯನ್ನು ಗುರಿಯಾಗಿಟ್ಟುಕೊಂಡು ಕಂಡುಹಿಡಿದ ತತ್ವಗಳನ್ನು ಶರಣರು ಹಿಂದೆಯೇ ಉಸುರಿರುವರೆಂದು ನೆನಸಿಕೊಂಡರೆ ಶರಣರ ಸೂಕ್ಷ್ಮ ದರ್ಶನದ ಪರಿಚಯವಾಗದಿರದು. ಇನ್ನು ಇವರ ಬುದ್ಧಿಗೆ ನಿಲುಕದ ಎಷ್ಟೋ ತತ್ವಗಳನ್ನು ಹೇಳಿದ್ದಾರೆ. ಜಗತ್ತಿನಲ್ಲಿ ಎಂದಾದರೊಮ್ಮೆ ಶಾಂತಿಪ್ರತಿಷ್ಠೆಯಾಗುವುದಾದರೆ ಶರಣರ ತತ್ವಗಳ ತಳಹದಿಯು ಅಗತ್ಯ ಉಂಟು.

ಶರಣರು ಶಿವಜ್ಞಾನಿಗಳಾಗಿದ್ದಂತೆ ಕಾಲಜ್ಞಾನಿಗಳೂ ಆಗಿದ್ದರು. ಶಿವಜ್ಞಾನಿಗಳು ಕಾಲಜ್ಞಾನಿಗಳಾಗುವದೇನೋ ಆಶ್ಚರ್ಯವಲ್ಲ. ಕಾಲಜ್ಞಾನಿಗಳೆಲ್ಲರೂ ಶಿವಜ್ಞಾನಿಗಳಾಗುವರೆಂದು ಹೇಳಲುಮಾತ್ರ ಬರುವದಿಲ್ಲ. ಕಾಲಜ್ಞಾನವೊಂದು ಸಿದ್ಧಿಯು. ಪತಂಜಲಿ ಋಷಿಗಳು ತಮ್ಮ ಯೋಗದರ್ಶನದ ವಿಭೂತಿಪಾದದಲ್ಲಿ "ಪರಿಣಾಮತ್ರಯ ಸಂಯಮಾದತೀತಾನಾಗತಜ್ಞಾನಂ" ಎಂದು ಹೇಳಿದ್ದಾರೆ. ಅಂದರೆ ಧರ್ಮ, ಲಕ್ಷಣ, ಅವಸ್ಥಾ, ಎಂಬ ಮೂರು ಪರಿಣಾಮಗಳಲ್ಲಿ ಸಂಯಮ ಮಾಡುವುದರಿಂದ ಕ್ರಮವಾಗಿ ಭೂತ ವರ್ತಮಾನ ಭವಿಷ್ಯತ್ ಕಾಲದ ಜ್ಞಾನವಾಗುವದು. ಸಿದ್ಧಿಗಳೆಲ್ಲಾ ಅಭ್ಯುದಯಕ್ಕೆ ಸಾಧನಗಳಾಗಿದ್ದು ಮೋಕ್ಷಪ್ರಾಪ್ತಿಯಲ್ಲಿ ಬಾಧಕಗಳಾಗಿರುವವು. ಈ ವಿಷಯದಲ್ಲಿ "ಸರ್ವಾಸ್ವಭ್ಯುದಯಸ್ಯಾಪಿ ಬೀಜೇಷು ಯೋಗಸಿದ್ಧಿಷು । ಮತ್ಸಾಯುಜ್ಯ ದಶಾಪ್ರಾಪ್ತೌ ಬಾಧಿತಾಸ್ಥಾನ ಸಾಧಿತಾಃ" ಎಂಬ ಭಗವದುಕ್ತಿಯು ಮೇಲಿನ

ಮಾತನ್ನು ಸಮರ್ಥಿಸುತ್ತದೆ. ಶ್ರೀಕಾಲಜ್ಞಾನದಿಂದ ಕೆಲವು ಯೋಗ ವಿ
ಗಳು ಪರಿಹಾರವಾಗುವವು.

ಶರಣರು ಕಾಲಜ್ಞಾನ ಹೇಳಿದ್ದು ಜನತೆಯಲ್ಲಿ ಸ್ವಪ್ರತಿಷ್ಠೆಯನ್ನು ಬೆ
ಕೊಳ್ಳಬೇಕೆಂದಲ್ಲ. ಆತ್ಮಸ್ವಾತಂತ್ರ್ಯದಲ್ಲಿ ಸಹಜವಾಗಿ ದೊರೆಯಬಹುದಾ
ನೈಜವಾದ ಶಿವಾನಂದವನ್ನು ಯಥೇಚ್ಛವಾಗಿ ಅನುಭವಿಸಬಲ್ಲ ಶರಣ
ಛಾತ್ರಮುಕ ಪ್ರತಿಷ್ಠೆಯು ಕಲ್ಪನೆಯು ಎಂದೂ ಬಾರದು. ಕಾಲನ ಕರ
ಪ್ರವಾಹದಲ್ಲಿ ಸಿಕ್ಕಿ ಅನಂತ ಕಷ್ಟಪರಂಪರೆಗಳನ್ನನುಭವಿಸುವಂತಹ ಮಾನ
ಜನಾಂಗಕ್ಕೆ ಕಾಲಜ್ಞಾನ ವಚನಗಳಿಂದ ಎಚ್ಚರಗೊಟ್ಟು ಅದರಲ್ಲಿ ಶಿವಭ
ಯನ್ನು ಹುಟ್ಟಿಸಿ ಕಾಲನ ಬಾಧೆಯನ್ನು ತಪ್ಪಿಸುವದೇ ಅವರ ಪರಮೋದ್ದೇ
ಜಗತ್ತಿನ ಎಲ್ಲ ವ್ಯವಹಾರವು ಕಾಲಾಧೀನವಾಗಿರುವದೆಂದು ಅನೇಕರ ನಂಬಿ
ಆದರೆ ಆ ಕಾಲವು ಸ್ವತಂತ್ರವಾಗಿರದೆ ಶಿವಾಧೀನವಾಗಿರುವದೆಂಬ ಸತ್ಯ ಕ
ನೆಯು ಅಮರಿಗುಂಟಾದರೆ ಶಿವಭಕ್ತಿಯಿಂದ ಕಾಲನ ಕಾಟವನ್ನು ಕಳೆ
ಕೊಳ್ಳಲು ಅನುಕೂಲವಾಗುವದಷ್ಟೆ! ಕಾಲಗರ್ಭದಲ್ಲಿ ಹುದುಗಿಕೊಂಡಿ
ವಿಪತ್ತುಗಳನ್ನು ತಿಳಿಯದೆ ಅವುಗಳಿಗೆ ತುತ್ತಾಗಿ ಹೋಗುವ ಮಾನ
ಜನಾಂಗಕ್ಕೆ ಕಾಲ ಕಾಲನಾದ ಶಿವನನ್ನು ಮರೆಹೋಗುವುದಕ್ಕಿಂತ ಬೇ
ಉಪಾಯವಿಲ್ಲ.

ಕಾಲಜ್ಞಾನ ವಚನಗಳಲ್ಲಿ ಹೇಳಿದ ಎಷ್ಟೋ ಸಂಗತಿಗಳು ಈಗಾಗಲೆ
ಸತ್ಯವಾಗಿ ಪರಿಣಮಿಸಿವೆ. ಕೆಲವನ್ನು ಮಾತ್ರ ಉದಹರಿಸಬಹುದು.

ಎತ್ತು ಕುದುರೆಗಳಿಲ್ಲ। ಎತ್ತಿ ಪಿಡಿಯುವರಿಲ್ಲ
ಒತ್ತಿ ಎಳೆಯುವರು–ಯಾರಿಲ್ಲದಾ ರಥವು।
ಒತ್ತಿ ನಡೆದೀತು ನಂಜೇಶ॥
ತಂತ್ರಮಂತ್ರಗಳಡಗಿ। ಸಂತ ಸಾಧುಗಳಳಿದು।
ಯಂತ್ರದೊಡೆಯನ–ಶಾಸನ ವೈಚಿತ್ರ್ಯ।
ತಂತ್ರ ನೋಡಯ್ಯ ನಂಜೇಶ॥
ಕಾಲತಿಳಿಸುವ ಯಂತ್ರ। ಪಾಲು ಕಡೆಯುವ ಯಂತ್ರ।



ನೂಲು ಮಾಡುವದು–ಜಗದೊಳಗೆ ಸೊಗಸಾದ।
ಮೇಲಾದ ಯಂತ್ರ ನಂಜೇಶ॥
ವಸ್ತ್ರ ನೇಯುವ ಯಂತ್ರ। ಶಾಸ್ತ್ರ ಬರೆಯುವ ಯಂತ್ರ।
ಶಸ್ತ್ರ ಮಾಡುವದು–ಹೊಸ ಯಂತ್ರ ಯಂತ್ರಗಳ
ಚಿತ್ರವನು ನೋಡು ನಂಜೇಶ॥
ರಥವ ನಡೆಸುವ ಯಂತ್ರ। ಕಥೆಯ ಪೇಳುವ ಯಂತ್ರ
ಪಥಿಕ ಜನರನ್ನು–ಒಯ್ಯುವಾ ಯಂತ್ರ।
ಕಥೆಯನೇನೆಂಬೆ ನಂಜೇಶ॥
ಗೀತ ಪಾಡುವ ಯಂತ್ರ। ಮಾತನಾಡುವ ಯಂತ್ರ।
ಸೇತು ಕಟ್ಟುವದು–ಪ್ರತಿಯಂತ್ರ ಜಗದೊಳಗೆ।
ಖ್ಯಾತಿ ಪೊಂದುವದು ನಂಜೇಶ॥
ರೋಗ ಪೇಳುವ ಯಂತ್ರ। ಯೋಗ ತೋರುವ ಯಂತ್ರ
ಸಾಗರದ ನೆಲೆಯ–ತೋರಿಸುವ ಪೊಸಯಂತ್ರ।
ನೇಗಿಲದ ಯಂತ್ರ ನಂಜೇಶ॥
ನೆಲದ ಮೇಲಿನ ರಥವು। ಜಲದ ಮೇಲಿನ ರಥವು।
ಬಲವಾದ ರಥವು–ಗಗನದೊಳು ನಡೆಯುವ।
ಛಲವನೇನೆಂಬೆ ನಂಜೇಶ॥

ಈ ವಚನಗಳಲ್ಲಿ ಹೇಳಿದ ಎಲ್ಲವೂ ಪ್ರತ್ಯಕ್ಷವಾಗಿರುವವೆಂಬುದು ಸಹಜ
ವು ಈಗಿನವರ ಕೈವಾಡವಾಗಿರುವವೆಂದು ಯಾರಾದರೂ ಊಹಿಸಬಹುದೊ!
ದರಂತೆ.

ಹುಲಿಗೆ ಅಂಜದ ಜನರು। ಇಲಿಗೆ ಅಂಜುವರಯ್ಯ।
............ಒಕ್ಕಲಿಗರೆಲ್ಲರೂ ಬಿಕ್ಕಿ ಬೇಡುವರಯ್ಯ............
ಪಾಲು ನೀರಂಗೂಡಿ ಶೀಲವಿಲ್ಲದೆ ಸವಿದು................

ಇತ್ಯಾದಿ ವಚನಗಳಲ್ಲಿ ಹೇಳಿದ್ದು ಸತ್ಯವಾಗಿರುವದಿಲ್ಲವೇ!

ಇನ್ನುಳಿದ ಬಸವ ಚೆನ್ನಬಸವಾದಿಗಳ ವಚನಗಳನ್ನು ಉದಹ ಬಹುದು. ವಿಸ್ತಾರ ಭಯದಿಂದ ಹಾಗೆ ಮಾಡಲಾಗಲಿಲ್ಲ. ಓದುಗರು ಸರಿಯಾ ಓದಿ ತಿಳಿದುಕೊಳ್ಳಬೇಕೆಂದು ಬೇಡುವೆವು. ಬಸವಾದಿ ಶಿವಶರಣರು ತಾ ಪುನಃ ಏಳನೂರ ಎಪ್ಪತ್ತು ವರುಷಗಳನಂತರ ಈ ಭೂಲೋಕಕ್ಕೆ ಅವತ ಮಾಡುವದಾಗಿ ಹೇಳಿದ್ದಾರೆ. ಆಗ ಕೆಲವು ಕುರುಹುಗಳಾಗುವವು ಎಂದಿ ವರು. "ಭೌತಿಕ ಶಾಸ್ತ್ರಕ್ಕೆ ಭೀತಿವೊದುತ ಜನರು। ಆತುಕೊಳ್ಳುವ ಜ್ಞಾನಕ್ಕೆ ಜಗದೊಳಗೆ ಆತುರದಿ ನೋಡು ನಂಜೇಶ" ಎಂಬ ವಚನಕ್ಕ ಸರಿಸಿ ಭೌತಿಕ ಶಾಸ್ತ್ರದಿಂದ ಜಗತ್ತಿಗೆ ಎಷ್ಟು ಹಾನಿಯೆಂಬುದು ಈಗಾಗ ಜನರ ಮನಸ್ಸಿನ ಮೇಲೆ ಸರಿಯಾದ ಪರಿಣಾಮವಾಗಿದೆ. ಜ್ಞಾನದ ಆತುರ ಹೆಚ್ಚುತ್ತಲಿದೆ. ಈಗ ಶರಣರ ಉದಯ ಕಾಲದ ಅರುಣೋದಯವಾಗಿರುವು ಅಂದು ನುಡಿದ ಅವರ ನುಡಿಗಳು ಇಂದು ಎಲ್ಲರ ಕಿವಿಗಳಿಗೆ ಇಂಪಾಗುವ ರ ಯಲ್ಲಿ ಕೇಳಬರುತ್ತವೆ. ಅವರ ತತ್ವಗಳು ತತ್ವ ಬುಭುತ್ಸುಗಳ ಮನವನ ಪೂರ್ಣವಾಗಿ ಆಕರ್ಷಿಸಿಬಿಟ್ಟವೆ. "ಮರ್ತ್ಯಲೋಕದವರ ಮನದ ಮೈಲಿಗೆ ಕಳೆಯಲೆಂದು ಗೀತಾ ಮಾತೆಂಬ ಜ್ಯೋತಿಯ ಬೆಳಗಿ ಕೊಟ್ಟರು" ಎಂಬು ದಿಟವಾಗಿರುವದು. ಮತ್ತೊಮ್ಮೆ ಕನ್ನಡನಾಡು ತನ್ನ ಗತ ವೈಭವವ ತಿರುಗಿ ಪಡೆದುಕೊಂಡು ಭಾರತಕೆ ಗುರುಕುಲವಾಗಿ ಮೆರೆಯುವ ಕಾಲವು ಶ ಸನ್ನಿಹಿತವಾಗಿದೆ. "ಕನ್ನಡದ ನುಡಿಯೊಮ್ಮೆ ಕನ್ನಡಿಯ ತೆರದಿಂದ ಚೆನಾ ಬೆಳೆದು ಹೊಳೆಯುವುದು ಜಗದೊಳಗೆ........" ಎಂಬ ಕಾಲಜ್ಞಾನ ವಚನ ಎಂದಾದರೂ ಹುಸಿಯಾಗುವದೆ? ಬಸವಾದಿ ಶರಣರು ವೀರಶೈವ ಸಮಾ ಮಂದಿರವನ್ನು ಬಹು ಭದ್ರವಾದ ತಳಹದಿಯ ಮೇಲೆ ಕಟ್ಟಿದ್ದಾರೆ. ಇ ಭಾರತದಲ್ಲಿಯೇ ಈ ಸಮಾಜಕ್ಕೊಂದು ವಿಶಿಷ್ಟ ಸ್ಥಾನವುಂಟು. ಹೀಗಿದ್ದರೂ ಈ ಸಮಾಜದ ಅಸ್ತಿತ್ವದ ಬಗೆಯೂ ಕೂಡಾ ಪರಪ್ರಾಂತ್ಯದವರಿಗೆ ಪರಿಚಯ ವಿಲ್ಲದಿರುವದು ಎಷ್ಟು ಶೋಚನೀಯ! ಇದಕ್ಕೆ ಜನ ಧನ ಬಲವುಳ್ಳ ಮಠಾಧಿ ಕಾರಿಗಳ ಔದಾಸೀನ್ಯವೇ ಕಾರಣವಾಗಿರುವದು. ಹಿಂದಿನವರು ತಾವು ಸ್ವಂತ ಮಾಡುವದೊತ್ತಟ್ಟಿಗುಳಿಯಲಿ ಮಾಡುವರಿಗೆ ಪ್ರೋತ್ಸಾಹವನ್ನು ಕೂಡಾ



ಕೊಡುವಷ್ಟು ವಿವೇಕವುಳ್ಳವರಾಗಿದ್ದರೆ ಸಮಾಜಕ್ಕೆ ಎಷ್ಟೋ ಹಿತವಾಗು ತ್ತು. ಹೊಸ ಜಗತ್ತಿನ ನಿರ್ಮಾಣ ಕಾಲವು ಸಮೀಪಿಸಿದೆ. ಈಗಲಾದರೂ ಚ್ಚೆತ್ತು ತಮ್ಮ ಕರ್ತವ್ಯದಲ್ಲಿ ತೊಡಗಿದರೆ ಸಮಾಜಕ್ಕೆ ಕಲ್ಯಾಣವಾಗಿ ದ್ವಾರಾ ನಮ್ಮ ದೇಶಕ್ಕೆ ಹಿತವಾಗುವದು. ಶ್ರೀ ಶಿವಬಸವಸ್ವಾಮಿಗಳವರ ಕಾರ್ಯವನ್ನು ಇತರ ಮಠಾಧಿಕಾರಿಗಳು ಅನುಸರಿಸಲೆಂದು ಬೇಡುತ್ತೇವೆ. ನನಗೆ ಮುನ್ನುಡಿ ಬರೆಯಲು ಆಜ್ಞಾಪಿಸಿದ ಶ್ರೀಗಳವರಿಗೆ ವಂದನೆಗಳನ್ನರ್ಪಿಸು ವೆನು. ಕನ್ನಡಿಗರೆಲ್ಲರೂ ಈ ಕಾಲಜ್ಞಾನ ಸಂಗ್ರಹ ಗ್ರಂಥವನ್ನು ಓದಿ ತಮ್ಮ ಜೀವನವನ್ನು ತಿದ್ದಿಕೊಳ್ಳಲು ಮುಂದೆ ಬರಲೆಂದೂ ಹಾರೈಸುತ್ತೇವೆ.

ಶಿರಿಗನ್ನಡಂ ಗೆಲ್ಗೆ

ಗದಗ
೧೭-೧೨-೧೯೪೭

ಪಂ. ನಾಗಭೂಷಣಶಾಸ್ತ್ರಿಗಳು
ವೀರಶೈವ ಸಂಸ್ಕೃತಿ ಪ್ರಕಾಶಕ
ಸಮಿತಿಯ ಕಾರ್ಯಾಧ್ಯಕ್ಷ

# ಈ ಗ್ರಂಥ ಶೋಧನೆಯ ಪ್ರಾಚೀನ ಪ್ರತಿಗಳು

---

ಅ — ಇದು ಕಾಗದದ ಮೇಗಣ ಕೈ ಬರಹದ ಪ್ರತಿ ಬರೆದ ಕಾಲ ಇರು ವುದಿಲ್ಲ. ಇದು ಸಂಪಾದಕರಲ್ಲೇ ಇದ್ದದ್ದು.

ಇ — ಇದು ತಾಡಾ ಓಲೆ ಪ್ರತಿ ಇದರ ಅಂತ್ಯದಲ್ಲಿ ಬರೆದ ಕಾಲ ಬರೆದಿರು ವುದಿಲ್ಲ. ಇದು ಸಂಪಾದಕರಲ್ಲೇ ಇದ್ದದ್ದು.

ಉ — ಇದು ಕಾಗದದ ಮೇಗಣ ಕೈ ಬರಹದ ಪ್ರತಿ ಬರೆದಕಾಲ ಇರು ವುದಿಲ್ಲ. ಸೋಮಹಳ್ಳಿ ಕೆಂಬಾವಿ ಭೋಗಯ್ಯನಲ್ಲಿ ದೊರೆತದ್ದು

ಎ — ಇದು ಕಾಗದದ ಮೇಗಣ ಕೈ ಬರಹದ ಪ್ರತಿ ಬರೆದ ಕಾಲ ಇರು ವುದಿಲ್ಲ. ಸಂಪಾದಕರಲ್ಲೇ ಇದ್ದದ್ದು.

ಒ — ಇದು ಮೈಸೂರು ಗೌರ್ಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿ ದೊರೆ ತದ್ದು. ಇದು ತಾಡಾ ಓಲೆ ಪ್ರತಿ ಇದರ ಕಾಲ ಸಾಧಾರಣ ಸಂವತ್ಸರದ ವೈಶಾಖ ಬಹುಳ ಹದಿಮೂರರಲ್ಲಿ ಬರೆದು ಹೆಚ್ಚಿತು ಎಂದು ಇದೆ.

ಕ — ಇದು ತಾಡಾ ಓಲೆ ಪ್ರತಿ ಇದರ ಕಾಲ ಈಶ್ವರ ಸಂವತ್ಸರದ ಕಾರ್ತಿಕ ಶುದ್ಧ ಚತುರ್ದಶಿಯಲ್ಲಿ ಬರೆದು ಹೆಚ್ಚಿತು ಎಂದು ಇದೆ. ಇದು ಮೈ. ಗೌ. ಓ. ಲೈ. ದೊರೆತದ್ದು.

ಗ — ಇದು ಮೈಸೂರು ಶ್ರೀ ಲಿಂಗದೇವರವರಲ್ಲಿ ದೊರೆತದ್ದು. ಇದು ಕೋರಿ ಕಾಗದದ ಮೇಗಣ ಕೈ ಬರಹದ ಪ್ರತಿ ಇದರ ಕಾಲ ತಿಳಿಯುವುದಕ್ಕೆ ಪ್ರಥಮಾಂತ್ಯ ಹರಿದು ಹೋಗಿದೆ.



ಚ — ಇದು ತಾಡಾ ಓಲೆ ಪ್ರತಿ ಬರೆದ ಕಾಲ ಇರುವುದಿಲ್ಲ. ಇದು ಮೈ. ಗೌ. ಓ. ಲೈ. ದೊರೆತದ್ದು.

ಜ — ಇದು ಭೋಗಯ್ಯನ ಹುಂಡಿ ಶ್ರೀ ಮಹಾಂತದೇವರವರಲ್ಲಿ ದೊರೆ ತದ್ದು. ತಾಡಾ ಓಲೆ ಪ್ರತಿ ಬರೆದ ಕಾಲ ಇರುವುದಿಲ್ಲ.

ಈ ಮೇಲ್ಕಂಡ ಪ್ರಾಚೀನ ಪ್ರತಿಗಳನ್ನು ನನ್ನ ಕೋರಿಯ ಮೇರೆಗೆ ಉದಾರ ಮನವಿಟ್ಟು ಕಳುಹಿಸಿದ ಮಹನೀಯರುಗಳಿಗೆಲ್ಲ ಸಂಪಾದಕನ ಕೃತಜ್ಞತೆ.

೧೯೪೨-೧೯೪೩ ಸಂಪಾದಕ

---

# ಪ್ರಸ್ತಾವನೆ

## ಸಾಹಿತ್ಯದ ಅವಶ್ಯ ಕೃತಿಯ ವಿಮರ್ಶೆ

ಕಾಲಜ್ಞಾನವೆಂಬ ಸಾಹಿತ್ಯವು ಒಂದು ಇತಿಹಾಸದ ಕಟ್ಟುಕಥೆಯಲ್ಲ. ಇತಿಹಾಸ ನಾಯಕರ ಉಲ್ಲೇಖನ ನಾಮಸೂಚನೆ ಪದೆಪದೆ ಬರುವುದುಂಟು. ಅವರ ಚರಿತ್ರಾಂಶವನ್ನು ಕವಿಗಳು ಉದಹರಿಸಿರುವುದಿಲ್ಲ. ನಾಮಪದಗಳು ಅಲ್ಲಲ್ಲಿ ಕಂಡುಬಂದರೂ ಭೂತಕಾಲದ ವರ್ತನೆಯ ಕುರುಹು ಇಲ್ಲವೇ ಇಲ್ಲ. ಈ ನಾಮಪದಗಳು ಇತಿಹಾಸ ಸಂಶೋಧನೆಯ ನೆನಪಿಗೆ ಒಂದು ಅಂಗವಾಗಿದೆ. ಪ್ರತಿಯೊಬ್ಬ ತ್ರಿಕಾಲಜ್ಞಾನಿಯು ಇಡಿ ಭರತಖಂಡಕ್ಕೆ ಹೆಚ್ಚಿಗೆ ಭವಿಷ್ಯತ್ ಹೇಳಿರುವರಲ್ಲದೆ, ವಿದೇಶಗಳನ್ನು ಕುರಿತು ಟೀಕಿಸಿರುವುದು ಕಂಡುಬರುವುದಿಲ್ಲ. ಭರತಖಂಡದ ನಾಡುಗಳ ಕುರಿತು ಅಲ್ಲಿಯ ದೊರೆ, ಪಾಳ್ಯಗಾರರ ದೆಸೆಯಿಂದ ನರರಿಗೆ ಆಗಬಹುದಾದ ಕಷ್ಟನಷ್ಟಗಳ ಕುರುಹುಗಳನ್ನು ಎಲ್ಲಾ ಕಾಲಜ್ಞಾನ ಕವಿಗಳು ಸೂಕ್ಷ್ಮವಾಗಿಯೂ ವಿಶದವಾಗಿಯೂ ಹೇಳಿರುತ್ತಾರೆ.

ಮುಸಲ್ಮಾನರನ್ನು ಒಂದು ರಾಕ್ಷಸ ಪಂಗಡಕ್ಕೆ ಸೇರಿಸಿ ಅವರಿಂದ ಅತಿ ಅನಾಹುತಗಳಾಗುವವು. ಅಂತ್ಯಕ್ಕೆ ಬಹು ಕ್ಷೀಣರಾಗಿ ಈ ರಾಕ್ಷಸರು ಲಯವಾಗುವರೆಂದು ಪ್ರತಿಯೊಬ್ಬ ಕಾಲಜ್ಞಾನಿಗಳು ಬರೆದು ಸೂಚಿಸಿರುತ್ತಾರೆ.

ಬ್ರಾಹ್ಮಣರೆಲ್ಲ ಅತಿ ಜಾರರಾಗಿ ತಮ್ಮ ಕ್ರಿಯೆಗಳಂ ಮರೆತು ಕುಲಗೇಡಿಗಳಾಗುವರೆಂತಲೂ, ಶಿವಭಕ್ತರು ಅಕೃತ್ಯ, ಅನ್ಯಾಯ, ಅಸತ್ಯಗಳಿಂದ ತಮತಮಗೆ ತಾವೇ ಲಯಿಸುವರೆಂತಲೂ ಪದೆ ಪದೆ ಸೂಚಿಸಿದೆ.

ಮಳೆ ಬೆಳೆಗಳಡಗುವವು. ಹೊಸ ಹೊಸ ನೂತನ ನವೀನತೆಗಳು ಹೆಚ್ಚುವವು. ಮಾರಿ, ಮಸಣಿ, ದುರ್ಗಿಯರುಪಟಳದಿಂದ ಮನುಜರೆಲ್ಲ ಎಚ್ಚೆತ್ತು ಶಿವಭಕ್ತಿಯಂ ಹಿಡಿಯುವರೆಂಬ ಉಲ್ಲೇಖನಗಳು ಅಲ್ಲಲ್ಲಿ ಬರುವುದುಂಟು.

ಕಾಲಜ್ಞಾನಗಳನ್ನು ಹೇಳಿರುವ ಮಹಾತ್ಮರು ಕಲಿಯುಗದ ಇತ್ತೀಚಿನವರಲ್ಲದೆ, ಬೇರೆ ಯುಗಗಳವರಲ್ಲ. ಕಲಿ ಪುರುಷನನ್ನು ಈ ಮಹಾತ್ಮರು



ತಮ್ಮ ಆಜ್ಞಾ ಸೇವಕನನ್ನಾಗಿ ಮಾಡಿಕೊಂಡಿದ್ದರಲ್ಲದೆ, ಕಲಿಪುರುಷನಿಗೆ ಅವರು ಆಳಾದವರಲ್ಲ. ಸಾಮಾನ್ಯ ಮನುಜರ ಕಷ್ಟನಷ್ಟ ದುಃಖಗಳನ್ನು ತಿಳಿದು ಕರುಣದಿಂದ ಸ್ಥಿತಿಗತಿ ಕಾಲಸೂಚನೆಯ ತಿಳಿಪಿರುವರಲ್ಲದೆ ತಮ್ಮ ಕವಿತ್ವದ ವಿದ್ವತ್ತನ್ನು ಬಹು ಚತುರತೆಯಿಂದ ರಚಿಸಿ ಪಂಡಿತತ್ವವನ್ನು ಗಳಿಸಿಕೊಳ್ಳಬೇಕೆಂಬ ಕುತೂಹಲದ ಜಾಡ್ಯದವರಲ್ಲ. (ಕಾಲಜ್ಞಾನಗಳನ್ನು ಬೋಧಿಸಿರುವ ಮಹಾತ್ಮರೆಲ್ಲ ಕಲ್ಯಾಣನಗರದ ಇತ್ತೀಚಿನವರಲ್ಲದೆ ಅದಕ್ಕಿಂತಲೂ ಮೊದಲಿಗರು ಅತಿ ವಿರಳ.)

ಪ್ರಥಮದಲ್ಲಿ ಶರಣರು ಕಾಲಜ್ಞಾನ ಬೋಧಿಸುವಾಗ ತಮ್ಮ ಮಧುರ ವಚನಗಳಿಂದ ಬೋಧಿಸಿರುವರಲ್ಲದೆ, ಪದ ಪದ್ಯಗಳಿಂದ ಬೋಧಿಸಿರುವುದಿಲ್ಲ. ಇತ್ತೀಚಿಗೆ ಕೆಲವು ಕವಿಗಳು ಅದೇ ವಚನಗಳನ್ನು ಅನುಸರಿಸಿ ಪದ, ಪದ್ಯ, ಶ್ಲೋಕ ದಾಟಗಳಿಂದ ರಚಿಸಿಕೊಂಡಿರುವಂತೆ ಕಾಣುತ್ತದೆ. ಈ ಪದ್ಯಗಳಾದರೋ ಕ್ರಮವಾಗಿ ವ್ಯಾಕರಣ ಛಂದಸ್ಸಿನ ನೇಮದುತೆ ಗುರು, ಲಘು, ಪ್ರಾಸ, ಮಾತ್ರಕೆಗಳನ್ನು ಅನುಸರಿಸಿರುವುದಿಲ್ಲ. ಇದು ಸಂಶೋಧನಾತ್ಮಕವಾಗಿಯೇ ಇದೆ.

ಮಹಾತ್ಮರು ಹೇಳಿರುವ ಕುರುಹಿನ ಸೂಚನೆಗಳನ್ನು ವಿವರಿಸಿ ನೋಡುತ್ತಾ ಬಂದರೆ ಇವುಗಳಲ್ಲಿ ಅನೇಕ ಕುರುಹುಗಳು ಪ್ರತಿಯೊಬ್ಬ ಮಾನವನ ನೆನಪಿಗೆ ಅರಿವಾಗಬಹುದು. ಅವರು ತಮ್ಮ ಅನುಭವಕ್ಕೆ ಬಂದ ಭೂತಕಾಲ ವಿಷಯಗಳನ್ನು ಬರೆದಿರುತ್ತಾರೆ, ಈ ದುರ್ನಡೆಗಳೆಲ್ಲ ಅವರಿದ್ದಾಗಲೂ ಇದ್ದಿತೆಂದು ಕೆಲವರು ಚರ್ಚಿಸಬಹುದು. ಈ ಚರ್ಚೆಯು ಸರಿಯಾದ ಜ್ಞಾನಿಯ ಮಾರ್ಗವಲ್ಲ. ಅಂಥಕ ಹೇಳುವ ವರ್ಣನೆಯೇತಾಗುತ್ತದೆ.

ಬಸವ ಚೆನ್ನಬಸವಾದಿ ಶಿವಶರಣರು ನಾವು ಬರುವವರಿವಿಗೂ ನಿಮ್ಮ ಕ್ರಿಯೆಗಳಿಗೆ ಕುಂದಕಬರದಂತೆ ಆಚರಣೆಯಲ್ಲಿ ಇರಿ. ನಾವು ಬಂದ ವೇಲೆ ಆ ಕ್ರಿಯೆಗಳನ್ನು ಬಿಟ್ಟುಬಿಡಿ ಎಂದು ಸಾರಿರುವುದಿಲ್ಲ. ಸದಾಕಾಲದಲ್ಲೂ ನಿಮ್ಮ ನಿಮ್ಮ ಕ್ರಿಯೆ ಜ್ಞಾನಾದಿಗಳನ್ನು ನಿಮಿಷಾರ್ಧವು ಎಡೆಬಿಡದೆ ಎಚ್ಚತ್ತು ಕಾಪಾಡಿಕೊಳ್ಳಿ ಎಂದು ಹೇಳಿರುವರಲ್ಲದೆ, ನಾವುಗಳು ಇಂಥ ದಿನವೇ ಬಂದು

ನಿಮ್ಮಗಳನ್ನೆಲ್ಲ ಕೃತಾರ್ಥರನ್ನಾಗಿ ಮಾಡುತ್ತೇವೆ, ಇದೊ ಬಸವ ಚೆನ್ನಬಸವ ಬಂದನೆಂದು ಬಂದನೆಂದು ಬಡನುಡಿಯ ಡಂಗುರವನ್ನು ಹೊಡೆದುಕೊಳ್ಳಿ ಎಂದು ಹೇಳಿರುವುದಿಲ್ಲ.

ಮಹಾತ್ಮರು ಯಾವಾಗಲೂ ತಮ್ಮ ಲಿಂಗಾನಂದದಲ್ಲಿ ಲೀನವಾಗಿರುತ್ತಾರೆ. ಅವರಿಗೆ ಒಂದು ಯುಗವು ಒಂದು ವರುಷ. ಅಂಥ ಒಂದು ವರುಷವೇ ಒಂದು ದಿನ. ಅಂಥ ಒಂದು ದಿನವೇ ಒಂದು ಜಾವ. ಅಂಥ ಒಂದು ಜಾವವೇ ರೆಪ್ಪೆ ಮುಚ್ಚಿಬಿಡುವಷ್ಟಾಗುವಾಗ, ನಾಳೆ ನಾಳಿದ್ದು ಬರುತ್ತಾರೆಂದು ಜಾಳುನುಡಿಗಳಿಂದ ಸಾರಿ ಸಾರಿ ವ್ಯರ್ಥವಾಗುವುದು ಸರಿಯಲ್ಲ. ಅವರು ಯಾವಾಗಲೊ ಬರಲಿ ಅಥವ ಬಾರದೆ ಇರಲಿ, ಅದು ಪ್ರಾಮುಖ್ಯವಲ್ಲ. ಅವರ ಸೂಚನಾರ್ಥ ಸಾಹಿತ್ಯವೇ ಪ್ರಾಮುಖ್ಯ. ಅವರ ಪ್ರತಿನಿಧಿಗಳಾದ ಗುರುಲಿಂಗಜಂಗಮರಿಂದ ತಮ್ಮ ತಮ್ಮ ನಿತ್ಯ ಕ್ರಿಯಾದಿಗಳನ್ನು ಕಾಪಾಡಿಕೊಳ್ಳಬೇಕಲ್ಲದೆ, ಈಗಿನ ಗುರು ಲಿಂಗ ಜಂಗಮರು ಅವರಂಥವರೆ? ಎಂದು ಕುಂದುಕೊರತೆಗಳನ್ನು ಶೋಧಿಸುತ್ತ ಹೋದಲ್ಲಿ, ಅಗಸ ನೀರಿನಲ್ಲೇ ನಿಂದು ನೀರಡಿಕೆಯಿಂದ ಬಳಲಿ ಬಳಲಿ ಸತ್ತಂತಾಗುವುದು ಸಹಜ. ಈ ಸಂದೇಹದ ಮೊಳಕೆಯೇ ಭವದ ಬೇರು.

ಬಸವಾದಿ ಶಿವಶರಣರ ವಚನ ಸಾಹಿತ್ಯವು ಪ್ರತಿಯೊಬ್ಬ ಮಾನವನಿಗೂ ಎಷ್ಟು ಪ್ರಾಮುಖ್ಯವೋ ಅಷ್ಟು ಈ ಕಾಲಜ್ಞಾನ ಸಾಹಿತ್ಯವೂ ಪ್ರಾಮುಖ್ಯವಾದುದಾಗಿದೆ. ಈ ಗ್ರಂಥವನ್ನು ನಾವು ಹತ್ತು ಪ್ರಾಚೀನ ಓಲೆಗಳ ಮತ್ತು ಕಾಗದದ ಮೇಲಣ ಕೈಬರಹದ ಪ್ರತಿಗಳ ಸಹಾಯದಿಂದ ಪರಿಶೋಧಿಸಿ ಮುದ್ರಿಸಿರುತ್ತೇವೆ. ಈ ತೆರದ ಪ್ರಾಚೀನ ಓಲೆ ಗ್ರಂಥಗಳು ನಮಗೆ ಇನ್ನೂ ದೊರೆತಿವೆ. ಅವುಗಳ ಶೋಧನೆಗೆ ಸಾಕಾದಷ್ಟು ಪ್ರತಿಗಳು ದೊರೆತಿರುವುದಿಲ್ಲವಾದುದರಿಂದ ಈಗ ದೊರೆತಿರುವಷ್ಟು- ಭಾಗಕ್ಕೆ ಕಾಲಜ್ಞಾನ ಸಂಗ್ರಹ ಭಾಗ ೧-ಎಂಬ ಹೆಸರಿನಿಂದ ಪ್ರಕಟಿಸಿರುತ್ತೇವೆ. ಸಂಗ್ರಹವೆಂದರೆ ಒಂದು ಗ್ರಂಥದ ಮುಖ್ಯಭಾಗಗಳನ್ನು ತೆಗೆದು ಪ್ರಕಟಿಸುವುದಕ್ಕೆ 'ಇಂಥ' ಸಂಗ್ರಹನೆಂದು ಹೇಳುವ ವಾಡಿಕೆ ರೂಢಿಯಲ್ಲಿ ಇದೆ. ಈ



ಗ್ರಂಥ ಸಂಗ್ರಹ ಹಾಗಲ್ಲ. ಪ್ರಾಚೀನ ಕವಿಗಳು ರಚಿಸಿರುವ ಸಮೂಲಾಗ್ರ ಸಂಗ್ರಹವಿದು.

### ಕವಿಗಳ ಕಾಲ ಮತ ಹೆಸರು ಇತ್ಯಾದಿ

ಶ್ರೀ ಬಸವೇಶ್ವರನ ಚರಿತೆ ವಿಷಯವಾಗಿ ಇಲ್ಲಿ ಉಪಹರಿಸಬೇಕಾಗಿರುವುದಿಲ್ಲ. ಬಸವಣ್ಣನ ಜೀವನದ ವ್ಯಕ್ತಿತ್ವ ಪ್ರತಿಯೊಬ್ಬ ಮಾನವನಿಗೂ ಗೊತ್ತಾಗಿರುವುದಲ್ಲದೆ; ಅವನ ಷಟ್‌ಸ್ಥಲ ವಚನವೇ ಅವನ ವ್ಯಕ್ತಿತ್ವದ ಸ್ವರೂಪವನ್ನು ಮುಂದಿಟ್ಟು ಪ್ರತಿಪಾದಿಸುತ್ತಿದೆ. ಇವನ ಕೃತಿಗಳು, ಶಿಖಾರತ್ನ ವಚನ. ಕಾಲಜ್ಞಾನ ವಚನ. ಮಂತ್ರಗೋಪ್ಯ ವಚನ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. ಈ ಗ್ರಂಥಸಂಗ್ರಹದ ಪ್ರಥಮದಲ್ಲಿ ಬಸವಣ್ಣನ ಕಾಲಜ್ಞಾನ ವಚನಗಳನ್ನು ಸೇರಿಸಲ್ಪಟ್ಟಿದೆ. ಶ್ರೀಬಸವಣ್ಣನವರ ಕಾಲ ಸುಮಾರು (ಕ್ರಿ. ಶ. ೧೧೬೦)

ಅಲ್ಲಮಪ್ರಭುದೇವರು ಇವರು ಮಾಯೆಯ ಕೋಲಾಹಲರು. ಮನುಮುನಿ ಹೃದಯಗಳ ಭೇದಕಮೂರ್ತಿ. ಬಸವಾದಿ ಶಿವಶರಣರಿಗೆ ಪ್ರಭುವಾಗಿ ಒಪ್ಪಿದವರೆ ಅಲ್ಲಮಪ್ರಭು. ಇವರು ರಚಿಸಿರುವ ಗ್ರಂಥಗಳು:—ಷಟ್‌ಸ್ಥಲ ಜ್ಞಾನಚಾರಿತ್ರ. ಮಂತ್ರಗೋಪ್ಯ. ಬೆಡಗಿನ ವಚನಗಳು. ಮಂತ್ರಮಹಾತ್ಮ್ಯ. ಕಾಲಜ್ಞಾನ ವಚನ ಇವೇ ಮೊದಲಾದ ವಚನಗ್ರಂಥಗಳನ್ನು ರಚಿಸಿರುತ್ತಾರೆ. ಈ ಮಹಾತ್ಮರ ಕಾಲಜ್ಞಾನ ವಚನವನ್ನು ಈ ಗ್ರಂಥ ಸಂಗ್ರಹದಲ್ಲಿ ಸೇರಿಸಲ್ಪಟ್ಟಿದೆ. ಇವರ ಕಾಲ ಸುಮಾರು (ಕ್ರಿ. ಶ. ೧೧೬೦)

ಶ್ರೀ ಬಸವೇಶನ ಸೋದರಳಿಯನೆ ಚೆನ್ನಬಸವಣ್ಣ ಇವನು ರಚಿಸಿರುವ ಗ್ರಂಥಗಳು:—ಷಟ್‌ಸ್ಥಲ ವಚನ. ಕರಣಹಸಿಗೆ. ಮಿಶ್ರಾರ್ಪಣ. ಪದಮಂತ್ರಗೋಪ್ಯ. ಮಂತ್ರಗೋಪ್ಯ. ಕಾಲಜ್ಞಾನ ವಚನ ಎಂಬ ಗ್ರಂಥಗಳನ್ನು ರಚಿಸಿರುತ್ತಾನೆ. ಈ ಷಟ್‌ಸ್ಥಲ ಬ್ರಹ್ಮಿಯ ಕಾಲ ಸುಮಾರು (ಕ್ರಿ. ಶ. ೧೧೬೦) ಈ ಮಹಿಮನ ಕಾಲಜ್ಞಾನ ವಚನಗಳನ್ನೆ ಆಧಾರವಾಗಿಟ್ಟುಕೊಂಡು "ಶರಣಲೀಲಾಮೃತ" ಗ್ರಂಥದ ಕರ್ತೃವಾದ ಚೆನ್ನಪ್ಪಕವಿಯು ಯಕ್ಷಗಾನದಲ್ಲಿ

Scanned with OKEN Scanner

ಚೆನ್ನಬಸವೇಶ್ವರದೇವರ ಕಾಲಜ್ಞಾನ ಎಂದು ರಚಿಸಿದ್ದಾನೆ. ಅದನ್ನು ಸಹ ಈ ಗ್ರಂಥಸಂಗ್ರಹದಲ್ಲಿ ಸೇರಿಸಲ್ಪಟ್ಟಿದೆ. ಈ ಕವಿಯ ಕಾಲ ಸುಮಾರು (ಕ್ರಿ. ಶ. ೧೭೫೦)

**ನಂಜೇಶ** ಇವನು ನಂಜೇಶಾಂಕಿತದಿಂದ ತ್ರಿಪದಿ ಪದ್ಯದಲ್ಲಿ ಕನ್ನಡ ಕಾಲಜ್ಞಾನವನ್ನೂ ಶ್ಲೋಕರೂಪದಲ್ಲಿ ಸಂಸ್ಕೃತ ಕಾಲಜ್ಞಾನವನ್ನೂ ಬರೆದಿರುತ್ತಾನೆ. ಸಂಸ್ಕೃತ ಕಾಲಜ್ಞಾನ ಒಂದೆರಡು ಶ್ಲೋಕದಲ್ಲಿ1 ಕಲ್ಯಾಣ ಪಟ್ಟಣಕ್ಕೆ ಕುಶಲ ಮಂತ್ರಿಯಾಗಿ ಜೈನರಾಜನ ಕೂಡೆ ವಿರೋಧವಂ ತಾಳಿ ಹೋಗುವರು. ಆ ಪ್ರಾಂತ್ಯ ಕೆಟ್ಟು ಕ್ಷೀಣವಾಗುವುದೆಂದು ಹೇಳಿರುವನಲ್ಲದೆ; ಕಲ್ಯಾಣನಗರದ ಬಸವಾದಿ ಶಿವಶರಣರ ನಾಮವನ್ನು ಕುರಿತು ಯಾವ ಸೂಚನೆಯನ್ನೂ ಹೇಳಿರುವುದಿಲ್ಲ. ಸಂಸ್ಕೃತ ಕಾಲಜ್ಞಾನದಲ್ಲಿ ಶಿವಸ್ತೋತ್ರ, ಗುರುಸ್ತೋತ್ರವನ್ನು ಮಾತ್ರ ಮಾಡಿರುತ್ತಾನೆ. ಈ ಕವಿಯು ಬೇರೆ ಇನ್ನಾವ ಗ್ರಂಥವನ್ನು ರಚಿಸಿರುವಂತೆ ಕಾಣುವುದಿಲ್ಲ. ಕನ್ನಡ ತ್ರಿಪದಿ ಕಾಲಜ್ಞಾನದ ಪ್ರಥಮದಲ್ಲಿ ಶಿವಸ್ತೋತ್ರ, ಗುರುಸ್ತೋತ್ರವೇ ಮೊದಲಾದ ಶಬ್ದಗಳು ಇಲ್ಲವಾದುದರಿಂದ ಈ ಗ್ರಂಥದ ಪ್ರಥಮದಲ್ಲಿ ಕೆಲವು ಪದ್ಯಗಳು ಲೋಪವಿರಬೇಕೆಂದು ಊಹಿಸಬಹುದಾಗಿದೆ. ಇನ್ನುಮುಂದೆ ಪ್ರಾಚೀನ ಓಲೆಪ್ರತಿಗಳು ನಮಗೆ ದೊರೆತಲ್ಲಿ ಇಷ್ಟೇ ಪದ್ಯಗಳು ಲೋಪವಿದೆ ಎಂದು ಹೇಳಲು ಶಕ್ಯವಾಗುವುದಲ್ಲದೆ; ಈಗ ನಿರ್ಧರಿಸಲು ಸಾಧ್ಯವಿಲ್ಲ. ಈ ಕವಿಯು ಸುಮಾರು (ಕ್ರಿ. ಶ. ೧೬೩೦) ರಲ್ಲಿ ಜೀವಿಸಿರಬಹುದು.

ಸಿದ್ಧನಂಜೇಶನೆಂದು2 ಒಬ್ಬ ಕವಿಯು "ರಾಘವಾಂಕಚಾರಿತ್ರ, ಗುರುರಾಜಚಾರಿತ್ರ" ಇವೇ ಮೊದಲಾದ ಗ್ರಂಥಗಳನ್ನು ರಚಿಸಿರುತ್ತಾನೆ. ಅವನೆ

---

1 ಕಲ್ಯಾಣ ಪತ್ತನೇ ಕಶ್ಚಿತ್ । ಕುಶಲಮಂತ್ರಿ ವಿಭವಃ ॥ ಜೈನರಾಜ ವಿರೋಧೇನ । ವಿನಾಶಂ ಪ್ರಾಪ್ಸ್ಯತಿ ಧ್ರುವಂ ॥ ೯ ॥ ತತಃ ಪರಂ ಜೈನರಾಜ್ಯಂ । ನಾಮಶೇಷಂ ಭವಿಷ್ಯತಿ ॥ ತದಾ ಸರ್ವೇಷು ದೇಶೇಷು । ಯವನಾಃ ಕ್ರೂರ ಭಾವಿನಃ ॥ ೧ ॥

2 ಇವನ ಕಾಲ ಸುಮಾರು (ಕ್ರಿ. ಶ. ೧೬೫೦) ಇವನ ಗುರುಸಾಂಪ್ರದಾಯದಲ್ಲಿ ಸಿದ್ಧನಂಜೇಶ, ನಂಜೇಶ ಎಂಬ ನಾಮಗಳು ವಿಶೇಷವಾಗಿ ಬಂದಿದೆ.



ಈ ಕಾಲಜ್ಞಾನವನ್ನು ರಚಿಸಿದ್ದಾನೆ ಎಂತಲೂ, ಪೂವಲ್ಲಿಕ್ಷೇತ್ರದ ಸಿದ್ಧನಂಜೇಶ ಶಿವಾಚಾರ್ಯರು ರಚಿಸಿರುವರೆಂತಲೂ ಕೆಲವರು ಅಭಿಪ್ರಾಯಪಡುತ್ತಾರೆ. ಗುರುರಾಜ ಚರಿತ್ರೆಯಲ್ಲಿಯಾಗಲಿ, ರಾಘವಾಂಕ ಚರಿತ್ರೆಯಲ್ಲಿಯಾಗಲಿ ಇವನು ರಚಿಸಿರುವ ಮತ್ತಾವ ಗ್ರಂಥಗಳಲ್ಲೂ ಈ ಕಾಲಜ್ಞಾನ ರಚಿಸಿರುವ ಅಂಶವು ಕಂಡುಬರುವುದಿಲ್ಲ. ಸಿದ್ಧನಂಜೇಶ ಶಿವಾಚಾರ್ಯರು ಒಂದುಸಾವಿರ ವರುಷಗಳ ಪೂರ್ವದಲ್ಲಿಯೇ ರಚಿಸಿರುವರೆಂದು ಹೇಳುವುದಾದರೆ (೪-೫) ನೇ ಶ್ಲೋಕಗಳಿಂದ ಇವರು ಇತ್ತೀಚಿನವರೆಂದೇ ನಿರ್ಧರಿಸಬಹುದಾಗಿದೆ.

**ಕರಸ್ಥಲದ ನಾಗಲಿಂಗ** ಇವನು1 ವೀರಶೈವ ಕವಿ. ಅಕ್ಕಸಾಲೆಯ ಜಾತಿಯವನು. ಕರಸ್ಥಲದ ವೀರಣ್ಣೊಡೆಯರ ಶಿಷ್ಯನು. ವಿಜಯನಗರದ ಪ್ರೌಢದೇವರಾಯನ ಕಾಲದವನು.2 ಇವನು ವೀರಶೈವ ತತ್ವದ ರಹಸ್ಯವನ್ನು ಬಹು ಬೆಡಗಿನ ಪದ ಪದ್ಯಗಳಿಂದ ತ್ರಿಪದಿಯಲ್ಲಿ ರಚಿಸಿದ್ದಾನೆ. ಈತನು ಕಾಲಜ್ಞಾನ ರಚಿಸಿರುವಂತೆ ಕಾಣುವುದಿಲ್ಲ. (ಅವನ ಪದ್ಯ ಸರಣಿಗಳು ಬಿಗಿತರವು, ರಮ್ಯವು ಇರುವುದರಿಂದ ಈ ಕಾಲಜ್ಞಾನವನ್ನು ಈತನು ರಚಿಸಿಲ್ಲವೆಂದು ಹೇಳಬಹುದು. ಇವನ ಹೆಸರಿನಲ್ಲಿ ಮತ್ತಾವನೊ ಬೇರೆ ಕವಿ ಇತ್ತೀಚೆಗೆ ರಚಿಸಿರುವಂತೆ ಊಹಿಸಬಹುದಾಗಿದೆ.)

**ರುದ್ರಮುನಿ** ಕಾಲಜ್ಞಾನವನ್ನು ರಚಿಸಿರುವ ಕವಿಯನ್ನು ನಿರ್ಧರಿಸುವುದು ಬಹು ದುಸ್ತರವಾಗಿದೆ. ಕಲ್ಯಾಣನಗರದ ಚಂಗಲ್ವಮಂಟಪದ ಆದಿ ಗುರುವರ್ಯ ರುದ್ರಮುನಿ ಇವರು ವಚನಗಳನ್ನು ರಚಿಸಿರುವುದು ನಮಗೆ ಇನ್ನೂ ಉಪಲಬ್ಧವಿಲ್ಲ. ಪದ ಪದ್ಯಗಳಿಂದಾದರೂ ಕಾಲಜ್ಞಾನವೇ ಮೊದಲಾದ ಗ್ರಂಥಗಳನ್ನು ರಚಿಸಿರುವುದು ಕಂಡುಬರುವುದಿಲ್ಲ. ಶ್ರೀಶೈಲದ ರುದ್ರಮುನಿ ಇವನು ರಚಿಸಿರುವ ಕಾಲಜ್ಞಾನವನ್ನು ಈ ಗ್ರಂಥ ಸಂಗ್ರಹದಲ್ಲಿ ಸೇರಿಸಲ್ಪಟ್ಟಿದೆ. ಇದೇ ಹೆಸರಿನ ಮತ್ತೊಬ್ಬ ಕವಿ ಕಾಲಜ್ಞಾನವನ್ನು ಬರೆದಿರುವಂತೆ ತೋರುತ್ತದೆ.

---

1 ಇವನ ಕಾಲ ಸಾಧಾರಣ (ಕ್ರಿ. ಶ. ೧೪೩೦)

2 ಇವನ ಕಾಲ ಸುಮಾರು (ಕ್ರಿ. ಶ. ೧೪೧೯-೧೪೪೬)

ಅದು ಮುದ್ರಣವಾಗಿ ಬಳಕೆಯಲ್ಲಿ ಇದೆ. ಪದ್ಯಗಳನ್ನು ಒಂದಕ್ಕೊಂದು ಹೋಲಿಸುತ್ತಾ ನೋಡಿದರೆ ಅರ್ಥಾನ್ವಯ ಎರಡು ಒಂದೇಯಾಗಿ ಕಂಡರೂ ಕೆಲವು ಪದ್ಯಗಳ ರೂಪು ಬೇರೆಬೇರೆಯಾಗಿ ಕಾಲಗಳು ವ್ಯತ್ಯಾಸಗೂಢಿ ಒಂದಕ್ಕೊಂದು ಸರಿಹೋಲುವುದಿಲ್ಲ. ನಾವು ಪ್ರಕಟಿಸಿರುವ ಪದ್ಯಗಳಷ್ಟು ಮೊದಲು ಮುದ್ರಿತವಾಗಿರುವ ಪ್ರತಿಯಲ್ಲಿ ದೊರೆಯುವುದಿಲ್ಲ. ಈ ಉಭಯ ಕವಿಗಳು ಸಮಕಾಲೀನರೆಂದು ಊಹಿಸಲು ಅವಕಾಶವೇ ಇಲ್ಲ. ಕೈಬರವಣಿಗೆಯವರ ಕೈವಾಡವೆಂದು ಹೇಳುವುದಾದರೆ ಸ್ವಲ್ಪ ಪದ್ಯಗಳು ಮಾತ್ರ ವ್ಯತ್ಯಾಸವಾಗಬಹುದಾಗಿತ್ತು. ಗ್ರಂಥವೆ ಬದಲಾಗುತ್ತಿರಲಿಲ್ಲ. (ಯಾರೋ ಒಬ್ಬ ಕವಿ ಶ್ರೀ ರುದ್ರಮುನಿಯ ಹೆಸರಿನಲ್ಲಿ ರಚಿಸಿದುದನ್ನು ಆಧಾರವಾಗಿಟ್ಟುಕೊಂಡು ಮತ್ತೊಬ್ಬ ಕವಿಯು ರಚಿಸಿರುವಂತೆ ಕಾಣುತ್ತದೆ) ಹೀಗಿರುವುದರಿಂದ ಕವಿಯ ಕಾಲವನ್ನು ನಿರ್ಧರಿಸುವುದು ಅಸಾಧ್ಯವಾಗಿದೆ.

ಎಮ್ಮೆ ಬಸವಣ್ಣ ಈತನು ವೀರಶೈವ ಕವಿ. ಜಂಬುನಾಥದೇವರ ಶಿಷ್ಯನೆಂದು ಇವನ ಕೃತಿಯಿಂದಲೆ ಗೊತ್ತಾಗುತ್ತಿದೆ. ಇವನು ಈ ಕಾಲಜ್ಞಾನವಲ್ಲದೆ ಮತ್ತಾವ ಗ್ರಂಥವನ್ನು ರಚಿಸಿರುವಂತೆ ತಿಳಿಯುವುದಿಲ್ಲ. ಇವನು ಬಹು ವೈರಾಗ್ಯಶಾಲಿಯು. ನಿಕಲ ಪುರದಲ್ಲಿ ತನ್ನ ಭವಿಷ್ಯತ್ತನ್ನು ಸಾರುತ್ತ ಇರಲಿಕ್ಕೆ ಆ ಪುರವನ್ನಾಳುವ ಕೃಷ್ಣರಾಯ ಪ್ರಭು, ಈ ಎಮ್ಮೆ ಬಸವಣ್ಣನನ್ನು ಹಿಡಿತರಿಸಿ, ಈ ಪುರದಲ್ಲಿ ಈ ರೀತಿ ಸಾರ ಕೂಡದೆಂದು ಆಜ್ಞೆ ಇತ್ತು ಕಳುಹಿದನು. ಆ ಆಜ್ಞೆಯನ್ನು ತಿರಸ್ಕರಿಸಿ ತನ್ನ ಗುರುವಿನ ವರದಿಂ ಪಡೆದ ತ್ರಿಕಾಲಜ್ಞಾನವನ್ನು ಪುನಃ ಸಾರುತ್ತಾ ಇದ್ದುದನ್ನು ರಾಯ ತಿಳಿದು, ಈ ಎಮ್ಮೆ ಬಸವಣ್ಣನ ಹಿಡಿತರಿಸಿ ತನ್ನ ಪಟ್ಟದ ಆನೆಯ ಮುಂದಕ್ಕೆ ಸಿಗಿದು ಬಿಡಲೆಂದು ನೂಕಿಸಲಿಕ್ಕೆ ಆ ಆನೆಯು ಎಮ್ಮೆ ಬಸವಣ್ಣನಂ ತನ್ನ ಮಸ್ತಕದ ಮೇಲೆ ಇಂಬಿಟ್ಟು ಕುಳ್ಳಿರಿಸಿಕೊಂಡು, ಅರಮನೆಯ ಪೂರ್ವಭಾಗದ ಬೀದಿಯಲ್ಲಿ ಹೊರಟು ಸಾವಕಾಶವಾಗಿ ಅವನಿಚ್ಛೆಯಂತೆ ಬೀದಿಗಳನ್ನು ಪ್ರವೇಶಿಸಿತೆಂದು ಇವನ ಕಾಲಜ್ಞಾನದಿಂದ ಗೊತ್ತಾಗುತ್ತಿದೆ. ಇವನಿಗೆ ಕೃಷ್ಣರಾಯ ಪ್ರಭು, ವೀರಶೈವ ಆಗಮಜ್ಞನೆಂದೂ, ತ್ರಿಕಾಲಜ್ಞಾನಿಯೆಂದೂ ಬಿರುದಂ ಕೊಟ್ಟು ಕೊಮಾರಕೆರೆ ಎಂಬ ಗ್ರಾಮವನ್ನು



ಜಹಗೀರಿ ಕೊಟ್ಟನೆಂದು ಕರ್ನಾಟಕ ಕವಿ ಚರಿತೆಕಾರರು ಒಂದು ತಾಮ್ರದ ಶಾಸನದಲ್ಲಿ ಬರೆದಿದೆ ಎಂದು ತಿಳುಹಿಸಿರುತ್ತಾರೆ.

ಜಂಬುನಾಥಕೊಂಡ ಎಂಬ ಬೆಟ್ಟವು ಹಂಪೆಯ ಪ್ರದೇಶದಲ್ಲಿ ಇದೆ. ಆ ಬೆಟ್ಟದಲ್ಲಿ ಜಂಬುನಾಥನೆಂಬ ಗುರು ಲಿಂಗವು ಇದೆ. ಅದೆ ಇವನ ಇಷ್ಟದೈವವೆಂದು ಗೊತ್ತಾಗುತ್ತಿದೆ. ಇವನ ಕಾಲವು ಸಾಧಾರಣ (ಕ್ರಿ. ಶ. ೧೫೪೩) ರಲ್ಲಿ ಇದ್ದನೆಂದು ಊಹಿಸಬಹುದಾಗಿದೆ.

ನೀಲಮ್ಮ ಈಕೆಯು ಬಸವೇಶನ ದ್ವಿತೀಯ ಪತ್ನಿ ಇವಳು ಕೆಲವು ವಚನಗಳನ್ನು ರಚಿಸಿರುತ್ತಾಳೆ. ಪ್ರತ್ಯೇಕವಾಗಿ ನೀಲಮ್ಮನ ಕಾಲಜ್ಞಾನವೆಂಬ ಹೆಸರಿನಿಂದ ಇವಳು ರಚಿಸಿರುವುದಿಲ್ಲ. ವಚನಗಳಲ್ಲಿ ಕೆಲವು ವಚನಗಳು ಕಾಲಜ್ಞಾನ ಬೋಧಕ ರೂಪವಾಗಿ ದೊರೆಯುತ್ತಲಿವೆ. ನೀಲಮ್ಮನ ಕಾಲಜ್ಞಾನವೆಂದು ಸುಪ್ಪಿ ದಾಟಿಯ ಪದ್ಯಗಳು ಬಳಕೆಯಲ್ಲಿ ಬಂದಿದ್ದರೂ ಅವುಗಳನ್ನು ನೀಲಮ್ಮನು ರಚಿಸಿದುವುಗಳಲ್ಲ. ಯಾರೊ ಒಬ್ಬ ಕವಿ ಈ ಪದ್ಯಗಳನ್ನು ನೀಲಮ್ಮನ ಹೆಸರಿನಿಂದ ರಚಿಸಿರುವಂತೆ ಕಾಣುತ್ತದೆ. ಕರ್ನಾಟಕ ಕವಿ ಚರಿತೆಕಾರರು ನೀಲಮ್ಮನು ಪ್ರಸಾದ ಸಂಪಾದನೆಯನ್ನು ಒಂದು ಕಾಲಜ್ಞಾನವನ್ನು ರಚಿಸಿದ್ದಾಳೆ ಎಂದು ಸಿದ್ಧಾಂತವಾಗಿ ಹೇಳುವುದಿಲ್ಲ. ಬರೆದಿರುವಂತೆ ತಿಳಿಯುತ್ತದೆ ಎಂದು ತಿಳಿಯಿಸಿರುತ್ತಾರೆ. ಪ್ರಸಾದ ಸಂಪಾದನೆ ಎಂಬ ಗ್ರಂಥವು ಇನ್ನು ನಮಗೆ ದೊರೆತಿರುವುದಿಲ್ಲ.

ಈ ಗ್ರಂಥ ಶೋಧನೆಯ ಬಗ್ಗೆ ಅ ಕಾರದಿಂದ ಜ ಕಾರದವರಿವಿಗೆ ಕೆಲವು ಸೌಜ್ಞಾಕ್ಷರಗಳನ್ನು ಉಪಯೋಗಿಸಿಕೊಂಡಿರುತ್ತೇವೆ. ಅವುಗಳು ಪ್ರತಿಯೊಂದು ಫುಟ್‌ನೋಟ್ ಮುಂದುಗಡೆ ಪ್ರಯೋಗಿಸಲಾಗಿದೆ. ಅವುಗಳ ಸಂಜ್ಞೆ ಒಂದೊಂದು ಮಾತ್ರುಕೆಗೆ ಒಂದೊಂದು ಪ್ರತಿಗಳೆಂದು ಭಾವಿಸಬೇಕು.

ಈ ಸಂಗ್ರಹ ಗ್ರಂಥಕ್ಕೆ ನಮ್ಮ ಸ್ವತಹ ಶಬ್ದ ಕೈವಾಡಗಳನ್ನು ಸೇರಿಸಿರುವುದಿಲ್ಲ. ಕವಿಗಳು ರಚಿಸಿರುವ ಮೂಲಶಬ್ದಗಳು ಯಾವುದೋ ಅವನ್ನು ನಿಶ್ಚೈಸಿ ಪಂತಿಯ ಮೇಲೆ ಉತ್ತಮ ಶಬ್ದಗಳನ್ನು ಫುಟ್‌ನೋಟಿನಲ್ಲಿ ಸಾಧಾರಣ ಶಬ್ದಗಳನ್ನೂ ಇಟ್ಟು ಮುದ್ರಿಸಲಾಗಿದೆ. ಈ ಗ್ರಂಥದಲ್ಲಿ ಕೆಲವು ಭಾಗಕ್ಕೆ

ಸಾಕಾದಷ್ಟು ಪ್ರಾಚೀನ ಪ್ರತಿಗಳು ದೊರಿಯಲಿಲ್ಲವಾದ ಪ್ರಯುಕ್ತ, ಕೆಲವು ಅಶುದ್ಧ ಶಬ್ದಗಳು ನೆನಸಿಗೆ ಬರಬಹುದು. ಅದನ್ನು ಮೂಲಾಧಾರ ಗ್ರಂಥಗಳಿಂದ ಕಂಡುಹಿಡಿದ ಮಹನೀಯರು ನಮಗೆ ತಿಳುಹಿಸಿದಲ್ಲಿ ಎರಡನೆ ಮುದ್ರಣದ ಸುಯೋಗ ದೊರೆತಾಗ ಸರಿಪಡಿಸಲಾಗುವುದು. ಇದಲ್ಲದೆ ಕೆಲವು ತೂಳಿಗದ ವೇಷಧಾರಿಗಳು ಅಲ್ಪ ಮತಿಯರಿಗೆ ತಮ್ಮ ಸ್ವಾರ್ಥತೆಗೆ (ಇಚ್ಛೆಯ ಭೋಗಕ್ಕೆ) ಸರಿಯಾದ ಉತ್ಪ್ರೇಕ್ಷಾ ಬೋಧನೆಯ ಕಾಲಜ್ಞಾನವನ್ನು ಬೋಧಿಸಿ ಜನಗಳಲ್ಲಿ ಕಳಂಕ ತರುವ ಮಾರ್ಗವನ್ನೇ ಅವಲಂಬಿಸಿರುತ್ತಾರೆ. ಅಂಥವರ ಮತಿಗೆ ಈ ಗ್ರಂಥವು ಅಂಕುಶಪ್ರಾಯವಾಗಿರುವುದರಿಂದ ಅದರಲ್ಲಿ ಹಾಗಿದೆ! ಇದರಲ್ಲಿ ಹೀಗಿದೆ! ಎಂದು ವಾದಿಸಿಕೊಳ್ಳಬಹುದು. ಇದು ಮೂಲ ಪ್ರಕೃತಿಯ ಸ್ವಭಾವವಲ್ಲ. ಅಂಥವರ ದುರ್ಬೋಧನೆಗೆ ಮನವಿತ್ತು ಸರ್ವರೂ ಮರುಳಾಗಬಾರದೆಂದು ಪ್ರಾರ್ಥಿಸುತ್ತೇವೆ.

ಈ ಗ್ರಂಥ ಶೋಧನೆಯ ಜತೆಗೆ ಜೋತಿಷ್ಯ ಗಣಿತವನ್ನು ಸಿದ್ಧಾಂತಗೊಳಿಸಿದ್ದರೆ ಮತ್ತಷ್ಟು ಒಳ್ಳೆಯದಾಗುತಿತ್ತು, ಎಂದು ಕೆಲವರು ಅಭಿಪ್ರಾಯಪಡಬಹುದು; ಅದು ಜೋತಿಷ್ಯ ಗಣಿತ ಶಾಸ್ತ್ರಕ್ಕೆ ಸಿಲುಕುವ ಕಾಲ ನಿರ್ಣಯಗಳಲ್ಲ. ಹಾಗೆ ಗುಣಿಸಹೋದರೆ ಜ್ಯೋತಿಷ್ಯದ ಟೊಳ್ಳು ದಾರಿಯನ್ನು ಸರ್ವರ ಮುಂದಿಟ್ಟಂತಾಗುತ್ತದೆಂದು ಅದನ್ನು ಜೋತಿಷ್ಯ ಗಣಿತಜ್ಞರ ಕಡೆಗೆ ಬಿಟ್ಟು ಕೊಟ್ಟಿದ್ದೇವೆ.

ಶರಣ ಲೀಲಾಮೃತ ಗ್ರಂಥಕ್ಕೆ ಸರ್ವ ಮಹನೀಯರು ಪ್ರೋತ್ಸಾಹವಿತ್ತಂತೆ ಈ ಗ್ರಂಥಕ್ಕೂ ಮುಂದಿನ ಪ್ರಕಟಣೆಗಳಿಗೂ ತುಂಬ ನೆರವಾಗುವರೆಂದು ನಂಬಿದ್ದೇವೆ.

ಸಂಪಾದಕರು :

ಶ್ರೀ ಶಿವಬಸವಸ್ವಾಮಿಗಳು

ಮೈಸೂರು

೧೦ – ೧೦ – ೧೯೪೬

# ವಿಷಯಾನುಕ್ರಮಣಿಕೆ


| | | ಪುಟ |
|---|---|---|
| | ಗ್ರಂಥ ಸಮರ್ಪಣ .... .... .... | ೧ |
| | ಪ್ರಕಾಶಕರ ಪ್ರಥಮೋಕ್ತಿ .... .... | ೨ |
| | ಮುನ್ನುಡಿ .... .... .... .... | ೪ |
| | ಈ ಗ್ರಂಥ ಶೋಧನೆಯ ಪ್ರಾಚೀನ ಪ್ರತಿಗಳು .... | ೧೧ |
| | ಪ್ರಸ್ತಾವನೆ .... .... .... | ೧೩ |
| ೧. | ಸಂಗನ ಬಸವರಾಜ ದೇವರ ಕಾಲಜ್ಞಾನ ವಚನ .... | ೧ |
| ೨. | ಪ್ರಭು ದೇವರ ಕಾಲಜ್ಞಾನ ವಚನಗಳು .... | ೬ |
| ೩. | ಚೆನ್ನ ಬಸವೇಶ್ವರ ದೇವರ ಕಾಲಜ್ಞಾನ .... | ೧೫ |
| ೪. | ನಂಜೇಶನ ಕಾಲಜ್ಞಾನ .... .... | ೫೪ |
| ೫. | ಕರಸ್ಥಲದ ನಾಗಲಿಂಗಯ್ಯನ ಕಾಲಜ್ಞಾನ .... | ೭೨ |
| ೬. | ರುದ್ರಮುನಿಸ್ವಾಮಿಯ ಕಾಲಜ್ಞಾನ .... .... | ೮೧ |
| ೭. | ಎಮ್ಮೆ ಬಸವಣ್ಣನ ಕಾಲಜ್ಞಾನ .... .... | ೧೧೯ |
| ೮. | ನೀಲಮ್ಮನ ಕಾಲಜ್ಞಾನ .... .... | ೧೪೬ |

## ಪ್ರಕಾಶಕರ ಪ್ರಥಮೋಕ್ತಿ

ವೀರಶೈವ ಸಮಾಜ ತತ್ವದೇಳಿಗೆಯನ್ನು ಕನ್ನಡ ದೇವಿಯ ಮುಂದಿಡುವ ಪ್ರಯುಕ್ತ, ಇದುವರುವಿಗೆ ಕೆಲವು ಸುಪ್ರಸಿದ್ಧ ಮಹನೀಯರುಗಳು ಬಹಳವಾಗಿ ದುಡಿದು ತಮ್ಮ ಸರ್ವಸ್ವ ಧ್ಯೇಯವನ್ನು ಸಾಹಿತ್ಯದೇವಿಗೆ ಸಮರ್ಪಿಸಿ ಶಿವ ಸಾನಿಧ್ಯವನ್ನು ಹೊಂದಿದವರಾಗಿರುತ್ತಾರೆ.

ಸಾಹಿತ್ಯದೇವಿಗೆ ನನ್ನವಿದ್ಯೆ ಧ್ಯೇಯವನ್ನರ್ಪಿಸುವೆನೆಂದರೆ ಬಾಲಪಾಠಾಭ್ಯಾಸಕನಿರುತ್ತೇನೆ. ಧನವನರ್ಪಿಸುವೆನೆಂದರೆ ಭಿಕ್ಷಾವೃತ್ತಿಯೆ ನನ್ನ ಜೀವನದ ಹುಟ್ಟು. ಸೇವೆಯನರ್ಪಿಸುವೆನೆಂದರೆ ಸೇವೆಯ ವಿಧಾನವನ್ನರುಪುವ ಉಪಾಧ್ಯಾಯರು ಹಿಂಬಾಲಿಸಿರಬೇಕಾಗುತ್ತದೆ. ನನ್ನ ಹುಟ್ಟಿನ ಬಾಳುವೆ ಈ ಸ್ಥಿತಿ ಇದ್ದು, ಕಾರ್ಯರೂಪದಲ್ಲಿ ಪ್ರಾಚೀನ ಸಾಹಿತ್ಯ ದೇವಿಯನ್ನು ಸಮಾಜದ ಮುಂದಿಟ್ಟಮೇಲೆ ಶೋಧನೆಯದೃಷ್ಟಿ ಇನ್ನೂ ಸಾಲದೆಂಬ ಶಬ್ದ ನ್ಯೂನತೆ ಬಂದೆ ಬರುವುದು ಸ್ವಭಾವಿಕ. ಯಾತೆ ಆಗಲಿ ಯಾವ ವಿಷಯವನ್ನು ಭಾವಿಸುವರೋ ಆ ವಿಷಯ ಭಾವನೆ ಅವರನ್ನೇ ಹೊಂದಿರುತ್ತದೆ. ಜ್ಞಾನ ಚಕ್ಷು ವಿಲ್ಲದ ನನ್ನ ಧ್ಯೇಯಕ್ಕೆ ದಕ್ಷಿಣ ಕರ್ನಾಟಕದ ಸಾಹಿತ್ಯ ಪ್ರೇಮಿಗಳು (ನನ್ನ ಶ್ರೀಗುರುವಿನ ಶಿಷ್ಯ ಸಾಂಪ್ರದಾಯಕರು) ಮೊದಲು ಧನ ಸಹಾಯದ ತಳಹದಿಯನ್ನು ಹಾಕಿಕೊಟ್ಟದುದರಿಂದಲೇ ಶ್ರೀ ಗುರುಮಲ್ಲೇಶ್ವರ ಗ್ರಂಥರತ್ನ ಮಾಲೆಯಲ್ಲಿ ಎರಡನೆಯ ಪುಷ್ಪವಾಗಿ ಈ ಕಾಲಜ್ಞಾನ ಸಂಗ್ರಹ ಗ್ರಂಥವು ಹರಳ ಶ್ರೀಮನ್ನಿರಂಜನ ಮುಪ್ಪಿನ ಮಹಾಸ್ವಾಮಿ ಯವರ ಚರಣಾದ್ವಯಕ್ಕೆ ಕಾಣಿಕೆಯಾಗಿ ಅರ್ಪಿಸುವ ಸುಯೋಗವನ್ನು ದೊರಕಿಸಿದ ಮಹನೀಯರ ಮಹದುಪಕಾರವನ್ನು ನಾನು ಎಂದಿಗೂ ಮರೆಯದಿರಲಾರೆ.

ಪುನುಗಿ ಮಾರ್ಜಾಲ ಮೃಗವು ನಿಹ್ಯವಾದ ಪ್ರಾಣಿಯಾದರೂ ಪುನುಗಿಗೆ ಪ್ರಾಶಸ್ತ್ಯ ಕೊಡುವಂತೆ ಪ್ರಥಮ ಪುಷ್ಪವಾದ "ಶರಣ ಲೀಲಾಮೃತ"

॥ ಶ್ರೀ ಗುರು ಬಸವ ಲಿಂಗಾಯ ನಮಃ ॥

# ಕಾಲಜ್ಞಾನ ಸಂಗ್ರಹ

### ಸಂಗನ ಬಸವರಾಜದೇವರ ಕಾಲಜ್ಞಾನ ವಚನ

ಶರಣು ಶರಣಾರ್ಥಿ ರಾಕ್ಷಸನಾಮಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿಯಲ್ಲು ಇಪ್ಪತ್ತೇಳು ನಕ್ಷತ್ರ ಪಾಣಿಗ್ರಹಣ ಶುಭಕಲ್ಯಾಣದೊಳು ಸೋಮವಾರ ಅಹೋರಾತ್ರಿಯಲ್ಲಿ ಬಸವರಾಜದೇವರು ನಿರೂಪಣ ಮಾಡಿದರು. ಕೃತಯುಗ ಪ್ರಮಾಣ (೧೭೨೮೦೦೦) ಹದಿನೇಳು ಲಕ್ಷದ ಇಪ್ಪತ್ತೆಂಟು ಸಾವಿರವರುಷ ತಿರುತಿರುಗಿ ಬರುವಲ್ಲಿ, ದೇವಾಂಗನೆಂಬ ಭಕ್ತನಾಗಿ ಬಂದು ದಾಸೋಹವ ಮಾಡುವಲ್ಲಿ ಕಾಯಶೂನ್ಯನೆಂಬ ಜಂಗಮನಾಗಿ ಬಂದು ಲಿಂಗಾರ್ಚನೆಯ ಮಾಡುವ ಭೇದವ ನೀವು ಬಲ್ಲಿರಲ್ಲದೆ ಮತ್ತಾರೂ ಅರಿಯರು. ತ್ರೇತಾಯುಗ (೧೨೯೬೦೦೦) ಹದಿನ್ನೆರಡು ಲಕ್ಷದ ತೊಂಭತ್ತಾರು ಸಾವಿರ ವರುಷ ತಿರುತಿರುಗಿ ಬರುವಲ್ಲಿ ಘಂಟಾಕರ್ಣನೆಂಬ ಭಕ್ತನಾಗಿ ಬಂದು ದಾಸೋಹವ ಮಾಡುವಲ್ಲಿ, ನೀಲಕಂಠನೆಂಬ ಜಂಗಮನಾಗಿ ಬಂದು, ಲಿಂಗಾರ್ಚನೆಯ ಮಾಡುವ ಭೇದವ ನೀವು ಬಲ್ಲಿರಲ್ಲದೆ ಮತ್ತಾರೂ ಅರಿಯರು. ದ್ವಾಪರಯುಗ (೮೬೪೦೦೦) ಎಂಟುಲಕ್ಷದ ಅರುವತ್ತುನಾಲ್ಕು ಸಾವಿರ ವರುಷ ತಿರುಗಿತಿರುಗಿ ಬರುವಲ್ಲಿ, ವೃಷಭನೆಂಬ ಭಕ್ತನಾಗಿ ಬಂದು ದಾಸೋಹವ ಮಾಡುವಲ್ಲಿ, ಅನಿಮಿಷನೆಂಬ ಜಂಗಮನಾಗಿ ಬಂದು ಲಿಂಗಾರ್ಚನೆಯ ಮಾಡುವ ಭೇದವ ನೀವು ಬಲ್ಲಿರಲ್ಲದೆ ಮತ್ತಾರೂ ಅರಿಯರು. ಕಲಿಯುಗ (೪೩೨೦೦೦) ನಾಲ್ಕುಲಕ್ಷದ ಮೂವತ್ತೆರಡು ಸಾವಿರ ವರುಷಗಳಲ್ಲಿ ನನ್ನನ್ನು ಕೃಪಾಸನದಲ್ಲಿ, ತಡೆದ ದ್ವಾರಪಾಲಕ ಬಂದು ಕಾ...

ರಾಯನ ಜಠರದಲ್ಲಿ ಜನಿಸಲು, ಬಿಜ್ಜಳನೆಂಬ ನಾಮವಾಯಿತು. ಇಂ
ಗಳೇಶ್ವರ ಬಾಗೇವಾಡಿಯ ಮಂಡಿಗೆಮಾದಿರಾಜನ ಅರಸಿ ಮಾದಲಾಂ
ಬಿಕೆಯ ಗರ್ಭದಲ್ಲಿ ಜನಿಸಿ ಬಂದಲ್ಲಿ, ಬಸವಣ್ಣನೆಂಬ ನಾಮವಾಯಿತು
ನಾವು ಬಂದ ಕಥನವ ಕೇಳಿ ನೀವು ಬಂದಿರಿ. ನೀವು ಬಂದ ಕಥನಕ್ಕೆ
ನಾವು ಬಂದೆವು. ನಮ್ಮ ನಿಮ್ಮ ಕಥನಕ್ಕೆ ಬಂದವರು ಅಲ್ಲಮಾ
ಪ್ರಭುದೇವರು ಅಲ್ಲದೆ ಮತ್ತಾರೂ ಇಲ್ಲ. ಕೆಲವು ದಿನಕ್ಕೆ ಕಲ್ಯಾಣವೆಂಬ
ಪ್ರಣತೆಯಾಯಿತು. ನಾನೆ ತೈಲವಾದೆನು. ಚಿಕ್ಕದಂಡನಾಯಕರು
ಬತ್ತಿಯಾದರು. ಅಲ್ಲಮಾಪ್ರಭುದೇವರೆ ಜ್ಯೋತಿಯಾದರು. ಕೆಲವು
ದಿನ ಪ್ರಜ್ವಲಿಸುತ್ತಾ ಇರಲು ಅಷ್ಟರಿಂದಲೆ ಪ್ರಣತೆ ಒಡೆದೀತು. ತೈಲ
ಬತ್ತೀತು. ಬತ್ತಿ ಸುಟ್ಟಿತ್ತು. ಜ್ಯೋತಿ ನಿರ್ವಯಲಾಯಿತು. ಸೊಡ
ಲಿದು ಸೊಡ್ಡಳಬಾಚರಸ, ಸುಂಕದಬಂಕಣ್ಣ, ಹಡಪದಅಪ್ಪಣ್ಣ
ಕೊಂಡಗೂಳಿಯಕೇಶಿರಾಜಯ್ಯಗಳು, ಕಲಕೇತಬ್ರಹ್ಮಯ್ಯಗಳು
ಕೆಂಬಾವಿಭೋಗಣ್ಣಗಳು, ಮಡಿವಾಳಮಾಚಯ್ಯಗಳು, ಮೊದಲಾದ
ಏಳನೂರ ಎಪ್ಪತ್ತು ಅಮರ ಗಣಂಗಳು ನೀವು ಅನುಭವ ಮಾಡಿ ನಿಮ್ಮ
ಕೈಯೊಳಗೆ ಚಿಕ್ಕದಂಡನಾಯಕರ ಕೊಟ್ಟು ನಾವು ನಮ್ಮ ಕಪ್ಪಡಿಯ
ಸಂಗಮೇಶ್ವರದೇವರಲ್ಲಿಗೆ ಹೋದೆವು. ಹೋದ ಮೂರುವರೆ ತಿಂಗಳ
ಮೇಲೆ, ಹರಳಯ್ಯ, ಮಧುವಯ್ಯಗಳ ದೆಸೆಯಿಂದ ಕದನ ಹುಟ್ಟೀತು
ಜಗದೇವ ಮೊಲ್ಲೆಬೊಮ್ಮಣ್ಣಗಳು ಪಂಜಾಕಾರರಾಗಿ ಬಿಜ್ಜಳನ ಕ್ಷಯ
ಮಾಡ್ಯಾರು. ಅಳಿಯಬಿಜ್ಜಳರಾಯ ದಾಳಿಯ ಹರಿದಾನು ಕಾದ
ಹೊಳೆಯಲ್ಲಿ ಕಾದ್ಯಾರು. ತಡೆಗೋಡಿಯಲ್ಲಿ ತಡೆದಾರು. ಮುರುಗೋಡಿ
ಯಲ್ಲಿ ಮುರಿದಾರು. ಚಿಕ್ಕ ಬಸವಣ್ಣನಲ್ಲಿ ನಮ್ಮ ಕೂಗಿನ ಮಾ
ತಂದೆಗಳು, ಕೂಗಿನ ಬೊಬ್ಬೆಯನ್ನಿಟ್ಟು ಹೋದಾರು. ನಮ್ಮ ಅಸಂಖ್ಯಾತ
ಮಹಾಗಣಂಗಳು ಆಸನವನಿಕ್ಕಿ ಮಾತನಾಡ್ಯಾರು. ಉಳುವಿ
ಮಹಾಮನೆಗೆ ಚಿತ್ತೈಸ್ಯಾರು ಕಲ್ಯಾಣ ಕೆಟ್ಟು ಕಲ್ಬುರುಗಿ ಪಟ್ಟಣ
ವೆನಿಸಿಕೊಂಡೀತು ಕೊಕಲನನಿಸೀತು ಮುಕುಂಡಿಕೆಯ ಬಿಲ್ಲಿನವರು
ಘನವಾದಾರು. ಚಪ್ಪಟೆಗಾರರು ಘನವಾದೀತು. ಅಲ್ಲಿ ...



ಎಂಬ ಮುಸಲಮಾನ ರಾಕ್ಷಸರು ಏಳು ಚಕ್ರವರ್ತಿ ರಾಜಕುಲವೆನಿಸಿ
ರಾಜ್ಯವನಾಳ್ಯಾರು. ಶಂಭು ತ್ರಿಪುರಾಂತಕದೇವರ ಶಿಖರವಳಿದಾರು.
ಗರುಡನ ಕಂಭ ಮುರಿದು, ಮಸೀತಿಯ ಕಟ್ಯಾರು. ಖಡ್ಗದ ಕರದವರು
ಘನವಾದಾರು. ಡೊಂಕು ಬಿಲ್ಲಿನವರು ಘನವಾದಾರು. ಆ ತ್ರಿಪುರಾಂತಕ
ದೇವರ ಮುಂದೆ ಕಪಿಲೆಯ ಕೊಂದು ಬಾಣಸವ ಮಾಡ್ಯಾರು.
ಮುಂದವರನು ಎಳದೊಯ್ದಾರು. ಗೋಹತ್ಯವಂ ಮಾಡ್ಯಾರು. ಚಿಪ್ಪಟೆ
ಯವರು ಹುಟ್ಟಿ ಸಂಗಯ್ಯ ದೇವರ ಶಿಖರವ ಕೆಡಹ್ಯಾರು. ಬೆಳ್ಳಿಯ
ಗುಂಡು ಡಿಳ್ಳಿಗೆ ಹೋದೀತು. ಇದು ಕರುಣವರನಾದೀತು. (ನಾವು
ಹೋದ ಏಳನೂರು ವರುಷದಮೇಲೆ ಕಲುಬುರುಗಿ ಕೆಟ್ಟು ಬಿದುರೆ
ಪಟ್ಟಣವೆಂಬ ಪೆಸರಾದೀತು. ಆ ಪಟ್ಟಣದಲ್ಲಿ ರಾಜಕುಲವೆನಿಸಿ ಆಳ್ಯಾರು.
ಪಶ್ಚಿಮದಿಂದ ರಾಕ್ಷಸರು ಬಂದಾರು. ಪತಿವ್ರತೆಯರು ಜಾರಸ್ತ್ರೀಯ
ರಾದಾರು. ವೇಶಿಯರ ನಡೆ ಕೆಟ್ಟೀತು. ಮುಂಡೆಯರ ಕುಂಡೆ ಕುಣಿ
ದಾಡೀತು. ಪಾಪಪುಣ್ಯಕ್ಕೆ ಪರಿವರ್ತನೆಯಾದೀತು. ಆನಂತ ಹಿರಿಯ
ರೆಲ್ಲಾ ಮುಖಭಂಗಿತರಾದಾರು.) ನೈಋತ್ಯನಲ್ಲಿ ವಿರುಪಾಕ್ಷದೇವರ
ಮುಂದಣ ಮನ್ಮಥಕೊಂಡ ಹೂಳೀತು. ಬಿದುರೆನಗರ ಕೆಟ್ಟು ಹೋದೀತು.
ಗಾಜಿನ ಕಳಶವಿಟ್ಟಾರು. ತೆರುತೀರ್ಥ ಹಾಳಾದಾವು. ಲಿಂಗದ ಕಲ್ಲಿಗೆ
ಕುದುರೆಯ ಕಟ್ಟ್ಯಾರು. ಲಕ್ಷದಮೇಲೆ ತೊಂಭತ್ತಾರುಸಾವಿರ ಕುದುರೆ
ಕಣುನಲ್ಲಿಯು ಸವಿದೀತು. (ಮಾತಾಂಗ ಪರ್ವತದಲ್ಲಿ ಮಸೀತಿ ಕಟ್ಟೀತು.
ಗೋಹತ್ಯವಂ ಮಾಡ್ಯಾರು. ಆ ಪರ್ವತದ ಮೇಲೆ ಜಂಗಮವೆ ಆನಾ
ಚಾರಿಗಳಾದಾರು. ಭಕ್ತರೆಲ್ಲ ಹೊಲೆಯರಾದಾರು. ಆ ಪರ್ವತದ
ಮೇಲೆ ರಕ್ಕಸರಾಳಿ ಘನವಾದಾವು ಮುಡುಹು ಗಸ್ತಗತಕೆ ಹೆಚ್ಚಾದೀತು.
ಆ ಪರ್ವತದ ಮೇಲೆ ಸರೆಮಾಂಸ ಮಾರೀತು. ವೇಶಿಯರು
ಗುಡಿಸಿಲ ಕಟ್ಯಾರು. ಪಾಪ ಘನವಾದೀತು. ಪುಣ್ಯ ಸೂಕ್ಷ್ಮ
ವಾದೀತು. ಆ ಪರ್ವತದಮೇಲೆ ಜಂಗಮದ ರೋಹಿತ ಹರಿದೀತು.
ಆ ಪರ್ವತ ಕೆಟ್ಟು ಅರಣ್ಯವಾದೀತು. ನಾವು ಹೋದ ಏಳನೂರು
ಎಪ್ಪತ್ತು ವರುಷದಮೇಲೆ ಉತ್ತರದಲ್ಲಿ ರಾಕ್ಷಸಿ ಹುಟ್ಟ್ಯಾಳು. ವಿರೋಧಿ

ಸಂವತ್ಸರದಲ್ಲಿ ಆರು ದರುಶನ ಹದಿನೆಂಟು ಸಮಯಕ್ಕೆ ವಿರೋಧ ಹುಟ್ಟೀತು. ವಿಕೃತಿಯಲ್ಲಿ ಹದಿನೆಂಟು ಕುಲವೆಲ್ಲಾ ಒಂದು ತಣಿಗೆಯಲ್ಲಿ ಉಂಡೀತು. ನಾನಾವರ್ಣದ ಜಾತಿ ಏಕವರ್ಣವಾದೀತು. ಉತ್ತರ ರಾಕ್ಷಸಿ ದಕ್ಷಿಣಕ್ಕೆ ನಡೆದಾಳು. ದಕ್ಷಿಣಭಾಗದಲ್ಲಿ ವಿರೂಪಾಕ್ಷದೇವರ ಮುಂದೆ ವಿಷ್ಣುವಿನ ಅವತಾರವಾದೀತು. ನೆಮಥಬಾದ ಎಂಬ ನಗರದಲ್ಲಿ ಕೃಷ್ಣಾವತಾರವಾದೀತು. ಶತ್ರು ಮಿತ್ರ ಸಮಾರಾಧನೆಯಾದೀತು. ದೇವದರೊ ಮಾನ್ಯವರು ಕಟ್ಟೆ ಕ್ಕುಂಡಿರಿಸಿಕೊಂಡಾರು. ಗುರುಹಿರಿಯರು ಮುಖಭಂಗಿತರಾದಾರು. ಇಂತಪ್ಪ ಮೂರುವರೆ ವರುಷ ಚಕ್ರವೆತ್ತಿ ರಾಜ ಕುಲವೆನಿಸಿಕೊಂಡಾರು. ಹೊಲೆಯಂಗೆ ದಂಡಿಗೆ, ಸತ್ತಿಗೆ, ಹಾಸುಮಂಚ, ನಾಟಕಶಾಲೆ ಆದೀತು. ಗಂಡಹೆಂಡರಿಗೆ ಒಂದೇ ಸೀರೆಯಾದೀತು. ಉಂಬ ತಣಿಗೆ ಮಾರಿಹೋದೀತು. ಖರಸಂವತ್ಸರಕ್ಕೆ ರಾಕ್ಷಸರು ಸೂಕ್ಷ್ಮರಾದಾರು. ಶೋಭಕೃತು ಸಂವತ್ಸರ ಇಪ್ಪತ್ತುಮೂರುವರೆವರುಷ ಚತ್ರಬಯಲಾದೀತು. ಶೋಭಕೃತು ಸಂವತ್ಸರಕೆ ರಾಕ್ಷಸರಿಗೆ ಕದನ ಹುಟ್ಟೀತು. ಕ್ರೋಧಿಸಂವತ್ಸರಕ್ಕೆ ಮುಂದು ಹಿಂದಾದೀತು. ಹಿಂದು ಮುಂದಾದೀತು. ಪಶ್ಚಿಮದಿಂದ ರಾಕ್ಷಸರು ಬಂದಾರು. ಬಿದುರೆಯಲ್ಲಿ ಮಹಾನ್ಮಧಾತ್ರಿಯಂಕಟಕು ಅಮದೆರಾಶಿಗೆ ಹಿಮಸೇತುಮಧ್ಯದ ಶಿಲೆಗಳು ಬಂದಾವು. ಊಹದ ಕೀಲು ಕೊಟ್ಟಾವು. ಮಹಾಮಾಣಿಕ್ಯದ ನವಾಜಕಲ್ಲ ನಿಕ್ಕ್ಯಾರು. ಉಪ್ಪರದ ಮಣಿಗೆಲಸ ಹುಟ್ಟೀತು. ಗಾಜಿನಕಳಶವಿಟ್ಟಾರು. ಪೂರ್ವದಲ್ಲಿ ರಚಿಸಿದಾಪತ್ರನತರ ದಕ್ಷಿಣದಲ್ಲಿ ಕ್ಷಯವಾದೀತು. ಹಿರಿದು ಕಿರಿದಾದೀತು. ಅಜನಮರೆಯ ಕುಂಜರ ಹೊಕ್ಕೀತು. ಕಪ್ಪೆಯ ಮರೆಯ ಜಂಬೂಕ ಹೊಕ್ಕೀತು. ಆ ಜಂಬೂಕನಂ ಹದ್ದು ನುಂಗೀತು. ನುಂಗಲಿಕೆ ಅಜನ ಮರೆಯ ಕುಂಜರನೆದ್ದೀತು. ಹಣೆ ಹನ್ನೆರಡುಗಾವುದ, ಬೆನ್ನು ಐಂಬೈನೂರು ಗಾವುದ, ಬಾಲ ಬೀಸೀತು. ಅದಕ್ಕೆ ಏಳು ಮುಖವು, ಅವರಿಗೆ ಅಜನಮರೆಯ ಕುಂಜರಗೂ, ತರ್ಕ ಹುಟ್ಟೀತು. ಹುಟ್ಟಲಿಕೆ ರಕ್ತದ ಕಡಲು ಹರಿದೀತು ಹರಿಯಲಿಕೆ ಆ ರಾಕ್ಷಸರಿಗೆ ಅದೆ ಕಡೆಯಾದೀತು. ಆಗಲಿಕೆ ಕಪ್ಪೆಯ ಮರೆಯ ಜಂಬೂಕನದ್ದೀತು. ನಡುಬಂಡೆ ಪೃಥ್ವಿಗ



ದುರ್ಗದುರ್ಗಿಗಳೆಲ್ಲ ಮರ್ತ್ಯವ ಹೊಕ್ಕಾರು. ಮಹಾಚೋದ್ಯ ಹುಟ್ಟೀತು. ನಂಜಿನ ಗಾಳಿ ಬೀಸೀತು. ಕೆಂಡದ ಮಳೆಗರದೀತು. ವಿಷದಬಳ್ಳಿ ಹರಿದೀತು. ವೇಶ್ಯಾಖಗನವಾದೀತು. ಉಕ್ಕಿಸೊಕ್ಕಿದ ಮನುಜರು ಮತ್ತೆ ಖಿಲವಾದಾರು, ಹನ್ನೆರಡುಗಾವುದಕೊಂದು ಪಟ್ಟಣವಾದಾವು. ಮೂಗಾವುದಕ್ಕೊಂದು ಸಂತೆಯಾದಾವು. ಹೊಟ್ಟೆ ಹಾರೀತು. ಗಟ್ಟಿ ಉಳಿದೀತು. ಮಿಕ್ಕುದು ಪಲ್ಲವಿಸಿದಂದಿಗೆ ನೂರಕೊಬ್ಬ ಶರಣರಾದಾರು. (ನಾವು ಹೋದ ಏಳನೂರ ಎಪ್ಪತ್ತ ವರುಷಕ್ಕೆ ಬಿದುರೆಯೆಂಬ ಪಟ್ಟಣ ಕೆಟ್ಟು ಹುಲಿ ಕರಡಿ ಆಡ್ಯಾವು. ಕಲ್ಯಾಣ ಮುನ್ನಿನಂತೆ ಪಟ್ಟಣವಾದೀತು. ಲಕ್ಷದಮೇಲೆ ತೊಂಬತ್ತಾರು ಸಾವಿರ ಗೋರಿಗುಮ್ಮಟವಳಿದಾವು. ನವನಾಥ ಸಿದ್ಧರಿಗೆ ಬಿಡಾರವಾದಾವು. ಶೂನ್ಯ ಸಿಂಹಾಸನದಲ್ಲಿ ಲಿಂಗಪ್ರತಿಷ್ಠೆಯಾದಾವು. ಗುಡಿಯುವರು ಗುಡಿಗೆ ಬಂದಾರು. ಬರಲಿಕೆ ಮರ್ತ್ಯದ ಶಾಪವಳಿದೀತು. ಅಳಿಯೆ ಕಲ್ಯಾಣ ನಾಲ್ವತ್ತೆಂಟುಗಾವುದ ವಿಸ್ತೀರ್ಣ ಲಿಂಗಮಯವಾದೀತು ತ್ರಿಪುರಾಂತಕದೇವರ ಪಶ್ಚಿಮದ ಭೋದಿಗೆ ಇಪ್ಪತ್ತೇಳು ಬಯಲಾದೀತು. ಬಯಲಾದಂದಿಗೆ ಹಿಂದಕ್ಕೆ ಹತ್ತು, ಮುಂದಕ್ಕೆ ಹನ್ನೊಂದು, ಅಮರಗಣಂಗಳು ಸಹಿತ, ಆನಂದಸಂವತ್ಸರದ ಕಾರ್ತೀಕ ಮಾಸದ ದಶಮಿ ಸೋಮವಾರ ಶ್ರವಣನಕ್ಷತ್ರ ಬಂದುದು, ಅಹೋರಾತ್ರಿಯಲ್ಲಿ ಕಲ್ಯಾಣದ ತ್ರಿಪುರಾಂತಕದೇವರ ಅನುಭವಮಂಟಪದಲ್ಲಿ ವೀರವಸಂತಗೆ ಪಟ್ಟವಾದೀತು. ಚಿಕ್ಕದಂಡನಾಯಕರಿಗೆ ಪ್ರಧಾನಿಪಟ್ಟವಾದೀತು. ನಾವು ಬರಲು ವೀರವಸಂತರಾಯನು, ಚಿಕ್ಕದಂಡನಾಯಕರು, ಅಲ್ಲಮಪ್ರಭುದೇವರು, ಅಸಂಖ್ಯಾತ ಮಹಾಗಣಂಗಳು ಮರ್ತ್ಯಲೋಕಕ್ಕೆ ಚಿತ್ತೈಸ್ಯಾರು. ಇಂತು ನಾವು ಹೇಳಿದ ಕಾಲಜ್ಞಾನ ಹುಸಿಯಲ್ಲ. ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಅಲ್ಲಮಪ್ರಭುದೇವರಾಣೆ. ತಪ್ಪದು ಕಣಾ. ಕೂಡಲಸಂಗಮದೇವಾ ಸಂಗನ ಶ್ರೀಬಸವರಾಜದೇವರು ನಿರೂಪಿಸಿದ ಕಾಲಜ್ಞಾನದ ವಚನ ಸಮಾಪ್ತಂ)

Scanned with OKEN Scanner

# ಶ್ರೀ ಪ್ರಭುದೇವರ ಕಾಲಜ್ಞಾನದ ವಚನಗಳು

ಕಲ್ಯಾಣದಲ್ಲಿ ಬಸವಣ್ಣನವರು ಉಳುವೆಯ ಮಹಾಮನೆಗೆ ಹೋಗುವುದನ್ನು ಪೇಳ್ವೆನು. ಎಲ್ಲಾ ಗಣಂಗಳು ಕೇಳಿ ಕೃತಾರ್ಥರಾಗಿರಯ್ಯ. ಬಿನ್ನಹವಂ ಮಾಡೇನು. ಏಕಚಿತ್ತದಿಂ ಕೇಳಿ ಕೃತಾರ್ಥರಾಗಿರಯ್ಯ. ಶ್ರೀ ಕಲ್ಯಾಣದಲ್ಲಿ ಕೈಲಾಸವುಪ್ಪ ಲಕ್ಷದಮೇಲೆ ತೊಂಬತ್ತಾರು ಸಾವಿರ ಶಿವಾಲಯಕ್ಕೆ ಮುಖ್ಯವಾದ ತ್ರಿಪುರಾಂತಕದೇವರ ಮುಂದಣ ಅನುಭಾವಮಂಟಪದಲ್ಲಿ ಪ್ರಭುದೇವರು, ಸಿದ್ಧರಾಮೇಶ್ವರದೇವರು, ಮೋಳಿಗೆಮಾರಯ್ಯಗಳು, ಮುಸುಡಿಚೌಡಯ್ಯಗಳು ವೀರಮಡಿವಾಳಯ್ಯಗಳು, ಏಳನೂರುಎಪ್ಪತ್ತು ಅಮರಗಣಂಗಳನೆಲ್ಲಾ, ಅಸಂಖ್ಯಾತ ಮಹಾಗಣಂಗಳ ಸಮೂಹದಲ್ಲಿ ನಿರೂಪಿಸಿದ ಪ್ರಸಾದವಚನ. ॥ ೧ ॥

ಎನ್ನಯ್ಯ ಎನ್ನ ಬಸವಣ್ಣ, ನೀನು ಬಂದ ಸಂವತ್ಸರವು ಹತ್ತು ಹತ್ತುಬಾರಿ ಮರಳಿ ಬಂದೀತು. ರಾಕ್ಷಸ ಸಂವತ್ಸರದಲ್ಲಿ ನಿಂದೀತು ನೀನಾಗ ಅದೇ ಕಡೆಯೆಂದು ನಿರೂಪಿಸಲು, ಆನಂದಿಸಿ ಅಕ್ಕರಿಂ ಕೇಳುತ್ತಿರಲು ಅಂದಿಗೆ ಆಷಾಢಶುದ್ಧ ಪಾಡ್ಯಮಿ ಸೋಮವಾರದ ರಾತ್ರಿಯಲ್ಲಿ, ನಿಮ್ಮ ಗಣಂಗಳು ಸಹ ಉದಯವಾದ ಇಪ್ಪತ್ತೈದು ಗಳಿಗೆಗೆ ನಮ್ಮ ಗುಹೇಶ್ವರ ಲಿಂಗದಲ್ಲಿ ಐಕ್ಯವಾದೇವು. ನಾವು ಹೋದ ತಿಂಗಳಿಗೆ ನಿಮ್ಮ ಸಂಗಮೇಶ್ವರ ದೇವರಲ್ಲಿ ಐಕ್ಯವಾದೀರೆಂದು ನಿರೂಪಿಸಲು ಎರಡು ಕರಗಳ ಮುಗಿದು ಬಸವೇಶ್ವರದೇವರು ನಿರೂಪಿಸಿದ ಪ್ರಸ್ತಾವದ ವಚನ. .... .... ॥ ೨ ॥

ಶರಣು ಶರಣಾರ್ಥಿ ಪ್ರಭುದೇವರಿಗೆ, ಶರಣು ಶರಣಾರ್ಥಿ ಎಂಬ ಸಮಯವಾಗಲು, ಎಲ್ಲಾ ಅಮರಗಣಂಗಳಿಗೆ ಗಣಪರ್ವವಂ ಮಾಡಿ



ಪ್ರಭುದೇವರು ತಮ್ಮ ಕರುಣಪ್ರಸಾದವಂ ಬಸವೇಶ್ವರದೇವರು ಮೊದಲಾದ ಅಸಂಖ್ಯಾತ ಗಣಂಗಳಿಗೆ ಕೊಟ್ಟು ತಮ್ಮ ಲಿಂಗದಲ್ಲಿ ಬಯಲಾಗಲು ಅತ್ತ ಪ್ರಭುದೇವರು ಬಯಲಾಗಲು, ಇತ್ತ ಬಸವೇಶ್ವರದೇವರು ಎಲ್ಲಾ ಅಸಂಖ್ಯಾತ ಮಹಾಗಣಂಗಳು ಸಹವಾಗಿ ಸುಖ ಸಂತೋಷ ವಿನೋದದಿಂದಿರುತ್ತಿರಲು ಶ್ರಾವಣಶುದ್ಧ ಪಾಡ್ಯಮಿ ಮಂಗಳವಾರ ರಾತ್ರಿ ನಿಮ್ಮ ಗಣಂಗಳ, ಸಮೂಹವು ಉದಯವಾದ ಇಪ್ಪತ್ತೆಂಟು ಗಳಿಗೆಗೆ ನಮ್ಮ ಸಂಗಮೇಶ್ವರ ದೇವರಲ್ಲಿ ಐಕ್ಯವಾದೇವು. ಎಲ್ಲಾ ಗಣಂಗಳು ನಿಮ್ಮ ಕಾರುಣ್ಯಪ್ರಸಾದವಂ ಕೊಟ್ಟು ನಮ್ಮ ತೊತ್ತಿನ ಬಸುರಲ್ಲಿ ಬಾರಯ್ಯ ! ಎಂದು ಹರಸಿ ಕಳುಹುವದೆಂಮ ಎನ್ನ ಮನದ ಘನವೆ ಸೊಡ್ಡಳಬಾಚಿರಾಜಯ್ಯ, ನಿಮ್ಮ ಗಣಂಗಳ ಹಸ್ತದಲ್ಲಿ ಚಿಕ್ಕ ದಂಡನಾಯಕರ ಕೈಯ್ಯಲೆಡಗೊಟ್ಟು ಬಿನ್ನಹವಂ ಮಾಡಿಹೆನು. ನಾನು ಹೋದ ಮೂರುವರೆ ತಿಂಗಳಿಗೆ ಆ ಪರವಾದಿಗಳ ಕೈಯ್ಯ ಪರವಾದಿಗಳ ಕೊಲ್ಲಿಸಿ ಆ ಪರವಾದವಂ ಮೆರೆದಾಳು ತಾಯಿ ಸೋಮಾಯಕ್ಕನು. ಕಲ್ಯಾಣಕ್ಕೆ ಅಳಿಯ ಬಿಜ್ಜಳಂಗೆ ರಾಯಪಟ್ಟವಾದೀತು. ಚಿಕ್ಕದಂಡ ನಾಯಕರು ತಮ್ಮ ಹನ್ನೆರಡುಸಾವಿರ ಜಂಗಮಸಹಿತ ಏಳನೂರು ಎಪ್ಪತ್ತು ಅಮರಗಣಂಗಳು ಸಹಿತ ಉಳುವೆಯ ಮಹಾಮನೆಗೆ ಬಿಜಯ ಮಾಡಿಹರು. ಹಾದಿಯಲ್ಲಿ ಅದ್ಭುತ ರಣವಾಯಿತು. ಮಡಿವಾಳಯ್ಯಗಳು ಬಿಜ್ಜಳನ ಕರತಳವಂ ಕೊಯ್ದಾರು. ಮೆರೆದಾರು. ಕಡಿದಾಡುತ್ತ ನಡೆದಾರು. ಉಳುವೆಯ ಮಹಾಮನೆಯಲ್ಲಿ ನಿಂದಾರು. ಅಲ್ಲಿ ಚೆನ್ನ ಉಯ್ಯಾಲೆಯನ್ನೇರಿ ಕೈಲಾಸಕ್ಕೆ ಬಿಜಯ ಮಾಡಿಯಾರು. ನೀಲಲೋಚನೆಯಮ್ಮನು ತನ್ನ ಲಿಂಗದಲ್ಲಿ ಐಕ್ಯವಾದಾಳು. ಮಿಕ್ಕನ ಪುರಾತನರು ತಮ್ಮ ಹಿಡಿದ ಕ್ರಿಯೆ ಹೋದಲ್ಲಿ ಬಯಲಾದಾರು. ಎಂದು ನಿರೂಪಿಸುತ್ತಿರಲು ಉದಯವಾಗಲು ಅತ್ತ ಬಸವೇಶ್ವರ ದೇವರು ತಮ್ಮ ಸಂಗಮೇಶ್ವರ ಲಿಂಗದಲ್ಲಿ ಐಕ್ಯವಾದರು. ಇತ್ತ ಚೆನ್ನ ಬಸವೇಶ್ವರ ದೇವರು ಎಲ್ಲಾ ಗಣಂಗಳ ಸಮೂಹದಲ್ಲಿರಲು ಆ ವೇಳೆಯಲ್ಲಿ ಸಿದ್ಧರಾಮೇಶ್ವರ ದೇವರು ಬಿಜಮಾಡಿ ಬಿನ್ನೈಸುವ ಪ್ರಸ್ತಾವದ ವಚನ. ॥ ೩ ॥

Scanned with OKEN Scanner

ಸಿದ್ಧರಾಮೇಶ್ವರದೇವರು ನೀಲಲೋಚನೆಯಮ್ಮನವರಂ ಬಸವಣ್ಣನು ಸಂಗಮೇಶ್ವರ ದೇವರಲ್ಲಿಗೆ ಹೋದರೆಂದು ನಿರೂಪಿಸಲು ಷಡುರಸಾನ್ನವಂ ನೀಡಿ ಆರೋಗಣೆಯಂ ಮಾಡಿಸಿ ಎನ್ನ ದೇವರ ದೇವಾ! ಎಂದು ಎರಡು ಕರಗಳಂ ಮುಗಿದು ನಿಂದಿರಲು ಸಿದ್ಧರಾಮೇಶ್ವರದೇವರು ಆರೋಗಣೆಯಂ ಮಾಡಿ ನೀಲಲೋಚನೆಯಮ್ಮನವರ ಮುಖವಂ ನೋಡಿ ಬಸವಣ್ಣನು ನಿಮ್ಮ ಇರಿಸಿ ಹೋದನೇ! ಎಂದು ತಲೆದೂಗುತ್ತಿರಲು ಆ ನೀಲಲೋಚನೆಯಮ್ಮನವರು ಸಿದ್ಧರಾಮೇಶ್ವರದೇವರ ಶೇಷಪ್ರಸಾದವಂ ತೆಗೆದುಕೊಂಡು ಸಿದ್ಧರಾಮೇಶ್ವರದೇವರಿಗೆ ಚಿಂತಿಸುವ ಪ್ರಸ್ತಾವದ ವಚನ. .... .... ॥ ೪ ॥

ಬಸವಣ್ಣನು ತಮ್ಮಾ ತಮ್ಮ ತೊತ್ತಿನ ಮಗಳೆಂದು ಕರೆಯದೆ ಇರಿಸಿ ಪೋದರು. ಬಸವಂಗೆ ಸತಿಯಿಲ್ಲಾ. ನನಗೆ ಪತಿಯಿಲ್ಲಾ. ನೀವು ಎನ್ನ ಕರಸ್ಥಲದಲ್ಲಿ ಮೂರ್ತಗೊಂಡ ಕಾರಣ ಆ ಬೆಳಕಿನಲ್ಲಿ ಐಕ್ಯವಾದೆನು. ಸಿದ್ಧರಾಮಯ್ಯಪ್ರಭುವೇ ಸಂಗಯ್ಯನೆಂದು ಅತ್ತ ನೀಲಲೋಚನೆಯಮ್ಮ ಬಯಲಾಗಲು ಇತ್ತ ಚೆನ್ನಬಸವಣ್ಣನ ಸಮೂಹದಲ್ಲಿ ಸಿದ್ಧರಾಮಯ್ಯದೇವರು ಬಿಜಯ ಮಾಡಲು ಶರಣು ಶರಣಾರ್ಥಿಯೆಂದು ಎರಡು ಕರಗಳಂ ಮುಗಿದು ಮುಂದೆ ಚೆನ್ನಬಸವರಾಜದೇವರು ಬಿನ್ನೈಸುವ ಪ್ರಸ್ತಾವದ ವಚನ. .... .... ॥ ೫ ॥

ಮುಂದಣ ಕಲಿಯುಗದ ಮಹಾತ್ಮೆಯನು ಮರ್ತ್ಯಲೋಕದ ಮಹಾಗಣಂಗಳು ಕೇಳಿ ಕೃತಾರ್ಥರಾಗಿರಯ್ಯ! ನಾನು ಹೇಳುವನಲ್ಲ. ಕೂಡಲ ಚೆನ್ನಸಂಗಮದೇವರು ಕೊಟ್ಟ ನಿರೂಪ. ಪಂಚಾಶತ್ಕೋಟಿ ಭೂಮಂಡಲದ ಮಧ್ಯದಲ್ಲಿ ಪೃಥ್ವಿಗೆ ಕೈಲಾಸವಪ್ಪ ಶ್ರೀಶೈಲದ ಮಲ್ಲಿಕಾರ್ಜುನದೇವರ ಮೂಡಲ ಬಾಗಿಲು ಮುಚ್ಚೀತು. ಮನುಷ್ಯರ ರಕ್ತ ಬಿದ್ದೀತು. ಸುರೆಯು ಗಡಿಗೆ ಮಾರೀತು. ವೇಶಿಯರ ಗುಡಿಸಿಲು ಕಟ್ಟೀತು. ಅಲ್ಲಿ ನಾನಾವಿಕಾರಂಗಳಾದಾವು. ಎಪ್ಪತ್ತೇಳು ದುರ್ಗದವರು ಅಪವರ್ಗನಾದಾರು. ವಿರೂಪಾಕ್ಷ ಕಟ್ಟಿ ಮೂವತ್ತೆರಡು ಕೋಟೆ



ವಾದಾವು. ಮನ್ಮಥಕೊಂಡ ಹೂಳೀತು. ತುರುಕರ ಬಲವೆದ್ದೀತು. ಶಂಭು ತ್ರಿಪುರಾಂತಕದೇವರ ಮುಂದಣ ಅನುಭವ ಮಂಟಪದಲ್ಲಿ ಕಪಿಲೆಯ ಬಾಣಸವ ಮಾಡ್ಯಾರು. ನಂದಿಕಂಭ ಮುರಿದಾರು. ಅಲ್ಲಿ ಗೋರಿಯನಿಕ್ಕಿ ಲಕ್ಷದಮೇಲೆ ತೊಂಬತ್ತಾರು ಸಾವಿರ ಕುದುರೆ ಕುಮ್ಮಟದಲ್ಲಿ ಮಡಿದೀತು. ಆ ಬಲ ಆರಾದೀತು. ಆರು ಮೂರಾದೀತು. ಮೂರು ಎರಡಾದೀತು. ಎರಡು ಒಂದಾದೀತು. ಒಂದು ರಾಮೇಶ್ವರಕ್ಕೆ ನಡೆದೀತು. ಆ ಬಲ ಉತ್ತರ ಮಧ್ಯದಲ್ಲಿ ಅಳಿದೀತು. ಮಿಕ್ಕುದು ಉಳಿದೀತು. ಶಿವಸಮಯ ಕೆಟ್ಟೀತು. ಹಿರಿಯರ ಹಿರಿಯತನವಳಿದೀತು. ಭಕ್ತರು ಜಂಗಮದ ಕೈಸೇವೆಯ ಮಾಡಿಸಿಕೊಂಡಾರು. ನಿಜಭಕ್ತಿಯ ಮರತಾರು. ದಾಕ್ಷಿಣ್ಯಭಕ್ತಿಯ ಮಾಡ್ಯಾರು. ಕ್ರಿಯೆಗಳಂ ಬಿಟ್ಟಾರು. ಅನೇಕ ನೇಮಂಗಳಂ ಮಾಡ್ಯಾರು. ಪ್ರಸಾದವಂ ಮರೆತಾರು. ವಂಚನೆ ಪಂತಿಭೇದವ ಮಾಡ್ಯಾರು. ಮನೆಯ ಹಿರಿಯರಂ ಮರೆತಾರು. ಕುಲದ ಹಿರಿಯರ ಪೂಜೆಯ ಮಾಡ್ಯಾರು. ಜಂಗಮರ ನಿಂದ್ಯವಂ ಮಾಡ್ಯಾರು. ಮತ್ತೆ ಜಂಗಮದ ಪ್ರಸಾದವಂ ಕೊಂಡಾರು. ಭಸಿತ ರುದ್ರಾಕ್ಷಿಯಂ ತೊಟ್ಟಾರು. ವಿಷಯಂಗಳೊಳಗೆ ಮುಳುಗಾಡ್ಯಾರು. ಹದಿನೆಂಟು ಜಾತಿ ಒಂದಾಗಿ ಉಂಡಾರು. ಕುಲಕ್ಕೆ ಹೋರಾಡ್ಯಾರು. ಅನೃತವ ನುಡಿದಾರು. ಅನೃತಕ್ಕೆ ಗುದ್ದಾಡ್ಯಾರು. ನಮ್ಮ ಶರಣರ ಹಿಂದೆ ಹಲವು ದೂರನಾಡ್ಯಾರು. ಅವರು ಹೊಳ್ಳು ಜಳ್ಳಾಗಿ ಹೋದಾರು. ನಮ್ಮ ಪುರಾತರ ಶರಣರು ಬೀಜಕೊಬ್ಬೊಬ್ಬರುಳಿದಾರು. ಷಡುದರ್ಶನ ಕೆಟ್ಟಾವು. ಏಕದರುಶನದಲ್ಲಿ ಅಡಗೀತು. ಮತ್ತೆ ಷಡುದರುಶನವೆದ್ದೀತು. ಕಲ್ಯಾಣಕ್ಕೆ ತೆಂಕಲು ತೊಂಬತ್ತೈದು ಗಾವುದ ದಾರಿಯಲ್ಲಿ ಇಬ್ಬರು ಪುರಾತರು ಕಾಯ ಸಹಿತ ಕೈಲಾಸಕ್ಕೆ ಬಿಜಯಂಗೈದಾರು. ಆ ದಿಕ್ಕಿನಲ್ಲಿ ಒಂದು ಕೆರೆಯಲ್ಲಿ ಕೆಂಡದ ಮಳೆ ಸುರಿದೀತು. ಸುರಿದು ಕುದಿ ಕುದಿದು ಅಡಗೀತು. ಆ ಕೆಂಡದ ಮಳೆ ಹೊಯ್ದು ಗಾವುದ ದಾರಿ ಮಧ್ಯದಲ್ಲಿ ಕಲ್ಯಾಣದ ಬಿಜ್ಜಳರಾಯನ ವಂಶದಲೊಬ್ಬ ವೀರವಸವಂತರಾಯ ಹುಟ್ಟ್ಯಾನು. ಆ ದಿಕ್ಕಿನಲ್ಲಿ ನರಸಿಂಹಾವತಾರ ಹೊಕ್ಕು ಹೊಡಕರಿಸೀತು. ಮತ್ತೆ ಪಶ್ಚಿಮ

Scanned with OKEN Scanner

ಮುಖವಾದೀತು. ಮತ್ತೆ ದಕ್ಷಿಣಕ್ಕೆ ಬಂದೀತು. ಮತ್ತೆ ಪಶ್ಚಿಮಕ್ಕೆ ಹೋದೀತು. ಮತ್ತೆ ದಕ್ಷಿಣ ಮುಖವಾದೀತು. ಮತ್ತೆ ತುರುಕರ ಬಲ ವೆದ್ದೀತು. ಆ ಬಲ ಒಂದೇ ಕಡೆಯಲ್ಲಿ ಅಳಿದೀತು. ಮತ್ತೆ ನರಸಿಂಹಾ ವತಾರ ಪಶ್ಚಿಮ ಮುಖದಲ್ಲಿ ನಿಂದೀತು. ದಕ್ಷಿಣ ಭಾಗದಲ್ಲಿ ಐದುಕೊಟ್ಟೆ ಉಳಿದಾವು. ಒಂದುಕೊಟ್ಟೆ ನಿಂದು ತಾನೆ ಅಳಿದೀತು. ಕಾವೇರಿ ಮಧ್ಯ ದಲ್ಲಿ ಎರಡು ಕೊಟ್ಟೆ ಉಳಿದಾವು. ಒಂದು ಕೊಟ್ಟೆ ವಿಷ್ಣು ಸಂಪ್ರದಾಯ ವಾದೀತು. ಒಂದು ಕೊಟ್ಟೆ ಈಶ್ವರ ಸಂಪ್ರದಾಯವಾದೀತು. ಆ ವಿಷ್ಣು ಕೊಟ್ಟೆ ವಿರೋಧಿಕೃತುಸಂವತ್ಸರದಲ್ಲಿ ಬಯಲಾದೀತು. ಈಶ್ವರ ಕೊಟ್ಟೆದಲ್ಲಿ ಹನ್ನೊಂದು ಖಂಡೆ ಇದ್ದಾವು. ಹನ್ನೊಂದು ಖಂಡೆಯ ದೊಳಗೆ ಮೂರು ಖಂಡೆಯು ಉಳಿದಾವು. ಮತ್ತೊಂದು ಖಂಡೆಯು ತಿರವ ಲೂರು ಸಮ್ಮುಖವಾದೀತು ಅಲ್ಲಿಂದ ಕುಂಜರೇಶ್ವರದೇವರಲ್ಲಿಗೆ ಬಂದೀತು. ಅಲ್ಲಿಂದ ಕಪಿಲೆಯ ತೀರಕ್ಕೆ ಬಂದೀತು. ಅಲ್ಲಿ ನಾಲ್ಕು ಪಟ್ಟದರಾಯರು ಹುಟ್ಟ್ಯಾರು. ಆ ರಾಯರಿಂದ ಮುಂದೆ ಮೂವ ತ್ತೆರಡು ಕೊಟ್ಟೆಗಳು ಹುಟ್ಟ್ಯಾವು. ದಕ್ಷಿಣ ಭಾಗದಲ್ಲಿ ಒಂದು ಈಶ್ವರ ಕೊಟ್ಟೆ ಉಳಿದೀತು. ಮಿಕ್ಕಿನ ಕೊಟ್ಟೆ ಅಳಿದಾವು. ಉತ್ತರದಲ್ಲಿ ಇಪ್ಪ ತ್ತೇಳು ಮಾನ್ಯರು ಹುಟ್ಟ್ಯಾರು. ದಕ್ಷಿಣದಲ್ಲಿ ಮೂವತ್ತಾರು ಮಾನ್ಯರು ಹುಟ್ಟ್ಯಾರು. ಪೂರ್ವದಲ್ಲಿ ಹದಿನೆಂಟು ಮಾನ್ಯರು ಹುಟ್ಟ್ಯಾರು ಕೀಲಕಸಂವತ್ಸರದಲ್ಲಿ ದುರ್ಗಿ ಹುಟ್ಟ್ಯಾಳು. ಆವಳು ಮೂರಂಗದವರನು ಬೇಟೆಯನಾಡ್ಯಾಳು ಕೀಲಕಸಂವತ್ಸರದಲ್ಲಿ ಮಾಂ ಯಾಗಿ ತೋರ್ಯಾಳು. ಸೌಮ್ಯಸಂವತ್ಸರದಲ್ಲಿ ಕನ್ನೆಯಾಗಿ ತೋರ್ಯಾಳು. ಸಾಧಾರಣಸಂವತ್ಸರದಲ್ಲಿ ಉಡುಚಿಯಾಗಿ ತೋರ್ಯಾಳು. ಇವು ಮೂರು ಸಂವತ್ಸರದಲ್ಲಿ ಮೂರು ಭಾಗವಾಗಿ ತೋರ್ಯಾಳು. ಒಂದು ಭಾಗ ಉಳಿ ದೀತು. ಅಂದಿಗೆ ನಮ್ಮ ಪುರಾತರು ಬೀಜಕೊಬ್ಬೊಬ್ಬರುಳಿದಾರು. ಅಂದಿಗೆ ನಮ್ಮ ಪುರಾತರು ಸುಳುಹ ತೋರ್ಯಾರು. ಅಂದು ಪರಿಯಂತರ ಬೂದಿಮುಚ್ಚಿದ ಕೆಂಡದಹಾಗೆ ಇದ್ದಾರು. ಅಲ್ಲಿಂದ ಮೇಲೆ ನರಸಿಂಹಾ ವತಾರ ಅಳಿದೀತು. ಕಲಿಯುಗದ ಕಳೆ ಕೆಟ್ಟೀತು. ಭಕ್ತಿಯು ಬೆಳೆ



ಬೆಳೆದೀತು. ಉತ್ತರದಿಂದ ಏಳನೂರ ಎಪ್ಪತ್ತು ಚರಲಿಂಗ, ಹನ್ನೆರಡು ಸಾವಿರ ಲಿಂಗದ ಕಂತೆಹಿರಿಯರು, ನೆಲ್ಲಿ ಕಾಯಿಯಷ್ಟು ಬಟ್ಟೆಲು, ಬೇವಿನಕಾಯಿಯಷ್ಟು ಕಮಂಡಲು ಸಹಿತ ಶ್ರೀಶೈಲಕ್ಕೆ ಬಿಜಯಂ ಗೈದಾರು. ಅಲ್ಲಿಂದ ಕೈಲಾಸಕ್ಕೆ ನಡೆದಾರು. ಅಲ್ಲಿ ತಳಿರು ಚಪ್ಪರವಿಕ್ಕಿ ಮೂರ್ತವಂ ಮಾಡ್ಯಾರು. ಕಲ್ಯಾಣ ಕಟ್ಟೀತು. ಉತ್ತರ ದಕ್ಷಿಣ ಭಾಗದ ನೈಋತ್ಯದಿಂದ ವೀರವಸವಂತರಾಯನು ಕಲ್ಯಾಣಕ್ಕೆ ಬರುವನು. ಗುಡಿ ತೋರಣವಂ ಕಟ್ಟ್ಯಾರು. ಆ ರಾಯಂಗೆ ಅಳಿಯಬಿಜ್ಜಳನ ಅರಮನೆಯ ಶೃಂಗಾರವಂ ಮಾಡ್ಯಾರು. ಪಟ್ಟಾಭಿಷೇಕವಂ ಮಾಡ್ಯಾರು. ಆ ಚಾಳುಕ್ಯರಾಯನ ಕಾಲದ ಮುತ್ತಿನ ಗದ್ದುಗೆಯಂ ತೆಗೆದು ಸಿಂಹಾಸನವ ನಿಕ್ಕ್ಯಾರು. ಆ ಗದ್ದುಗೆಯ ನೇರುತ್ತಾ ಬಂದು ಪವಾಡವಂ ಗೆಲಿದಾನು. ಆ ರಾಯನು ಗದ್ದುಗೆಯ ಮೇಲೆ ಕುಳಿತು ರಾಜ್ಯವಂಗಯ್ಯುತ್ತಿರಲು ಏಳನೂರ ಎಪ್ಪತ್ತು ಅಮರಗಣಂಗಳು ಸಹಿತ ಪ್ರಭುದೇವರು ಸಹಿತ ನಾವು ಸಹ ಉಳುವೆ ಮಹಾಮನೆಗೆ ಬಂದೇವು. ಅಲ್ಲಿ ಎಲ್ಲಾ ಗಣಂಗಳು ಸಹಿತ ಗಣಪರ್ವವಂ ಮಾಡಿ ಅಲ್ಲಿಂದ ಕಲ್ಯಾಣಕ್ಕೆ ಬಂದೇವು. ಮುಂದೆ ಬಾಚಿಕಾಯಕದಬಸವಯ್ಯಗಳು ಬಂದು ನಮಗೆ ನಮ್ಮ ಅರಮನೆಯಂ ಶೃಂಗಾರವಂ ಮಾಡ್ಯಾರು. ಉಪ್ಪರಗುಡಿ ಉಭಯ ನಂದಿ ಯಕಂಭ ಮುನ್ನೂರ ಅರವತ್ತು ಹೊನ್ನ ಕಳಶವೆದ್ದಾವು. ನಾವು ನಮ್ಮ ಅರಮನೆಗೆ ಹನ್ನೆರಡುಸಾವಿರ ಜಂಗಮ ಸಹಿತ ಬಂದೇವು. ಲಕ್ಷದಮೇಲೆ ತೊಂಬತ್ತಾರುಸಾವಿರ ಜಂಗಮಸಹಿತ ಎಲ್ಲರಿಗೂ ವಿಸ್ತಾರವಾದೀತು. ತ್ರಿಪುರಾಂತಕದೇವರ ಶಿವಾಲಯ ಕಟ್ಟೀತು. ಏಳನೂರ ಎಪ್ಪತ್ತು ಹೊನ್ನ ಕಳಶವೆಸೆದಾವು. ಪದ್ಮ ಪತ್ರ ತೀವಿದ ಸರೋವರಂಗಳು ಮುನ್ನೂರ ಅರವತ್ತು ಆದಾವು. ತ್ರಿಪುರಾಂತಕದೇವರ ಅಕ್ಕರಿಂ ನೋಡಿ ಆನಂದಿಸ್ಯಾವು. ನಾವು ಬಹಪರಿಯಂತರ ನಿಕ್ಷೇಪ ದಲ್ಲಿಹುದು ನಾವು ಆನಂದಸಂವತ್ಸರಕ್ಕೆ ಬಂದೇವು ನಿಮ್ಮಾಣೆ. ನಮ್ಮ ಪ್ರಮಥಗಣಂಗಳಾಣೆಕಣಾ. ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ ಬಂದೇವು. ಆ ಸಮಯದಲ್ಲಿ ಸಿದ್ಧರಾಮದೇವರ ಪ್ರಸ್ತಾವದ ವಚನ

ನಾನಾ ವ್ರತನೇಮಂಗಳಾದಾವು. ಸತ್ಯ ಶುದ್ಧ ಕಾಯಕನಿತ್ಯ ನೇಮಂಗಳಾದಾವು. ಖಂಡಿತ ಕಾಯಕದ ಅಖಂಡಿತರ ಕಂಡೇವು. ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನದೇವರಲ್ಲಿ, ಅಂದಿಗೆ ನೂರು ತುಂಬಿತೆಂಬ ಸಂದಪುರಾತರ ಕಂಡೇವು. ಆ ಸಮಯದಲ್ಲಿ ಸೊಡ್ಡಳಬಾಚಿರಾಜಯ್ಯನ ಪ್ರಸ್ತಾವದ ವಚನ. ॥ ೭ ॥

ಸಿದ್ಧರಾಮಯ್ಯಗಳು ಸೊನ್ನಲಾಪುರಕ್ಕೆ ಬಿಜಯಂ ಮಾಡುವಂದಿಗೆ ಸೋಸಲ ಸೋಮೇಶ್ವರಗೆ ನೊಸಲಗಣ್ಣ ನೆತ್ತಿಯಲ್ಲಿ ಅಮೃತ ಬಂದೀತೆಂಬ ಸುದ್ದಿ ಹುಟ್ಟೀತು. ಕಲ್ಲಕೋಳಿ ಕೂಗಿತೆಂದು ನಡೆದಾರು. ಹುಲುಗೆಯ ಸೋಮೇಶ್ವರದೇವರ ಬಲದಭಾಗದಲ್ಲಿ ಅಭಯಹಸ್ತ ತೋರೀತೆಂದು ನುಡಿದಾರು. ಬಿದುರೆಯ ಕೋಟೆಯ ಹೊರತಾಂಪುರದಲ್ಲಿ ಒಬ್ಬ ಶಿವಶರಣೆಯ ಗರ್ಭದಲ್ಲಿ ಒಂದು ವರುಷವಿದ್ದು ಒಬ್ಬ ಪುರಾತ ಹುಟ್ಟ್ಯಾನು. ಆ ಶರಣನು ನಿಮ್ಮ ಪಾದವ ಕಂಡಾನು. ನೀವು ಸೊನ್ನಲಾಪುರಕ್ಕೆ ಬಿಜಯಮಾಡುವಂದಿಗೆ ಕುರಿಗಳಿಗೆಲ್ಲಾ ತಲೆಬೆಳೆದು ಮೈ ಕಪ್ಪಾಗಿಹವು. ನಮ್ಮ ಸೊಡ್ಡಳದೇವರು ಸಾಕ್ಷಿಯಾಗಿ ಚೆನ್ನಯ್ಯನವರು ಮರ್ತ್ಯಕ್ಕೆ ಬಂದುದೆ ಕುರುಹು. ಆ ಸಮಯದಲ್ಲಿ ಮಡಿವಾಳ ಮಾಚಯ್ಯನ ಪ್ರಸ್ತಾವದ ವಚನ. ॥ ೮ ॥

ಅನೇಕ ಲಿಂಗ ನಿಷ್ಠೆಗಳಾದಾವು. ಮಹಾಪುರುಷರು ಹುಟ್ಟ್ಯಾರು. ಅವರ ಮುಂದೆ ನಿಂದೆಯ ನುಡಿದಾರು. ನಿಂದೆಯುವ ನುಡಿದವರಿಗೆ ನಮ್ಮ ಪುರಾತರು ಪವಾಡವಂ ತೋರಿ ಮೆರೆದಾರು. ನಮ್ಮ ಕಲಿದೇವರು ಸಾಕ್ಷಿಯಾಗಿ ನಮ್ಮ ಪುರಾತರು ಮರ್ತ್ಯದ ಕಲಿಯು ತೀರಿದಲ್ಲದೆ ಬಾರರು. ಆ ಸಮಯದಲ್ಲಿ ಉರಿಲಿಂಗದೇವರ ಪ್ರಸ್ತಾವದ ವಚನ. ॥ ೯ ॥

ನಮ್ಮ ಪುರಾತರು ಮರ್ತ್ಯಕ್ಕೆ ಬಂದಂದಿಂಗೆ ಮುಚ್ಚಿದ ಕಣ್ಣ ತೆರೆಯಯ್ಯ. ಕಿಚ್ಚಿನ ಮಳೆಯ ಸುರಿಸಯ್ಯ. ಕಲಿಯುಗದ ಬೆಳೆಯ ಕೆಡಿಸಯ್ಯ. ಭಕ್ತಿಯ ಬೆಳೆಯ ಬೆಳೆಸಯ್ಯ. ನಮ್ಮ ಉರಿಲಿಂಗದೇವರ



ಶರಣರ ಮರ್ತ್ಯಕ್ಕೆ ಬರಿಸಯ್ಯ. ಆ ಸಮಯದಲ್ಲಿ ಹಡಪದಪ್ಪಣ್ಣನ ಪ್ರಸ್ತಾವದ ವಚನ. ... .... ॥ ೧೦ ॥

ನಿಮ್ಮ ಕೃಪೆಯಿಂದ ಎಲ್ಲಾ ಗಣಂಗಳಿಗೆ ಬಿನ್ನಹವಂ ಮಾಡೇನು. ನೀವು ಮರ್ತ್ಯಲೋಕಕ್ಕೆ ಬರುವಂದಿಗೆ ರಾಕ್ಷಸಸಂವತ್ಸರ ಹತ್ತೊಂಬತ್ತು ಬಾರಿ ಮರಳಿ ಬಂದಲ್ಲದೆ ಬರಲಿಲ್ಲ. ಇಂದಿಗೆ ಏಳನೂರು ಎಪ್ಪತ್ತು ವರುಷವಿದ್ದೀತು. ಏಳನೂರು ಎಪ್ಪತ್ತರೊಳಗೆ ಮೂರು ವರುಷ ಮಿಕ್ಕೀತು. ರಾಕ್ಷಸಸಂವತ್ಸರ ಮಿಕ್ಕು ಆನಂದ ಸಂವತ್ಸರಕ್ಕೆ ಬಂದೇವು. ಈ ಮಾತು ವಚನ ಸಮಾಪ್ತಂ. ॥ ೧೧ ॥

ಬಸವಣ್ಣನವರ ಕಾಲಜ್ಞಾನ ಹನ್ನೊಂದು ವಚನವನೂ, ಇವನು ಗೋವಿನ ಕೆರೆಯ ದೇವರಸಯ್ಯಗಳು ಕಳುಹಿದ ಕಾಲಕ್ಷೇತ್ರದ ವಿಸ್ತಾರ ಸಂದ ಲಾವಣ್ಯ ಜ್ಞಾನ. ಲೋಕಾಚಾರ್ಯರಾದ ಪುರಾತರು ಕಲ್ಯಾಣದಲ್ಲಿ ಸುಖದಿಂದ ಈಶ್ವರಾರ್ಚಕರಾಗಿ ಶಿವಾನುಭವದಿಂದ ಇರುತಿರ್ದ ಜ್ಞಾನದಿಂದ ಸದಾ ಸಮ್ಯಜ್ಞಾನರಾಗಿ ಅನುಭವ ಮಂಟಪದಲ್ಲಿ ಎಲ್ಲಾ ಗಣಂಗಳಂ ಮುಹೂರ್ತವಂ ಮಾಡಿ ಇರುತುಂ ಇದ್ದ ಸದ್ಗೋಷ್ಠಿಯಲ್ಲಿ ಸಂಪಾದನೆಯ ಸಮಯದಲ್ಲಿ ಕಾರುಣ್ಯ ಸಿಂಧುವಾದ ಬಸವೇಶ್ವರದೇವರು ಲೋಕಹಿತಾರ್ಥರಾಗಿ ಬಹು ಸೇವಾರ್ಥಮಾನಂಗಳಾಗಿ ನಿರೂಪವಂ ಕೊಡಲಾಗಿ ಎಲ್ಲಾ ಗಣಂಗಳು ಆಲಿಸುತಿರ್ದ ಸಮಯದಲ್ಲಿ ಚೆನ್ನಬಸವೇಶ್ವರದೇವರು ಸಿದ್ಧರಾಮೇಶ್ವರದೇವರು, ಅಕ್ಕನಾಗಲೆಯಮ್ಮನವರು, ಮಡಿವಾಳಯ್ಯಗಳು, ಉಗ್ರಾಣದ ರುದ್ರಯ್ಯಗಳು, ಅವಸರದದೇವಯ್ಯಗಳು, ಮೋಳಿಗೆಮಾರಯ್ಯಗಳು, ಎಲೇಶ್ವರದಕೇತಯ್ಯ, ಕಕ್ಕಯ್ಯಗಳು, ಎಚ್ಚರಿಕೆ ದೇವಯ್ಯಗಳು, ಯಥಾರ್ಥದ ಅಪ್ಪಣ್ಣಗಳು, ಪೇಳಿದ ಕಾಲಜ್ಞಾನ ಸಹ ಹನ್ನೊಂದು ವಚನದ ಸಂಗಡ ಬಸವೇಶ್ವರದೇವರು ಬರೆದು ಇರಿಸಿದ ಲಿಪಿಗಳು ಪೇಳಿದರೆಲ್ಲ ಸಹ ಒಂದಿಗೆ ಕಾಣಲ್ಪಟ್ಟಾವು. ಇದನಾವಾತ ತಾನರಿವನು ಆತನೇ ವೀರವಸವಂತನೆಂದು ಗೋವಿನ ಕೆರೆಯ ದೇವರಸಯ್ಯಗಳು ಬರೆದಿರಿಸಿದ ಕಾಲಜ್ಞಾನದ ಹನ್ನೊಂದು ವಚನ. ಇವನು ಬಸುರಾವಲ್ಲಿ ನಿಮ್ಮ ಜ್ಞಾನದ ದೇವರಸರೂ ಉದ್ಭವಿಸಿದ ಲೋಕಹಿತಾರ್ಥರಾಗಿ ಇವು ಹನ್ನೊಂದು ವಚನ ಸಹ ಈ ಲಿಪಿ ಸಹ ಕಲ್ಯಾಣದಲ್ಲಿ ಬಸವೇಶ್ವರದೇವರ ಶಿವಪೂಜೆಯ

Scanned with OKEN Scanner

ಗದ್ದುಗೆಯ ಕೆಳಗೆ ನಿಕ್ಷೇಪಮಾಡಿಯಿರ್ದ ಶಾಸನಂಗಳಂ ತೆಗೆದು ತಂದು ಮಹಾ ಅನುಭವ ಜ್ಞಾನದಿಂದರಿದು ಓದಿ ಲೇಖನವೆತ್ತಿ ಬರೆದು ಮದಗದಕೆರೆಯಮೇಲಣ ಸಿದ್ಧೇಶ್ವರದೇವರಲ್ಲಿ ಬಚ್ಚಿಟ್ಟರಿ ಎಂದು ಕೊಡಲಾಗಿ ಆ ಸಿದ್ಧೇಶ್ವರದೇವರು ಕೋಡಿಯ ಬಸವೇಸ್ವರದೇವರ ಕೈಯ್ಯಲ್ಲಿ ಕೊಟ್ಟು ಇರಿಸಲು ಆ ಬಸವೇಶ್ವರನು ಗಂಗಾದೇವಿಯ ಕೈಯ್ಯಲ್ಲಿ ಕೊಟ್ಟು ಇರಿಸಲು ಆ ಗಂಗಾದೇವಿ ಮರ್ತ್ಯಲೋಕದ ಮಹಾಗಣಂಗಳು, ಜ್ಞಾನಿಗಳು, ಸುಜ್ಞಾನಿಗಳು, ವಿಹಂಗ, ಪಿಪ್ಪಲಕ, ಮರ್ಕಟ, ತ್ರಿಪದ ಜ್ಞಾನಿಗಳು, ಕಿಹಿಬೆಟ್ಟ, ಕಣ್ಣುಂಡಿಬೆಟ್ಟ, ನಾಡಿಬೆಟ್ಟದಿಂದ ಶಿವಶಿವಾ ಸಹಿಂಗಿ ಜ್ಞಾನಿಗಳು, ಮನ ಬುದ್ಧಿ ಚಿತ್ತ ಅಹಂಕಾರದಿಂದರಿವ ಕಾರಣಜ್ಞಾನಿಗಳು, ತಮ್ಮಿಂದ ಅರಿವ ಆಶ್ಚರ್ಯಜ್ಞಾನಿಗಳು, ದಶೇಂದ್ರಿಯ ಸುಖಿಗಳು, ಸ್ತ್ರೀಪುರುಷಾದಿ ಸುಖಿಗಳೂ, ಅರಿದು ಎಚ್ಚತ್ತುಕೊಳ್ಳಿ. ಎಂದು ಗಂಗಾದೇವಿಯಿಂತು ವಚನ ಹನ್ನೊಂದು ಲಿಪಿ ಸಹ, ದೇವರ ಕೈಯ್ಯ ಈತ ಬಸವೇಶ್ವರ ದೇವರು ಕೊಟ್ಟ ನಿರೂಪ. ಇದರ ಆದಿ ಅನಾದಿ ಆಗಮಂಗಳ ಬಸವೇಶ್ವರ ದೇವರು ನಿರೂಪಮಂ ಕೊಡಲಾಗಿ ತಮ್ಮ ತಮ್ಮ ಜ್ಞಾನದಿಂದ ಪೇಳಿದ ಕಾಲಜ್ಞಾನ.

## ಶ್ರೀ ಚೆನ್ನಬಸವೇಶ್ವರ ದೇವರ ಕಾಲಜ್ಞಾನ

ವಚನ ॥ ಮುಂದೆ ಚೆನ್ನಬಸವಣ್ಣನವರು ಅಸಂಖ್ಯಾತಮಹಾಗಣಂಗಳ ಸಭಾಮಧ್ಯದಲ್ಲಿ ರುದ್ರಮುನಿಸ್ವಾಮಿಃ ಸಿದ್ಧರಾಮಯ್ಯನವರೊಡನೆ ನಿರೂಪಿಸಿದ ಕಾಲಜ್ಞಾನವಂ ಪೇಳುತಿರ್ದರದೆಂತೆನೆ.

ಜಂಪೆ

ಸಿದ್ಧರಾಮಯ್ಯಗಳೆ । ರುದ್ರಮುನಿಸ್ವಾಮಿಗಳೆ ।
ಇದ್ದ ಶರಣರು ಕೇಳಿ । ಸಿಂದ್ಧಾಂತ[1]ವೊರೆವೆ[1] ॥ ೧ ॥

ಕಲಿಯೊಳಗೆ ನಡೆವಂಥ । [2]ಕಾಲಸೂಚನೆ ಕುರುಹ ।
ನೆಲೆದೋರಿ ಪೇಳುವೆವು[2] । ಮಲಹರನ ದಯದಿ ॥ ೨ ॥

ರುದ್ರಮುನಿಸ್ವಾಮಿಗಳೆ । ಸಿದ್ಧರಾಮಯ್ಯ ಕೇಳಿ ।
ಸದ್ಧ್ಯ ಕಲಿಯೊಳು ನಡೆವ । ಬದ್ಧನೆಲೆಸ್ಥಿತಿಯ ॥ ೩ ॥

[3]ಅರುವಾಗಿ ಕಲ್ಯಾಣ[3] । ಬರುವಾಗ [4]ಶ್ರೀಗರ್[4]ಲ್ಲ ।
ಪುರಮುಂದೆ ಬೆಳೆಯುವುದು । [5]ರುದ್ರಮುನಿಸ್ವಾಮಿ[5] ॥ ೪ ॥

ಪ್ರತಾಪರುದ್ರನು ತಾನು । ಅರಸಾಗಿ ಕಲ್ಯಾಣಕ್ಕೆ ।
ಮತವರಿತು ನಡಸುವನು । [6]ಸತ್ಯಭಕ್ತಿ[6]ಯಲಿ ॥ ೫ ॥

ಕಲ್ಯಾಣ ಕಡೆಯಾಗಿ । ಎಲ್ಲರಾಜ್ಯವನಾಳಿ ।
ಅ[7]ಲ್ಲವಗೆ ಕಡೆ[7]ಗಾಲ । ಹದಿನೆಂಟು ವರುಷ[8]ಕ್ಕೆ[8] ॥ ೬ ॥

---

[1] ಪದವಾ॥ (ಅ, ಇ, ಉ, ಒ, ಕ.) [2] ಪರಿಪರಿಯ ಕುರುಹುಗಳ । ವರೆದು ಪೋಪೆವು ಮುಂದೆ । (ಅ, ಉ.); ನರರು ನಾಲ್ಕುಮುಖದಿ । ಕೊರಗಿ ವರಗುವರು ॥ (ಇ.) [3] ನರರು ವಾದಿಸಲ್ಯಾಕೆ । [4] ವೂರ್ಗೆ (ಎ, ಕ, ಚ.) [5]ದೊರೆ ರುದ್ರರಾಯ ॥ (ಅ, ಇ, ಎ, ಒ, ಜ.) [6] ತತವಿಂಶತಿ (ಎ, ಚ.) [7] ಲ್ಲಿ ನೃಪಗೆಲಯ (ಎ, ಚ.) [8] ದಲಿ ॥ (ಅ, ಇ, ಎ, ಒ, ಚ.)

Scanned with OKEN Scanner

ರುದ್ರನಾಳಿಕೆ ತೀರಿ । ವಿದ್ಯನಗರವು ಕಟ್ಟ ।
ಎ[1]ದ್ದು[1] ಆನೆಯಗುಂದಿ । ರಾಯರೇಳಿಗೆಯೂ ॥ ೭ ॥

ಆನೆಗುಂದಿಯ [2]ರಾಷ್ಟ್ರಾ[2] । ಆರುಪಟ್ಟಕೆ ಮುರಿಯೆ ।
ಕೊನೆ[3] ಗೊಂಬುಗಳು ಒ[3] ಡೆದು । ಅವನಿಯೊಳು ಪಟ್ಟ[4] ಗಳ[4] ॥ ೮ ॥

ಎಲ್ಲ ಶರಣರು ಕೇಳಿ । ಅಲ್ಲಿಂ[5] ದಾ [5]ಚೆಗೆ ।
ಬಲ್ಲಾಳ[6] ದಕ್ಷಿಣದಿ । ಅಲ್ಲಿ ಏಳಿಗೆಯು[6] * ॥ ೯ ॥

ಆಂದಿಗೆ ರಾಕ್ಷಸವು । ಸಂದುಬರುವು [7]ದೆ ಕುರುಹು ।
ಮುಂದಣ ಸ್ಥಿತಿ[7] ಕೇಳಿ । ತಂದೆ ರಾಮಯ್ಯ ॥ ೧೦ ॥

ಎಲ್ಲ ಖಾನರು ಕೂಡಿ । ಬಲ್ಲಾಳನಂ ಮುರಿಯೆ ।
ಕ[8] ಲ್ಲ[8] ತ್ರಿಗಿರಿ[9] ಯೊಳಗೆ ಮ । ತ್ತಲ್ಲ[9] ಲಯಗಾಲ ॥ ೧೧ ॥

ಅಷ್ಟರೊಳು ಬಲ್ಲಾಳ । ಕೆಟ್ಟುಹೋಗಲು ಲೋಕ ।
ಆಟ್ಟಕೊಟ್ಟಗಳಾಗಿ । ಅಷ್ಟದಿಕ್ಕಿನಲಿ ॥ ೧೨ ॥

ಬರದೆ ವರ್ತ್ಯದಿ ಉಳಿದ । ಶರಣರೆಲ್ಲರು ಕೇಳಿ ।
ಒರೆದು ಪೋಪೆವು ಶಿಲೆಯೊಳ್ । ಬರೆದ ಲಿಪಿಯಂತೆ ॥ ೧೩ ॥

ಚಂದ್ರದ್ರೋಣನಗಿರಿ । [10]ಯಿಂದ[10] ವರುಣನ ದೆಸೆಯೊಳ್ ।
ಒಂದು[11] ಕೊಟ್ಟ[11] ಭಕ್ತಿ ಆ । ನಂದವಾದೀತು ॥ ೧೪ ॥

ಹರಪೂಜೆ ಶಿವ[12] ಧ್ಯಾನ[12] । ದೊರೆಭಕ್ತಿ[13] ಆನಂದ[13] ।
ಪುರರಾಜ್ಯ ಪ್ರಜೆಪತ್ತು । ಗುರುಸೇವೆ ನಡೆಸಿ ॥ ೧೫ ॥

---

[1] ದ್ದ (ಇ,ಉ,ಒ,) [2] ಪಟ್ಟ । (ಜ) [3] ಯಕೊಂಬೊ (ಎ,ಕ,ಚ,ಜ, [4] ಕಟ್ಟ (ಎ, ಚ.) [5] ದೀ (ಒ,ಕ,ಖ,ಜ.) [6] ರಾಯರೇಳಿಗೆಯು । ರುದ್ರಮುನಿಸ್ವಾಮಿ ॥ (ಎ,ಚ.) * ಈ ಪದ್ಯ (ಗ.) ಪ್ರತಿಯಲ್ಲಿಲ್ಲ. [7] ದುಮುಂದೇಸ್ಥಿತಿಗತಿಗಳ (ಅ,ಅ, ಉ,ಒ.) [8] ಲೆ (ಇ,ಎ.) [9] ಯಲ್ಲಿ । ಅಲ್ಲಿ (ಅ'ಇ,ಉ,ಒ,ಕ,ಖ,ಜ.) [10] ಇಂದ್ರ [11] ಕೋಟಿದು (ಎ, ಒ, ಗ, ಜ.) [12] ಸೇವೆ (ಅ.) [13] ಅನ್ನದಾನ (ಅ.)



ಸಿದ್ಧರಾಮಯ್ಯ ಕೇಳಿ । ನಿರ್ಧರವು ಈ ಮಾತು ।
ಎ [1]ದ್ದ ಮಧ್ಯಾನ್ಹಕ್ಕೆ[1] ಕಲ್ಯಾಣ । ಅರ್ಧಪಾಲಾಗಿ ॥ ೧೬ ॥

ಹುಸಿಯಲ್ಲ ಈ ಮಾತು । ಅಸಮಶರಣರು ಕೇಳಿ ।
ಶಿಶುವಿಗೆ ಪಾಲ್ಬೆಣ್ಣೆ । ಅಶನಗಳ ಸಾರೆ ॥ ೧೭ ॥

ಆದಿ ಬಸವೇಶ್ವರನ । ಪಾದ ಸೋಂಕಿದ ಭಕ್ತ ।
ಬೂದಿಬಸವನ ಪಟ್ಟ । ವಾದುದೇ ಕಡೆಯು ॥ ೧೮ ॥

ಫಲವಾದ ವೃಕ್ಷಕ್ಕೆ । ಪಕ್ಷಿಗಳು ನೆರೆದಂತೆ ।
ಹಲವು ಜಂಗಮ ಕೂಡಿ । ಫಲಶೂನ್ಯವಾಗೆ ॥ ೧೯ ॥

ಒಂದೆರಡು ತಲೆತನಕ । ಅಂದವಾಯಿತು ಭಕ್ತಿ ।
ಮುಂದೆ ಕೆಡುವದ ಕೇಳಿ । ತಂದೆಮುನಿವರನೆ ॥ ೨೦ ॥

ಹರಪಟ್ಟ[2] ವಳಿವುದಕೆ[2] । ಕುರುಹುಗಳ ಕೇಳೀಗ ।
ತರುಣಿಯಾ[3] ಳಿಕೆಯಾಗಿ । ದೊರೆ[3] ತನದೊಳಗೆ ॥ ೨೧ ॥

ಸತ್ಯವ್ರತಗಳು ಕೆಡಲು । ಚಿತ್ರಭಾನುವಿನೊಳಗೆ
ಹೊತ್ತುಬಂತಾ ಪುರಕೆ । ಇತ್ತ ನಗರವೆಂದೆನಿಸಿ ॥ ೨೨ ॥

**ವಚನ ॥** ಈ ರೀತಿಯಲ್ಲಿ ಚೆನ್ನಬಸವಣ್ಣನವರು ರುದ್ರಮುನಿ ಸಿದ್ಧರಾಮಯ್ಯಗಳೊಡನೆ ಮುಂದೆ ಕಲಿಯೊಳು ನಡೆವ ಕಾಲಜ್ಞಾನದ ಕುರುಹುಗಳಂ ಪೇಳುತಿರ್ದರದೆಂತೆನೆ.

**ತ್ರಿವುಡೆ**

ಮತ್ತೆ ಕೇಳ್ವುದು ಶರಣರೆಲ್ಲರು । ಮರ್ತ್ಯಲೋಕದಿ ಹತ್ತಿಬರು[4] ವದ[4] ।
ಹೊತ್ತು ಹೊತ್ತಿಗೆ ಹೊಸಕಲಿಗಳಲ್ಲದೆ-ಸತ್ಯನಡೆಯಿಲ್ಲ ॥ ೧ ॥

---

[1] ದ್ದಾವು ಮಠಮಾನ್ಯ [ಎ,ಗ.] [2] ಮುರಿವಕಾಲಕ್ಕೆ । [3] ರೆಲ್ಲಾರು । ಜಾರ [ಅ,ಉ,ಕ,ಖ.] [4] ತಿಹ । [ಅ,ಇ,ಉ,ಎ.]

ದಾನ ಧರ್ಮವ ಮಾಡು ಎನುತಲಿ [1]ಜ್ಞಾನಗೊಳಿಸು[1]ವರಿಲ್ಲ ಮನುಜರ |
ಜ್ಞಾನದೊಳಗೆ ತಿಳಿದು ಮಾಡದೆ–ಬಿಡುತಿಹರು [2]ಕಡೆಗೆ[2] ॥ ೨ ॥

ಹಿಡಿದ[3] ವ್ರತವನು[3] ಬಿಡದೆ ನಡೆದರೆ । ಮೃಡನ ಪಾದವಕಾಣುತಿರ್ಪರು |
ನಡುವೆ ವ್ರತವದು ಭಂಗವಾದರೆ–ಕೆಡುವುದಾಮನೆಯು ॥ ೩ ॥

ಕೊಟ್ಟು ನೋಡುವ ಸಕಲಭಾಗ್ಯವ | ತೆಗೆದು ನೋಡುವನಿಜದ ನಿಷ್ಠೆಯ|
ಅಷ್ಟು ಕಷ್ಟದಿ ಅವನ ನೆನೆದರೆ– ದೃಷ್ಟಿಯಾಗುವನು * ॥ ೪ ॥

ಸಹಸ್ರ ತೋಳನು ಪಡೆದ ದೈತ್ಯನು | ಕೆಟ್ಟಗರ್ವದಿಂದಿರುತಲಿರೆ ತಂ |
ದೊಟ್ಟ ಮುರಿ[4] ದ[4] ನು ಅವನ[5] ಗರ್ವವ[5]–ಈಶ ಪರಮೇಶ * ॥ ೫ ॥

ಹರನ ಪಟ್ಟವು ಮುರಿವ ಕಾಲಕೆ । ಕುರುಹು ಕೇಳಿ ಶರಣರೆಲ್ಲರು |
ಗುರುಮಠಂಗಳ ಲಿಂಗಮುದ್ರೆಯು–ಕೀಳುವದೆ ಕುರುಹು ॥ ೬ ॥

ಲಿಂಗಮುದ್ರೆಯನೊಡೆದ ಪಾಪಿಗೆ | ಭಂಗ ಬಿಡುವುದೆ ಭವಭವ[6] ದಲಿ[6] |
ಸಂಗಮೇಶ್ವರದೇವನವರಿಗೆ–ವೈರಿಯಾಗಿಹನು ॥ ೭ ॥

ಮುದ್ರೆಭಂ[7] ಗವಾ[7]ದ ಸ್ಥಳದೊಳು । ಸದ್ಯ[8] ಮಿ[8] ಪ್ಪುದೆ ಶಿವನ ನಾಟಕ |
ರುದ್ರಸಾಳಿಕೆ ತೀರುವಂದಿಗೆ–ಸಿದ್ಧರಾಮಯ್ಯ ॥ ೮ ॥

ರಾಜಫಲ ಶೇಜೊಮಯೂರುತಿ । ಪೂಜೆಫಲದಿ ಬಂತೆಂಬುದರಿಯದೆ |
ವಾಜೆಗೆಟ್ಟು ಲಿಂಗವೊಡೆದರ–ಬೀಜಲಯ ಮುಂದೆ ॥ ೯ ॥

**ವಚನ** ॥ ಈ ರೀತಿಯಲ್ಲಿ ದಕ್ಷಿಣಭಕ್ತಿ ಹಾನಿಯಾದಕಾರಣ, ಕಪ್ಪಡಿಯ ದಂಡನಾಯಕನು ಲಿಂಗಭಂಗವಂ ಮಾಡಿದವರಿಗೆ ಸಂಕಟವಂ ಪೇಳುತಿರ್ದನದೆಂತೆನೆ.

---

[1] ಬಾಧೆಮಾಡು [2] ಹಾನಿಬಿಡದವಗೆ ॥ [ಇ,ಎ,ಒ,ಕ,ಖ,ಗ,ಚ,] [3] ಧರ್ಮವ [ಇ,ಉ,ಎ,ಒ,ಕ,ಖ,ಗ,ಚ,ಜ.] [4] ವ [ಅ.] [5] ನೀಗಲೆ [ಅ.] * ಈ ಪದ್ಯಗಳು [ಇ,ಒ,ಜ.] ಪ್ರತಿಗಳಲ್ಲಿಲ್ಲ. [6] ಂಗಳ । [ಅ,ಜ.] [7] ಟರಿಗಾ [8] ರಿ [ಅ.]



**ಜಂಪೆ**

ಹರರೂಪನಳಿ[1]ದವರ | ಜೊರೆತನವು ಕೆಡುವುದಕೆ |
ಬರುವ ಕೇಡನು ಕೇಳಿ[1] | ಗುರುಸಿದ್ಧರಾಮ ॥ ೧ ॥

ಹರಿನಾಮಪುರದೊಳಗೆ । ಅರಸು ತಾ ಲಯವಾಗಿ |
[2]ಬರು[2] ವ ಕಾಲಕೆ ಓರ್ವ । ತುರುಕ ನಿಲ್ಲುವನು ॥ ೨ ॥

ಕೇಳಿ ರಾಮಯ್ಯಗಳಿ | ಆಳುವಮಾತ್ರದಿ ಬಂದು |
ಭಾಳನೇತ್ರನ ಕೃಪೆಯ | ಬಲದಿಂದ ಬೆಳೆವ ॥ ೩ ॥

ಎಂದಿಗವನಾ ಕುರುಹು | ತಂದೆ ಶ್ರೀದಂಡೇಶ |
ಎಂದು ರಾಮಯ್ಯ ಕೇಳಿ | ವಂದಿ[3]ಸಲು[3] ಕರವ ॥ ೪ ॥

ಕೃಷ್ಣನಾಮದ ಅರಸು | ಹು[3]ಟ್ಟು ಮಂತ್ರಿಯ ಮಗಳ |
ಕೊ[4]ಟ್ಟು ಕಲಹ[4]ವು ಬಂದು । ಹುಟ್ಟುವುದೆ ಕುರುಹು ॥ ೫ ॥

ಎಲ್ಲ ಶರಣರು ಕೇಳಿ | ಪಲ್ಲಿನಾಮಾಂಕಿತದ |
[5]ಮೂಲವಂಶದ ಖಾನ್[5] | ಬಂದು ನಿಲ್ಲುವನು ॥ ೬ ॥

ಒಂಬತ್ತು ಪಟ್ಟ[6]ಕ್ಕೆ[6] । ಕುಂಭಾರ [7]ಪ್ರಾರಂಭ[7] |
ಮುಂದೆ ಕೆಡು[8]ವುದ ಕೇಳ[8] | ತಂದೆ ಮುನಿವರನೆ ॥ ೭ ॥

ಸಿದ್ಧರಾಮಯ್ಯ ಕೇಳಿ । ಸಿರ್ಥರವು ಈ ಮಾತು |
[9]ಇದ್ದನು ಕಾವೇರಿ । ಮಧ್ಯಪುರದೊಳಗೆ[9] ॥ ೮ ॥

ಯುಕ್ತಿ ಶಕ್ತಿಗಳಿಂದ | ಹೊತ್ತು ಹೊತ್ತಿಗೆ ಬೆಳೆ[10]ದು[10] |
ಕಿತ್ತು ಒಗೆವನು [11]ಇಳೆಯ[11] । ಧಾತ್ರಿಪಾಲಕರ ॥ ೯ ॥

---

[1] ವುದಕೆ । ಬರುವ ಕೇಡನು ಕೇಳಿ । ವರೆದು ಪೇಳುವೆ ನಿಮಗೆ । [ಉ.] [2] ಮುರಿ (ಎ,ಕ,ಜ.) ಸುತ (ಅ,ಉ.) ; ಸಿದ (ಜ.) [3] ಟ್ಟ [4] ಟ್ಟ ಕಾಲ (ಎ.) [5] ಮುಲ್ಲದೌಷ್ಟ್ರಸು (ಒ,ಗ,ಜ.) [6] ದೊಳು । [7] ಸಾಲೆಯಾಗಿ । (ಅ,ಇ,ಎ,ಒ,ಕ,ಗ.) [8] ತಿಹುದು (ಎ.) [9] ಸದ್ಯಕಲಿಯೊಳು ನಡೆವ । ಬದ್ಧನೆಲಸ್ಥಿತಿಯ ॥ (ಎ.) [10] ಯ (ಇ,ಒ,ಗ.) ॥ ವ (ಎ.) [11] ಕೇಳಿ (ಉ.)

Scanned with OKEN Scanner

ಸತ್ಯಶರಣರು ಕೇಳಿ । ಲಕ್ಷಪಾಯ್ದುಳದಿಂದ ।
ಒತ್ತುವನು ಇಳೆಯ । ಧಾತ್ರಿಪಾಲ[1]ಕರ[1] ॥ ೧೦ ॥

ಮುಸಲಮಾನ್ವಿಕೆಯೊಳಗೆ । ಅ[2]ಸುರರಲಿ[2] ಅರೆಬಣ್ಣ ।
ಪೆಸರವಗೆ ಮೂರಾಗಿ । ದೆಸೆ ಎಂಟಮುರಿವ ॥ ೧೧ ॥

ಪಟ್ಟವಿಲ್ಲದೆ ಲೋಕ । ಸುಟ್ಟು ಸೂರೆಯು ಹೊಡೆವ ।
ನಷ್ಟ ಜನರಿಗೆ ಮುಂದೆ । [3]ಬಿಟ್ಟಬೇಗರದಿ[3] ॥ ೧೨ ॥

ಕರ್ನಾಟ ಕಾವೇರಿ । ವರ್ಣಕುಲಗಳುಕೆಟ್ಟು ।
ಕನ್ನೆಯರ ಅನುಕೂಲದಿ । ತನ್ಮಯದಿ ಬೆರೆಯೆ ॥ ೧೩ ॥

ತುರುಕಾಣ್ಯವಾಗುವದು । ಧರೆಗಧಿಕ ಶ್ರೀರಂಗ ।
ಪುರದೊಳಗೆ ಸುರೆ ಗೋವ । ಕೊರೆದು ಮಾರುವರು ॥ ೧೪ ॥

ಮಂಗ ಹೆಚ್ಚುವ ತೆರದಿ । ನಗರ ತುರುಕರು ತುಂಬಿ ।
ರಂಗನಾಗುಡಿ ಮುಂದೆ । ಭಂಗಿ ಸುರೆಯಾಟ ॥ ೧೫ ॥

ತುರುಕರಾಳಿಕೆ[4]ಬಹಳ[4] । ಕಿರುಕುಳವು ಜಗ[5]ಕಲ್ಲ[5] ।
ಹರಭಕ್ತರನು ಬಿಡದೆ ಕುರಿ । ಕೋಳಿ ಹೊರಿಸುವರು ॥ ೧೬ ॥

ಮೂರು ಶರಧಿಯ ಕಂಡು । ಧಾರಿಣಿಯನಾಳುವನು ।
ತೀರಲವಗಡೆಯುವಗೆ ಇಪ್ಪ । ತ್ತಾರು ವರುಷದಲಿ ॥ ೧೭ ॥

ಆರು ಎಂದರೆ ಅವನು । ನಾವು ಉಳುವೆಗೆ ಪೋಪ ।
ಕಾಲಕಾಶ್ರಯ ಬಂದ । ಲೋಲಾ[6]ಬ್ಧ[6]ಖಾನ ॥ ೧೮ ॥

ಬಯಲಬಸವೇಶ್ವರನ । ಆಲಯದ ಮುಂದಿನ್ನು ।
ಜಯವಿತ್ತು ಹಿಂದಕ್ಕೆ । ಕಳುಹಿಪೋಪೇವು ॥ ೧೯ ॥

[1] ನು (ಒ.) [2] ಸನಲ್ಲ (ಅ,ಎ.) [3] ಕಷ್ಟದೊರಕುವದು ॥ (ಎ.) [4] ಯಿನ್ನು (ಅ,ಇ,ಉ,ಒ,ಖ,ಚ.) [5] ವೆ (ಅ,ಉ,ಎ,ಖ,ಚ.) [6] ಜ್ಝಿ (ಚ.)



ಶಾಪನಿಮಿತ್ತದಲಿ । ಭೂ[1]ಪಸಾಗುವನ[1]ವನು ।
ಕಾಪಾಲಿಕೃಪೆಯಿಂದ ಮೂರು । ದ್ವೀಪವಾಳುವನು ॥ ೨೦ ॥

ನರರಾಳಿಕೆಗೆ ತಕ್ಕ । ದೊರೆಯು ತಂದವರಾರು ।
ಹರನ ನಾಟಕವೆಂದು । ಅರಿಯರು ನರರು ॥ ೨೧ ॥

ಮೂಡ ಪಶ್ಚಿಮಕಡರಿ । ಪಡುವ ಪೂರ್ವಕೆ ನಡದು ।
[2]ಬ[2]ಡಿದಾಡಿ ಜನರುಗಳು । ಕೆಡದು ಒರಗುವರು ॥ ೨೨ ॥

ಉತ್ರಭಾಗದ ಗೂಳ್ಯ । ಹತ್ತುವದು ದಕ್ಷಿಣಕೆ ।
ಪುತ್ರರನು ಸೆರೆವಿಡಿದು । ಗೋತ್ರಮಾಡುವರು ॥ ೨೩ ॥

[3]ಪೊಡವಿ[3]ಮಾಡಿದ ಪಾಪ । ಮಾಡಲೇನವ[4]ರಿ[4]ಚ್ಛೆ ।
ಕೇಡಲ್ಲ ಇದು ನರರು । ಮಾಡಿದ ಕರ್ಮ ॥ ೨೪ ॥

ಕೊಡಗು ಕೊಂಕಣಗೂಳ್ಯ । ಬಡಗನಾ[5]ಡನು[5] ಸೇರೆ ।
ಮೃಡನ ಆಳಿಕೆ ಕೆಡುವ । ಕಾಲಪ್ರ[6]ತುಮ[6]ಗಳು ॥ ೨೫ ॥

ಕಂದನಾಳಿಕೆ ಮುಂದೆ । ಚಂದವೆಂದೆನಬೇ[7]ಡಿ[7] ।
[8]ತಂದೆಯ[8]ನು ಜಯಲೆನಿಸಿ । ತಿನ್ನುವನು ಲೋಕವನು ॥ ೨೬ ॥

ವಚನ ॥ ಈ ರೀತಿಯಲ್ಲಿ ಚೆನ್ನಬಸವಣ್ಣನವರು ಪೇಳಿ ಇದಲ್ಲದೆ ಮುಂದೆ ಆಗುವಂಥ ಕುರುಹುಗಳಂ ಪೇಳುತಿರ್ದರದೆಂತೆನೆ.

ತ್ರಿವುಡೆ

ಪರಮ ಶ್ರೀಗುರು ರುದ್ರಮುನಿಗಳಿ । ಗುರುವೆ ಕೇಳಿ ಸಿದ್ಧರಾಮಯ್ಯ ।
ಶರಣರೆಲ್ಲರು ಕೇಳಿ ಮರ್ತ್ಯದ–ಪರಿಯ[9]ಪಾಡು[9]ಗಳ ॥ ೧ ॥

[1] ಪುರವನಾಳು (ಉ,ಎ,ಕ,ಖ,ಗ,ಜ.) [2] ಕ (ಉ.) [3] ರೂಢಿ (ಗ.) [4] ನಿ (ಚ.) [5] ದರೆ (ಅ,ಇ,ಒ,ಕ,ಖ,ಗ,ಜ.) [6] ತಮ (ಅ,ಇ,ಉ,ಎ,ಒ,ಕ,ಖ,ಗ,ಜ.) [7] ಡಾ । (ಅ,ಇ,ಒ,ಖ,ಗ,ಚ,ಜ.) [8] ಕಂದಯ್ಯ (ಅ,ಉ,ಎ,ಖ,ಜ.) [9] ಪಾಟು (ಕ,ಖ,ಗ.) ; ಪಾಪ (ಒ.) ; ಮಾತು (ಅ.)

ಉರಗ ಕಪ್ಪೆಯ ನುಂಗಿ ಮಕ್ಷಿಕ। ಬರಲು ಬಯಸುವತೆರದಿ ಮನುಜರು।
ಪರರ ಕೇಡನು ಎಣಿಸುತಿರ್ಪರು ತಮ್ಮ-ಹರಣಗಳ ಮರದು ॥ ೨ ॥

ಹಲವುಮುಖ[1]ದಲಿ[1] ಬಲೆಯನೆಳಸುತ।ಜಲವ ಶೋಧಿಸುವಂತೆ ಲೋಕ[2]ದ[2]।
ನೆಲೆಯ ಕಂಡರೆ ಬಿಡರು ಮುಂದಿನ-ಕಲಿಯ ನೃಪರು ॥ ೩ ॥

ಕೊಲೆಯಕೋಟಲೆ[3]ಯಿಂದ[3]ಪ್ರಾಣವ । ಹಲವು
ಮುಖದಲಿ [4]ಅಜ್ಞೆ[4]ಮಾಳ್ಪರು ।
ಸುಲಿದು ಚರ್ಮವ[5]ಅಸ್ತಿ[5]ಬಿಡುವರು-[6]ಛಲವು ಹಿಂಗಿ[6]ತೆನುತ ॥ ೪ ॥

ತೆರಿಗೆ ತ್ಯಾಮನದಿಂದ ಲ್ಹೋಕವ । ಮುರಿ[7]ವ[7]ರಿನ್ನು
[8]ತಿರುಳಾದ[8] ಮನುಜರ ।
[9]ಕೊರೆ[9]ದು ತಿನ್ನುವ ದೊರೆಗಳಲ್ಲದೆ-ಪೊರೆವರಿನ್ನಿಲ್ಲ ॥ ೫ ॥

ಇಂ[10]ದಿನ ದಾನಧರ್ಮ[10]ವು। ನಿ[11]ಂದು ಬರುವದುನಿಜವಾಗಿ ಮುಂದಣ[11]।
ಕಂದನಾಳಿಕೆ ಕೇಳಿ ಮನ್ನಕಾ-ನಂದ ಹರುಷದಲಿ ॥ ೬ ॥

ಹಿರಿದುಗ್ರಾಮವು ಕಿಕ್ಕಿದು ಅಲ್ಲದೆ। ಹಿರಿದು ಹೆಚ್ಚದು ಕೇಳಿ ಕಲಿಯೊಳು।
ಪುರದ[12]ಪ್ರಭು[12]ಗಳು ತಿರಿದು ಉಂಬರು-ಹರಣ ಸಾಕೆನುತ ॥ ೭ ॥

ಹಿಂದೆ ಮುಂದೆ ಎನ್ನಬೇಡಿರಿ । ಬಂದಿತು ಸಲೆಬೆನ್ನ ಮೇ[13]ಲೆಯು[13]।
ಚಂದ್ರಮುದ್ರೆಯು ಬಾ[14]ದ್ರಿ[14]ಹೊನ್ನಿಗೆ-ಬಂಡುದೇ ಕುರುಹು ॥ ೮ ॥

---

1 ದೊಳು (ಉ,ಗ.) 2 ವ। (ಚ,ಜ.) 3 ಕೊಂದು (ಅ,ಇ,ಉ,ಒ,ಕ,ಖ,ಗ,ಚ,ಜ.) 4 ಹಿಂಗೆ (ಎ.) 5 ಕಡೆಗೆ (ಅ,ಇ,ಉ,ಒ,ಖ,ಚ.) 6 ಜಲವು ಬತಿ (ಅ,ಇ,ಉ,ಒ,ಕ,ಖ,ಗ,ಚ.) 7 ದ (ಇ.) 8 ಕಿರುಕುಳದಿ (ಅ,ಒ,ಚ,ಜ.) 9 ತಿರಿ (ಒ,ಕ,ಗ.) 10 ದಣಾದಿಯ ಮುಪ್ರೆಧರ್ಮ (ಇ,ಉ,ಎ,ಒ,ಕ,ಖ,ಗ,ಜ.) 11 ಯಂದು ಬರುವುದೊ ಮುಂದೆಯಿನ್ನೂ । (ಅ,ಇ,ಉ,ಒ,ಕ.ಖ,ಗ,ಚ,ಜ.) 12 ದೊರೆ (ಎ.) 13 ಲಕೆ (ಇ,ಉ,ಎ,ಒ,ಕ,ಖ,ಗ.) 14 ರಿ (ಅ,ಚ.)



ಬಾಲನಾಳಿಕೆ ನಡೆವ ಕಾಲಕೆ । ಕಾಲಗತಿಗಳು ತೆರಿಗೆತ್ಯಾಮನ ।
ಹಾಲುತುಪ್ಪವ[1]ಹ[1]ಣಿದು ಉಂಬರು-ಕೂಲಿಗೊಳ[2]ಗಾ[2] ॥ ೯ ॥

ಶೀಲವ್ರತಗಳು ಕೆಟ್ಟು ಸಕಲರು। ನೇಮನಿತ್ಯವು ಬಯಲಾಗಿ ತುರುಕರ।
ಡಾಲಿಬಾರಿನ ಪೆಟ್ಟ ತಿಂಬರು-ಹೇರಿಪೈಜರವ ॥ ೧೦ ॥

ಮೂರುಯುಗದೊಳು ಇಲ್ಲದಂಥ। ಪಾರುಪತ್ಯಗಳಾಗಿ ಬರುವ[3]ವು[3]।
[4]ಊರ[4]ದೈವದ ಚಿನ್ನ ಬೆಳ್ಳಿಯ ವ್ಯವ-ಹಾರ ಮಾಡುವರು ॥ ೧೧ ॥

ವಾರಿಜೋದ್ಭವವಂಶ[5]ವರ್ಧ[5]ನ । ಊರ ಉಂಬಳಿಕಿತ್ತುಬರುವವು ।
ತೇರು ಪರಿಸೆಯ ಕೂಡೆನುಂಗಲು-ಸಾಲದಾನೃಪಗೆ ॥ ೧೨ ॥

ಬರದೆ ಉಳಿದ ಶರಣರೆಲ್ಲರು । ಮರೆಯದಿರಿ ಇದು ಒಂದು ವಾಕ್ಯವ ।
ಕುರುಹ ನೋಡಿರಿ ಪೇಳಿ ಪೋಪೆವು-ಹರನ ಕೃಪೆಯೊಳಗೆ ॥ ೧೩ ॥

ಮುರಿಗೆರುದ್ರನು ಇರುವ ಸ್ಥಳ[6]ಗಳ[6] । ದೊರೆ[7]ಯ
ಪಟ್ಟವಳಿದಾರು[7]ವರುಷಕೆ ।
ಮುರಿ[8]ದ[8] ನೃಪನಿಗೆ ಮರಣ ತಪ್ಪದು-ಇಂದ್ರದಿಕ್ಕಿನಲಿ ॥ ೧೪ ॥

[9]ಆತನಳಿವನು ಅಂತ್ಯಕಾಲಕೆ[9] । ಭೂತನಂದದಿ ಬರುವನೊಬ್ಬನು ।
ಪ್ರೀತಿಯಿಂದಲಿ ರೊಕ್ಕವೆಂದರೆ ಕೈ-ಯ್ಯಾತುಕೊಂಡಿಹನು ॥ ೧೫ ॥

[10]ಧಾತ್ರಿ[10]ಯೊಳಗಾವಾಗ ಇಲ್ಲದ । ನೂತನದ ಕಡ್ಡಾಯ ಕಾಣಿಕೆ ।
ಹಾಕಿತೆಗೆವನು ದುಡ್ಡು ದುಡ್ಡಿಗೆ-ನಾಲ್ಕು ಪ[11]ಟ್ಟ[11]ಗಳ ॥ ೧೬ ॥

---

1 ರು (ಅ.) 2 ಗಹರು । (ಇ,ಕ,ಖ.) ; ಗಿಹರು (ಅ,ಚ.) 3 ದೂ (ಇ,ಉ,ಒ,ಖ.) 4 ಧರೆಯ (ಇ,ಎ,ಒ,ಖ,ಗ.) 5 ಧವ [ಚ.] 6 ದೊಳು। [ಜ.] 7 ಯ್ಯಾಟವಳಿದ [ಎ.] ; ಯ ಪಟ್ಟವು ಅಳಿದ [ಅ,ಚ.] 8 ಗೆ [ಚ.] 9 ಅವನು ಅಳಿದ ಕಾಲಕೋರ್ವನು [ಅ,ಇ,ಉ,ಒ,ಖ,ಚ.] ; ಆತನಳಿದಾಕಾಲವಂದಕೆ । [ಗ.] 10 ಧರೆ [ಅ,ಇ,ಉ,ಎ,ಒ,ಕ,ಖ,ಚ.] 11 ಟ್ಟೆ [ಇ,ಉ,ಎ,ಖ,ಜ.]

Scanned with OKEN Scanner

ಊರು ಊರಿಗೆ ಅಮಲದಾರರು । ಸೇರಿಸಿರಸ್ತಿಗೆ ಶ್ಯಾನುಭೋಗರು ।
ದಾರಿ ದಾರಿಗೆ ಕೋಲುಕಾರರು–ಊಳಿಗದ ಜನರು ॥ ೧೭ ॥

ಪೊಡವಿ ಅಳೆವರು ಹಿಡಿದು ಕೋಲನು । ಬಿಡದೆ ಬೆಟ್ಟ ತಟಾಕ ನದಿಯನು ।
ಗಡಣದಿಂದಲಿ ಶ್ಯಾನುಭೋಗರು–ಹಿಡಿದು ಕಾಗದವ ॥ ೧೮ ॥

ಒಟ್ಟುಲೆಕ್ಕವ ಬರೆದು ಪೇಳಲು । ಹುಟ್ಟುವಳಿ ಒಂದಕ್ಕೆ ಮೂರನು ।
ಇಟ್ಟು ಗ್ರಾಮಕೆ ಗೌಡ ಗುತ್ತಿಗೆ–ಕಟ್ಟುವನು ನೃಪನು ॥ ೧೯ ॥

ಹಿಂದುಗಡೆ ಮಣಿಹಂಗಳೆಲ್ಲವ । ಹೊಂದಿಸುತ ಗ್ರಾಮಕ್ಕೆ ಹಣವನು ।
ಒಂದಕಾರನು ತೆಗೆದುಕೊಂಬನು–ಕುಂಭಿಣಿಯ ನೃಪನು ॥ ೨೦ ॥

ನಾನಾತೆರದಲ್ಲಿ ಮಾನಭಂಗವ । ಮಾಡಿ ಪ್ರಜೆಗಳ ಹಿಂಸೆ ಮಾಳ್ಪರು ।
ನೋಡಿ ಪ್ರಜೆಗಳು ಭಂಗಪಡುವದ–ಪೇಳಲಳವೆ ॥ ೨೧ ॥

ಆತನಾರು ಎಂದು ಶರಣರು–ಪ್ರೀತಿಯಲಿ ವಂದಿಸುತ ಕೇಳಲು ।
ನೀತಿಕೋವಿದ ಚೆನ್ನದಂಡ್ನಾಧೀಶ-ಪೇಳಿದನು ॥ ೨೨ ॥

ವೃಷಭರಾಜನ ಕಸದ[1]ಗೊತ್ತಿನ[1] । ವಸೆದುಕೊಂಡಿಪ್ಪ ಮೂಲ ಸ್ಥಾನದ ।
ಪೆಸರ[2]ಪೊತ್ತ್ತುವನೊಬ್ಬ ಹುಟ್ಟುವ-ಮುಸಲ ಮಾನವನು ॥ ೨೩ ॥

ಅಸಮಭಕ್ತರು ಕೇಳಿ ಅವನ । ದೆಸೆಯಲಿನ್ನು ನಾಲ್ಕು ಜಾತಿಗೆ ।
ಉಸುರಲಳವೆ ಚಿಂತೆಯಲ್ಲದೆ ಸಂ–ತೋಷವಿನಿತಿಲ್ಲ ॥ ೨೪ ॥

ಚಂದ್ರದ್ರೋಣಗಿರಿಯ ಪರ್ವತ । ಒಂದುವರುಷಕೆ ಏಳು ಸುಲಿಗೆಯು ।
ನಿಂದು ಬರುವವು ಸಕಲಮಠಗಳ-ನಂದ ದೀವಿಗೆಯು ॥ ೨೫ ॥

ಅಂದಿಗೆಮ್ಮಯ ಶರಣಗಣಂಗಳು । ಒಂದುಅರೆ ಈ ಲೋಕಮಧ್ಯದಿ ।
ಬಂದು ಕಾಣಿಸಿಕೊಳ್ಳುತಿರ್ಪರು-ನಿಂದಭಕ್ತರಿಗೆ ॥ ೨೬ ॥

---

[1] ಸೊತ್ತಿಗೆ [ಅ, ಚ.] [2] ನೊಪ್ಪು [ಇ, ಒ, ಚ.]



ಭರದಿ ಬೀಸುವ ಮೊರೆವ ಘಾಳಿಯು । ಬರಲು ಕೇಳಿಲೋಕದ ।
ನರರಿಗುಬ್ಬಸವಾಗಿ ಬರುವುದು–ಕರ್ಮಕಸವಳಿದು ॥ ೨೭ ॥

ಪರಮ ಜ್ಞಾನವುಳ್ಳ ಭಕ್ತರು । ಪರ ಹಿತಾರ್ಥದ ಸತ್ಯ ನಡೆಯೊಳು ।
ಶರಧಿಯೊಳು ತಾವರೆಯು ಇರುತಿಹ–ಪರಿಯೊಳಿಹರು ॥ ೨೮ ॥

ಬಾಲನಾಳಿಕೆ ಹದಿನಾರು ವರುಷವು । ಕಾಲುಕುಪ್ಪಸದವರು ಬರುವರು ।
ಮೂಲಸ್ಥಾನ[1]ದಿ ಅವಗೆ ಮರಣವು[1]ಕಾ–ವೇರಿ ಮಧ್ಯದಲಿ* ॥ ೨೯ ॥

ಕಾಲುಕುಪ್ಪಸದವರ ಕದನದಿ । ಖಾನ ಖಾನರು ಕೂಡಿಬರುವರು ।
ಬಾಲೆಯರು ಸಹವಾಗಿ ದಕ್ಷಿಣ–ಧಾಳಿಮಾಡುವರು* ॥ ೩೦ ॥

ನೋಡಿ ಕದನವು ಕಲಹ ತಪ್ಪದು । ಕೂಡರಾಮೇಶ್ವರಕೆ ನಡೆವುದು ।
ಕೇಡುತಪ್ಪದು ಮುಂದೆ ದೇಶಕೆ–ನೋಡಿ ಇದರಿಂದ* ॥ ೩೧ ॥

ವೃಷಭರಾಜನ ಪೆಸರಪಟ್ಟಣ । ಹಸನ ಮಾಡುತ ಬರುವಲೋರ್ವನು ।
ಮುಸಲಮಾನವ ಮಲ್ಲಿನಾಥನ–ಪೆಸರುಪಡೆದವನು ॥ ೩೨ ॥

ಬಸವಪಟ್ಟಣ ಕೋಟಿಪೇಟೆಯ । ಹಸನ ಮಾಡುತ ವೃಷಭ ಎಂದರೆ ।
ದೆಸೆದೆಸೆಗೆ ಪವಾಡವೆರೆಯೆ ಚೆನ್ನ–ಬಸವ ಬಂದನೆನ್ನಿ ॥ ೩೩ ॥

ಇಂದುನಾಳೆ ಸಂಜೆಬೈಗಿಲಿ । ಬಂದರೆನುತಲಿ ಹೇಳಬೇಡಿರಿ ।
ಬಂದನೆಂಬ ಮುಂಗಡೆಯವ–ದೊಂದು ಕುರುಹುಂಟು† ॥ ೩೪ ॥

ಚೆಂದ್ರ ಸೂರ್ಯ ಗ್ರಹಣ ಪುಷ್ಯದಿ । ಒಂದೆ ಪಕ್ಷದಿ ಕೂಡಿ ನಡೆದರೆ ।
ಮುಂದಕೆ ದಶವರುಷ ರಾಕ್ಷಸ ಅದ–ರಿಂದ ನೀವು ನೋಡಿ ॥ ೩೫ ॥

---

[1] ದವಗೆ ಮರಣ ತಪ್ಪದು [ಉ.]. * ಈ ಪದ್ಯಗಳು [ಇ, ಒ, ಕ, ಗ.] ಪ್ರತಿಗಳಲ್ಲಿಲ್ಲ. † ಈ ಪದ್ಯ [ಎ, ಒ, ಕ, ಗ, ಜ.] ಪ್ರತಿಗಳಲ್ಲಿ ಮಾತ್ರ ಇದೆ.

ಒಂದೆಪಕ್ಷದಿ ಗ್ರಹಣ ಬಂದರೆ । ಬಂಧನವು ಬಹುರಾಜ್ಯಕಾರ್ಯಗ ।
ಳಿಂದ[1]ಕೆಡುವವು ಭೂಮಿ ತಿಳಿದಿರಿ–ಶರಣರುಗಳೆಲ್ಲ[1] ॥ ೩೬ ॥

ಅಂದಗೆಡುವುದು ಲೋಕಸ್ಥಿತಿಗತಿ । ಅಷ್ಟಮೂಲೆಯೊಂದಾಗಿ ಲೋಕದಿ ।
ಕಂದನ ತಾಯಿಗಳು ತಿನ್ನುವ–ಮುಂದೆ ಬರನೋಡಿ ॥ ೩೭ ॥

ಗ್ರಹಣ ಬಂದರೆ ಬರಲಿ ಲೋಕದಿ । ಕಾಣಬೇಕು ಸೂರ್ಯರಿಬ್ಬರ ।
ಕೋಣ ಮನುಜರು ಹಿರಿಯಕಿರಿಯರು–ಕಾಣುವಂದದಲಿ ॥ ೩೮ ॥

ಏಣಲೋಚನ ಧರಿಸಿರ್ಪ ಶಶಿಯೊಲು । ಕಾಣುತಿರ್ಪುದು ಯುಗಾದಿ ಬಿದಿಗೆಗೆ ।
ವರುಣದೆಸೆಯೊಳು ಎಳೆಯಚಂದ್ರನ–ತೆರದಿ ಜಗಕೆಲ್ಲ ॥ ೩೯ ॥

ಹಿಂದೆಹೇಳಿದ ಕುರುಹು ಜಗದೊಳು । ಬಂದುತಾಗಲು [2]ದ್ರು[2]ಷ್ಟಜನರಿಗೆ ।
ಎಂದು ಕಾಂಬರು ಪ್ರತಿಸೂರ್ಯರಿಬ್ಬರು–ಬಂದುದೇ ಕುರುಹು ॥ ೪೦ ॥

ಮುಂದೆ ನಾವು ಹೋದ ದಿವಸಕೆ । ಹಿಂದೆ ಹೇಳಿದ ಹದಿಮೂರುರಾಕ್ಷಸ ।
ತುಂಬಿದಾಗ ಕುರುಹುದೋರ್ವದು–ನಂಬಿಗೆಯು ನಿಮಗೆ ॥ ೪೧ ॥

ಕರ್ಮವೆಂಬ ಕಸವ ಕಳೆಯದೆ । [3]ಧರ್ಮ[3]ಸ್ಥಿತಿಗತಿ ನಡೆಯಲರಿಯವು ।
ನಿರ್ಮಲವ ಮಾಡಲ್ಕೆ ಬಬ್ಬಂಮಾಜಿ–ಬರುತಿಹಳು ॥ ೪೨ ॥

ಹಮ್ಮುಕೆಡಿಸುತ ಕಾಕುಭೂತರ । ಪೇರ್ಮೆಯಿಂದಲಿ ಕೂಡಿ [4]ಕೊಂಡಿಹ[4] ।
ಮಾರ್ಮಲೆವ ಮಹಿಷಾಸುರನ ಕೊಂದಮ–ಹೇಶ್ವರಿಯ ರೂಪಿನಲಿ* ॥ ೪೩ ॥

[1] ಭೂಮಿ ತಳಕೆಳಕು । ವರುಷವು ತುಂಬಿ ಏಳರಲಿ, [ಗ,ಜ.] [2] ಕ, [ಎ,ಜ.] [3] ನಮ್ಮ [ಇ,ಒ,ಚ.] [4] ಬರುತಿಹ [ಅ,ಜ.] * ಈ ಪದ್ಯ [ಗ.] ಪ್ರತಿಯಲ್ಲಿಲ್ಲ.



ವಚನ ॥ ಈ ರೀತಿಯಲ್ಲಿ ಚೆನ್ನಬಸವಣ್ಣನವರು ಧರೆಯೊಳು ನಡೆವ ಕುರುಹಿನ ವಾಕ್ಯವಂ ಪೇಳಿ, ಇದಲ್ಲದೆ ಮುಂದೆ ನಾವು ಬರುವ ಕಾಲಕ್ಕೆ ಏಳುಮಂದಿ ದುರ್ಗಿಯರ ನಿರ್ಣಯವಂ ಪೇಳುತಿರ್ದರದೆಂತೆನೆ.

ಅಟತಾಳ.

ಧರಗೆ ನಾವು ಬರುವ ಮುಂಗಡೆ । ಮುರುಗಿಯೆಂಬ ದುರ್ಗಿ ಬರುವಳು ।
ಬರಲು ಮೊರನ ಪಿಡಿದು ಗುಡಿಸುತ–ಹೊಡೆದು ಕಸಮುಸುರೆ ॥ ೧ ॥

ಹತ್ತುತಲೆ ಇಪ್ಪತ್ತುತೋಳಿನ । ಶಕ್ತಿತಾನುಬೆನ್ನೊಳುಕಾದಿಪ್ಪ ಮೊತ್ತ ।
ಮೊತ್ತದ ಚೌಡಿಚಾಮುಂಡಿ–ಪೃಥ್ವಿಶೋಧಿಸುತ ॥ ೨ ॥

ಊರು ಊರಿಗೆ ಬೊಬ್ಬೆಏಳಿಸಿ । ದ್ವಾರ ದ್ವಾರಕೆ ಮುಳ್ಳನೆಳಸುತ ।
ಘೋರ ಕರ್ಮರ ಜನ್ಮಹೀನರ–ಶೂರಿ ಕೇರುತಲಿ ॥ ೩ ॥

ಮೂರು ಪಾಲನೆ ಮಾಡಿ ಲೋಕವ । ವೀರಶೈವವನುಳಿದು ಮಿಕ್ಕಿನ ।
ಚೋರ ಮನುಜರ ಕೂಡೆ ಗಳಿಗೆಗೆ ಆ–ಹಾರ ಮಾಡುವಳು ॥ ೪ ॥

ದುರ್ಗಿಯೆಂಬಳು ಸ್ವರ್ಗಬೆನ್ನಿಲಿ । ಭರ್ಗದೇವನ ಪ್ರೀತಿ ಭಕ್ತಿಯ ।
ಮಾರ್ಗವಿಡಿದು ನಡೆವ ಮನುಜರ–ಸ್ವರ್ಗ ಕಾಣಿಪಳು ॥ ೫ ॥

ಮಾರಿಯೆಂಬಳು ಆಚಾರಭಕ್ತಿಯು । ಕ್ರೂರಮನುಜರ ಕುಟಿಲ ಕುಹಕರೆ ।
ಶೂರಿಕೇರುತ ಭಕ್ತಿಬೀಜವ–ಬೇರೆ ತೆಗೆದಿಡುತ ॥ ೬ ॥

ಕರ್ಮವೆಂಬ ಕಸನ ಹೊಡಿವಳು । ಧರ್ಮ ಬೀಜಕೆ ಭಕ್ತಳಾಗಿಹೆ ।
ನಿರ್ಮಲಾತ್ಮರ ಮಹಿಮ ಪುರುಷರ–ತೊತ್ತು ಎನ್ನುತಲಿ ॥ ೭ ॥

ಅವರ ಮನೆಯ ಕಸದ ಸೇವಕಳೆಂದು । ಅವಳು ನುಡಿದುಕೊಂಬಳು ।
ಕುಟಿಲ ಕರ್ಮರ ಕೊರಳ ಗಾಣವು–ಎಂದು ಹೇಳುವಳು ॥ ೮ ॥

ಸತ್ಯಪುರುಷರು ಸಟೆಯಿದೆನ್ನದೆ । ಮುಕ್ತಿಗಳಿಸಿ ಮುಂದುವರಿದು ಪಾಪದ ।
ಹೊತ್ತುಬರುವುದನು ಗೆಲಿದು–ನಿರ್ಮಲಚಿತ್ತರಾಗಿ ॥ ೯ ॥

**ವಚನ** || ಈ ರೀತಿಯಲ್ಲಿ ಚೆನ್ನಬಸವಣ್ಣನವರು ದುರ್ಗಿಯರ ಕಟ್ಟಳೆಯ ನಿರ್ಣಯಮಂ ಪೇಳಿ, ಮುಂದೆನಡೆವ ಕಾಲಸೂಚನೆಯಂ ಪೇಳುತಿರ್ದರದೆಂತೆನೆ.

**ಜಂಪೆ.**

ಧರೆಗಧಿಕ ಶ್ರೀಚೆನ್ನ | ಮಲ್ಲಿಕಾರ್ಜುನ ಗಿರಿಯ |
ಪಾತಾಳಗಂಗೆಯು | ಬತ್ತುವದು ಮುಂದೆ || ೧ ||

ಪಾತಾಳಗಂಗೆಯನು | ಓತುಚಿಪ್ಪಿಲಿ ಮೊಗೆಯೆ |
ಭೂತಳಕೆ ಅವಗಡೆಯು | ಶ್ವೇತನದಿಬತ್ತಿ || ೨ ||

ತುಂಗಭದ್ರೆಯು ಕೃಷ್ಣ | ಗಂಗೆ ಸಾಗರಬತ್ತಿ |
ಕಂಗೆಡುತ ಕಪಿನಿ ಕಾ | ವೇರಿ ಹಿಂಗುವವು ವರುಷ || ೩ ||

ದ್ರೋಣಗಿರಿಯೊಳಗಿಪ್ಪ | ಗಾಳಿಕೆರೆ ತೀರ್ಥವು ಬತ್ತಿ |
ಕೇಳುವರು ಬಲ್ಲಾಳನ | ಕಾಲದೊಸ್ತುವನು || ೪ ||

ಜಕ್ಕರ ಪಡೆಯೊಳಗಿಪ್ಪ | ತುಂಬಿಯು ಹೊರಹೊರಟು |
ಹೊಕ್ಕಲ್ಲಿಬಿಡದವರ | ದಿಕ್ಕು ಗೆಡಿಸುವವು || ೫ ||

[1]ಕುಮ್ಮಟ[1]ಪುರದೊಳಗೆ | ಹೇಮಗುಂಡವಕಿತ್ತು |
ಭೂಮೆಲ್ಲ ಹಸಗೆಡುವ | ಕಾಲಮುಂದಿಹುದು || ೬ ||

ರುದ್ರಮುನಿಯೆ ಕೇಳಿ | ಯುದ್ಧ ದಕ್ಷಿಣಕತ್ತಿ |
ಬಿದ್ದು ವಿಜಾಪುರವ | ಗೆದ್ದು ನೀಲಬೇಕು || ೭ ||

ಕಪ್ಪುಗೊರಳನ ಸ್ಥಳವ | ಒಪ್ಪದಿಂ ಸಂಸ್ಥೈಸಿ |
ಟಿಪ್ಪುವಿನ ಕಾಲದಲಿ | ತೆಗೆವ ಭಾಗ್ಯವನು || ೮ ||

[1] ಕಾಮಲಾ (ಗ, ಜ)



**ವಚನ** || ಈ ರೀತಿಯಲ್ಲಿ ಚೆನ್ನಬಸವಣ್ಣನವರು ಸಿದ್ಧರಾಮಯ್ಯ ರುದ್ರಮುನಿಸ್ವಾಮಿಗಳಕೂಡೆ ಪೇಳಿ, ಇನ್ನು ಅಲ್ಲದೆ ಮುಂದೆ ನಡೆವ ಕಲಿ ಕಾಲಭಕ್ತರ ನಡವಳಿಕೆಯಂ ಪೇಳುತಿರ್ದರದೆಂತೆನೆ.

**ಭಾಮಿನೀ ಷಟ್ಪದಿ.**

ಒಡೆಯ ಕೇಳ್ವುದು ರುದ್ರಮುನಿಗಳೆ |
ಪೊಡವಿ ಜನರು ಮಾಳ್ಪಭಕ್ತಿಯ |
ಸಡಗರಂಗಳ ಕೇಳಿ ಕಳ್ಳರ ಕುಡುಗು ಬೆಡಗುಗಳ ||
ಬಡವ ಒಡೆಯರ ಕಂಡರಾತನ |
ನುಡಿಸಲೊಲ್ಲರು [1]ಮಾತನಾಡರು[1] |
ಕೊಡಿಗೆ ಭೂಷಣದಯ್ಯ ಬಂದರೆ ಅಡಿಗಡಿಗೆ ಬೀಳುವರು || ೧ ||

ಹರಕೆ ಕೂಳಿಗೆ ಮಠದ ಒಡೆಯರ |
ಪರಿಕಿಸಿನ್ನು ಕರೆದು ನೀಡ್ವರು |
ತಿರುಕ ಯೋಗಿ ಹಸಿದು ಬಂದು ಭಿಕ್ಷಯೆಂದಡೆಯು ||
ಸಿರಿಯು ಮದಗಳ ಗರ್ವದಿಂದಲಿ |
ತಿರುಹಿ ತಮ್ಮಯ ಮೋರೆ ಮುಸುಡಿಯು |
ಹಿರಿಯರಾರು ಇಲ್ಲ ಮುಂದಕೆ ತೆರಳಿ ಎನ್ನುವರು || ೨ ||

ಸುರೆಯ ಪಾನವ ಕೊಂಬ ನೀಚರು |
ಅರೆಮಾತಾಡಿ ತಾರೆನುತ ಹೊ[2]ಡೆ[2]ಯಲು |
ನೊರೆಹಾಲು ಹೆರೆದುಪ್ಪ ನೀಡುತ ಕರವ ಮುಗಿಯುವರು ||
ನರರ ಭಕ್ತಿಯು ಹೀಗೆ ಕಂಡರೆ |
ಇರುವ ಮಹಿಮರು ಕೇಳಿ ಮರ್ತ್ಯದಿ |
ಒರಗಬೇಕು ಗುಡಿಯ ಗೋಟಲಿ ಸೊರಗಿ [3]ಶೋಕ[3]ದಲಿ || ೩ ||

[1] ಪಿಡಿದು ಕಾಲನು (ಗ. ಜ.) [2] ದೆ (ಒ, ಗ, ಜ.) [3] ಸೊಕ್ಕುತಲಿ (ಎ, ಒ, ಗ, ಜ.)

ಹಾಡಿ ಆರಿಸಿ ನೀಡಿ[1]ಮಾಳ್ಪರು[1] |
ಕಾಡಿತಿಂಬ[2]ದೈವ[3] ಕಾಟಕೆ ।
ಬೇಡಿ ಹಸಿದು ಮನೆಗೆ ಬಂದರೆ ನೀಡರೊಂದಿಷ್ಟ ॥
ಮಾಡಲಾರದೆ ಬದುಕು ಮನೆಗಳ ।
ಕೂಡಿ[3]ಹೆಂ[3]ಡರ ಸಾಕಲಾರದೆ |
ಓಡಿಬಂದು ಒಡೆಯರಾದರು ಎಂದಾಡುವರು ಜನರು ॥ ೪ ॥

ಸದ್ಯ ಕಲಿಯೊಳು ಈ ಭಕ್ತಿ ನಡೆವುದು |
ಇದ್ದ ಮೂರ್ತಿಗಳ್ನೋಡಿ ಹರುಷದಿ |
ಬಿದ್ದು ಬರುವದು ಮಠಮಾನ್ಯ ಕಲಿಯೊಳು ಮುದ್ರೆಲಾಂಛನವು ॥
ಹದ್ದಿನಂದದಿ ತಿರುಗಬೇಕು |
ಸದ್ಯ ಕೊಟ್ಟು ಕೊಂಬಠಾವಿಗೆ |
ಲುಬ್ಧ ಮನುಜರು ಕೊಡದೆ ಹೋದರೆ ಶುದ್ಧ ನಿರ್ವಾಣ ॥ ೫ ॥

ಗುರುವೆ ಕೇಳಿ ಮರ್ತ್ಯಲೋಕದ |
ಸಿರಿಗೆಮೆಚ್ಚಿ ಇರುವ ಮಹಿಮರು |
ನರರು ಮಾಡುವ ಭಕ್ತಿಭಾವನೆ ಒರೆದು ಪೋಗುವೆವು ॥
ಹೊರಗೆ ಬಂದರೆ ಶರಣು ಮಾಳ್ಪರು |
ಮನೆಗೆ ಬಂದರೆ ಮಾತನಾಡರು ।
ಕರೆಕರೆಯ ಭಂಡಾಟದಿಂದಲಿ ಎರಗಿ ನೀಡುವರು ॥ ೬ ॥

ಬಾರದಯ್ಯಗೆ ಹರಿದಾಡಿಸಾಯ್ವರು ।
ಊರಅಯ್ಯಗೆ ಇಕ್ಕಲಾರದೆ[4] |
ವಾರಹರವ ಮುದ್ರೆ ಎರಡೆ ಪರವಾದಿ ಮನುಜರಿಗೆ ॥

---

[1] ಲೊಲ್ಲದೆ (ಎ, ಗ, ಚ, ಜ.) [2] ರಯ್ಯ (ಎ, ಚ.) [3] ದೆ (ಎ, ಬ, ಗ,)
[4] ವಡಯರಿಗುಣ್ಣಲಿಕ್ಕರು (ಎ, ಗ, ಚ. ಜ.)



ಘೋರ ಮನುಜರು ಭೇದಮಾಡಿ ಅ ।
ಘೋರ ನರಕಕೆ ಬಿದ್ದು ಕಾಲನ ಬಾಧೆ ।
ನರಕಕೆ ಸಿಲ್ಕಿ ಈಶನ ಪಾದವ ಕಾಣದಿಹರು ॥ ೭ ॥

ಉಂಡ ಒಡಯರಿಗಿಕ್ಕಿ ತಮ್ಮಯ ।
ಭಂಡ ದೇವರು ಉಂಡು ದಣಿಯಿತು ।
ಗಿಂಡಿ ಪೂಜಿಸಿ ಕೂಳಹಾಕುತ ಕುಂಡೆ ಮೇಲಾಗಿ ಬೀಳುವರು ॥
ಹೆಂಡ[1]ರೀಗ[1]ಮುತ್ತೈದೆ ಮಗಳ ।
ಗಂಡ[2]ನೀಗ[2]ಮಠದ ಒಡೆಯರು |
ಉಂಡರಿನ್ನು ಸಾಲದೆಂಬರು ಭಂಡ ಮಾನವರು ॥ ೮ ॥

ಸತ್ತಹೆಣನ ಹೊತ್ತುಹೋಗಿಯೆ |
ಹತ್ತುಮಂದಿಯು ಕಾಣುವಂದದಿ ।
ಅತ್ತುಕರದು ಮುಚ್ಚಿಮಣ್ಣೊಳು ಕುಟ್ಟಿಕೊಂಡುಬಾಯ ॥
ಮತ್ತೆ ಮನೆಯೊಳು ಉಂಬರೆಂಬರು ।
ಬೆನ್ನ ಹತ್ತಿ ಪೀಡೆಯಂದದಿ |
ಮರ್ತ್ಯದವರಿಗೆ ವೀರಶೈವದ ಮಾರ್ಗವೇಕಿಲ್ಲ ॥ ೯ ॥

ವೀರಶೈವಗಳುಳ್ಳ ಮನುಜರು ।
ಆರುಆಗಲಿ ಜಂಗಮವನಂಬಿ |
ದಾರಿತಪ್ಪದೆ ನಡೆಯಲವಂಗೆ ಅಂಥಾದ್ದೇನು ಪೊದ್ದುವದೆ ॥
ಊರಶ್ವಾನನ ತೆರದಿ ಮನವನು ।
ನಾನಾತೆರದಿ ಹರಿದಾಡಿ ಬಿಟ್ಟರೆ |
ದಾರಿಕಾಣದೆ ಹೋಗಿ ಕಾಲನ ಬಾಧೆಯೊಳು ಬೀಳುವರು ॥ ೧೦ ॥

---

[1] ತಿಗೆ [ಎ, ಚ, ಜ.] [2] ನಿಗೆ [ಎ, ಚ, ಜ.]

ಅನ್ನದಾನಕೆ ಅಧಿಕವಾದ ।
ಇನ್ನು ದಾನಗ[1]ಳಿಲ್ಲ[1] ಲೋಕದಿ ।
ಚೆನ್ನಬಸವನು ಇಲ್ಲದಿರ್ದಡೆ ಇನ್ನು ದೈವಗಳೆ ॥
ಅನ್ನವಸ್ತ್ರಾ ಭರಣಾವೃತವನು ।
ಇನ್ನು ದುಡಿದು ಸಕಲ ಜೀವನ ।
ವನ್ನು ಸಲಹುವ ನಾಥನಲ್ಲದೆ ಪನ್ನಗೇಂದ್ರಗಳವೆ ॥ ೧೧ ॥

ಮೊಂಡಮೂರ್ಖರು ಪುಂಡ ಪೋಟಗೆ ।
ದಂಡ ದೋಷಕೆ ಕೊಡುವರಲ್ಲದೆ ।
ಉಂಡು [2]ಸುಖಿಸರು ಧರ್ಮ ಮಾಡರು ಭಂಡ ಪಾತಕರು[2] ॥
ಭಂಡಕರು ಪರಶಿವನ ಮಹಿಮರು ।
ಅಂಡಜಕೆ[3] ಕೊಟ್ಟ[3]ರಲು ಬೇಡಲು ।
ಉಂಡದಲ್ಲದೆ ಇವರ ಕಾಟವ ನೋಡೆಂದು ಆಡುವರು ॥ ೧೨ ॥

ಅರ್ಥವೆಂಬುದು ಆಸೆ ಲೋಕದಿ ।
ಮತ್ತೆ ದುಡಿವರು ಜೀವ ದಂಡಿಸಿ ।
ಮೃತ್ಯು ತಮಗಿದು ಎಂಬ ಅರಿವು ಚಿತ್ತದೊಳಗಿಲ್ಲ ॥
ಹೊತ್ತುಬರಲಿ ಕತ್ರ್ರ್ರತೊಲಗೊ ಕಾಲಕೆ ।
ಎತ್ತಿಕಟ್ಟ ಹೊಡೆದು ಭಾಧಿಸಿ ।
ಇತ್ತು ಫಲವನು ಮತ್ತು ಕಡೆಗೆ ಸತ್ತೆನೆನಲು ಬಿಡರು ॥ ೧೩ ॥

**ವಚನ ॥** ಈ ರೀತಿಯಲ್ಲಿ ಚೆನ್ನಬಸವಣ್ಣನವರು ತಮ್ಮ ಗಣಂಗಳಿಗೆ ಪೇಳಿ, ಇದಲ್ಲದೆ ಕಲಿಯುಗದೊಳಗೆ ನಡೆವಂಥ ಕುರುಹುಗಳಂ ಪೇಳುತಿರ್ದರದೆಂತೆನೆ.

---

[1] ಳುಂಟೆ [ಗ] [2] ಖಡೊಳು ಉಟ್ಟುಬಾಳರು ಪಾಷಂಡಿ ಜನರು [ಗ,ಚ.] [3] ಇಟ್ಟಿರುವೆ [ಅ,ಉ,ಇ,ಗ.]



**ಅಟ್ಟತಾಳ**

ಬ್ರಹ್ಮಹತ್ಯಗಳಾಗಿ ಬರುವವು । ಕರ್ಮಹೆಚ್ಚಿ ಕಾವೇರಿಮಧ್ಯದಿ ।
ಎಮ್ಮೆವಾಹನನ ನಗರಕೆ – ಇಮ್ಮಡಾಗುವದು ॥ ೧ ॥

ಬಡವರನ್ನ ಬಂಡಾಟವಾದಿತು । ಧರೆಯನಳೆವರು ಗಿರಿಮರಂಗಳ ।
ಕೆರೆಯು ಕಾಲುವೆ ತೋಟವನಗಳ – ಬರೆದು ಮನೆಮಠವ ॥ ೨ ॥

ತೆರಿಗೆತಪ್ಪದು ಒಂದುಕಾಲಕೆ । ಬರೆದಲಿಪಿಗಳು ಇರುವ ತನ[1]ಕವು[1] ।
[2]ತುರದಬಾಲಕೆ ತೆರಿಗೆ ಮಾಳ್ಪರು – ಅರುವಿರಲಿ ನಿಮಗೆ[2] ॥ ೩ ॥

ಹತ್ತಿಬಾರದೆ ಹಲವು ಬಗೆ[3]ಯೊಳು[3] । ಎತ್ತು ಎಮ್ಮೆ ಕುರಿ [4]ಜವ್ವ[4]ಳಿ
ಕಾಣಿಕೆ ।
ತೆತ್ತಹಣವಿಗೆ ಒಟ್ಟುಪಟ್ಟಿಯು – ಗುತ್ತಿಗೆಯು ಸಮನಾಗಿ ॥ ೪ ॥

ಬತ್ತಹಾಕಿ ಅಕ್ಕಿಕೇಳ್ವರು । ಕತ್ತಿಕೇಳ್ವ ಸಮರ್ಥರೆಲ್ಲರು ।
ಬತ್ತಸುರಿದು ಹೊಡೆದರಕ್ಕಿಯ ತ – ಕ್ಕೊಂಡು ಬರುತಿಹರು ॥ ೫ ॥

ಮೂಲದ್ರವ್ಯವು ಸಂದುಬರುವದು । ಕಾಲದೊಂದು ಕಡ್ಡಾಯ ಬೆಳೆವುದು ।
ಸಾಲ:ಮೂಲೆಯನರಸುತಿರ್ಪರು – ಕೂಲಿ[5]ಮಾಡುವರು[5] ॥ ೬ ॥

ಚಿತ್ತದಲಿ ಅರುಹಿರಲಿ ಮುಂದೆ । ಎತ್ತುವರು ವಿಭೂತಿಕಾಣಿಕೆ ।
ಉತ್ತಮರನುಡಿ ಹತವಾಗಿ ಬರುವದು – ಮರ್ತ್ಯಲೋಕದಲಿ * ॥ ೭ ॥

ಸಟೆಯು ಬಾರದು ಸಕಲಜಾತಿಗೆ । ಗುಟುಕು ನೀರುಗಳಾಗಿ ಬರುವವು ।
ಪೇಟೆಮನೆಗಳು ಕೆಟ್ಟು ಉದ್ಯೋಗ – ದಾಟನಿಲ್ಲುವುದು ॥ ೮ ॥

ವೀರಶೈವದ ಮಾರ್ಗವಿಲ್ಲವು । ಧಾರಿಣಿಯೊಳ್ಯವ ಭಕ್ತರೆಂಬರು ।
ಮಾರಿಮಸಣಿಗೆ ಅನ್ನಹಾರವ – ತೋರಿ ಎರಗುವರು ॥ ೯ ॥

---

[1] ಲಿ (ಗ.) [2] ಬರುವದಿನ್ನು ವಿಭೂತಿ ಕಾಣಿಕೆ–ಹರನ ಭಕ್ತರಿಗೆ ॥ (ಎ,ಕ,ಗ,ಚ,ಜ.) [3] ಯಲಿ (ಗ,ಜ.) [4] ಕೋ (ಕ.) [5] ಗೊಳಗಾಗಿ (ಗ,ಚ,ಜ)
* ಈ ಪದ್ಯ (ಗ) ಪ್ರತಿಯಲ್ಲಿಲ್ಲ.

ವಾರಿಜೋದ್ಭವ ಬರೆದ ಬರಹವು । ದೂರವಾಗಿ ಪುಣ್ಯಕಾಲವು ।
ತೀರಿನಡೆವ ಜೀವನಾತ್ಮನ – ಮಾರಿ ಕಾಯ್ದುಪಳೆ * ॥ ೧೦ ॥

ಧರ್ಮಮಾಡಲು ಕರ್ಮಮಾಡಲು । ಮರಣತಪ್ಪದು [1]ಧರಣಿ[1]ಜೀವಕೆ ।
ಪರಹಿತಾರ್ಥವ ಮಾಡಿ ಅಳಿದರೆ – ಮುಂದೆತೊಡರಿಲ್ಲ ॥ ೧೧ ॥

ತರಣಿ ಪ್ರಭೆಯಾಳು ಪೋದಮನುಜರು । ನಿರುತದಿಂ ನಿರಾಳ ಮಾರ್ಗವು ।
ಇರುಳು ಕಾನನ ಬಿದ್ದಮನುಜನ – ತೆರನಹುದು ಕರ್ಮ ॥ ೧೨ ॥

ಮತ್ತೆ ಶಿವನಭಕ್ತರೆಂಬರು । ಯುಕ್ತವರಿತು ಇಷ್ಟಲಿಂಗವ ।
ಕೃತ್ಯಯೋಚನೆ ಬಿಟ್ಟುಗಳಿಗೆಯು – ಕುಳಿತು ಪೂಜಿಸರು ॥ ೧೩ ॥

ಹೊತ್ತುಗಳೆವುದು ಹರಟೆಮಾತಿಲಿ । ಹಸ್ತಪಾದವ ತೊಳೆದು ಕಾನನ ।
ಪತ್ರೆ ಪುಷ್ಪವ ತಂದು ಪೂಜಿಪ – ಹೊತ್ತುತಮಗಿಲ್ಲ ॥ ೧೪ ॥

ಲಕ್ಷಜನ್ಮವ ಕಳೆದು ಪುಣ್ಯಾತ್ಮ । ನಾಗಲು ಶಿವಲಿಂಗಬಂದುದು ।
ಪಕ್ಷಪ್ರೀತಿಲಿ ಪೂಜೆಮಾಡರು – ಪಾಪಿಜನರು + ॥ ೧೫ ॥

ಮೋಕ್ಷ ಇದರೊಳು ಗಳಿಸಲರಿಯದೆ । ನಿಕ್ಷೇಪಗಳಿಗೆ ಬಿದ್ದುಸಾಯ್ವರು ।
ಸಾಕ್ಷಿನೋಡಿತ್ತ ಸತ್ತ ಬೆಳಿಗಿಗೆ – ನಿಕ್ಷೇಪಕಿನ್ನಾರು + ॥ ೧೬ ॥

ಭಂಗಿಮದ್ದನು ತಿಂದು ಭ್ರಮೆಯೊಳು । ಭೃಂಗಿಯಾಗಿ ಹುಚ್ಚುರೆನುತಲಿ ।
ಡಂಗುರವನೆತ್ತಿ ಸಾರಿಕೊಂಬರು – ಬಸವ ಬಂದರೆನುತ ॥ ೧೭ ॥

ಅಂಗಜನವೈರಿ ಭಕ್ತರಾದರು । ಮಂಗಮನುಜರ ಮಾತಕರ್ನದಿ ।
ಅಂಗೀ ಕರಿಸದೆ ನಾವುಪೇಳಿದ – ಕುರುಹುಗಳೆ ಸ್ಥಿರನಿಮಗೆ ॥ ೧೮ ॥

ನಾಳೆನಾಳಿದ್ದು ಬಂದರೆನುತಲಿ । ಹೇಳಿ ಸರ್ವರು ಪೊಡವಿಮಧ್ಯದಿ ।
ಜಾಳುಮನುಜರು ಒಡೆಲಪೊರೆವರು – ತೂಳಿಗವಮಾಡಿ ॥ ೧೯ ॥

* ಈ ಪದ್ಯ (ಗ.) ಪ್ರತಿಯಲ್ಲಿಲ್ಲ. [1] ಕರ್ಮ (ಗ, ಚ) + ಈ ಪದ್ಯಗಳು (ಇ, ಒ.) ಪ್ರತಿಗಳಲ್ಲಿಲ್ಲ.



ಕೇಳಲಾಗದು ಅವರಮಾತನು । ಹೇಳಿದಂಥ ಕುರುಹು ಹುಸಿಯೆ ।
ಕೀಳು ಮನುಜರು ಕೂಗಿ ಬಾಯೊಳು – ಈಳರಾಗುವರು ॥ ೨೦ ॥

ಗುರುವೆ ಕೇಳಿರಿ ರುದ್ರಮುನಿಗಳೆ । ಧರೆಗೆ ಇಳಿವರು ಮಾಯಕದ ಮಹಿಮರು ।
ಹರನ [1]ತದ್ರೂಪಿರಲು **ನಂಬಲಾಗದು**[1] – ನಯನ ಮೂರಿರಲು ॥ ೨೧ ॥

ಉರಗ ಭರಣವ ಧರಿಸಿವ್ಯಾಘ್ರನ । ತುರುಗಮಾಡಿ ಏರಿಬಂದರೆ ।
ತರಕಬೇಡಿ ಅವರ ಸಂಗಡ – ನೆರೆ **ನಂಬಬೇಡಿ** ॥ ೨೨ ॥

ಹಟದಯೋಗದ ಕುಟಿಲ ಮಹಿಮರು । ಘಟವಪೊರೆಯಲು [2]ಕುಟಿಲ ವಿದ್ಯ[2]ದಿ ।
ಘಟದ ತ್ರಾಣದಿ ಖೇಚರದಿ ನಡೆಯಲು – ದಿಟವೆನ್ನಬೇಡಿ ॥ ೨೩ ॥

ಹೊಲೆಯ ಮಾದಿಗರೆಲ್ಲ ಲೋಕಕೆ । ಮಲಹರನ ರೂಪಾಗಿ ಬರುವರು ।
ಬಿಲದ್ವಾರಗಳಲಿ ರೂಪ ತೋರ್ಪರು – ಕಳ್ಳಭಕ್ತರಿಗೆ ॥ ೨೪ ॥

ಹಲವು ಪರಿಯಲಿ ವೇಷಧರಿಸುತ । ಸಲೆಶಿವನು ನಾನೆಂದು ಪೇಳ್ದರು ।
ಮಲಹರನ ಭಕ್ತಾದಿ ಶರಣರು – ತಲೆ ಬಾಗಬೇಡಿ ॥ ೨೫ ॥

**ವಚನ**॥ ಹೀಗೆಂದು ಚೆನ್ನಬಸವಣ್ಣನವರ್ಪು, ಸಿದ್ಧರಾಮಯ್ಯ, ರುದ್ರಮುನಿಸ್ವಾಮಿಗಳಿಗೆ ಪೇಳಿ, ಇದಲ್ಲದೆ ಇನ್ನು ಕಲಿಯೊಳಗೆ ಪ್ರತಿನಾಮವಾಗಿ ಏಳುವ ನಗರಗಳಂ ಪೇಳು ತಿರ್ದರದೆಂತೆನೆ.

**ಭಾಮಿನೀ ಷಟ್ಪದಿ.**

ತುಂಗಭದ್ರೆಯ ನದಿಯ ತಾಯಿಗೆ ।
ತಂಗಿಬಂದು ಕೂಡಿದೆಡೆಯೊಳು ।
ಮುಂಗಡೆಯಲೊಂದು ನಗರಏಳ್ವುದು ಜನಗಳಿಗೆ ಕುರುಹು ॥

[1] ರೂಪಿರೆ ನಂಬಬೇಡಿ (ಎ, ಕ, ಗ, ಚಜ.) [2] ಜಿತೇಂದ್ರಿಯಂದ (ಗ, ಚ).

ಸಂಗಮೇಶ್ವರ [1]ಲಿಂಗನಿರುವನು[1] ।
ಗಂಗೆ ಈರ್ವರು ಕೂಡಿದೆಡೆಯೊಳು ।
ಸಂಗಮೇಶ್ವರ ಪ್ರಜ್ವಲಿಸಿ ಬರುವನು [2]ಸರ್ವರಿಗೆ ಸೂಚನೆಯು[2] ॥ ೧ ॥

ಕಾಲಜ್ಞಾನದ ಪುರುವು ಆದರೊಳು ।
ಬಾಲ ಬಸವನು ಬಂದು ನೆಲಸುವ ।
ಸಾಲು ಮಾಳಿಗೆ ಎದ್ದು ಅಲ್ಲಿ ಚಿಂತಾಲು ಏರುವದು ॥
ಶೀಲವ್ರತಗಳು ಶಿವನ ಭಕ್ತರ ।
ಜಳಕ ಜಪಗಳು ಸಕಲವರ್ಣದ ।
ಮೇಲು ಪ್ರಜೆಗಳು ಕೂಡಿ ಬರುವರು ಕಾಲಗತಿ ಕಡೆಗೆ * ॥ ೨ ॥

ಲಿಂಗಧಾರಕರಿದ್ದ ಮನೆಯೊಳು ।
ಜಂಗಮಾರ್ಚನೆ ನಡೆದು ಬರುವದು ।
ಸಂಗಮೇಶ್ವರ ಲಿಂಗಅಂದಿಗೆ ಶ್ರೀ ಶೈಲವೆನಿಸುವದು ॥
ಭಂಗಬಿಡುಗಡೆ ಸಕಲ ಲೋಕದಿ ।
ತಿಂಗಳಿನ ಪ್ರಭೆ ತಂಪಿನಂದದಿ ।
ಮಂಗಖಾನರ ಮೂಲನಾಶನ ಸಂಗಮು ಸಾಕ್ಷಿಯಾಗಿ * ॥ ೩ ॥

ಮಧ್ಯನಗರವು ಮುರಿದು ಅಲ್ಲಿ ।
ಎದ್ದು ಬರುವದು ಸಕಲ ಲೋಕಕೆ ।
ಶುದ್ಧವಾದ ಸ್ಥಳಕೆ ಬರುವರು ಸದ್ಯನಮ್ಮವರು ॥
ಬದ್ಧನೆಲೆಸ್ಥಿತಿ ಬಂಕಪುರದೊಳು ।
ಎದ್ದು ಹರಳಯ್ಯ ಲಿಂಗಧರಿಸುವ ।
ರುದ್ರಮುನಿಗಳೆ ನಿಮ್ಮಪಾದಕೆ ಸಿದ್ಧಾಂತವಿರಲಿ * ॥ ೪ ॥

---

[1] ದೇವರಿರುತಿರೆ (ಗ.) [2] ಜನಗಳಿಗೆ ಅರುಹಿರಲಿ (ಗ,ಚ,ಜ.) * ಈ ಪದ್ಯಗಳು (ಖ,ಗ,ಚ,ಜ.) ಪ್ರತಿಗಳಲ್ಲಿ ಮಾತ್ರ ಇದೆ.



ಆದಿಸ್ಥಳಗಳು ಮುರಿದು ಬರುವವು ।
ಮೇದಿನಿಯೊಳು ಪ್ರತಿನಗರ ಬೆಳೆವವು ।
ಕ್ರೋಧಿಮುಂದಕೆ ಸ್ಥಳದ ಕಾವೇರಿ ಕೋಟೆಪೇಟೆಗಳು ॥
ಬಾಧಕಂಗಳು ಸಕಲ ಜನರಿಗೆ ಯ ।
ತಾರ್ಥ ವಾಕ್ಯವು ಯಮುನ ಲೋಕಕೆ ।
ಪೋದತೆರನಾಗುತಿರ್ಪುದು ಗಾದೆಮಾತಲ್ಲವರು ಇರಲಿ ॥ ೫ ॥

ಏಳುನಗರವು ಏಳುತಿರ್ಪವು ।
ಕೇಳಿ ಶರಣರು ಕರ್ಣಾಟಮಧ್ಯದಿ ।
ಮೇಲುಬಿಂಕದ ಬದಲುನಾಮದ ಏಳಿಗೆಯು ಸ್ಥಳವು ॥
ಪೇಳಲಳವೆ ಮೊದಲ ಸ್ಥಳಗಳ ।
ಕೇಳುವಂಥ ಕಾಲಬರುವುದು ।
ಹಾಳು ಸ್ಥಳಗಳೇನಾಗಿ ಹೋದವು ಕೇಳಿ ರಾಮಯ್ಯ ॥ ೬ ॥

ಇಡಬನಾಥನ ದುರ್ಗವಳಿದದು ।
ನಡೆಯಲರಿಯವು ಬಹಳ ದಿವಸವು ।
ತೊಡೆಯಹಾರಿದ ಕನಿಷ್ಠನಾಳಿಕೆ ಬಡಗದೆಸೆಯಿಂದ ॥
ಎಡೆಗೆ ಅನ್ನವ ಬಡಿಸೊ ಸಮಯಕೆ ।
ಕೂಡೆ ಒದಗಿದ ನಂಟನಂದದಿ ।
ನೃಡನು ಇಕ್ಕಿದ ಪಡಿಯನುಣ್ಣುವ ಒಡೆಯ ಬೇರಿಹನು ॥ ೭ ॥

ಶೆಟ್ಟಿಮಗನ ಪಟ್ಟವಳಿದರೆ ।
ಎಷ್ಟುದಿನಕೆ ಎಡರು ಹರಿವುದೆ ।
ದೃಷ್ಟನೋಡಿ ಕನಿಷ್ಠಮಧ್ಯಕೆ ಪಟ್ಟನಡೆಯಬೇಕು ॥
ಸೃಷ್ಟಿಗೊಡೆಯ ವಸಂತರಾಯನ ।
ಪಟ್ಟಉದ್ಧಾರವಾಗಿ ಖಾನರ ।
ಹುಟ್ಟುಗೆಡುವುದು ಬೀಜಮೂಲದ ಕಟ್ಟಕಡೆಯಲ್ಲಿ ॥ ೮ ॥

ಕಾಮುಕೇರಿಯ ಕುಲದಕಂದಗೆ |
ಭೂಮಿತೊಲಗದು ಶಾಪ ಫಲಗಳು |
ಸ್ವಾಮಿ ಶ್ರೀಗುರು ಮುರಿಗೆರಾಯನ ಶಾಪ ಫಲಬಿಡದು ||
ಪ್ರೇಮದಿಂದಲಿ ನಾಲ್ಕುಪಟ್ಟಕೆ |
ನೇಮ ಕರ್ಮದ ಕಾಲ ಕಡೆಯಾಗಿ |
ಕಾಮಿತದಫಲ ಕೆಟ್ಟುಬರುವುದು ಸ್ವಾಮಿಕೃಪೆತಪ್ಪಿ || ೯ ||

ಹರನು ಹರಿಯು ಒಂದಾಗಿ ಇರುವ |
ಪುರಕೆಸುತ್ತ ಯೋಜನಾಂತರ |
ಕರೆವುತಿರ್ಪುದು ಕೆಂಡಪುಷ್ಪದ ಮಳೆಯು ಕುರುಹಿರಲಿ ||
ಧರೆಯು ನಡುಗೊದು ಗಿರಿಯುವಡೆವುದು |
ಮೊರೆಯೆ ಮೇಘವು ಧೂಮಕೇತುವು |
ಶರಣರಿಳೆಗೆ ಬರುವಕಾಲಕೆ ಶರಧಿ ಉಕ್ಕುವದೂ || ೧೦ ||

ಎಂದಿನೊಳಗಿದು ಕುರುಹು ಲೋಕಕೆ |
ಬಂದು ಕಾಣದಿರಲು ಲೋಕವು |
ನಿಂದಕತ್ವರು ನೀಚಮನುಜರು **ಕುಂದನುಡಿಯದಿರಿ** ||
ನಿಂದಕರ ಎದೆಗೂಟದಂದದಿ |
ಬಂದು ಜನರಿಗೆ ತಾತ್ಪರ್ಯವಾದರೆ |
ತಂದೆನಿಮ್ಮಯ ಶರಣವಾಕ್ಯಕೆ ಕುಂದು ಬರಲುಂಟೇ || ೧೧ ||

ಕಾಗೆ ಬಲ್ಲುದೆ ಇನಿಗೋಲ ರುಚಿಯನು |
ರೋಗಿಬಲ್ಲನೆ ಕ್ಷೀರಸ್ವಾಧವ |
ಮೂಗಗೇತಕೆ ಶರಣಮಾರ್ಗದ ಆಗಮ ಪುರಾಣ ||
ಈಗ ಕಲಿಯೊಳು ಬಂದು ತಟ್ಟುವ |
ತಾಗುಬಾಗನು ತಿಳುಹಿಪೋಸೆವು |
**ಮೂಗರಾಗದೆ ಭಕ್ತಿಮಾಡಿರೊ ಸಾಗಿದಷ್ಟಷ್ಟಾ** || ೧೨ ||



**ಭಂಗಿಕೋರಗೆ ಲಿಂಗದರುವೆ** |
ಜಂಗಮವು ತಾವಾಗಿ ಸರ್ವಥವ |
ರಂಪ್ರಿ ತೀರ್ಥವ ಕೊಂಡಭಕ್ತರಿಗೆ ಹಿಂಗುವದೆ ಕರ್ಮ ||
ಸಂಗಮೇಶನ ರೂಪಧರಿಸಿಯೆ |
ಅಂಗದೊಳಗ್ಗಳುಚಿಭೂತನಾಗದೆ |
ತೆಂಗಿನೊಳಗೆರಡಿರವು ಆ ದದರಂಗ ಬೇರಿಹುದು || ೧೩ ||

**ವಚನ||** ಈ ಪ್ರಕಾರದಲ್ಲಿ ಚೆನ್ನಬಸವಣ್ಣನವರು, ರುದ್ರಮುನಿ ಸಿದ್ಧರಾಮಯ್ಯನವರಿಗೆ ಪೇಳಿ, ಇದಲ್ಲದೆ ಭಕ್ತಿಸ್ಥಲದ ಮಾರ್ಗಮಂ ಪೇಳುತಿರ್ದರದೆಂತೆನೆ.

**ಅಟತಾಳ**

ಭಕ್ತಿಸ್ಥಲಗಳ ಹಿಡಿದು ವಿ | ರಕ್ತನಾಗಬೇಕು ಕೊನೆಗೆ |
ಹತ್ತಿನಿಂದು ಕಾಣಬೇಕು – ಮತ್ತೆ ಪ್ರಭುನೆಲೆಯ || ೧ ||
ಭಕ್ತಿಸ್ಥಲಗಳ ಪಾದಸೋಂಕಿ | ಹತ್ತಬೇಕು ಮತ್ತೆ ಸ್ಥಲಗಳ |
ಪುತ್ರರುಂಟೆ ಪಡೆದವರು ಇಲ್ಲದೆ – ಚಿತ್ತದಲಿ ನೋಡಿ || ೨ ||
ತತ್ವಸಾರದಿ ತಿಳಿಯಬಾರದೆ | ತಾವರೆಯು ಕೆಸರಿಂದ ಉದಿಸದೆ |
ಮತ್ತೆ ಪರಶಿವನಂಘ್ರಿಕಾಂಬುವ – ಅರ್ಥವಿನ್ನುಂಟೆ || ೩ ||
ಭಕ್ತಿಸ್ಥಲಗಳು ಬಸವ ಸಂತತಿ ವಿ | ರಕ್ತಿಸ್ಥಲಗಳು ಪ್ರಭುದೇವಸಂತತಿ |
ಶಕ್ತಿಯಿಂದಲಿ ಸಕಲಲೋಕವು – ಉತ್ಪತ್ತಿ ಸ್ಥಿತಿಲಯವು || ೪ ||
ಭಕ್ತಿಸ್ಥಳಗಳೆ ಬೀಜವೃಕ್ಷವು ವಿ | ರಕ್ತಿಸ್ಥಲಗಳೆ ಶೂನ್ಯವೃಕ್ಷವು–
ಸತ್ಯಮಾರ್ಗದಿ ನಡೆಯಲಾತನು – ಕರ್ತೃಪ್ರಭುವಹನು || ೫ ||
ಹತ್ತಿ ಇಳಿದು ಮತ್ತತನದಲಿ | ಇತ್ತಶಕ್ತಿಲಿ ಮಾಯಪಾಶಕೆ |
ಎತ್ತಹೋಗಲು ತಿರುಗಿಸಾವುದು – ಪೃಥ್ವಿಕಡಲೊಳಗೆ || ೬ ||
ಭಕ್ತಿಸ್ಥಲದ ಮಾರ್ಗಕಟ್ಟಳೆ | ಯುಕ್ತವರಿಯದೆ ನಡೆಯಲ್ಕೆಕೆಡುವುದು |
**ಮತ್ತೆಕೇಳಿ ಘನಲಿಂಗ ಮಹಿಮರು – ಧಾತಗೇಡಿಗಳು** || ೭ ||

ಹತ್ತಿಗದ್ದಿಗೆ ಹಲವುಯೋನಿಯ | ಮೂತ್ರಸ್ಥಳಕೆ ಸಿಲ್ಕಿಕರ್ಮದ |
ಬುತ್ತಿಹೊತ್ತು ಹೋಗಿನರಕದಿ – ನಿತ್ಯ ಉಣ್ಣಬೇಕು ‖ ೮ ‖

ಗುರುಕಳಶ ಗದ್ದಿಗೆಯು ಈಶನ | ಸದರವಲ್ಲವೆ ಸಟೆಯು ಎಂಬರೆ |
ಅದರಮೇಲೆ ಕುಳ್ಳಿರುವ [1]ಹಿರಿಯ[1]ರು – ಪ್ರಭುವಂತೆ ಇರಬೇಕು ‖ ೯ ‖

ಮೊದಲುಮಾಡಿದ ಪಾಪಹೋಗಲಿ | ಸದರನೇರಿ ಸಕಲ ಇಂದ್ರಿಯ |
ಮುರಿದುಕಾಮುವ ಕೊಲ್ಲದವರಿಗೆ – ಎಲ್ಲಿ ಗುರುಸ್ಥಲವು ‖ ೧೦ ‖

ಧರ್ಮಶಾಂತಿಗಳಿರಲು ಗುರುಸ್ಥಲ | ಕಾಮವಿರಹಿತನಾಗೆ ಗುರುಸ್ಥಲ |
ನಿರ್ಮಲಾತ್ಮಕ ಪ್ರರಬ್ರಹ್ಮವಾಗಿರೆ – ಅವಗೆ ಗುರುಸ್ಥಲವು + ‖ ೧೧ ‖

ಪಟ್ಟಮೂಲಕೆ ಶ್ರೇಷ್ಠವಾದರೆ | ಅಷ್ಟಪಾಶವ ಹರಿದು ತಮ್ಮಯ |
ಇಷ್ಟಲಿಂಗದ ಜ್ಞಾನದೊಳು ನಡೆದರೆ ಈಶ – ನಂಘ್ರಿಕಾಂಬುವ[2]ನು[2] + ‖ ೧೨ ‖

**ವಚನ**‖ ಹೀಗೆಂದು ಭಕ್ತಿಸ್ಥಲದ ಮಾರ್ಗವಂ ಪೇಳಿ ಮತ್ತು ಏನನ್ನು ತಿರ್ದರು.

**ಜಂಪೆ.**

ಘನಲಿಂಗ ಮನಲಿಂಗ | ಜನನ ಮರಣಕೆಲಿಂಗ |
ಅನುಗೆಟ್ಟ ಭವಿಯು | ಭಕ್ತನ ಮಾಳ್ಪಲಿಂಗ ‖ ೧ ‖

ಆರುಸ್ಥಲದೊಳಗಾದಿ | ಧಾರಿಣಿಗೆ ಘನಲಿಂಗ |
ನೂರೆಂಟು ಭವಿಕಳೆದು । ಶಿವಸಾರ ಮಾಡುವುದು ‖ ೨ ‖

ದೀಕ್ಷೆ ಇದರೊಳು ಮಾಡೆ | ಮೋಕ್ಷಸ್ಥಾನಕೆ ತರುವ |
ಸಾಕ್ಷಾತ ಶಿವರೂಪ ಪ್ರ | ತ್ಯಕ್ಷ ಘನಲಿಂಗ ‖ ೩ ‖

ಭವಿಯು ಭಕ್ತನಮಾಡಿ | ಶಿವಭಕ್ತನೆನಿಸುವದು |
ಭುವನದೊಳು ಎಣೆಯುಂಟೆ | ದೇವಘನ ಸ್ಥಲಕೆ ‖ ೪ ‖

---

[1] ಮಹಿಮ (ಅ.) [2] ರು (ಅ,ಉ,ಒ.) + ಈ ಪದ್ಯಗಳು(ಗ.)ಪ್ರತಿಯಲ್ಲಿಲ್ಲ.



ನಾನಾಕಾಷ್ಠವ ಸುಡಲು | ಬೂದಿತಾನಾದಂತೆ |
ಜ್ಞಾನೋಪದೇಶವಮಾಡಿ | ನಾನಾಭವವ ಕಳೆದು ‖ ೫ ‖

ಆಚಾರ ಅಪುದ್ರಿಕೆ | ನೆಟ್ಟಶಿಲೆ ಬಿಟ್ಟಬಸವ |
ಇಷ್ಟನ್ನು ಪಡೆದಲ್ಲಿ | ಹುಟ್ಟಬಂದಿಹುದು ‖ ೬ ‖

ಮಠಪತಿಗಳವರಾಗಿ | ಘಟಹೊರಕತನ ನೀಗಿ |
ಸಟೆಕುಟಿಲವನು ತೂರಿ | ಅಷ್ಟಮದ ಹಾರಿ ‖ ೭ ‖

ಮಾಡುವರು ಭಕ್ತಿಯನು | ರೂಢಿಯೊಳು ಧರ್ಮವನು |
ನೀಡುವರು ಪರಹಿತಕೆ | ಬೇಡಿ ಪರಶಿವನ ‖ ೮ ‖

ಇಷ್ಟಾರ್ಥ ಪದವಿಯನು | ಕೊಟ್ಟು ರಕ್ಷಿಪ ಶಿವನ |
ಮುಟ್ಟಿ ಪೂಜಿಪಜ್ಞಾನ | ಇಷ್ಟಲಿಂಗದೊಳು ಪ್ರಾಣ ÷ ‖ ೯ ‖

ಬಸವ ಪಂಚಾಕ್ಷರಿಯ | ಸತತ ಜಪಿಸುತಲಿಹರು |
ಅಸಮಾಕ್ಷ ಭಸಿತವನು | ನೊಸಲೊಳಿಟ್ಟಿಹರು ÷ ‖ ೧೦ ‖

ಪಾಡುವರು ಪರಶಿವನ | ನೋಡುವರು ದೃಷ್ಟಿಯಲಿ |
ಬೇಡುವರು ಸದ್ಗತಿಯ । ಕೂಡಿ ಪರಶಿವನ ÷ ‖ ೧೧ ‖

ಅತಿಶಯದಿ ಭಕ್ತರೊಳು | ಸತತ ಪೂಜಿಸಿಕೊಳುತ |
ವ್ರತನೇಮಗಳ ನಡಸಿ ಸ | ದ್ಗತಿಯ ಹೊಂದುವರು × ‖ ೧೨ ‖

ಈ ತೆರದ ಮಹತ್ತು | ಭೂತಳದಿ ಚರಿಸುತ |
ಆಚಾರ್ಯರೆನಿಸುವರು । ನೀತಿ ತಪ್ಪುವರು ‖ ೧೩ ‖

ಭಕ್ತಿಮಾರ್ಗವ ಬಿಟ್ಟು | ದುಷ್ಟತನಗಳ ಕಲಿತು |
ಸೃಷ್ಟಿಯೊಳು [1]ಷಡುಸ್ಥಲದ[1] । ಶ್ರೇಷ್ಠರೆನ್ನುವರು ‖ ೧೪ ‖

---

÷ ಈ ಪದ್ಯಗಳು (ಅ,ಉ,ಇ,ಒ,ಗ,ಜ.) ಪ್ರತಿಗಳಲ್ಲಿಲ್ಲ. × ಈ ಪದ್ಯ (ಇ,ಒ,ಗ.) ಪ್ರತಿಗಳಲ್ಲಿಲ್ಲ. [1] ಷಣ್ಮುಖಕೆ (ಇ,ಒ,ಗ,ಚ,ಜ.)

ತಾವೆ ಗುರುವೆನ್ನುವರು । ಆದಿ ಗುರುವನು ಮರದು ।
ವಾದ ನಿಂದೆಯ ಮಾಡಿ । ಹಾದಿತಪ್ಪುವರು ॥ ೧೫ ॥

ಕೇಳಿರಾಮಯ್ಯಗಳೆ । ಪರಮ ನಿಷ್ಕಲಲಿಂಗ ।
ತಾವೆ ಜಂಗಮವಾಗಿ । ಮೇದಿನಿಯೊಳಿಹುದು × ॥ ೧೬ ॥

ಆರಾಧ್ಯ ಶ್ರೀಗುರುವು । ಅನಾದಿ ಪಿಡಿದೈದುದನು ।
ನೋಡಿ ತಿಳಿಯರುತಮ್ಮ । ಗಾಢಗರ್ವದಲಿ ॥ ೧೭ ॥

ಭಾವವರಿಯದೆ ಮನದಿ । ಆಚಾರ್ಯರೆನಿಸುವರು ।
ವೇದಶಾಸ್ತ್ರವ ಕಲಿತು । ವಾದಿಯಾಗುವರು × ॥ ೧೮ ॥

ನಾನಾಕಾಷ್ಠವ ಸುಡಲು । ಬೂದಿತಾನಾದಂತೆ ।
ಭಾನುಕಳೆ ಪೃಥ್ವಿಯೊಳು । ಪ್ರಜ್ವಲಿಸುವಂತೆ × ॥ ೧೯ ॥

ದೇವಘನ ಮಹತ್ತು । ಮೇದಿನಿಯೊಳ್ಚರಿಸೆಂದು ।
ದೇವಕಳುಹಿದನೆಂಬ । ಭಾವ ತಮಲಗಿಲ್ಲ × ॥ ೨೦ ॥

ವೀರಶೈವಕೆ ಕರ್ತೃ । ವೀರಘನ ಮಹತ್ತು ।
ಆರುಸ್ಥಲಗಳಗೊತ್ತು । ಧಾರಿಣಿಯೊಳಿನಿತು × ॥ ೨೧ ॥

ಮಧ್ಯ ಶ್ರೀಗುರುಕಲಶ । ಗದ್ದಿಗೆ ಸಿಂಹಾಸನವು ।
ಸದ್ಯ ಮಹತ್ತಿನದು । ಸಿದ್ಧವಿದ್ಯಮರದು ॥ ೨೨ ॥

ಗುರುವು ಇಲ್ಲದೆ ಅವರ್ಗೆ । ಸ್ಥಲವೆಂತು ಸೇರುವರು ।
ಬರಿಯ ಗರ್ವವಮಾಡಿ । ಅರಿಯರು ಶಿವನ ॥ ೨೩ ॥

ತಾವೆಒಡೆಯರು ಎನುತ । ನೀಡರು ಪರಹಿತಕೆ ।
ನಾಡಬೇಡಿದಪಾಪ । ಪೀಡಿಸದೆ ಅವರ ॥ ೨೪ ॥

× ಈ ಪದ್ಯಗಳು (ಇ,ಒ,ಗ.) ಪ್ರತಿಗಳಲಿಲ್ಲ,



ಹರಗುರು ಮೂರ್ತಿಗಳ । ಚರಣಕೆರಗದೆ ತಮ್ಮ ।
ವರಬಂಧು ಬಳಗಕ್ಕೆ । ಶರಣು ಮಾಡುವರು ॥ ೨೫ ॥

ಗುರುಲಿಂಗ ಜಂಗಮರ । ತೀರ್ಥಪ್ರಸಾದವನು ।
ಗುರುವರ್ಗದಲಿ ಬಿಟ್ಟು । ಹೊಗುವರೆಯಮಪುರವ ॥ ೨೬ ॥

ಜಂಗಮವೆ ತಮ್ಮಿಷ್ಟ । ಲಿಂಗವೆಂದರಿಯದ ।
ಮಂಗಮೂರ್ಖರಿಗೆಲ್ಲಿ । ಆ[1]ರಾಧ್ಯ[1]ಸ್ಥಲವು ॥ ೨೭ ॥

ಭಕ್ತಿಭಾವವ ಬಿಟ್ಟು । ಯುಕ್ತಿವಚನವ ಕಲಿತ ।
ವ್ಯರ್ಥಘಟ ಹೊರಕರಿಗೆಲ್ಲಿ । ಆರಾಧ್ಯಸ್ಥಲವು ÷ ॥ ೨೮ ॥

ಮೂಲಕರ್ತೃವ ಬಿಟ್ಟು । ತಾವೆಘನ ಗುರುವೆಂದು ।
ಬಾಳೊಮನುಜರಿಗೆಲ್ಲಿ । ಆರಾಧ್ಯಸ್ಥಲವು ॥ ೨೯ ॥

ಗಂಡಘನು ಗುರು[2]ಲಿಂಗ[2] । ಹೆಂಡತಿಯು ಚರ[3]ಲಿಂಗ[3] ।
ಗಂಡುಮಕ್ಕಳು ಎಲ್ಲ ।ಮರಿದೇವ [4]ಲಿಂಗ[4] ॥ ೩೦ ॥

ನಂಟರಿಷ್ಟರು ಎಲ್ಲ । ತಮತಮಗೆ ಗುರುವೆಂಬ ।
ತುಂಟ ಮನುಜಂಗೆಲ್ಲಿ । ಆರಾಧ್ಯಸ್ಥಲವು ॥ ೩೧ ॥

ಧರೆಯೊಳಗೆ ತಾವೆ ಸ । ದ್ಗುರುಗಳೆಂದೆನ್ನುತಲಿ ।
ಹರಪುರಕೆ ಹೊರಗಹರು । ಮರೆದು ಶ್ರೀಗುರುವ ॥ ೩೨ ॥

ಸತಿಪತಿಯು ಸುತರೆಲ್ಲ । ಅತಿಶಯದ ಗುರುವೆಂದು ।
ಶತಜನ್ಮ ಸೂಕರನ । ಬಸುರೊಳುದಿಸುವರು ॥ ೩೩ ॥

**ವಚನ॥** ಹೀಗೆಂದು ಚೆನ್ನದಂಡನಾಯಕಮಂತ್ರಿಯು ಪೇಳಿ, ಇದಲ್ಲದೆ ಮುಂದಿನ ಉತ್ಪತ್ಯವಂ ಪೇಳುತಿರ್ದರದೆಂತೆನೆ.

[1] ಚಾರ್ಯ (ಅ,ಉ.) ÷ ಈ ಪದ್ಯ (ಇ,ಒ,ಗ.) ಪ್ರತಿಗಳಲ್ಲಿಲ್ಲ. [2] [3] [4] ಚಾರ್ಯ (ಅ,ಉ,ಜ.)

ತ್ರಿಪುಡೆ.

ಎಲ್ಲ ಸೂಚನೆ ಪೇಳಿದೆವು ಮುಂಚೆ । ಎಲ್ಲ ತಮ್ಮಯ ಕುರುಹು
ಎನ್ನದೆ ಸೊ ।
ನ್ನಲಾಪುರದರಸೆ ಕೇಳೈ – ರುದ್ರಮುನಿಸ್ವಾಮಿ ॥ ೧ ॥

ಎಲ್ಲ ಶರಣರು ಕೇಳಿನಾವು । ಅಲ್ಲಿಬರುವ ನೆಲೆಯ ಕುರುಹನು ।
ಫುಲ್ಲಶರಹರ ನಾಜ್ಞೆಯಲಿ ಬರುವೆವು – ಮತ್ತಿದಲ್ಲದಲೆ ॥ ೨ ॥

ಕೊಲ್ಲಿಪಾಕಿಯ ಲಿಂಗದೊಳಗೆ । ಅಲ್ಲಿ ರೇವಣ ಸಿದ್ಧೇಶನುದಯವು ।
ಅಲ್ಲಿನಾನು ಏಳುವರುಷದ – ಕನ್ನೆಯೊಳು ಉದಯ ॥ ೩ ॥

ಎಲ್ಲಶರಣರು ಕೇಳಿಮರ್ತ್ಯಕೆ । ಅಲ್ಲಿನಾನು ಬರುವಕಾಲಕೆ ।
ಕಲ್ಲುಕೋಳಿಯು ಕೂಗಿಬಸವನು – ಕಡಲೆಮೆಲ್ಲುವನು ॥ ೪ ॥

ಎಂದು ಬಂದರೆಂದು ಬರಿದೆ । ಕಂದಿ ಕುಂದಲಿ ಬೇಡಿಭಕ್ತರು ।
ಬಂದ ಬೆಳಗೆಗೆ ಲೋಕಕಾಂಬರೆ – ಒಂದು ಕುರುಹುಂಟು ॥ ೫ ॥

ಸೂರ್ಯರಿಬ್ಬರು ಮೂಡಿಬಪ್ಪರು । ರೂಢಿಜನ ಪ್ರಜ್ವಲಿಸಿ ಕಾಂಬರು ।
ಕೇಡು ಎಂಬರು ಕೆಲರುಮರ್ತ್ಯಕೆ – ಆಗ ಎಮ್ಮುದಯ ॥ ೬ ॥

ಏಳುವರುಷದ ಬಾಲಕನ್ನಿಕೆ । ತಾಳಲಾಕ್ಷಣ ಗರ್ಭಸೂಚನೆ ।
ಕೇಳಿ ಶರಣರು ರವಿಗಳೀರ್ವರು – ಆಗ ಕಾಣುವರು ॥ ೭ ॥

ನಾಲಿಗಿಲ್ಲದ ಘಂಟೆನುಡಿವುದು । ಬಾಲೆಬೆನ್ನೊಳು ಒಡೆದು ಬರುವೆನು ।
ನೀಲಲೋಚನೆಯಮ್ಮ ಜನಿಸುವ – ಳಾದಿವಂಶದಲಿ ॥ ೮ ॥

ಕೃಷ್ಣವೇಣಿಯು ಉಕ್ಕಿಪರಿವಳು । ಕೊಟ್ಟೂರಬಸವನು ಪಾದ ಕೆರೆವನು ।
ಇಟ್ಟಕಡಲೆಯುಮೆದ್ದು ಗುಟುರ – ಕೊಟ್ಟುದೆ ಕುರುಹು ॥ ೯ ॥

ಕಲ್ಲುಕೋಳಿಯು ಕೂಗಿಕೆಲೆವುದು । ಮಲ್ಲಿಗೆಯುಮಹ ವೃಷ್ಟಿಕರೆವುದು ।
ಎಲ್ಲದೃಷ್ಟಗಳಾಗಿ ಬರುವವು ಮ – ತ್ತಲ್ಲಿ ಹಂಪೆಯಲಿ ॥ ೧೦ ॥



ಬರಿಕೆರೆಯುತುಂಬಿ ಕೋಡಿಹರಿವುದು । ಕುರುಹುಕೇಳಿ ನಾನು
ಮರ್ತ್ಯಕೆ ।
ಬರುವ ಕಾಲಕೆ ಕಾವೇರಿ ಉಕ್ಕಿ – ಪುರಕೆ ಅವಗಡೆಯು ॥ ೧೧ ॥

ಚೆನ್ನಬಸವನು ಬರುವ ಕಾಲಕೆ । ಇನ್ನು ಕಾಣದು ಇಳೆಗೆ ಸ್ವಸ್ಥವು ।
ಹನ್ನೆರಡು ಲಕ್ಷ ಪೌಜನಿಂದಲಿ – ಇಳೆಗೆ ಬರುತಿಹೆವು ॥ ೧೨ ॥

ಮೂಡ ಗಿರಿಗೆ ಚಂದ್ರದ್ರೋಣಕೆ । ಕೂಡಿ ನಡೆಯೆ ಖಾನ ಖಾನರು ।
ನೋಡಿ ಶ್ರೀಗಿರಿಮಲ್ಲ ತಿರುಮಲನ – ಭಂಡಾರ ಕೀಳುವರು ॥ ೧೩ ॥

ಉತ್ತರದ ಖಾನರು ಹತ್ತಿಬರುತಿರೆ । ಮರ್ತ್ಯವೆಲ್ಲ ತಲೆಕೆಳಕುದೋರುತ ।
ಪಾತ್ರ ಇಂದ್ರ ಅಜಹರಿಗೆ ಉಬ್ಬಸ – ಪೃಥ್ವಿ ಹಾಗಿರಲಿ ॥ ೧೪ ॥

ಗಾಲಃಮೇಲುಗಳಾಗಿ ಎಂಟು । ಮೂಲೆ ನ್ಯಾಜಗಳೊಂದುಗೂಡುತ ।
ವಾಲಿ ಭಂಡಾರವನು ಕೀಳುವ – ಖಾನ ಮಲ್ಲುಕನು ॥ ೧೫ ॥

ಹೊತ್ತು ಬರಲು ಅತ್ತಲಾಕ್ಷಣ । ಸತ್ಯದೇವಿಯು ಆದಿಲಕ್ಷ್ಮಿಯು ।
ಮತ್ತೆ ಹೊರಟಳು ಅನಂತರೂಪಿಲಿ – ಮೃತ್ಯುದೇವಿಯಾಗಿ ॥ ೧೬ ॥

ಎಲ್ಲ ಖಾನರು ನೋಡಿ ಆಕೆಯ । ಅರರೆ ಅಲ್ಲಾ ಅಲ್ಲ ಎನ್ನುತ ।
ಗಲ್ಲಗಲ್ಲವ ಬಡಿಕೊಂಡು ಖಾನರು – ಎಲ್ಲ ತುಡುಕುವರು ॥ ೧೭ ॥

ನನಗೆ ತನಗೆ ಎನ್ನುತ ಕತ್ತಿಯ । ಹಿ[1]ಡಿ[1]ದು ಖಾನರು ಕಡಿದಾಡಿ ಒರಗಲು ।
ಮನೆಗೆ ನಡೆವಳು ಮಹಾಲಕ್ಷ್ಮಿಯು – ಕೊನೆಗೆ ಈ ಕುರುಹು ॥ ೧೮ ॥

ವಚನ ॥ ಹೀಗೆಂದು ಚೆನ್ನಬಸವಣ್ಣನವರು ಪೇಳಿ, ಇದಲ್ಲದೆ ಮುಂದೆ ಶರಣರಿಗೆ ಸಾಕ್ಷಿಯಂ ಪೇಳುತಿರ್ದರದೆಂತೆನೆ.

ಜಂಪೆ.

ಶರಣರೆಲ್ಲರು ಕೇಳಿ । ಇಳೆಗೆ ನಾವು ಬರುವಾಗ ।
ಹರಗಣಕೆ ಅರುಹಿರಲಿ । ಕುರುಹು ಸಾಕ್ಷಿಗಳು ॥ ೧ ॥

---

[1] ರಿ (ಇ,ಒ,ಗ.)

ಪೊಡವಿಗೆ ನಾವಿನ್ನು ಅಡಿ । ಇಡಲು ಕಪಿಲಸಿದ್ಧನ ।
ಗುಡಿಯ ಪಂಚಘಂಟೆ । ನುಡಿದುದೆ ಸಾಕ್ಷಿ ॥ ೨ ॥

ರುದ್ರಮುನಿಸ್ವಾಮಿಗಳ । ಚಂಗಲ್ವಮಂಟಪದ ।
ಭದ್ರಮಾಡಿದ ಕದವು । ತೆಗೆದಿರ್ದುದೆ ಸಾಕ್ಷಿ ॥ ೩ ॥

ಮುಂದೆ ಮರ್ತ್ಯಕೆ ನಾವು । ಬಂದಾಗ ಮಹಿಮರು ।
ಬಂದು ನಿಮ್ಮಡಿ ಸೇವೆ । ಸಂದಿರುವುದೆ ಸಾಕ್ಷಿ ॥ ೪ ॥

ಅಂದಿಗೆ ಪ್ರಮಥಗಣ । ವೃಂದವೆಲ್ಲರ ಒಡನೆ ।
ಮುಂದೆ ಉಳುವಿಗೆ ಎಮ್ಮವರು । ಬಂದುದೇ ಕುರುಹು ॥ ೫ ॥

ಏಳ್ನೂರು ವರುಷವು । ಕಾಳಗವು ಕಲಿಯೊಳಗೆ ।
ಹಾಳಾಗಿ ಬರೆ ನಾವು । ಏಳಿಗೆಯು ಮುಂದೆ ॥ ೬ ॥

ಒಂದು ವರುಷದಿ ಬಹಳ । ನೊಂದೀತು ಜಗವೆಲ್ಲ ।
ಮುಂದೆ ನಾವು ಬಂದಾಗ । ಚಂದವಾದೀತು ॥ ೭ ॥

ಸಂದಾಬ್ಜ ಸಾಹಸ್ರ । ನಾಲ್ಕನು ಮೀರಿದಾಚೆಯ ।
ನಂದನದ ಮುಂದವನು । ಬಂದಾನು ವಸಂತ ॥ ೮ ॥

ಅಂದಿನಾನಂದದ । ಮುಂದಣಾನಂದದಲಿ ।
ಬಂದೇವು ಕಾರ್ತೀಕ । ಪೌರ್ಣೀಮಿ ದಿವಸ ॥ ೯ ॥

ಅಮರಗಣ ರುದ್ರಗಣ । ಪ್ರಮಥಗಣರೊಳು ನಾವು ।
ಸುಮನಸದಿ ಬಂದಾಗ । ನಮಿಸುವೆವು ನಿಮಗೆ ॥ ೧೦ ॥

ವಚನ ॥ ಈ ಪ್ರಕಾರದಲ್ಲಿ ಚೆನ್ನಬಸವಣ್ಣನವರು ಪೇಳಲು ಆ ಮಾತಿಗೆ ಸಿದ್ಧರಾಮಯ್ಯದೇವರು ಏನನ್ನುತಿರ್ದರು.

ಅಟತಾಳ. ÷

ಗುರುವೆ ಕೇಳ್ವುದು ದಂಡನಾಯಕ । ಹರನ ಶರಣರಿಗೆರಗಿ ಪೇಳುವೆ ।
ಧರೆಯ ಮನುಜರು ನಡೆವ ಕುಟಿಲದ – ಭಕ್ತಿಯುಕ್ತಿಗಳ ॥ ೧ ॥

÷ ಈ ಅಟತಾಳದ ಪದ್ಯಗಳು (ಖ,ಗ,ಚ.) ಪ್ರತಿಗಳಲ್ಲಿ ಮಾತ್ರ ಇವೆ.



ರೊಕ್ಕಗಳಿಸಿ ಇಕ್ಕಿಕಾಡೊಳು । ಮಕ್ಕಳಿಗೆ ಮುಂದಾಧಾರ ಎನುತಲಿ ।
ಬುಕ್ಕಬೇಡರು ಬಂದುವೈದರೆ – ದುಃಖಮಾಡುವರು ॥ ೨ ॥

ದೊರೆಗಳೊಳಗೆ ವಿಚಾರವಿಲ್ಲವು । ಬರೆದು ಕೊಡುವಗೆ ಸೆರೆಯುತಪ್ಪದು ।
ಪ್ರಜೆಯ ದಣಿಸುವ ಉದ್ಯೋಗಗಾರಗೆ – ಜೀವಬಂಧನವು ॥ ೩ ॥

ನರರ ಕಾಡುವ ಪ್ರಭುಗಳೆಲ್ಲರು । ಕೊರಗಿ ಸಾಯ್ವರು ಕಡೆಯಕಾಲಕೆ ।
ತಿರಿದು ಉಣ್ಣುವ ಪ್ರಾಪ್ತಿತಪ್ಪದು – ಗುರುವೆ ದಂಡೇಶ ॥ ೪ ॥

ಅಂತ್ಯಕಾಲವು ಬರುವ ಸಮಯಕೆ । ಕೊಂತಿರಾಜ್ಯವ ಸೆರೆಯ ಒಡೆವರು ।
ದಂತಿನಾಮದ ಪುರವು ಏಳ್ವದು – ವಸಂತನು ಬರುವಾಗ ॥ ೫ ॥

ನಿಂತಮಾತಿದು ನಿರಾಳ ಲೋಕದ । ಚಿಂತೆಹರಿದು ನಿಶ್ಚಿಂತರಾಗಿ ।
ನಿಂತಮನುಜರು ಬಾಳುತಿರ್ಪರು ಸಂ ತೋಷದೊಳಗೆಲ್ಲ ॥ ೬ ॥

ಯಮುನದಿಕ್ಕಿನ ಕತ್ತಿಮುರಿವುದು । ಧನಪದೆಸೆ ರಾಜರುಗಳೆಲ್ಲರು ।
ತಮಗೆ ತಮ್ಮೊಳು ಕ್ರೋಧದಿಂದಲಿ – ಒರಗಿಸಾಯುವರು ॥ ೭ ॥

ಅಮರಗುಂಡದ ಸ್ಥಳವು ಕೆಡುವುದು । ಉಮೆಯ ಮಲ್ಲನ ಪೂಜೆ ನಿಲುವುದು ।
ನಮನಿಮಗೆ ದರುಶನವು ಆದೀತು – ಸೊನ್ನಲಾ ಪುರದೊಳಗೆ ॥ ೮ ॥

ವಚನ ॥ ಹೀಗೆಂದು ಸಿದ್ಧರಾಮಯ್ಯ ದೇವರು ಪೇಳೆ, ಚೆನ್ನ ಬಸವಣ್ಣನವರು ಅವರ ಕೂಡೆ ಏನನ್ನುತಿರ್ದರು.

ತ್ರಿವುಡೆ

ಹೊತ್ತುಮುಳುಗದೆ ಕತ್ತಲಾಗದು । ಗೊತ್ತಿಗಲ್ಲದೆ ನಾವುಬಾರೆವು ।
ಮರ್ತ್ಯಲೋಕದ ಪಾಪಕಳೆದರೆ ಶರಣರ – ಸತ್ಯನಡೆಯಾಗ ॥ ೧ ॥

ಕತ್ತಿಮನುಜರು ನೆಲೆಯಕಾಣದೆ ಕ । ವಿತ್ವ ಲಿಪಿಗಳ ಬರೆದು ಲೋಕದಿ ।
ಹೊತ್ತುಸಾರಲು ಚೆನ್ನಬಸವನ – ಸತ್ಯಕೆಡುತಿಹುದೆ ॥ ೨ ॥

ತಪ್ಪಬಾರದು ಶಿಲೆಯ ಶಾಸನ | ತಿಪ್ಪೆನಾಮದ ತಳರಸ ಮೃಜ |
ಮುಂದೆರಾಜ್ಯವನಾಳಿ ಪ್ರಜೆಗಳ – ದಂಡದೋಷದಲಿ || ೩ ||

ಸದ್ಯ ಆತನ ಕಾಲದೊಳಗೆ | ಉಬ್ಬಿ ಬಹಳ ಜನರು ಮಲಗಿ |
ಎದ್ದೆನೆಂಬ ಕಾಲಕ್ಕೆ ಬರುವವು – ತೆರಿಗೆ ತಲೆಹೊರೆಯು || ೪ ||

ಒಕ್ಕಲಿಗರು ನೀವು ಕೇಳಿರೊ | ಲೆಖ್ಖವಿಲ್ಲದ ತೆರಿಗೆ ಬರುವುದು |
ಹಕ್ಕಿಯಂತೆ ಹಾರಾಡಬೇಕು – ಹಲವು ಪ್ರಾಣಿಗಳು || ೫ ||

ಕಾಲಧೂತರ ತೆರದಿ ಪ್ರಜೆಗಳ | ಮೂಲದ್ರವ್ಯವ ತೆಗೆದುಕೊಂಬರು |
ಗಾಲಿಗಿಟ್ಟ ಕಬ್ಬಿನಂದದಿ – ಹರೆವ ಲೋಕವನು || ೬ ||

ಹರನನೆನೆವರು ಕಷ್ಟಬಂದರೆ | ಸಿರಿಯು ಬಂದಾಗ ಶಿವನನೆನೆಯರು |
ಶರಿರದಂಡಿಸಿ ಬುಡಿವೆನೆನ್ನುತ – ಶಿರವತೂಗುವರು || ೭ ||

ಇಕ್ಕಲೊಲ್ಲರು ಇರುವ ಕಾಲದಿ | ಇಲ್ಲದಿರೆ ಶಿವಕೊಡ ನೀಡೆನೆಂಬರು |
ತಕ್ಕ ಮನುಜರ ಭಕ್ತಿಹೀಗೆಯು – ಇಕ್ಕೊ ಮನವಿಲ್ಲ || ೮ ||

ಗೌಡಗುತ್ತಿಗೆ ಮಾಳ್ಪರೆಲ್ಲರು | ಗಿಡವು ಗೆಡ್ಡೆಯ ಸೇರಬೇಕು |
ಮಡದಿ ಮಕ್ಕಳು ಸೆರೆಯ ಬೀಳುವ – ದಿನವು ಮುಂದಿಹುದು || ೯ ||

ಬಡವರಾಗಿರೆ ಬಿಟ್ಟಬೇಗರ | ಒಡವೆ ಉಳ್ಳಗೆ ದಂಡದೋಷವು |
ಗುಡಿಯ ಬದುಕನು ಮಾರಿದಾತಗೆ – ಬಿಡದು ಕೊಲೆಮುಂದೆ || ೧೦ ||

ದುಡ್ಡುಗಳಿಸಿ ಬಡ್ಡಿಹಾಕಲು | ದೊಡ್ಡವನು ತಾನಾಗಿ ಬೆಳೆವನು |
ಹೆಡ್ಡಮನುಜರು ಕೆಡುವಕಾಲಕೆ – ಬಡ್ಡಿಗಿನ್ನಾರು || ೧೧ ||

ಚೆನ್ನಬಸವನ ಕಾಲಜ್ಞಾನಪ | ಭಿನ್ನವಿಲ್ಲದೆ ಕೇಳಿ ಶರಣರು |
ಹೊನ್ನಿಗೊಂದು ರೊಟ್ಟವಿಕ್ರಯ – ಇನ್ನು ಹಂಪೆಯಲಿ || ೧೨ ||

ಉರಿದು ಮುಕ್ಕಿ ಲೋಕವಾಳಿದ | ದೊರೆಗೆ ಇನ್ನು ಮರಣ ತಪ್ಪದು |
ಹರನು ಮುನಿದರೆ ಕಾಲಗಳಿಗೆಲಿ – ಒರಗಬೇಕಿನ್ನು || ೧೩ ||



ಆರು ಕೋಟಿ ಬಲವು ಇರಲು । ಮಾರಿಗಡ್ಡವೆ ಮರಣ ಕಾಲಕೆ ।
ಊರತುಂಬ ಬಲವು ಇರಲು–ಆರು ತಡೆವವರು ॥ ೧೪ ॥

ತುರುಕರಾಳಿಕೆ ತೀರೊ ಕಾಲಕೆ । ಹರಿಯ ವಂಶದ ಅರಸು ಬರುವನು ।
ಮೊರೆವ ವ್ಯಾಘ್ರನ ಮುರಿದು ಮರ್ತ್ಯಕೆ–ದುರುಗಿ ಬಂದಾತೆ ॥ ೧೫ ॥

ಖಾನರಾಳಿಕೆ ತೀರೊ ಕಾಲಕೆ । ಭಾನು ವಂಶದ ನೃಪನು ಬರುವನು ।
ದಾನಧರ್ಮದ ಹೊಲಬನರಿಯದ–ಶ್ವಾನಬಂದಾತೆ ॥ ೧೬ ॥

ಕೋಟಿಬಲದ ತ್ರಾಣದಿಂದಲಿ । ದಾಟಲಳವೆ ವಿಧಿಯ ಬರಹವ ।
ಆಟ ಮುಗಿವ ಕಾಲ ಬಂದರೆ ತನ್ನವರೆ ವೈರಿಗಳು ॥ ೧೭ ॥

ಅಷ್ಟಗಿರಿಯನು ಹೊಡೆದ ಉಳಿಯನು । ಕುಟ್ಟಿಹೊಡೆವುದು
ಚಮ್ಮಟಿಕೆಯಲ್ಲವೆ ।
ಕೃಷ್ಣ ತನಯಗೆ ಮರಣ ತಪ್ಪಿತೆ–ದ್ರಿಷ್ಟಿಯೊಳು ಶಿವನ ॥ ೧೮ ॥

ಕರಿಯನಾಮದ ಪುರವ ಕಟ್ಟುವ । ಸೆರೆಯ ಹೊಡೆವನು ಸಕಲ ಲೋಕವ ।
ಉರಿವ ಜ್ಯೋತಿಯ ತೈಲವಿಲ್ಲದೆ–ಉರಿವಲ್ಲಿ ಪರಿಯಂತ * ॥ ೧೯ ॥

ಇಟ್ಟ ಅಂಬಿಲಿ ವಾಲಿ ಅಳಿಯನೆ । ಎಷ್ಟು ಸಾಹಸಿ ದಶಕಂಠನಳಿಯನೆ ।
ಅಷ್ಟಕೋಟಿಯ ಬಲದ ಕೌರವ–ಕೆಟ್ಟನಂದು ॥ ೨೦ ॥

ಅಣ್ಣ ಖಾನರ ಆಟವಳಿಯಲು । ಸಣ್ಣ ನಾಮದ ಅರಸು ಬರುವನು ।
ಎಣ್ಣೆ ಬತ್ತಿಗೆ ಹಾರವಾಡುವ–ಸಣ್ಣಿಸುತ ಲೋಕವನು ॥ ೨೧ ॥

ಮಂಡೆಕಾಣಿಕೆ ಸುಂಕ ಎತ್ತುವ । ಪುಂಡ ಪೋಟಗೆ ಬದುಕನೀವುತ ।
ದಂಡ ದೋಷದಿ ಮುರಿವ ಲೋಕದಿ–ಖಂಡವುಳ್ಳವರ ॥ ೨೨ ॥

ಎಷ್ಟು ಸಾವಿರ ರಾತ್ರಿಯಾದರು । ಶ್ರೀ ಗಿರೀಶ್ವರ ಮುನಿವ ಕಾಲಕೆ ।
ಇಟ್ಟ ಬಾಣಕೆ ಮರಣವಾಗುವ–ಸಿದ್ಧರಾಮಯ್ಯ * ॥ ೨೩ ॥

---

* ಈ ಪದ್ಯಗಳು (ಗ, ಚ.) ಪ್ರತಿಗಳಲ್ಲಿ ಮಾತ್ರ ಇವೆ.

ಒದಗಿ ಬರುವದು ಕಾಲಸೂಚನೆ । ಬವಲು ರಾಯ ವಸಂತ ಬಂದರೆ ।
ಮೊದಲ ಆಳಿಕೆ ಮುಗಿದು ಬರುತಿದೆ–ಆರು ವರುಷದಲಿ ॥ ೨೪ ॥

**ವಚನ** ॥ ಹೀಗೆಂದು ಚೆನ್ನಬಸವಣ್ಣನವರು ರುದ್ರಮುನಿಸ್ವಾಮಿ ಸಿದ್ಧರಾಮಯ್ಯನವರಿಗೆ ಪೇಳಿ ತಮ್ಮ ಕಾಲಜ್ಞಾನ ವಚನವು ಸಂಪೂರ್ಣ ಮಾಡುತಿರ್ದರದೆಂತೆನೆ.

### ಭಾಮಿನೀ ಷಟ್ಪದಿ

ಗುರುವೆ ಕೇಳಿ ರುದ್ರಮುನಿಗಳೆ ।
ಕರುಣ ಯತಿವರ ಸಿದ್ಧರಾಮಯ್ಯ ।
ಹರನ ಕೃಪೆಯೊಳು ಒರೆದು ಪೇಳ್ವೆವು ನರರ ಸುಖದುಃಖವನು ॥
ಇರುಳು ಕುಡ ಸ್ವಪ್ನದಂದದಿ ।
ಅರುಹುದೋರಲು ಈಗ ದೇಶಕೆ ।
ಬರೆದ ಲಿಪಿಗಳ ತೆರದಿ ಪೇಳ್ವೆವು ಅನಂತ ಬಾಧಕವ ॥ ೧ ॥

ಧರೆಯು ಸೃಷ್ಟಿಕರವು ಯಾರದು ।
ಹರನು ಹರಿಯು ಬ್ರಹ್ಮರದಲ್ಲದೆ ।
ನರರು ಧರ್ಮವ ತಪ್ಪಿ ನಡೆಯಲು ಈ ತೆರನ ಮಾಡುವರು ॥
ಹರನ ನಿಂದಿಸಿ ಗುರುವ ಬೈವರು ।
ಹಿರಿಯರೊಂದಿಲಿ ಹಾಸ್ಯಸಮರಸ ।
ಜರಿದು ನುಡಿದ ಪಾಪ ಕರ್ಮವು ಧರೆಯ ಕಾಡುವದು* ॥ ೨ ॥

ಪಾಪಪುಣ್ಯಗಳರಿತು ಪರ ಸತಿ ।
ರೂಪು ಬೆಡಗನು ನೋಡಿ ಮನಸಂ ।
ತಾಪದೊಳಗೆ ಬಿದ್ದು ಆಕೆಯ ಪಾಪ ಜಗದೊಳಗೆ ॥
ಗೋಪತೀಶನು ಸತಿಯು ಮಾಲೆಯ ।
ಹಾಕಿರುವ ಸುಕೊಲೆಯು ಸಾಲದೆ ।
ಪಾಪಿ ಜನರು ಪರದ್ವಾರಕೆ ಸಿಲ್ಕಿ ಪಾಪಕೊಳಗಹರು* ॥ ೩ ॥

* ಈ ಪದ್ಯಗಳು (ಎ, ಕ.) ಪ್ರತಿಗಳಲ್ಲಿ ಮಾತ್ರ ಇವೆ.



ಭುಂಡ ಸತಿಯರ ನಡೆಯ ಕೇಳಿ ।
ಗಂಡರಿಂದಲಿ ಗರತಿಯಾಗಿಹ ।
ಕಂಡ ನೀಚರಿಗೊಲಿದು ಹರುಷದಿ ಉಂಡು ಒಡನಾಡಿ ॥
ಪಿಂಡ ಹತ್ಯವ ಮಾಡಿ ಕಳೆವರು ।
ರುಂಡೆಮಾಡಿದ ಪಾಪ ಜಗವನು ।
ಕೊಂಡ ಮುಳುಗಿ ನರರ ಬಾಧಿಸ ಭುಂಡದೀನಗಳು ॥ ೪ ॥

ಕಾಲಗಳು ದಿನಮಾನವೆಂಬರು ।
ಮೇಲೆ ತಮ್ಮಯ ನಡೆಯ ಮುಚ್ಚಿಯೆ ।
ಚೆಲುವ ರೂಪಾಗಿರಲು ಸ್ತ್ರೀಯರ ಕಂಡು ಭ್ರಮಿಸುವರು ॥
ಶೀಲ ವ್ರತಗಳ ಪೇಳಿಕೊಂಬರು ।
ನಾಲಿಗೆಯ ತುದಿವಚನದಿಂದಲಿ ।
ಮೇಲೆ ಮಾಡುವ ಕರ್ಮಸಾರವ ಸ್ವಾಮಿ ಶಿವ ಬಲ್ಲ ॥ ೫ ॥

ಆಡುವರು ಬಾಯೊಳಗೆ ಬ್ರಹ್ಮವ
ಮಾಡುವರು ಮಹ ಘೋರ ಪಾಪವ ।
ರೂಢಿಯೊಳಗೆ ಯೋನಿ ಸ್ಥಲಗಳು ಒಂದೆ ಎನ್ನುವರು ॥
ಮೂಢ ಮನುಜರು ಮುಂದುಗಾಣದೆ ।
ಕಾಡಿ ಹೊಲಸಿಗೆ ಹರಿವ ಸೊಣಗಗೆ ।
ಈಡರಾಗಿ ಮೂತ್ರ ಸ್ಥಲದೊಳು ಬಿದ್ದು ಕೆಡುತಿಹರು* ॥ ೬ ॥

ಲೋಕದವರ ನಡೆಯ ಪೇಳಲು ಅ ।
ನೇಕ ಉಂಟು ರುದ್ರಮುನಿಗಳೆ ।
ಸಾಕು ಇಲ್ಲಿಗೆ ಸರ್ವ ಗಣರಿಗೆ ಏಕ ಶರಣಾರ್ಥಿ ॥
ಏಕೊ ದೇವನ ವೀರಶೈವದ
ಲೋಕಭಕ್ತನು ಚೆನ್ನಬಸವನು ।
ಹಾಕಿ ಪೋದ ಕಾಲಜ್ಞಾನವ ನೋಡಿ ತಿಳಿಕೊಳ್ಳಿ ॥ ೭ ॥

* ಈ ಪದ್ಯ (ಎ, ಕ.) ಪತ್ರಿಯಲ್ಲಿ ಮಾತ್ರ ಇದೆ.

ಇಂದು ಹೇಳಿದ ಕಾಲಜ್ಞಾನವು ।
ಮುಂದೆ ಜನರಿಗೆ ದೃಷ್ಟವಾಗದಿರೆ ।
ಇಂದುಧರ ಶಿವ ಶರಣವಾಕ್ಯಕೆ ಕುಂದುಬರದಿಹುದೆ ॥
ಚಂದ್ರಧರನು ಚೆನ್ನಬಸವನು ।
ಒಂದಿನೊಳಗೆ ಇದ್ದ ಕಾರಣ ।
ಬಂದು ಇಳೆಗೆ ಕಾಣುವಂಥ ಬಂಧನವ ಪೇಳಿದೆವು ॥ ೮ ॥

ಧರೆಯೊಳುಂಟಾನೇಕ ಶಾಸ್ತ್ರವು ।
ಒರೆದು ಪೋಗದೆ ಜ್ಞಾನಮಾರ್ಗಕೆ ।
ಶರಣ ಲೀಲಾಕೃತಿಗೆ ದೃಷ್ಟವೆ ಕುರುಹು ಸಾಕ್ಷಿಗಳು ॥
ಒರೆದು ನೋಡಿ ವಾದ ನಿಂದ್ಯಕೆ ।
ಶರಣ ವಾಕ್ಯ ಮಹಾತ್ಮೆ ಇದರೊಳು ।
ಕುರುಹಿನೊಳು ಪುಸಿಯಾಗಿ ಕಂಡರೆ
ಬಸವ ಬರುವುದೆ ಪುಸಿಯೆನ್ನಿ ॥ ೯ ॥

ಉಂಟು ಲೋಕದಿ ಕಾಲಜ್ಞಾನವು ।
ಎಂಟು ತೆರದಲಿ ವರ್ಣಿಸಿರ್ಪರು ।
ಗುಟ್ಟುಮಾಡಿ ಇಟ್ಟರಲ್ಲದೆ ಕಟ್ಟು ಒಡೆದಿಲ್ಲಾ ॥
ಬಟ್ಟಬಯಲನು ಮಾಡಿ ಧರೆಯನು ।
ಮುಟ್ಟಿ ಆಳುವ ಜನರು ನೃಪರಿಗೆ ।
ತಟ್ಟುತಿಹ ತಲೆತಲೆಯ ಪೇಳ್ದೆವು ಒಂದಿಷ್ಟು ತಪ್ಪದಲೆ ॥ ೧೦ ॥

ನಾನಕುರುಹನು ಕಂಡುಕೇಳಿದ ।
ಕಲಿಯ ಮನುಜರು ಹುಸಿಯಿದೆಂದರೆ ।
ಶ್ವಾನ ಜನ್ಮವು ನರಕ ತಪ್ಪದು ಹೀನಮನುಜರಿಗೆ ॥
ಭಾನುಕೋಟಿ ಪ್ರಕಾಶ ಪರಶಿವ ।
ಜ್ಞಾನದೊಳಗೆ ತಾವಿದ್ದ ಕಾರಣ ।
ದೇವಕವಿ ಚೆನ್ನಪ್ಪ ಪೇಳಿದ ಒರೆದು ಸೂಚನೆಯ ॥ ೧೧ ॥



ರುದ್ರಮುನಿ ಸ್ವಾಮಿಗಳೆ ಕೇಳಿ ।
ಸಿದ್ಧರಾಮಯ್ಯಗಳೆ ಕೇಳಿ ।
ಇದ್ದ ಪ್ರಮಥರು ಶರಣರೆಲ್ಲರು ಬಸವನ ಪದುಳದಂಘ್ರಿಯಲಿ ॥
ಸದ್ಯ ನಮಗೆ ವೇಳೆಯಾಯಿತು ।
ಸಭೆಯಕೆಲ್ಲ ಶರಣಾರ್ಥಿ ಎಂದು ।
ಎದ್ದು ನಮಿಸಿದ ಚೆನ್ನಬಸವಯ್ಯ ರುದ್ರಮುನಿ ಗಣಕೆ ॥ ೧೨ ॥

ಕಾರಣಾರ್ಥದ ನೃಪನು ಮುಂದೆ ಕಾ ।
ವೇರಿ ಮಧ್ಯದಿ ಉದಿಪ ಶಾಪಕೆ ।
ಗುರುವೆಕೇಳದರಿಂದ ಎಲ್ಲವ ಕರ್ನಾಟಕ್ಕೆ ಪೇಳಿದೆವು ॥
ಅರುವಿನೊಳಗೆ ತಿಳಿದುಕೊಂಬುದು ।
ಹರ ಶರಣ ಮಹೇಶ ಮಹಿಮರು ।
ಕರುಣದಿಂದೊಲಿದೆನಗೆ ಅಪ್ಪಣೆ ಮಾಡೆಂದ ಚೆನ್ನಣ್ಣಾ ॥ ೧೩ ॥

ಭಸಿತ ರುದ್ರಾಕ್ಷಿಗಳು ಶಿವಲಿಂಗ ।
ಅಸಮ ಷಡಕ್ಷರ ಮಂತ್ರಜ್ಞಾನವ ।
ಮಿಸುಕದಲೆ ಎಡಬಿಡದೆ ಧರಿಸುತ ಕೂಡಿಕೊಂಡಿಹುದು ॥
ಎಸೆವ ಶ್ರೀಗುರು ಲಿಂಗ ಜಂಗಮ ।
ಕುಶಲ ಸೇವೆಯ ಬಿಡದೆ ಭಕ್ತರು ।
ಜಸದಿ ಶಿವಸದ್ಗೋಷ್ಠಿಯಿಂದಿರಿರೆಂದ ಚೆನ್ನಣ್ಣಾ ॥ ೧೪ ॥

**ಶ್ರೀ ಚೆನ್ನಬಸವೇಶ್ವರ ದೇವರ**
**ಕಾಲಜ್ಞಾನ ಸಂಪೂರ್ಣಂ**

---

Scanned with OKEN Scanner

# ನಂಜೇಶನ ಕಾಲಜ್ಞಾನ

## ತ್ರಿಪದಿ

ಕರ್ಮವು ಹೆಚ್ಚುವದು । ಧರ್ಮವು ಮುಳುಗುವದು ।
ಧರ್ಮಿಗಳ ರಾಜ್ಯ ಲೋಪಾಗಿ-ಕಲಿಯುಗದಿ ।
ಕರ್ಮಿಗಳ ಆಟ ನಂಜೇಶ ॥ ೧ ॥

ಯೋಗಿಗಳ ಗತಿಗೆಟ್ಟು । ತ್ಯಾಗಿಗಳ ಸ್ಥಿತಿಗೆಟ್ಟು ।
ಭೋಗಿಗಳ ಆಟ ಹೆಚ್ಚುತ್ತ-ಸ್ತ್ರೀಯರ ।
ಸೋಗವೆ ಹೆಚ್ಚು ನಂಜೇಶ ॥ ೨ ॥

ಸ್ನಾನ ಜಪ ಹೋಮಗಳ । ನೇಮಗಳು ಸಡಿಲ್ಯಾವು ।
ಮಾನವಂ ತೊರೆದು ಮತಿಗೆಟ್ಟು-ಮಾನವರು ।
ಹಾನಿಪೊಂದುವರು ನಂಜೇಶ ॥ ೩ ॥

ಮಾನವಂತರು ಇಲ್ಲ । ದಾನವಂತರು ಸಿಗರು ।
ಜ್ಞಾನವಂತರು ಜಗದಿ ತಾವೆಂದು-ಬೋಧಿಸಿ ।
ಮಾನ ಕಳೆಯುವರು ನಂಜೇಶ ॥ ೪ ॥

ದೇಹಲಿಯ ರಾಜನು । ದೇಹವಿಟ್ಟಂದಿನಿಂ ।
ದೇಹಲಿಯ ರಾಜ್ಯ ನಮಗಿಲ್ಲ-ದೇಶದಿ ।
ದ್ರೋಹವೇ ಹೆಚ್ಚು ನಂಜೇಶ ॥ ೫ ॥

ರಾಜಪುತ್ರರು ತಮ್ಮ । ರಾಜ್ಯವನು ಕಳಕೊಂಡು ।
ಮಾಜಿ ಪೋಗುವರು ಜಗದೊಳಗೆ-ತುರುಕರ ।
ಸೋಜಿಗದ ಆಟ ನಂಜೇಶ ॥ ೬ ॥

ಹೊಸರಾಜ್ಯದಾಸೆಯಿಂ । ಎಸೆವ ಮಂತ್ರಿಯು ತನ್ನ ।
ಹೆಸರಾದ ನೃಪನ ಕೊಲಿಸುತ್ತ ತಾ-ಕಡೆಗೆ ।
ಅಸುನ ಬಿಡುತಿಹನು ನಂಜೇಶ ॥ ೭ ॥



ಮಾನದಿಂ ಘನವಾದ । ಜೈನ ರಾಜ್ಯವು ಕಡೆಗೆ ।
ಮಾನಕ್ಕೆ ಮರೆಯು ತಾನಾಗಿ-ತನ್ನೊಳು ।
ಹಾನಿ ಪೊಂದುವದು ನಂಜೇಶ ॥ ೮ ॥

ತುರುಕರಾಜರು ಸೇರಿ । ಹರನ ಮೂರ್ತಿಗಳೊಡೆದು ।
ಹರನ ಮಂದಿರವ ಕೆಡಹುತ್ತ-ಪಾಪವನು ।
ಅರಿದು ಮಾಡುವರು ನಂಜೇಶ ॥ ೯ ॥

ಮೂರ್ತಿ ಭೇದಕ ರಾಜ । ಕೀರ್ತಿ ಪೊಂದುವನಯ್ಯ ।
ಮೂರ್ತಿ ಭೇದಕರ ಸ್ಥಿತಿಯಡಗಿ-ಜಗದೊಳಗೆ ।
ಸ್ಫೂರ್ತಿಯಡಗುವುದು ನಂಜೇಶ ॥ ೧೦ ॥

ದೇವಮಂದಿರದೊಳಗೆ । ಗೋವುಗಳ ಕೊಲ್ಲುತ್ತ ।
ದೇವ ಮೂರ್ತಿಗಳ ಒಡೆಯುವ-ತುರುಕರ ।
ಪಾವನವ ನೋಡು ನಂಜೇಶ ॥ ೧೧ ॥

ಧನದ ಆಸೆಯ ಪೊಂದಿ । ಮನದಿ ಪಾಪವ ಮಾಡಿ ।
ಘನವಂತ ಮೂರ್ತಿಯುಗಿಯುವ-ತುರುಕರ ।
ಘನತೆಯನು ನೋಡು ನಂಜೇಶ ॥ ೧೨ ॥

ದುರ್ಗುಣೀ ರಾಜನು । ದುರ್ಗವನು ಕಟ್ಟ್ಯಾನು ।
ಮಾರ್ಗ ಬಿಟ್ಟಾನು ಜಗದೊಳಗೆ-ಸಜ್ಜನರ ।
ಕಾರ್ಗತ್ತಲೆಯು ನೋಡು ನಂಜೇಶ ॥ ೧೩ ॥

ರೂಪುಳ್ಳ ಹೆಣ್ಣಿನ । ರೂಪಕ್ಕೆ ಮರುಳಾಗಿ ।
ಪಾಪವನುಮಾಡಿ ತುರುಕ ರಾಜನು-ಕಡೆಗೆ ।
ತಾಪ ಬಿಟ್ಟಾನು ನಂಜೇಶ ॥ ೧೪ ॥

ಪಾಪಿ ಜನರೆಲ್ಲರೂ । ಪಲ್ಲಕ್ಕಿ ಏರ್‍ಯಾರು ।
ಪಾಪ ರಹಿತರು ಪಯಣವಿಟ್ಟಾರು-ಜಗದೊಳಗೆ ।
ಪಾಪವೇ ಹೆಚ್ಚು ನಂಜೇಶ ॥ ೧೫ ॥

ಮತಿಗೆಟ್ಟ ಮಾನವರು । ಗತಿಗೆಟ್ಟು ತಿರುಗುವರು ।
ರುತುಮಾನಕದಲಿ ಬರುವಾಗ–ಲೋಕಕ್ಕೆ ।
ಹಿತವಿಲ್ಲ ನೋಡು ನಂಜೇಶ ॥ ೧೬ ॥

ಹಿರಿದು ಪಾಪವ ಮಾಡಿ । ಹರಿವ ನೀರಲಿ ಮುಳುಗಿ ।
ಹರಹರನೇ ಎಂದು ಕೂಗುತ್ತ–ಬರುತಿರ್ಪ ।
ನರಗುಂಪ ನೋಡು ನಂಜೇಶ ॥ ೧೭ ॥

ಹರಭಕ್ತಿ ತೊರೆಯುತ್ತ । ಪರಹಿಂಸೆ ಮಾಡುತ್ತ ।
ತುರುಕ ಧರ್ಮವನು ಪೊಂದುವ–ಕಾಲದೊಳು ।
ಬರಗಾಲ ಹೆಚ್ಚು ನಂಜೇಶ ॥ ೧೮ ॥

ಪಾಪಿಗಳು ಹೆಚ್ಚುತ್ತ । ಗೋಪುರಗಳಳಿವುತ್ತ
ರೂಪುಳ್ಳ ಹೆಣ್ಣಿನಾಸೆಯಿಂ–ತುರುಕರು ।
ತಾಪಬಟ್ಟಾರು ನಂಜೇಶ ॥ ೧೯ ॥

ಹಂಪೆಯ ರಾಜ್ಯವು । ಕೊಂಪೆಯ ಪಾಲಾಗಿ ।
ಸೊಂಪೆಲ್ಲವಡಗಿ ಪೋದಾಗ–ತುರುಕರ ।
ಸೊಂಪವೇ ಸೊಂಪು ನಂಜೇಶ ॥ ೨೦ ॥

ಹಳ್ಳಿ ಪಟ್ಟಣವಾಗಿ । ಡಿಳ್ಳಿಯಲಿ ಕೊಲೆಯಾಗಿ ।
ತಳ್ಳಿ ಕೋರಾರು ಪೆಚ್ಚುತ್ತ–ಜಗದೊಳಗೆ ।
ಒಳ್ಳಿತನವಿಲ್ಲ ನಂಜೇಶ ॥ ೨೧ ॥

ವಂಗದೇಶದೊಳೊಬ್ಬ । ಅಂಗನೆಯು ಜನಿಸುವಳು ।
ಭಂಗಪಡಿಸುವಳು ಯವನರನು–ದೇಶದ ।
ಇಂಗಿತವನರಿದು ನಂಜೇಶ ॥ ೨೨ ॥

ಪಂಚನದಿ ದೇಶದೊಳು । ಹಂಚಿಕೆಯ ಯತಿವರನು ।
ಹಂಚಿಕೆಯ ತೊರೆದು ಯವನರನು–ನಾಶಿಸುವ ।
ಹೊಂಚು ಹಾಕುವನು ನಂಜೇಶ ॥ ೨೩ ॥



ಸೌರಾಷ್ಟ್ರ ದೇಶದೊಳು । ವೀರಪುತ್ರರು ಸೇರಿ ।
ಘೋರ ಯುದ್ಧವನು ಮಾಡುತ್ತ–ಕೊಲ್ಲುವರು ।
ಶೂರ ತುರುಕರನು ನಂಜೇಶ ॥ ೨೪ ॥

ಕನ್ನಡದ ನಾಡಿನೊಳು । ಹೆಣ್ಣು ಮಕ್ಕಳ ದಂಡು ।
ಸಣ್ಣ ಮಾಡೀತು ಯವನರನು–ಯುದ್ಧದಿ ।
ಬಣ್ಣಿಸಲಳವೆ ನಂಜೇಶ ॥ ೨೫ ॥

ಅರಸು ಮನೆಯವಳೊಬ್ಬ । ಸರಸವಾಡುವ ರಾಣಿ ।
ತುರುಕರನು ಕೊಂದು ರಾಜ್ಯವನು–ಬೆಳೆಸುತ್ತ ।
ಮೆರೆಯುವಳು ಜಗದಿ ನಂಜೇಶ ॥ ೨೬ ॥

ಶಿವನ ಹೆಸರಿನ ರಾಜ । ಯವನ ರಾಜ್ಯವ ಸೆಳೆದು ।
ಯವನರನು ನಾಶಗೊಳಿಸುತ್ತ–ಪಡೆಯುವನು ।
ಭುವನದೊಳು ಕೀರ್ತಿ ನಂಜೇಶ ॥ ೨೭ ॥

ಯವನ ರಾಜ್ಯವು ಪೋಗಿ । ಶಿವನ ರಾಜ್ಯವು ಹೆಚ್ಚಿ ।
ಭುವನದೊಳು ಸೌಖ್ಯ ಪೆಚ್ಚುತ್ತ–ಪಾರುವರ ।
ಪಾವನದ ರಾಜ್ಯ ನಂಜೇಶ ॥ ೨೮ ॥

ಹಾರುವರ ರಾಜ್ಯದೊಳು । ತೋರುವುದು ಬರಗಾಲ ॥
ಪಾರಾಗಿ ಪ್ರಜೆರು ಗತಿಗೆಟ್ಟು–ಜಗದೊಳಗೆ ।
ಕ್ರೂರರಾಗುವರು ನಂಜೇಶ ॥ ೨೯ ॥

ದೇಶವಾಳುವನೊಬ್ಬ । ಕಾಸನೆತ್ತುವನೊಬ್ಬ ।
ಕಾಸಿಗೆ ಕಾಸು ಗಂಟಿಕ್ಕಿದ–ಹಣವು ।
ನಾಶಪೊಂದುವದು ನಂಜೇಶ ॥ ೩೦ ॥

ವೈದಿಕಾಚಾರದೊಳು । ಸಾಧುಮಾರ್ಗಂಗಳೊಳ್ ।
ಹಾದಿದೋರುತ್ತ ಸುಖಿಸುವರು–ಹಾರುವರ ।
ಆದರ ಹೆಚ್ಚು ನಂಜೇಶ ॥ ೩೧ ॥

ಕುರುಬ ಜಾತಿಯೊಳೊಬ್ಬ । ಅರಸಿ ಆಳುವಳಯ್ಯ ।
ಹರ ಭಕ್ತಿಯರಿದು ನಡೆಯುವಳು-ಮಾಲವವಿ ।
ಹರ ಭಕ್ತಿ ಹೆಚ್ಚು ನಂಜೇಶ ॥ ೩೨ ॥

ಹಾರುವರ ರಾಜನು । ಕ್ರೌರತನವನು ಮಾಡಿ ।
ಘೋರಪಾಪವನು ಮಾಡುತ್ತ-ಕಡೆಯೊಳು ।
ಸೇರುವನು ಗಿರಿಯ ನಂಜೇಶ ॥ ೩೩ ॥

ಹಾರುವರ ರಾಜ್ಯವು । ತೋರಿ ಅಡಗುವದಯ್ಯ ।
ಶೂರತನವೆಲ್ಲ ಹಾಳಾಗಿ-ಪರರಾಜ್ಯ ।
ಸೇರಿ ಪೋಗುವದು ನಂಜೇಶ ॥ ೩೪ ॥

ಪರದೇಶ ರಾಜರು । ಪಡೆಯುವರು ರಾಜ್ಯವನು ।
ಪರಿಪರಿಯ ಯುಕ್ತಿ ತೋರುತ್ತ-ಜಗದೊಳಗೆ ।
ಮೆರೆಯುವರು ನೋಡು ನಂಜೇಶ ॥ ೩೫ ॥

ಜಗಕೆ ಜಾಳಿಗೆ ಸುತ್ತಿ । ನಗಕೆ ತಂತಿಯ ಕಟ್ಟಿ ।
ಬಿಗಿಬಿಗಿದು ಭೂಮಿ ನಗುವಾಗ-ಜಗದೊಳಗೆ ।
ನಗೆಯಾಟ ನೋಡು ನಂಜೇಶ ॥ ೩೬ ॥

ಎತ್ತು ಕುದುರೆಗಳಿಲ್ಲ । ಎತ್ತಿ ಪಿಡಿಯುವರಿಲ್ಲ ।
ಒತ್ತಿ ಎಳೆಯುವರು ಯಾರಿಲ್ಲದಾ-ರಥವು ।
ಒತ್ತಿ ನಡೆದೀತು ನಂಜೇಶ ॥ ೩೭ ॥

ಸ್ವರ್ಗದಾ ರಥ ಮುಂದೆ । ಭೋರ್ಗರೆದು ಬರುತಿಹುದು ।
ಕಾರ್ಗತ್ತಲೆಯ ಭೀತಿ ಇಲ್ಲದಲೆ-ಆ ರಥವು ।
ಮಾರ್ಗ ಹಿಡಿದೀತು ನಂಜೇಶ ॥ ೩೮ ॥

ತೊತ್ತಿಗೆ ಕಪ್ಪವನು । ಎತ್ತುತ್ತ ರಾಯನು ।
ಸುತ್ತಲಿನ ರಾಜ್ಯವಾಳುವನು-ಜನರಲ್ಲಿ ।
ಸ್ತುತ್ಯನಾಗುವನು ನಂಜೇಶ ॥ ೩೯ ॥



ರಾಜನೇ ಕ್ಷತ್ರಿಯನು । ರಾಜನೇ ವೈಶ್ಯನು ।
ರಾಜನೇ ಶೂದ್ರತಾನಾಗಿ-ರಾಜನು ।
ರಾಜ್ಯವಾಳುವನು ನಂಜೇಶ ॥ ೪೦ ॥

ಆಳಾದಾನರಸನು । ಅರಸು ಆಳಾದನು ।
ಬಾಳುವಂಥವರ ಬದುಕು ಹಾಳಯ್ಯ-ಜಗದಾಟ ।
ಹೇಳುವದು ಕಷ್ಟ ನಂಜೇಶ ॥ ೪೧ ॥

ಹಸರುಗಣ್ಣಿನ ರಾಯ । ದಶದಿಕ್ಕವಾಳ್ಯಾನು ।
ಹೊಸ ಹೊಸದ ಸೋಗುದೋರುತ್ತ-ಜನರಲ್ಲಿ ।
ಪೆಸರು ಪೊಂದುವನು ನಂಜೇಶ ॥ ೪೨ ॥

ತಂತ್ರಮಂತ್ರಗಳಡಗಿ । ಸಂತಸಾಧುಗಳಳಿದು ।
ಯಂತ್ರದೊಡೆಯನ ಶಾಸನ-ವೈಚಿತ್ರ್ಯ ।
ತಂತ್ರ ನೋಡಯ್ಯ ನಂಜೇಶ ॥ ೪೩ ॥

ಕಾಲ ತಿಳಿಸುವ ಯಂತ್ರ । ಪಾಲು ಕಡೆಯುವ ಯಂತ್ರ ।
ನೂಲುವಮಾಡುವದು ಜಗದೊಳಗೆ-ಸೊಗಸಾದ ।
ಮೇಲಾದ ಯಂತ್ರ ನಂಜೇಶ ॥ ೪೪ ॥

ವಸ್ತ್ರ ನೇಯುವ ಯಂತ್ರ । ಶಾಸ್ತ್ರ ಬರೆಯುವ ಯಂತ್ರ ।
ಶಸ್ತ್ರ ಮಾಡುವದು ಹೊಸ ಯಂತ್ರ-ಯಂತ್ರಗಳ ।
ಚಿತ್ರವನು ನೋಡು ನಂಜೇಶ ॥ ೪೫ ॥

ರಥವ ನಡೆಸುವ ಯಂತ್ರ । ಕಥೆಯ ಪೇಳುವ ಯಂತ್ರ ।
ಪಥಿಕ ಜನರನ್ನು ಒಯ್ಯುವಾ-ಯಂತ್ರ
ಕಥೆಯನೇನೆಂಬೆ ನಂಜೇಶ ॥ ೪೬ ॥

ಗೀತ ಪಾಡುವ ಯಂತ್ರ । ಮಾತನಾಡುವ ಯಂತ್ರ ।
ಗೀತ ಕಟ್ಟುವದು ಪ್ರತಿಯಂತ್ರ-ಜಗದೊಳಗೆ ।
ಖ್ಯಾತಿ ಹೊಂದುವದು ನಂಜೇಶ ॥ ೪೭ ॥

ರೋಗ ಪೇಳುವ ಯಂತ್ರ । ಯೋಗ ತೋರುವ ಯಂತ್ರ ।
ಸಾಗರದ ನೆಲೆಯ ತೋರಿಸುವ-ಪೊಸ ಯಂತ್ರ ।
ನೇಗಿಲದ ಯಂತ್ರ ನಂಜೇಶ ॥ ೪೮ ॥

ನೆಲದ ಮೇಲಿನ ರಥವು । ಜಲದ ಮೇಲಿನ ರಥವು ।
ಬಲವಾದ ರಥವು ಗಗನದೊಳು-ನಡೆಯುವ ।
ಛಲವನೇನೆಂಬೆ ನಂಜೇಶ ॥ ೪೯ ॥

ಹುಲಿಗೆ ಅಂಜದ ಜನರು । ಇಲಿಗೆ ಅಂಜುವರಯ್ಯ ।
ಬಲವಾಗಿ ರೋಗ ಕೊಲುವಾಗ-ಜನರಲ್ಲಿ ।
ಸುಳಿದಾಟವಿಲ್ಲ ನಂಜೇಶ ॥ ೫೦ ॥

ಗಂಟಿನ ರೋಗವು । ಎಂಟು ದಿಕ್ಕಿಗೆ ಹಬ್ಬಿ ।
ಗಂಟಲಿಗೆ ಗಾಣ ತಂದಾಗ-ಲೋಕಕ್ಕೆ ।
ಕಂಟಕವು ಹೆಚ್ಚು ನಂಜೇಶ ॥ ೫೧ ॥

ದೊರೆಗೆ ಅಂಜದ ಜನರು । ಕುರಿಗೆ ಅಂಜುವರಯ್ಯ ।
ಕರೆಕರೆದು ಧರ್ಮ ಕೆಡಿಸುವ-ರಾಯನು ।
ಇರುತಿರಲು ನೋಡು ನಂಜೇಶ ॥ ೫೨ ॥

ಖ್ಯಾತಿಗಾಸೆಯ ಪಟ್ಟು । ಜಾತಿ ನೀತಿಯ ಬಿಟ್ಟು ।
ಪಾತಕಕೆ ತಮ್ಮ ಮನಗೊಟ್ಟು-ಜನರೆಲ್ಲ ।
ಭೀತಿ ಪೊಂದುವರು ನಂಜೇಶ ॥ ೫೩ ॥

ಹೊಟ್ಟೆಗಿಲ್ಲದೆ ಜನರು । ಬಟ್ಟೆಯೊಳು ಬೀಳುತಿರೆ ।
ಅಟ್ಟಹಾಸದಿ ರಾಯನಿರುತಿರಲು-ಜನರೆಲ್ಲ ।
ಕಷ್ಟಪಡುತಿಹರು ನಂಜೇಶ ॥ ೫೪ ॥

ಮೂಡಣದಿ ಘನತಾರೆ । ಒಡೆದು ಮೂಡುತ ಸರಿದು ।
ಪಡುವಣಕೆ ಸೇರಿ ಬೈಲಾಗಿ-ರಾಯರ ।
ಗಡಬಿಡಿಯ ನೋಡು ನಂಜೇಶ ॥ ೫೫ ॥



ಕ್ಷೇತ್ರ ಯಾತ್ರೆಗಳಲ್ಲಿ । ಜಾತ್ರೆ ನಿಬ್ಬಣ ಹೆಚ್ಚು ।
ಮಾತೃವಿಗೆ ಮಗನು ಅರಿಯಾಗಿ-ಹಾದರದ ।
ಖ್ಯಾತಿಯೇ ಹೆಚ್ಚು ನಂಜೇಶ ॥ ೫೬ ॥

ಆದರವು ಸರಿಯುವದು । ಹಾದರವು ಹೆಚ್ಚುವದು ।
ಮಾದಿಗರ ಮೂಲ ಗುರುವಾಗಿ-ಬರುವಾಗ ।
ಖೇದವು ಜಗದಿ ನಂಜೇಶ ॥ ೫೭ ॥

ಆಟ ಪಾಟಗಳೆಲ್ಲ । ಕೂಟದೊಳ್ಬೆರೆತಿಹವು ।
ನೋಟ ಬೇರವರ ನುಡಿ ಬೇರೆ-ಸ್ತ್ರೀಯರ ।
ಆಟವೇ ಆಟ ನಂಜೇಶ ॥ ೫೮ ॥

ತೊತ್ತು ಮಾಡಿದ ತಪ್ಪು । ಎತ್ತಿ ಪಿಡಿವರು ಜನರು ।
ಅತ್ತೆ ಮಾಡಿದ ತಪ್ಪು ಅಳಿಯನಿಗೆ-ಸರಿದೋರಿ ।
ಮುತ್ತಿ ಮುಚ್ಚುವರು ನಂಜೇಶ ॥ ೫೯ ॥

ದೇವಸೇವೆಗೆ ಬಿಟ್ಟು । ಹೂವು ಹಾದರಕಿಟ್ಟು ।
ಸಾವು ಸಾವೆಂದು ಕೂಗುವ-ಮಾನವರು ।
ಜೀವ ಬಿಡುತಿಹರು ನಂಜೇಶ ॥ ೬೦ ॥

ಈಶ ಕಾರ್ಯಕ್ಕೊಂದು । ಕಾಸನಾದರು ಕೊಡರು ।
ವೇಸಿಯರ ಸಂಗಮಾಡುತ್ತ-ಕೊಡುತಿಹರು ।
ಸಾಸಿರಪೊನ್ನು ನಂಜೇಶ ॥ ೬೧ ॥

ಒಕ್ಕಲಿಗರೆಲ್ಲರೂ । ಬಿಕ್ಕಿ ಬೇಡುವರಯ್ಯ ।
ಮುಕ್ಕಣ್ಣ ಶಿವನ ದಯತಪ್ಪಿ-ಜಗವೆಲ್ಲ ।
ದುಃಖಮಯವಕ್ಕು ನಂಜೇಶ ॥ ೬೨ ॥

ಸಾಧುಗಳು ತಾವೆಂದು । ಓದಿ ವೇದಾಂತವನು ।
ಹಾದರಕೆ ಹಾದಿದೋರುತ್ತ-ಜನರನ್ನು ।
ಹಾದಿ ಬಿಡಿಸುವರು ನಂಜೇಶ ॥ ೬೩ ॥

ಹತ್ತಿ ಮಾರವು ಜಗಕೆ । ಎತ್ತಿ ಚಿನ್ನವ ಕೊಟ್ಟು ।
ಕುತ್ತಿ ಗೂರಲವನು ತಂದಾಗ-ಮಾನವರು ।
ಸತ್ತು ಪೋಗುವರು ನಂಜೇಶ ॥ ೧೪ ॥

ಪಾಲು ನೀರುಂಗೂಡಿ । ಶೀಲವಿಲ್ಲದೆ ಸವಿದು ।
ಲೋಲಾಡಿ ಜಗದಿ ಜನರೆಲ್ಲ-ಮುಂದಿನ್ನು ।
ಕಾಲನ ಪಾಲು ನಂಜೇಶ ॥ ೧೫ ॥

ಲಿಂಗಾಂಗಿ ಜನರೆಲ್ಲ ಲಿಂಗ ಜಾಗವ ತೊರೆದು ।
ಲಿಂಗ ಹೀನರ ಸಂಗಮಾಡುತ್ತ-ಜಗದೊಳು ।
ಭಂಗಬಟ್ಟಾರು ನಂಜೇಶ ॥ ೧೬ ॥

ವಿರಕ್ತ ಮಠದೊಳಗೆ । ಜಾರತನ ಹೆಚ್ಚುವದು ।
ಪರಿಪರಿಯ ವೇಷಧರಿಸುತ್ತ-ಜನರನ್ನು ।
ಮರುಳುಮಾಡುವರು ನಂಜೇಶ ॥ ೧೭ ॥

ಜಾತಿ ಸಂಕರವಾಗಿ । ನೀತಿಮಾರ್ಗವು ಪೋಗಿ ।
ಜಾತಿ ನೀತಿಗಳನ್ನು ತೊರೆಯುತ್ತ-ಜನರೆಲ್ಲ ।
ಭೀತಿ ಪೊಂದುವರು ನಂಜೇಶ ॥ ೧೮ ॥

ಒಂದು ಜಾತಿಯ ವರ ಮ- । ತ್ತೊಂದು ಜಾತಿಯ ಕನ್ಯೆ ।
ಒಂದಾಗಿ ಕೂಡಿ ಲಗ್ನವಾಗುವ-ಜನರ ।
ಹೊಂದಿಕೆಯ ನೋಡು ನಂಜೇಶ ॥ ೧೯ ॥

ಪಂಥವನು ತೊರೆಯುತ್ತ । ಅಂತ್ಯಜಳ ಕನ್ಯೆಯನು ।
ಸಂತಸದಿ ಲಗ್ನವಾಗುವ-ವಿಪ್ರನ ।
ಪಂಥವನು ನೋಡು ನಂಜೇಶ ॥ ೨೦ ॥

ವೈಶ್ಯ ಜಾತಿಯು ನೊಬ್ಬ । ವೇಸಿಯಳ ಕನ್ಯೆಯನು ।
ಸಾಸಿರ ಪೊನ್ನ ನೀಯುತ್ತ-ಲಗ್ನದ ।
ಮೋಸ ಪೊಂದುವನು ನಂಜೇಶ ॥ ೨೧ ॥



ದ್ವಿಜನ ಕನ್ನಿಕೆಯನ- । ತ್ಯಜಗೆ ಲಗ್ನವ ಮಾಡಿ ।
ಸ್ವಜನರೆಲ್ಲರು ಕೂಡಿ ಭುಂಜಿಪರು-ಜಗದೊಳಗೆ ।
ನಿಜದಿಂದ ನೋಡು ನಂಜೇಶ ॥ ೨೨ ॥

ಆವ ಕುಲದವನಿರಲಿ । ಆವ ಕುಲದವಳಿರಲಿ ।
ಆವ ಕುಲದವನು ಗುರುವಿರಲಿ-ಲಗ್ನದ ।
ಭಾವನೆಯು ಹೆಚ್ಚು ನಂಜೇಶ ॥ ೨೩ ॥

ಶಾಕ ಪಾಕಿಗಳೆಲ್ಲ । ಏಕ ಧರ್ಮದಿ ಕೂಡಿ ।
ಶಾಕ ಪಾಕಿಗಳ ಲಗ್ನಗಳ-ಜಗದೊಳಗೆ ।
ಏಕಮಾಡುವರು ನಂಜೇಶ ॥ ೨೪ ॥

ಒಂದು ಹೆಣ್ಣಿಗೆ ಹ- । ನ್ನೊಂದು ಲಗ್ನವ ಮಾಡಿ ।
ತಂದೆ ಪಣವನು ಸೆಳೆದು ತರುವಾಗ-ದೇಶಕ್ಕೆ ।
ಬಂಧನವು ಬರ್ಕು ನಂಜೇಶ ॥ ೨೫ ॥

ತಂದೆ ಮಗ ಒಂದಾಗಿ । ಒಂದು ಹೆಣ್ಣನು ತಂದು ।
ಕಂದನ ಪಡೆದು ಮುದ್ದಿಟ್ಟು-ಬರುತಿರ್ಪ ।
ಚಂದವನು ನೋಡು ನಂಜೇಶ ॥ ೨೬ ॥

ಚಾತುರ್ಯ ಹೆಚ್ಚಾಗಿ । ಜ್ಯೋತಿಷ್ಯ ಸಟೆಯಾಗಿ ।
ಮಾತುಮಾತಿಗೆ ಕಲಹಮಾಡುತ್ತ-ಜನರಲ್ಲಿ ।
ಭೀತಿಯು ಇಲ್ಲ ನಂಜೇಶ ॥ ೨೭ ॥

ಸಣ್ಣ ಮಾಗಿನ ಹೆಣ್ಣು । ಕಣ್ಣುಗಳು ಕಪ್ಪಾಗಿ ।
ಬಣ್ಣ ಬಿಳಿದಾಗಿ ಜನಿಸಿಯೇ-ರಾಯರ ।
ಸಣ್ಣ ಮಾಡೀತು ನಂಜೇಶ ॥ ೨೮ ॥

ಹಬ್ಬ ತಿಥಿಗಳ ತೊರೆದು । ಉಬ್ಬಿರೊಕ್ಕವ ಮಾಡಿ ।
ನಿಬ್ಬಣಕೆ ಹಣವ ಕಳೆಯುತ್ತ-ಜನರೆಲ್ಲ ।
ಬೊಬ್ಬೆ ಹೊಡೆದಾರು ನಂಜೇಶ ॥ ೨೯ ॥

ದುಡ್ಡು ಕೊಟ್ಟಣ್ಣನು । ಬಡ್ಡನಾಗುವನಯ್ಯ ।
ಬಡ್ಡಿಗೆ ಬಡ್ಡಿ ಗಂಟಿಕ್ಕಿದಾ-ಹಣವು ।
ದೊಡ್ಡರಾಯನ ಪಾಲು ನಂಜೇಶ ॥ ೮೦ ॥

ಹಣವ ಕೂಡಿಸಿದಣ್ಣ । ಗುಣಕೆಟ್ಟು ನಡೆದಾನು ।
ಫಣಕಾಸೆ ಮಾಡಿ ಜಗದೊಳಗೆ-ಪೋಗುವನು ।
ಹೆಣದಂತೆ ಕಡೆಗೆ ನಂಜೇಶ ॥ ೮೧ ॥

ಜಾರತನ ಮುಂದಿನ್ನು । ಚೋರಿನಿಂದಲಿ ಬರ್ಕು ।
ಕಾರುಮಳೆ ಕಾರುಬೆಳೆ ಬರುತಿರಲು-ಜನರಲ್ಲಿ ।
ಪಾರವೇ ಇಲ್ಲ ನಂಜೇಶ ॥ ೮೨ ॥

ಗಂಡಗೆ ಮದ್ದಿಕ್ಕಿ । ಮಿಂಡಗೆ ಮುದ್ದಿಕ್ಕಿ ।
ತಂಡತಂಡಾಗಿ ತಿರುಗುವ-ನಾರಿಯರ ।
ತುಂಡತನವನು ನೋಡು ನಂಜೇಶ ॥ ೮೩ ॥

ಪಡೆದ ಶಿಶುವಂ ತೊರೆದು । ಗಡನೆ ಮಿಂಡನ ಸೇರಿ ।
ಕಡುಬು ಕಜ್ಜಾಯ ಮೆಲ್ಲುವ-ಹೆಣ್ಣಿನ ।
ಸಡಗರೇನೆಂಬೆ ನಂಜೇಶ ॥ ೮೪ ॥

ಗಂಡಹೆಂಡರ ಜಗಳ । ಮಿಂಡ ಹರಿದಾನಯ್ಯ ।
ಗಂಡ ಹೋಳಿಗೆ ಮಾಡಿ ಮಿಂಡನಿಗೆ—ಕೊಡುವಾಗ ।
ಹೆಂಡರಾಟವೇ ಆಟ ನಂಜೇಶ ॥ ೮೫ ॥

ಫಲವು ವೃಕ್ಷದೊಳಿಲ್ಲ । ಜಲವು ನೆಲದೊಳಗಿಲ್ಲ ।
ಕಲಹಪೆಚ್ಚುತ್ತ ಬರುವಾಗ-ಜನರಲ್ಲಿ ।
ಬಲವಿಲ್ಲ ನೋಡು ನಂಜೇಶ ॥ ೮೬ ॥

ಧರ್ಮ ಸಂಕರವಾಗಿ । ಕರ್ಮಗಳು ಲೋಪಾಗಿ ।
ಧರ್ಮ ತತ್ವಗಳೆಲ್ಲ ಪೋಗುವವು-ಜನರ ದು- ।
ಷ್ಕರ್ಮವನು ನೋಡು ನಂಜೇಶ ॥ ೮೭ ॥



ಧರ್ಮಕ್ಕೆ ಬೆಲೆಯಿಲ್ಲ । ಕರ್ಮಕ್ಕೆ ಬೆಲೆ ಹೆಚ್ಚು ।
ಧರ್ಮ ಮಾರ್ಗವನು ಬಿಡುತಿರ್ಪ-ಕಾಲದ ।
ಮರ್ಮವೇನೆಂಬೆ ನಂಜೇಶ ॥ ೮೮ ॥

ಚರ್ಮ ಮಾರುವ ವಿಪ್ರ । ಧರ್ಮ ಕೆಡಿಸುವ ರಾಯ ।
ಮರ್ಮವಿಬ್ಬರದು ಒಂದಾಗಿ-ಜಗದೊಳಗೆ ।
ಧರ್ಮದ ಲೋಪ ನಂಜೇಶ ॥ ೮೯ ॥

ಮಂತ್ರ ಬೋಧನೆಯಿಲ್ಲ । ತಂತ್ರಗಳ ಕಥೆಯಿಲ್ಲ ।
ಯಂತ್ರಗಳ ಆಟ ಜಗಕೆಲ್ಲ ದು-ರ್ಜನರ ।
ತಂತ್ರವೇ ಹೆಚ್ಚು ನಂಜೇಶ ॥ ೯೦ ॥

ಶಕ್ತಿ ಆಟವು ಇಲ್ಲ । ಯುಕ್ತಿ ಆಟವು ಹೆಚ್ಚು ।
ಭಕ್ತಿಯ ಸುಳಿವು ಜಗಕಿಲ್ಲ-ಜನರಲ್ಲಿ ।
ಮುಕ್ತಿಯು ಲೋಪ ನಂಜೇಶ ॥ ೯೧ ॥

ವೀರಶೈವರ ಧರ್ಮ । ಪಾರುಗಾಣದೆ ಮುಂದೆ ।
ಬೇರೆ ಬಗೆಯಾಗಿ ಜಗದೊಳಗೆ-ಪರಧರ್ಮ ।
ಸೇರಿ ಪೋಗುವರು ನಂಜೇಶ ॥ ೯೨ ॥

ಹೆಣ್ಣು ಮಣ್ಣಿಗೆ ರೊಕ್ಕ । ಮುನ್ನ ಕೊಡುತಲಿ ಜನರು ।
ಹಣ್ಣು ಹಣ್ಣಾಗಿ ತಿರುಗುವ-ಮುಂದಿನ ।
ಬಣ್ಣ ನೋಡಯ್ಯ ನಂಜೇಶ ॥ ೯೩ ॥

ಜೈನ ಬೌದ್ಧರು ಇಲ್ಲ । ಮೌನಧಾರಿಗಳಿಲ್ಲ ।
ಜ್ಞಾನಿಗಳ ಸುಳಿವು ಜಗಕಿಲ್ಲ-ನೋಡಯ್ಯ ।
ಮಾನವರ ಆಟ ನಂಜೇಶ ॥ ೯೪ ॥

ಸುಗ್ಗಿ ಕಾಲದಿ ಜನರು । ಹಿಗ್ಗಿ ಧಾನ್ಯಗಳೊಕ್ಕಿ ।
ತಗ್ಗಿನಲ್ಲಿಟ್ಟು ಕೆಡುವಾಗ-ಅವರಾಟ ।
ತಗ್ಗಿ ಪೋಗುವುದು ನಂಜೇಶ ॥ ೯೫ ॥

ರವಿಯ ಮೇಲಣ ತಾರೆ । ಸವೆಸವೆದು ಪೋಗುತಿರಲ್ ।
ಗವಿಯ ಸೇರಿದ ಗುರುವು ಬರುವಾಗ–ಜನರೆಲ್ಲ ।
ಭವವ ನೀಗುವರು ನಂಜೇಶ ॥ ೯೬ ।

ಬಿಸಿಲುಗಾಲದ ನಡುವೆ । ಹಸುರುಗುದುರೆಯನೇರಿ ।
ಹೊಸತರದರಾಯ ಬರುವಾಗ–ಜಗವೆಲ್ಲ ।
ಹೊಸ ಮಾಟವಕ್ಕು ನಂಜೇಶ ॥ ೯೭ ॥

ನೀರು ನದಿಯೊಳಗಿಲ್ಲ । ಸೇರಿ ಗಾವುದಕೊಂದು
ತೋರುತ್ತ ಜ್ಯೋತಿ ಕೆಂಪಾಗಿ–ಗುರುರಾಯ ।
ಸಾರಿಬರುತಿರ್ಪ ನಂಜೇಶ ॥ ೯೮ ॥

ಬೈಲವಾಡದ ತೀರ್ಥ । ಬೈಲಾಗಿ ಪೋಗುತಿರೆ ।
ಬೈಲುದೇಶದ ಸ್ವಾಮಿ ಬರುವಾಗ–ತೀರ್ಥವು ।
ಬೈಲಿಗೆ ಬರ್ಕು ನಂಜೇಶ ॥ ೯೯ ॥

ಪೂವಲ್ಲಿ ಹಾಳಾಗಿ । ಮಾವು ಫಲಗಳು ಪೋಗಿ ।
ಗೋವುಗಳೆಲ್ಲವು ಪಾಲು ಕೊಡದಾಗ–ಜಗದೊಳಗೆ ।
ಸಾವು ಪೆಚ್ಚುವುದು ನಂಜೇಶ ॥ ೧೦೦ ॥

ಕಾಶಿಕ್ಷೇತ್ರದಲೊಂದು । ಕೂಸು ಜನಿಸುವದಯ್ಯ ।
ಭಾಸುರಾಂಗನ ಗುರ್ತು ತೋರುತ್ತ–ಬರುವಾಗ
ದೇಶಕ್ಕೆ ಸುಖವು ನಂಜೇಶ ॥ ೧೦೧ ॥

ಹರಿಹರರು ಎನ್ನುತ್ತ । ಬರಿದೆ ವಾದವ ಮಾಡಿ ।
ಹರಿಹರರ ಮಹಿಮೆಯರಿಯದೆಲೇ–ಪಾಮರರು ।
ಬರುತಿರ್ಪರಯ್ಯ ನಂಜೇಶ ॥ ೧೦೨ ॥

ಹರಕ್ಷೇತ್ರ ಪೂವಲ್ಲಿ । ಪುರಕಟ್ಟು ಜನರಲ್ಲಿ ।
ಹರಭಕ್ತಿ ತೊರೆದು ನಡೆಯುವಾ–ಗವರಾಟ ।
ಪುರಹರನೆಬಲ್ಲ ನಂಜೇಶ ॥ ೧೦೩ ॥



ಬೇಸಿಗೆ ಬಿಸಿಲೊಳಗೆ । ಬೀಸಿತು ಬಿರುಗಾಳಿ ।
ಘಾಸಿಮಾಡೀತು ಮಾನವ–ಮೃಗಪಕ್ಷಿ ।
ಲೇಸು ಕೆಡಿಸೀತು ನಂಜೇಶ ॥ ೧೦೪ ॥

ಪರಮ ಪಾಪಿಗಳೆಲ್ಲ । ಗುರುಗಳೆನಿಸುವರಯ್ಯ ।
ಪರರ ನಿಂದಿಸುತ ಬರುವಾಗ–ಜನರೆಲ್ಲ ।
ಮರುಳರಾಗುವರು ನಂಜೇಶ ॥ ೧೦೫ ॥

ಗುರುಗಳಾಜ್ಞೆಯ ಶಿಷ್ಯ । ಜರಿದು ನಡೆಯುವನಯ್ಯ ।
ಬರೆಬರೆದು ಓದುಗಲಿಯುತ್ತ–ನರರೆಲ್ಲ ।
ಹಿರಿಯರಾಗುವರು ನಂಜೇಶ ॥ ೧೦೬ ॥

ಮುಂದೆ ಬಣ್ಣವ ಹಚ್ಚಿ । ಹಿಂದೆ ಸುಣ್ಣವ ಸಿಡಿಸಿ ।
ಹೊಂದಿಕೆಯ ಮಾತನಾಡುವ–ಮಾನವರ ।
ಹೊಂದಿಕೆಯ ನೋಡು ನಂಜೇಶ ॥ ೧೦೭ ॥

ಓದುಗಲಿಯುವ ಮಗನ । ಹಾದರವು ಹೆಚ್ಚೀತು ।
ಓದುಗಲಿಯದ ಮಗನ ಮತಿಶುದ್ಧ–ಜನರಲ್ಲಿ ।
ಆದರವು ಹೆಚ್ಚು ನಂಜೇಶ ॥ ೧೦೮ ॥

ಕಾನನವು ಕರಗುವದು । ಜಾಣತನ ಪೆಚ್ಚುವದು ।
ನಾನು ನೀನೆಂದು ಬರುತಿರ್ಪ–ಬಿಂಕಿನ ।
ಮಾನವರ ನೋಡು ನಂಜೇಶ ॥ ೧೦೯ ॥

ಪುಣ್ಯಕಾರ್ಯಗಳನ್ನು ಮಣ್ಣುಗೂಡಿಸಿ ಜನರು ।
ಮುನ್ನ ಪಾತಕವ ಮಾಡುತ್ತ–ಜನರಗ್ರ ।
ಗಣ್ಯರೆನಿಸುವರು ನಂಜೇಶ ॥ ೧೧೦ ॥

ಬಡಗಣದಿ ನಾಲ್ಕೇಳು । ಪಡುವಣದಿ ಮೂರೇಳು ।
ಹಿಡಿದು ತೆಂಕಣದಿ ಹತ್ತೇಳು–ಜನಗೂಡಿ ।
ಪಡೆಯುವರು ರಾಜ್ಯ ನಂಜೇಶ ॥ ೧೧೧ ॥

ಏಳುರಾಯರ ನಡುವೆ । ಕಾಳಗವು ಪಿರಿದಾಗಿ ।
ಹಾಳುಮಾಡುವರು ಜಗವನ್ನು-ತಾಮುಂದೆ ।
ಬಾಳು ಕೆಡಿಸುವರು ನಂಜೇಶ ॥ ೧೧೨ ॥

ಗ್ರಾಮ ಗ್ರಾಮಕೆ ವೈದ್ಯ । ಪ್ರೇಮದಿಂದಲಿ ಸೇರಿ ।
ಭೂಮಿಪಾಲಕರ ಪ್ರಜೆಗಳನು-ಪಾಲಿಸುವ ।
ಕ್ಷೇಮವೇನೆಂಬೆ ನಂಜೇಶ ॥ ೧೧೩ ॥

ದೈವ ಪೂಜೆಯು ಇಲ್ಲ । ದೈವಕಂಜುವವರಿಲ್ಲ ।
ಶೈವ ವೈಷ್ಣವರ ಕಥೆಯಿಲ್ಲ-ಜನರ ದು ।
ರ್ದೈವದ ಪಾಲು ನಂಜೇಶ ॥ ೧೧೪ ॥

ಭಿಕ್ಷೆ ಬೇಡುವವರಿಲ್ಲ । ಕುಕ್ಷಿಗೆ ಕಾಳಿಲ್ಲ ।
ಲಕ್ಷಗಟ್ಟಲೆ ದುಡ್ಡು ಗಳಿಸಿಟ್ಟು-ಕಡೆಯೊಳು ।
ಶಿಕ್ಷೆಯ ಪಾಲು ನಂಜೇಶ ॥ ೧೧೫ ॥

ಮಳೆಯ ಆಸೆಯು ಇಲ್ಲ । ಹೊಳೆಯ ಆಸೆಯು ಹೆಚ್ಚು ।
ಬೆಳೆಯ ಪೊಂದುವರು ಜನರೆಲ್ಲ-ಜಗದೊಳಗೆ ।
ಹೊಳೆಯಿಂದ ನೋಡು ನಂಜೇಶ ॥ ೧೧೬ ॥

ಎಲ್ಲ ದೇಶಗಳೊಳಗೆ । ಎಲ್ಲ ಧಾನ್ಯವು ಬೆಳೆದು ।
ಎಲ್ಲ ಜನರಿಗೆ ಚಿಂತಿಲ್ಲ-ಜಗದೊಳಗೆ ।
ಎಲ್ಲರಿಗೂ ಸುಖವು ನಂಜೇಶ ॥ ೧೧೭ ॥

ತಗ್ಗು ದಿಣ್ಣೆಗಳೆರಡು । ಹೆಗ್ಗುರುತು ತೋರುತ್ತ ।
ತಗ್ಗಿ ಪೋಗುವದು ಜನರಲ್ಲಿ-ಭಿನ್ನತ್ವ ।
ಅಗ್ಗವಾಗುವದು ನಂಜೇಶ ॥ ೧೧೮ ॥

ಒಂದು ರಾಜ್ಯದಿ ಜನರು । ಒಂದು ಧರ್ಮದಿ ಕೂಡಿ ।
ಚಂದಾಗಿ ರಾಜ್ಯವಾಳುವ-ಸಮಯದ ।
ಹೊಂದಿಕೆಯ ನೋಡು ನಂಜೇಶ ॥ ೧೧೯ ॥



ಎಲ್ಲ ಧರ್ಮಗಳನ್ನು । ಎಲ್ಲ ಕರ್ಮಗಳನ್ನು ।
ಎಲ್ಲ ಶಾಸ್ತ್ರಗಳನ್ನು ಸಂಗ್ರಹಿಸಿ-ರಚಿಸುವರು ।
ಬಲ್ಲವರ ಶಾಸ್ತ್ರ ನಂಜೇಶ ॥ ೧೨೦ ॥

ಒಂದು ಶಾಸ್ತ್ರದ ಮರ್ಮ । ಹೊಂದಿದ ಧರ್ಮಗಳ ।
ಹೊಂದಿಕೆಯು ಕೂಡಿ ನಡೆಯುವ-ಸಮಯವು ।
ಬಂದು ಒದಗುವದು ನಂಜೇಶ ॥ ೧೨೧ ॥

ಭರತಖಂಡದ ರಾಜ್ಯ । ಅರಸು ರಾಜ್ಯಕೆ ಪೊಂದಿ ।
ಪರರಾಜ್ಯದಿಂದ ದೂರಾಗಿ-ಕಡೆಯೊಳು ।
ಹರುಷ ಪೊಂದುವರು ನಂಜೇಶ ॥ ೧೨೨ ॥

ಭಾಷೆಗಳ ಭೇದಾದಿಂ । ದೇಶ ಭೇದವ ಮಾಡಿ ।
ಶಾಸನವ ಗೈವ ರೈಕ್ಯದಿಂ-ಜನರು ವಿ- ।
ಶ್ವಾಸದಿಂ ನೋಡು ನಂಜೇಶ ॥ ೧೨೩ ॥

ಭಾಷೆಯೇ ಧರ್ಮಕ್ಕೆ । ಭಾಷೆಯೇ ರಾಜ್ಯಕ್ಕೆ ।
ಭಾಷೆಯೇ ಸರ್ವ ಕಾರಣವು-ಎಂದೆನುತ ।
ದೇಶವಾಳುವರು ನಂಜೇಶ ॥ ೧೨೪ ॥

ದೇಶ ಭಾಷೆಯು ತಮ್ಮ । ದೇಶ ರಾಜ್ಯಕೆ ಮೊದಲು ।
ಲೇಸ ಮಾಡುವದು ನಿಜದಿಂದ-ಲೆಂದೆನುತ ।
ದೇಶ ಪಾಲಿಪರು ನಂಜೇಶ ॥ ೧೨೫ ॥

ಭಾಷೆಯ ಬೆಲೆಯಿಂದ । ದೇಶಕ್ಕೆ ಬೆಲೆ ಹೆಚ್ಚು ।
ಭಾಷೆಯನು ಬಿಟ್ಟು ದೇಶವಾಳುವ-ರಾಯ ।
ಕ್ಲೇಶ ಪೊಂದುವನು ನಂಜೇಶ ॥ ೧೨೬ ॥

ದೇವಭಾಷೆಯ ಜನರು । ಸೇವೆಯನು ಮಾಡುತ್ತ ।
ಪಾವನವನಾಳ್ವರೈಕ್ಯದಿಂ-ಜನರ ಸ ।
ದ್ಭಾವನೆಯ ನೋಡು ನಂಜೇಶ ॥ ೧೨೭ ॥

ತಮ್ಮ ತಮ್ಮೊಳು ಜನರು । ಹೆಮ್ಮೆಯಿಂದೊಡಗೂಡಿ ।
ತಮ್ಮ ತಮ್ಮಯ ನುಡಿಯ ಬೆಳೆಸುವರು–ಜಗದೊಳಗೆ ।
ಒಮ್ಮನಸಿನಿಂದ ನಂಜೇಶ ॥ ೧೨೮ ॥

ವಂಗಭಾಷೆಯು ಮೊದಲು । ಶಿಂಗರಿಸಿ ಬೆಳೆಯುವದು
ಭಂಗಪಡಿಸುವರು ಭಾಷೆಗಳ–ಸಂಜ್ಞರ ।
ಸಂಗದಿಂ ನೋಡು ನಂಜೇಶ ॥ ೧೨೯ ॥

ಕನ್ನಡದ ನುಡಿಯೊಮ್ಮೆ । ಕನ್ನಡಿಯ ತೆರದಿಂದ ।
ಚೆನ್ನಾಗಿ ಬೆಳೆದು ಹೊಳೆಯುವದು–ಜಗದೊಳಗೆ
ಮುನ್ನಡಿಯು ಎಂದು ನಂಜೇಶ ॥ ೧೩೦ ॥

ಆರ್ಯದೇಶದ ಜನರು । ಧೈರ್ಯದಿಂದೊಡಗೂಡಿ ।
ಆರ್ಯಭಾಷೆಯನು ಬೆಳೆಸುವರು–ಜಗದೊಳಗೆ ।
ಕಾರ್ಯವೇನೆಂಬೆ ನಂಜೇಶ ॥ ೧೩೧ ॥

ತ್ರೈಲಿಂಗ ನುಡಿಯೊಮ್ಮೆ । ಮೇಲಾಗಿ ಬರುತಿಹುದು ।
ಪಾಲಕರ ಸಂಗವಿಲ್ಲದಲೇ–ಪೋಗುವದು ।
ಬೈಲಾಗಿ ನೋಡು ನಂಜೇಶ ॥ ೧೩೨ ॥

ಭಾರತದ ಭಾಷೆಗೆ । ಪಾರವಿಲ್ಲದೆ ಜನರು ।
ಸೇರಿ ಮೆಚ್ಚುವರು ಜಗದೊಳಗೆ–ರಾಜ್ಯದಾ ।
ಧಾರ ನುಡಿಯೆಂದು ನಂಜೇಶ ॥ ೧೩೩ ॥

ಮಾಂಸಹಾರಿಗಳೆಲ್ಲ । ಹಿಂಸೆ ದೋಷವ ತೊರೆದು
ಮಾಂಸ ಭಕ್ಷಣವ ಬಿಡುತಿರ್ಪ–ರವರ ।
ಪ್ರಶಂಸೆಯನು ನೋಡು ನಂಜೇಶ ॥ ೧೩೪ ॥

ಶಾಕಪಾಕಿಗಳೆಲ್ಲ । ಏಕತ್ವದಿಂ ಕೂಡಿ ।
ಏಕ ಮಾಡುವರು ಜಗದೊಳಗೆ–ಮಾಂಸದ ।
ಪಾಕದ ಲೋಪು ನಂಜೇಶ ॥ ೧೩೫ ॥



ಎಲ್ಲ ದೇಶಗಳೊಳಗೆ । ಎಲ್ಲರೊಂದಾಗುತ್ತ ।
ಎಲ್ಲ ರಾಜ್ಯಗಳನಾಳುವರು–ಜಗದೊಳಗೆ ।
ಬಲ್ಲವರ ಆಟ ನಂಜೇಶ ॥ ೧೩೬ ॥

ಭೌತಿಕದ ಶಾಸ್ತ್ರಕ್ಕೆ । ಭೀತಿ ಪೊಂದುತ ಜನರು ।
ಆತುಕೊಳ್ಳುವರು ಜ್ಞಾನಕ್ಕೆ–ಜಗದೊಳಗೆ ।
ಆತುರದಿ ನೋಡು ನಂಜೇಶ ॥ ೧೩೭ ॥

ಮಾನವರು ತಮ್ಮೊಳಗೆ । ಮಾನವಂ ತೋರುತ್ತ ।
ಜ್ಞಾನವಂ ಪಡೆದು ಸುಖಿಸುವರು–ಜಗದಿ ಸು ।
ಜ್ಞಾನವನು ನೋಡು ನಂಜೇಶ ॥ ೧೩೮ ॥

**ನಂಜೇಶನ ಕಾಲಜ್ಞಾನ**

**ಸಂಪೂರ್ಣಂ**

# ಕರಸ್ಥಲದ ನಾಗಲಿಂಗಯ್ಯನ ಕಾಲಜ್ಞಾನ

## ಪದ

ಕದನಕ್ಕೆ ಮೊದಲಾದ ಬಿದನೂರು ಕೇರಿಯಲಿ ಹುಯ್ಯಲೊ ಡಂಗುರವ ।
ಮದವೆದ್ದ ಆನೆ ಮಾವುತನೆದ್ದು ಕೊಲುತಿದೆ ಹುಯ್ಯಲೊ ಡಂಗುರವ ॥ ೧ ॥

ಒಂದು ಕುಲದಮೇಲೆ ನಿಂದಾರು ಕಲಹದಿ ಹುಯ್ಯಲೊ ಡಂಗುರವ ।
ಕಂದನು ಹತವಾಗು ತೈದಾನೆ ಆಕ್ಷಣ ಹುಯ್ಯಲೊ ಡಂಗುರವ ॥ ೨ ॥

ಪಟ್ಟದ ರಾಣಿಗೆ ಕೆಟ್ಟ ಕನಸು ಮುಂದೆ ಹುಯ್ಯಲೊ ಡಂಗುರವ ।
ಪಟ್ಟಣಗಳೆಲ್ಲವು ಸುಟ್ಟು ಸೂರೆಗಳೆಂದು ಹುಯ್ಯಲೊ ಡಂಗುರವ ॥ ೩ ॥

ಬಲ್ಲವರೊಳಗಾದ ಸೊಲ್ಲಿನ ಲಕ್ಷಣ ಹುಯ್ಯಲೊ ಡಂಗುರವ ।
ನಿಲ್ಲಲೀಸದು ಮುಂದೆ ಕಲಹ ತಪ್ಪದು ಸಿದ್ಧ ಹುಯ್ಯಲೊ ಡಂಗುರವ ॥ ೪ ॥

[1]ಸ್ವಾರಿ[1] ಯ ತೇಜಿಯನೇರಿದ ಸಂಬಂಧ ಹುಯ್ಯಲೊ ಡಂಗುರವ ।
ಮಾರಿದುರ್ಗಿಯರೆಲ್ಲ ಸೂರೆಗೆ ಬರುತಾರೆ ಹುಯ್ಯಲೊ ಡಂಗುರವ ॥ ೫ ॥

ವ್ರತನೇಮ ಶೀಲರು ಮತಿಗೇಡಿಯಾದರು ಹುಯ್ಯಲೊ ಡಂಗುರವ ।
ಸತಿಯಿಂದ[2] ಕಾಂತ[2] ನು ಹತವಾಗುತೈದಾನೆ ಹುಯ್ಯಲೊ ಡಂಗುರವ ॥ ೬ ॥

ಕೊಬ್ಬಿದ ಮನುಜರಿಗೆ ಹಬ್ಬದ ದಿನ ಬಂಧೊ ಹುಯ್ಯಲೊ ಡಂಗುರವ ।
ಅಬ್ಬರದಿಂದಾರು ಲಕ್ಷವ ತಂದಾರು ಹುಯ್ಯಲೊ ಡಂಗುರವ ॥ ೭ ॥

ಜಂಗಮಲಿಂಗ ದೇವಾಂಗಕೆಲ್ಲಕೆ ಮುಂದೆ ಹುಯ್ಯಲೊ ಡಂಗುರವ ।
ಭಂಗಪಡುವ ಕುರುಹು ಸಂಗಮ ಬರುತಾನೆ ಹುಯ್ಯಲೊ ಡಂಗುರವ ॥ ೮ ॥

ವಾರುಧಿಯಿಂದೊಬ್ಬ ದಾರಿಯ ನಡಸುತ ಹುಯ್ಯಲೊ ಡಂಗುರವ ।
ಕೇರಿಯ ಮುರಿದೆಲ್ಲ ದಾರಿಗಳೆಲ್ಲೆಂದು ಹುಯ್ಯಲೊ ಡಂಗುರವ ॥ ೯ ॥

---

1 ಕೇಶ್ವರಿ (ಬ.) 2 ತಾ (ಬ.)



ಹದ್ದು ಕಾಗೆಗಳೆಲ್ಲ ಗು[1]ಡ್ಡ[1] ಬೀಳುತಲಿವೆ ಹುಯ್ಯಲೊ ಡಂಗುರವ ।
ಮಧ್ಯಾನ್ಹದೊಳಗೊಂದು ಪವಾಡವಾದೀತು ಹುಯ್ಯಲೊ ಡಂಗುರವ ॥ ೧೦ ॥

ಕೊಟ್ಟಭಾಷೆಗೆ ತಪ್ಪಿ ಪಟ್ಟವು ಕೆಟ್ಟೀತು ಹುಯ್ಯಲೊ ಡಂಗುರವ ।
ಪಟ್ಟಕ್ಕೆ ವೀರವಸುತನು ಬರುತಾನೆ ಹುಯ್ಯಲೊ ಡಂಗುರವ ॥ ೧೧ ॥

ಮುಂದೆ ಬರುವ ಸುದ್ದಿಯೊಂದಿಗೆಯೆಂಬುದ ಹುಯ್ಯಲೊ ಡಂಗುರವ ।
ಬಂದು ಸಾರಿದ ಶೃತಿ ನಿಂದ್ಯಗಳೆನಬೇಡಿ ಹುಯ್ಯಲೊ ಡಂಗುರವ ॥ ೧೨ ॥

ಅಲ್ಲಮನೊಲವಿನ ಸೊಲ್ಲಿನ ಲೀಲೆಗೆ ಹುಯ್ಯಲೊ ಡಂಗುರವ ।
ಅಲ್ಲಮಹಾ ಎಂಬ ಸೊಲ್ಲಿಗೆ ಕೊಲೆಯೆಂದು ಹುಯ್ಯಲೊ ಡಂಗುರವ ॥ ೧೩ ॥

ಅಂಗಡಿಯೊಳಗೆಲ್ಲ ಮಂಗಳೋದಯವೆಂದು ಹುಯ್ಯಲೊ ಡಂಗುರವ ।
ಸಂಗ ಸದ್ಗುರು ನಾಗಲಿಂಗ ಸಾರಿದನೆಂದು ಹುಯ್ಯಲೊ ಡಂಗುರವ ॥ ೧೪ ॥

## ವಚನ ॥ ಮತ್ತು ಮೆಂತನೆ

## ಪದ

ಕುರುಹು ಕೇಳಿರಣ್ಣಗಳಿರ ಕುರುಹು ಕೇಳಿರೊ ।
ಗುರುವಿನರುವಿನೊಳಗೆ ಸಾರಿಬಂದ ಕುರುಹು ಕೇಳಿರೊ ॥ ಪಲ್ಲವಿ ॥

ಎಂಟು ದಿಕ್ಕಿನೊಳಗೆಲ್ಲ ಕುರುಹು ಕೇಳಿರೊ–ದೊಡ್ಡ ।
ಘಂಟೆನಾದ ಎಸೆವುತೀದೆ ಕುರುಹು ಕೇಳಿರೊ ॥
ತುಟಿ ಪಟ್ಟದವರಿಗೆಲ್ಲ ಕುರುಹು ಕೇಳಿರೊ–ಮನೆಯ ।
ನಂಟ ತಾನೆ ಬರುತಲಹನೆ ಕುರುಹು ಕೇಳಿರೊ ॥ ೧ ॥

ಮತ್ರ್ಯಕೆಲ್ಲ ಕತ್ರ್ರ ಬರುವ ಕುರುಹು ಕೇಳಿರೊ–ಜನರು ।
ವ್ಯರ್ಥವಾಗಿ ಹೋಗುತಾರೆ ಕುರುಹು ಕೇಳಿರೊ ॥
ಸತ್ತ ಮನುಜರೆದ್ದು ಬರುವ ಕುರುಹು ಕೇಳಿರೊ–ದೊಡ್ಡ ।
ಎತ್ತು ಎನ್ನ ನುಂಗುತಾದೆ ಕುರುಹು ಕೇಳಿರೊ ॥ ೨ ॥

---

1 ಥಾ (ಅ, ಇ, ಎ, ಕ.)

ಕೇರಿಯೊಳಗೆ ಸಾರಿಬಂದ ಕುರುಹು ಕೇಳಿರೊ-ದೊಡ್ಡ ।
ಮಾರಿಹಬ್ಬವಾದಮೇಲೆ ಕುರುಹು ಕೇಳಿರೊ ॥
ನಾರಿಗೊಬ್ಬ ನಲ್ಲ ಬಂದ ಕುರುಹು ಕೇಳಿರೊ-ಸಜ್ಜೆ
ಧಾರವೆಲ್ಲ ಹರಿದು ಬಿದ್ದ ಕುರುಹು ಕೇಳಿರೊ ॥ ೩ ॥
ನಟ್ಟನಡು ಇರುಳಿನೊಳು ಕುರುಹು ಕೇಳಿರೊ-ಕೇರಿ ।
ಸುಟ್ಟು ಸೂರೆಯಾಗುತಿದೆ ಕುರುಹು ಕೇಳಿರೊ ॥
ಪಟ್ಟದಾನೆ ಗಟ್ಟದಲ್ಲಿ ಕುರುಹು ಕೇಳಿರೊ-ಆಡಿ ।
ಬಿಟ್ಟನಾ ಫಲವ ಸಿಂಧ ಕುರುಹು ಕೇಳಿರೊ ॥ ೪ ॥
ಕಂಭದೊಳಗೆ ಬೊಂಬೆಯೆದ್ದು ಕುರುಹು ಕೇಳಿರೊ-ಶೂಲಿ ।
ನಂಬಿದವ[1] ನೆಂಬ[1] ಸುದ್ದಿ ಕುರುಹು ಕೇಳಿರೊ ॥
ಕೊಂಬೆಯನೇರಿ ಕೂಗುತೀದೆ ಕುರುಹು ಕೇಳಿರೊ-ಶಿವನು ।
ಡೊಂಬಕಾರನಾಗುತಾನೆ ಕುರುಹು ಕೇಳಿರೊ ॥ ೫ ॥
ವೇಣಪುರದೊಳಗೊಂದು ಕುರುಹು ಕೇಳಿರೊ-ಎತ್ತು ।
ಗಾಣವನ್ನು ಸುತ್ತುತೀದೆ ಕುರುಹು ಕೇಳಿರೊ ।
ಓಣಿಯೊಳಗೆ ಸಾರುತೀದೆ ಕುರುಹು ಕೇಳಿರೊ-ಶಿವ ।
ನಾಣೆ ಮುಂದೆ ಹುಸಿಯಿದಲ್ಲ ಕುರುಹು ಕೇಳಿರೊ ॥ ೬ ॥
ಲಿಂಗ ಜಂಗಮರುಗಳೆಲ್ಲ ಕುರುಹು ಕೇಳಿರೊ-ಅವರು ।
ಲಿಂಗ ಹಿಂಗಿ ಭಂಗ ಪಡುತಾರೆ ಕುರುಹು ಕೇಳಿರೋ ।
ಸಂಗಮೇಶ ಎನ್ನ ಗುರುವು ಕುರುಹು ಕೇಳಿರೊ ॥ ೭ ॥

ವಚನ ॥ ಮತ್ತುಮೆಂತನೆ

ಪದ

ಕತ್ತಿ ಹರಿಯುತೀದೆ ಈ ಕಡೆಯಲಿ ಗುತ್ತಿ ಮುರಿಯುತೀದೆ ।
ಎತ್ತಿನ ಹಬ್ಬಕ್ಕೆ ಕತ್ತಿಯ ಮೊನೆಯೊಂದು ವಿಸ್ತಾರವಾಗುತೀದೆ ॥ ಪಲ್ಲವಿ ॥
ಈ ಜಗವೆಲ್ಲ ಒಪ್ಪುತೀದೆ ಮೂಜಗದೊಳು ವಾಜೆಗಳಂಟುತೀದೆ ।
ಮಾಜುವೆನೆಂದರೆ ಅಜಹರಿ ರುದ್ರರ್ಗೆ ಸೋಜಿಗವಾಗುತೀದೆ ॥ ೧ ॥

---

1 ಸೊಬ್ಬ (ಬ.)



ಕುದುರೆಗಳೇಳುತೀದೆ ಕದನವೆದ್ದು ವದಗುತ್ತ ಬರುತಲೀದೆ ।
ಮುದದಿಂದ ಮೂವತ್ತು ಮೂರು
ಕುದುರೆಯಿಂದ ಕದನವು ಕೆಣಕುತೀದೆ ॥ ೨ ॥
ಕೊಂಬುವರಿಲ್ಲವೆಂದು ಕೂಗುವ ಧ್ವನಿ[1] ಗುಂಬುಜ[1] ವರಳುತೀದೆ ।
ತುಂಬಿಗಳದ ಸಂಭ್ರಮದ ಸೂಚನೆಗಿನ್ನು ಶುಭುತಾ ಬರುತೀದೆ ॥ ೩ ॥
ಊರ ಮುಂದಾರು ಮಂದಿ ಮಾರಿದುರ್ಗಿಯರು ನೀರ ಬಿಂದಿಗೆಯನೆತ್ತಿ ।
ಭೂರಿದ್ರುಮದ ಗಂಡ ಬರುವ ಸೂಚನೆಯಿಂದ ಸಾರಿತು ಡಂಗುರವ ॥ ೪ ॥
ಉತ್ತರದೇಶದಿಂದ ಮುತ್ತೈಯ್ಯ ಬಂದು ಕುಸ್ತಿಯ ಕಲಕುತಾನೆ ।
ವಿಸ್ತಾರದೊಳು ಪ್ರಭು ಮುಸ್ತ[2]ವ[2] ತೆಕ್ಕೊಂಡು
ವಸ್ತುವನರಸುತಾನೆ ॥ ೫ ॥
ಬೇಡನ ಮಕ್ಕಳೆಲ್ಲ ಈ ಜಗದೊಳು ರೂಢಿಸಿ ಮೆರೆವುತೀವೆ ।
ನಾಡಿನೊಳಧಿಕ ಮೂಡಣ ದಿಕ್ಕಿನೊಳಗೊಂದು
ಪವಾಡ ವೇಳುತೀದೆ ॥ ೬ ॥
ಕಲೆಯೆದ್ದು ಕುರುಬನು ಬೆರಸಿ ಬಂದು ಕುರುಹುವೆಂಬಾದರುವಿನಿಂದ ।
ನರನ ಪಟ್ಟಣದೊಳು ತೆರನಿಲ್ಲದಿಹ ಮುಂದೆ ಸ್ಥಿರಪಟ್ಟವಾಗುತೀದೆ ॥ ೭ ॥
ವೀರಾಧಿ ವೀರರೆಲ್ಲ ಮಾರಿಯ ಮುಂದೆ ಹೋರಿತ್ತು ಆಗುತೀದೆ ।
ಧಾರಿಣಿಯೊಳು ನಾಗಲಿಂಗೇಶನ ಕಾರುಣ್ಯವರುಹುತೀದೆ । ॥ ೮ ॥

ವಚನ ॥ ಮತ್ತುಮೆಂತನೆ

ದಿವ್ಯ್ಮಸಲೆನ್ನಿರೊ ನಮ್ಮವರೆಲ್ಲ ದಿವ್ಯ್ಮಸಲೆನ್ನಿರೊ
ದಿವ್ಯ್ಮಸಲೆಂದು ಬಿಡ್ವಾದೆ ಸತ್ಯವುಳ್ಳ ಶಣರೆಲ್ಲ ॥ ದಿವ್ಯ್ಮ ॥ ಪಲ್ಲ ॥
ಮತ್ತೆ ಮನೆ ದ್ರವ್ಯವನ್ನು ನೆತ್ತಿಯೊಳು ಹೊತ್ತು ಬಂದ ।
ಅರ್ಥಿಯನ್ನು ಕೇಳಿರೊ ದಿವ್ಯ್ಮಸಲೆನ್ನಿರೊ ॥ ೧ ॥

---

1 ಬಾಡಾ (ಅ, ಇ, ಎ, ಕ.) 2 ಮಾ (ಅ, ಇ, ಎ, ಕ.)

ಆದಿಯೊಳಗೆ ಅಜನ ಬಜನಗಾದಜನ್ಮ ವಿಡಿದು ಬಂದ ।
ಭೇದವನ್ನು ಮರೆದು ಬ್ರಹ್ಮ ಬೋಧೆಯುನ್ನು ಕೇಳಿರೊ ॥ ದಿವ್ಯಿ ॥ ೨ ॥

ಪೂರ್ವದೊಳು ಪಾರ್ವರಣೆಯ ತೋರ್ಪ ಜನ್ಮ ವಿಡಿದು ಬಂದು ।
ಪೇರ್ಮೆಯುನ್ನು ಮರೆದು ಸತ್ಯ ಪೂರ್ವವನ್ನು ಕೇಳಿರೊ ॥ ದಿವ್ಯಿ ॥ ೩ ॥

ಹಿಂದೆ ಹಿರಿಯ ತನದಿ ದ್ವಿಜರೊಂದುಗೂಡಿ ಲೋಕ ಮುಖದಿ ।
ಬಂದ ಬೆಡಗ ತಿಳಿದು ಅಡಗಿದಾನಂದವನ್ನು ಕೇಳಿರೊ ॥ ದಿವ್ಯಿ ॥ ೪ ॥

ನಾಮವಿಲ್ಲದ ಗಣಿಕನೊಬ್ಬ ಯೋಮದುದಯ ಮುಖದಿ ಬಾದ ।
ಮಗಳ ನಳಿದು ಸುಕ್ಷೇಮಗಳ ಮುದದಿ ಮಾತ ಕೇಳಿರೊ ॥ ದಿವ್ಯಿ ॥ ೫ ॥

ತಾನುಯಿಲ್ಲದಾಗ ತನ್ನ ದೂರ ಹುಟ್ಟಿ[1] ಮೊ[1]ರೆವ ಕುರುಹ ।
ಜ್ಞಾನದಿಂದ ತಿಳಿದು ಕಾಲಜ್ಞಾನವನ್ನು ಕೇಳಿರೊ ॥ ದಿವ್ಯಿ ॥ ೬ ॥

ಆಸೆಯಿಂದ ದೇಶವೆಲ್ಲ ಮೋಸ ಹೋದ ಮೂರುದಿನಕೆ ।
ಘಾಸಿಯಾದರೆಂಬ ಪರಿಯ ದೇಶವೆಲ್ಲ ಕೇಳಿರೊ ॥ ದಿವ್ಯಿ ॥ ೭ ॥

ಬೇಡನೆದ್ದು ಆಡ ಬಡಿದು ಕೋಡಗನ ಕೊಂದಬಳಿಕ ।
ಕೇಡು ತಪ್ಪದು ಮರ್ತ್ಯಕಿನ್ನು ರೂಢಿಯಲ್ಲಿ ಕೇಳಿರೊ ॥ ದಿವ್ಯಿ ॥ ೮ ॥

ಅತ್ತೆ ಅಳಿಯನೆದ್ದು ಕೂಡಿ ಹೆತ್ತ ಮಗಳ ಮದುವೆಯಾಗೆ ।
ಮೃತ್ಯು ಬಂದ ಚಿತ್ರವೆಲ್ಲ ಮತ್ತೆ ನೀವು ಕೇಳಿರೊ ॥ ದಿವ್ಯಿ ॥ ೯ ॥

ಉತ್ತರದ ದಿಕ್ಕಿನೊಳು ಒತ್ತಿವಾಯು ಬೀಸಲಾಗಿ ।
ಹೆತ್ತತಾಯಿ ಮಗನ ಕೊಲುವ ಕೃತ್ಯವೆಲ್ಲ ಕೇಳಿರೊ ॥ ದಿವ್ಯಿ ॥ ೧೦ ॥

ಕೋಣನೆದ್ದು ಕುಣಿಯ ಬಿದ್ದು ಗೋಣ ಮುರಿದು ಸಾಯಲಾಗಿ ।
ಕ್ಷೋಣಿಗೀಶ ಬಂದು ನಿಲುವ ಜಾಣತನವ ಕೇಳಿರೊ ॥ ದಿವ್ಯಿ ॥ ೧೧ ॥

ಊರ ಮುಂದೆ ಗೋರಿಕಟ್ಟೆ ಕೇರಿಸುಟ್ಟು ಸೂರೆಯಾಗಿ ।
ಮಾರಿ ಬಂದು ಮನೆಯ ಹೊಕ್ಕ ದೂರನೆಲ್ಲ ಕೇಳಿರೊ ॥ ದಿವ್ಯಿ ॥ ೧೨ ॥

1 ದೊ (ಆ, ಇ, ಎ, ಈ.)



ನೀರಹೊಳೆಯ ದಾರಿವಿಡಿದು ನಾರಿ ಅಳುತ ಬಂದ ಬಳಿಕ ।
ಭಾರಿ ಭೂತ ಹೊಡೆದು ಕೊಲುವ ಸೂರೆಯಲ್ಲ ಕೇಳಿರೊ ॥ ದಿವ್ಯಿ ॥ ೧೩ ॥

ಪಟ್ಟಣದೊಳು ಮೂರುಮಂದಿ ಶೆಟ್ಟಿಕಾರರಳಿದ ಬಳಿಕ ।
ಪಟ್ಟಕ್ಕರಸು ಬಂದು ನಿಲುವ ದೃಷ್ಟವೆಲ್ಲ ಕೇಳಿರೊ ॥ ದಿವ್ಯಿ ॥ ೧೪ ॥

ಆನೆ ಅಳಿದ ಹಾನಿಗೆಂದು ಶ್ವಾನನಳುತ ಕರೆದಬಳಿಕ ।
ಭಾನುತೇಜದರಸು ಬರುವ ಸ್ಥಾನವೆಲ್ಲ ಕೇಳಿರೊ ॥ ದಿವ್ಯಿ ॥ ೧೫ ॥

ಪಡುವ ಗಡಲ ತಡಿಯೊಳೊಬ್ಬ ಮಡದಿ ಮುಡಿಯ ಪಿಡಿದ ಬಳಿಕ ।
ಪೊಡವಿಗೊಡೆಯ ಬಂದ[1]ಬ[1]ರದ ಬೆಡಗನೆಲ್ಲ ಕೇಳಿರೊ ॥ ದಿವ್ಯಿ ॥ ೧೬ ॥

ಪುರದಮುಂದು ಗಡೆಯೊಳೊಂದು ಕೆರೆಯ ಕಟ್ಟಿ ಮುಗಿದ ಬಳಿಕ ।
ದೊರೆಗೆ ದುಃಖ ತಪ್ಪದೆಂದು ಬರೆದಲಿಪಿಯ ಕೇಳಿರೊ ॥ ದಿವ್ಯಿ ॥ ೧೭ ॥

ದಕ್ಷಿಣ ದೆಸೆಯೊಳೊಂದು [2]ಪಕ್ಷಿ[2] ಪರಬ್ರಹ್ಮ ತನ್ನ ।
ಪಟ್ಟ ಕಿಳಿದ ಎಂದು ನುಡಿದ ಆ ಕ್ಷಣವೆಲ್ಲಾ ಕೇಳಿರೊ ॥ ದಿವ್ಯಿ ॥ ೧೮ ॥

ಕೋಳಿಯೆದ್ದು ಕೂಗುತೀದೆ ಭಾಳನೇತ್ರ ಬಂದನೆಂದು ।
ಪೇಳುಯೆಂದು ನುಡಿಸುತಿರ್ಪನೂಳಿಗವೆಲ್ಲ ಕೇಳಿರೊ ॥ ದಿವ್ಯಿ ॥ ೧೯ ॥

ಪಲ್ಲಿ ಫಲವು ನುಡಿದ ಬಳಿಕ ಮೃತ್ಯುಕುಲವು ಕೆಟ್ಟಿತೆಂದು ।
ಸೊಲ್ಲ ನುಡಿಯಿಂದಾಡಿಸುವ ಗಲ್ಲಣಾವ ಕೇಳಿರೊ ॥ ದಿವ್ಯಿ ॥ ೨೦ ॥

ಅಳಿಯ ಬಂದಾರು ತಿಂಗಳಿಗೆ ಜನಕೆ ಪ್ರಳಯಗಾಲವೆಂದು ।
ಉಳಿದುಕೊಳ್ಳಿ ಶರಣರೆಂದು ತಳೆಯದೆಲ್ಲನೇಳಿರೊ ॥ ದಿವ್ಯಿ ॥ ೨೧ ॥

ಇಟ್ಟ ಭೇದ ಭೇದಾಗಳನು ಪಟ್ಟದರಸು ತಾನೆ ಬಲ್ಲ ।
ನಷ್ಟದೆಸೆಗರಿಷ್ಟ ಬಂದ ಕಟ್ಟಳೆಯ ಕೇಳಿರೊ ॥ ದಿವ್ಯಿ ॥ ೨೨ ॥

ಇಂದು ನಾಳೆ ನಾಳಿದ್ದೀಗೆ ಎಂದಿಗೆಂಬ ಭೇದವಳಿದು ।
ಬಂದಿತೆಂದು ಎಂದು ನುಡಿದಾನಂದವೆಲ್ಲ ಕೇಳಿರೊ ॥ ದಿವ್ಯಿ ॥ ೨೩ ॥

1 ಬ್ಬ (ಬ.) 2 ವಾಕ್ಷ (ಬ.)

ಆಡಿದಂಥ ವಾಕ್ಯವೆಲ್ಲ ಕೋಡಿಗಳೆಯದಿಂದಲ್ಲ ಮನುಜ ।
ನುಡಿದ ಅಭಯವನ್ನು ನುಡಿದ ಪವಾಡವೆಲ್ಲ ಕೇಳಿರೊ ॥ ದಿಮ್ಮಿ॥ ೨೪ ॥

ಯೋಗನಿದ್ರೆ ತಿಳಿದು ಭಾಗ್ಯ । ಬೇಗದಿಂದ ಎಷ್ಟು ಗುರುವು ।
ನಾಗಲಿಂಗ ನುಡಿಸಿದಂಥ ಆಗಮಗಳ ಕೇಳಿರೊ ॥ ೨೫ ॥

## ವಚನ ॥ ಮತ್ತು ಮುಂತನೆ

### ಪದ

ದಿಮ್ಮಿಸಾಲೆ ಧಾರಿಣಿ ಶರಣರ ಕರುಣದ ಬರಕಿದು ।
ದೊಡ್ಡ ಕರುಣಸ್ಥಳ ಈಶನ ವರವೀದು ದಿಮ್ಮಿಸಾಲೆ ॥ ೧ ॥

ಆಡುವ ಬೇಡನ ಮಕ್ಕಳ ಹರುಷದಿ ದಿಮ್ಮಿಸಾಲೆ-ತಮ್ಮ ।
ಆಡದ ಆಟಕ್ಕೆ ನೋಡಿದ ಸೂಚನೆ ದಿಮ್ಮಿಸಾಲೆ ॥ ೨ ॥

ಅಳಿಯನ ಮಕ್ಕಳ ತಳುವಾದೆ ಸುರಿದ ದಿಮ್ಮಿಸಾಲೆ-ಮುಂದೆ ।
ಅಳವಿಟ್ಟು ಉಳುವಿಯ ಸಾರುವ ಸೂಚನೆ ದಿಮ್ಮಿಸಾಲೆ ॥ ೩ ॥

ನೋಟದ ಶರಣರು ಬೆಟ್ಟಕ್ಕೆ ಬಂದರು ದಿಮ್ಮಿಸಾಲೆ-ಅವ ।
ರಾಟವ ನರಿಯಾದೆ ಬೂಟಕ ತನದಿಂದ ದಿಮ್ಮಿಸಾಲೆ ॥ ೪ ॥

ಉತ್ತರ ದಕ್ಷಿಣ ಪೂರ್ವದ ಪಶ್ಚಿಮ ದಿಮ್ಮಿಸಾಲೆ-ದೊಡ್ಡ ।
ನಾರಿಯರು ಬರುತಾರೆ ಸುತ್ತಾಣ ಕೇರಿಗೆ ದಿಮ್ಮಿಸಾಲೆ ॥ ೫ ॥

ಮುಂದಣ ಕೇರಿಯ ಹೊಂದಿದ ಬೇಗೆ[1]ಯು[1] ದಿಮ್ಮಿಸಾಲೆ-ಎಡ ।
ದಿಂದ ತಾಹತ್ತಿ ಬೆಂದಿತು ಮನೆಗಳು ದಿಮ್ಮಿಸಾಲೆ ॥ ೬ ॥

ಆನೆಯ ಲಾಯಕ್ಕೆ ಜೀನ ಕಟ್ಟಿದ ಕುರುಹು ದಿಮ್ಮಿಸಾಲೆ-ಅಲ್ಲಿ ।
ಮಾನಿನಿಯರ ಮನೆ ಹಾನಿಗಳೆನುತಿದೆ ದಿಮ್ಮಿಸಾಲೆ ॥ ೭ ॥

ಭತ್ತದ ಪಣಕದ ಮೇಳು ಹತ್ತೆಂಟು ಸೂಚನೆ ದಿಮ್ಮಿಸಾಲೆ-ಮುಂದೆ ।
ಅತ್ತೆಯ ಅರಮನೆ ವ್ಯರ್ಥಗಳೆನುತೀದೆ ದಿಮ್ಮಿಸಾಲೆ ॥ ೮ ॥

1 ಯು (ಒ.)



ಅರಸಿಯೊಳರಸನು ಸರಸದೊಳಿರಲಾಗಿ ದಿಮ್ಮಿಸಾಲೆ-ದೊಡ್ಡ ।
ಸರಸೀಜ ಮುಖಿ ಬಂದು ಬೆರಸಿದ ಸೂಚನೆ ದಿಮ್ಮಿಸಾಲೆ ॥ ೯ ॥

ಅರಮನೆಯೆಲ್ಲವು ಬರಿಮನೆಯಾದವು ದಿಮ್ಮಿಸಾಲೆ-ನಿಮ್ಮ ।
ಅರಸಿಯರೆಲ್ಲರು ಸೆರೆ ಸೂರೆಯಾದರು ದಿಮ್ಮಿಸಾಲೆ ॥ ೧೦ ॥

ಏರುವ ಕುದುರೆಯ ಮಾ[1]ರಿದ[1] ಸೂಚನೆ ದಿಮ್ಮಿಸಾಲೆ-ಮುಂದೆ ।
ನಾರಿಯ ಪುರಕೆಲ್ಲ ದಾರಿಗಳಾದವು ದಿಮ್ಮಿಸಾಲೆ ॥ ೧೧ ॥

ನಟ್ಟಡವಿಯೊಳಗೆಲ್ಲ ಕಟ್ಟ್ಯಾರು ಗುಡಿಗಳ ದಿಮ್ಮಿಸಾಲೆ-ಮುಂದೆ ।
ಕಟ್ಟಿದ ಕೇರಿಯ ಬಿಟ್ಟೆಲ್ಲ ಹೋದರು ದಿಮ್ಮಿಸಾಲೆ ॥ ೧೨ ॥

ಕಟ್ಟಿದ ಕೇರಿಯ ಬಿಟ್ಟೆಲ್ಲ ಬರುವಾಗ ದಿಮ್ಮಿಸಾಲೆ-ಮುಂದೆ ।
ಕಟ್ಟೆಗೆಯನು ಹಾಕಿ ಸುಟ್ಟರು ಶರಣರು ದಿಮ್ಮಿಸಾಲೆ ॥ ೧೩ ॥

ವ್ರತನೇಮ ಶೀಲರು ಮತಿಗೆಟ್ಟು ಹೋದರು ದಿಮ್ಮಿಸಾಲೆ-ದೊಡ್ಡ ।
ಮತಿವಂತ ಬಸವಣ್ಣ ಮರ್ತ್ಯಕ್ಕೆ ಬರುವಾಗ ದಿಮ್ಮಿಸಾಲೆ ॥ ೧೪ ॥

ಲಿಂಗವ ಧರಿಸಿದ ಜಂಗಮರೆಲ್ಲರು ದಿಮ್ಮಿಸಾಲೆ-ತಮ್ಮ ।
[2]ಅಂಗದ ಲಿಂಗಕ್ಕೆ[2] ತಂದರು ಭಂಗವ ದಿಮ್ಮಿಸಾಲೆ ॥ ೧೫ ॥

ಉಬ್ಬಿದ ಜನರಿಗೆ ದಿಬ್ಬಣಗಳು ಬಂತು ದಿಮ್ಮಿಸಾಲೆ-ಇನ್ನು ।
ಒಬ್ಬನ ಮುಖದಿಂದ ಅಬ್ಬರವಾದೀತು ದಿಮ್ಮಿಸಾಲೆ ॥ ೧೬ ॥

ಓದುವ ಶಾಸ್ತ್ರಕ್ಕೆ ಮಾದಿಗ ಬರುತ್ತಾನೆ ದಿಮ್ಮಿಸಾಲೆ-ಮುಂದೆ ।
ಆದಿ ಗಣಂಗಳ ಪಾದವೆ ಗತಿಯೆನ್ನಿ ದಿಮ್ಮಿಸಾಲೆ ॥ ೧೭ ॥

ಧಾತ್ರಿಯ ಜನರೆಲ್ಲ ಒಂದು ಗೋತ್ರಗಳಾದರು ದಿಮ್ಮಿಸಾಲೆ-ವೇದ ।
ಶಾಸ್ತ್ರವನೋದುವ ರೀತಿಯನರಿಯಾರು ದಿಮ್ಮಿಸಾಲೆ ॥ ೧೮ ॥

ಕತ್ತಲೆ ಕವಿದಾವು ಮರ್ತ್ಯದೊಳಗೆ ಮುಂದೆ ದಿಮ್ಮಿಸಾಲೆ-ಇದ ।
ರೊತ್ತ[3] ದ[3] ಕೇರಿಗಳುತ್ತಮವಾದೀತು ದಿಮ್ಮಿಸಾಲೆ ॥ ೧೯ ॥

1 ರುವ (ಒ.) 2 ಲಿಂಗದ ಲೀಗತೆ (ಅ, ಇ, ಎ, ಕ.) 3 ರ (ಒ.)

ಮರ್ತ್ಯದೊಳಗೆ ದೊಡ್ಡ ಎತ್ತಿನ ಹಬ್ಬಕ್ಕೆ ದಿಮ್ಮಿಸಾಲೆ–ಮುಂದೆ ।
ಕುಸ್ತಿಗಳಾದವು ಉತ್ತರ ದಿಕ್ಕಿಲಿ ದಿಮ್ಮಿಸಾಲೆ ॥ ೨೦ ॥

ಕಲ್ಲನಂದಿಯು ಮುಂದೆ ಕಲ್ಯಾಣವಾದೀತು ದಿಮ್ಮಿಸಾಲೆ–ಒಂದು ।
ಕಲ್ಲಿನ ಗವಿಯಿಂದ ಒಲ್ಲಹವಾದೀತು ದಿಮ್ಮಿಸಾಲೆ ॥ ೨೧ ॥

ಪಟ್ಟದ ಬಿದುನೂರು ಹೊಟ್ಟಾಗಿ ಹೋದಿತು ದಿಮ್ಮಿಸಾಲೆ–ಮುಂದೆ ।
ಪಟ್ಟಕ್ಕೆ ವೀರವಸಂತನು ಬರುತಾನೆ ದಿಮ್ಮಿಸಾಲೆ ॥ ೨೨ ॥

ಅಂಗಿರಸ ಪುಷ್ಯ ಶುದ್ಧ ನವಮಿಯಲ್ಲಿ ದಿಮ್ಮಿಸಾಲೆ–ಮುಂದೆ ।
ಸಂಗನ ಶರಣರು ಓಂಗದೆ ಸಾರಿದರು ದಿಮ್ಮಿಸಾಲೆ ॥ ೨೩ ॥

ಮುಂದಣ ಶಿಶುವು ಮುಂದಣ ಸುದ್ದಿಗಳಂದಾಡಿತು ದಿಮ್ಮಿಸಾಲೆ ।
ಎಂದಿಗೆ ಸಿದ್ಧಗಳೆಂದನಬೇಡಿರೊ ದಿಮ್ಮಿಸಾಲೆ ॥ ೨೪ ॥

ಮಂಗಳವೆನಿಸುವ ಸಂಗಮೇಶ್ವರ ಸಿದ್ಧ ದಿಮ್ಮಿಸಾಲೆ–ನಾಗ ।
ಲಿಂಗನೆನ್ನಂಗದೊಳು ಹಿಂಗದೆ ಸಾರಿದ ದಿಮ್ಮಿಸಾಲೆ ॥ ೨೫ ॥

**ಕರಸ್ಥಲದ ನಾಗಲಿಂಗಯ್ಯನ ಕಾಲಜ್ಞಾನ**
**ಸಂಪೂರ್ಣಂ**

# ರುದ್ರಮುನಿ ಸ್ವಾಮಿಯ ಕಾಲಜ್ಞಾನ

**ವಚನ** ॥ * ಆದಿ, ಅನಾದಿ, ಅನಂತ, ಅರ್ಭುದ, ತಮಂದ, ತಾರಜ, ತಂಡಜ, ಭಿನ್ನಜ, ಭಿನ್ನಾಯುಕ್ತ, ಅವ್ಯಾಯುಕ್ತ, ಮಹಾಯುಕ್ತ, ಮಣಿರಣ, ಮಾಸ್ಯರಣ, ವಿಶ್ವರಣ, ವಿಸ್ವಾವಸು, ಲೀಲಾಂಗ, ಅಲಂಕೃತ, ಕೃತಾಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ. ಇಂತಿ ಇಪ್ಪತ್ತೊಂದು ಯುಗದಲ್ಲು, ನಮ್ಮ ಬಸವಣ್ಣನವರೆ ಭಕ್ತ, ಪ್ರಭುದೇವರೆ ಜಂಗಮವು, ಇಂತೆಂಬ ಬೇಧವಿಲ್ಲದೆ ನೋಡಿರಯ್ಯ ಇಂತೆಂಬ ಭಕ್ತಿಯ, ಪ್ರಕಾಶವನ್ನುಂಟುಮಾಡಬೇಕೆಂದು, ಮಡಿಗೆಯುಮಾದರಸರು, ಮಾದಲಾಂಬಿಕೆಯರ ಚಿದ್ಗರ್ಭದಲ್ಲಿ ಉದ್ಭವಿಸಿ, ತಂಡ ತಂಡದ ನಾಮಾಂಕಿತವ ಕೈಕೊಂಡು, ಬಸವ ಪ್ರಿಯ ಕೂಡಲ ಚೆನ್ನಸಂಗಯ್ಯನವರ ದಿವ್ಯ ಚರಣಾರವಿಂದಕ್ಕೆರಗಿದೆನು. ಕಲಿಯುಗದ ಪ್ರಮಾಣ ಎಷ್ಟೆಂದರೆ (೪೩೨೦೦೦) ನಾಲ್ಕು ಲಕ್ಷದ ಮೂವ್ವತ್ತೆರಡು ಸಾವಿರ ವರುಷದ ಆದಿಯೊಳಗೆ (೪೯೬೭) ನಾಲ್ಕು ಸಾವಿರದ ಒಂಬೈನೂರ ಅರವತ್ತೇಳು ವರುಷವಾಯಿತು. ಶ್ರೀ ಬಸವೇಶ್ವರ ದೇವರು, ಕಲ್ಯಾಣಕ್ಕೆ ಬಿಜಯಂಗೈಸಿದ್ದು ಕಲಿವರುಷಗಳು (೩೮೫೭) ಮೂರು ಸಾವಿರದ ಎಂಟನೂರ ಐವತ್ತೇಳನೆಯ ವಿಕ್ರಮನಾಮ ಸಂವತ್ಸರದಿಂದ, ರಾಕ್ಷಸನಾಮಸಂವತ್ಸರಕ್ಕೆ ಮೂವತ್ತಾರು ವರುಷವಾಯಿತು. ಈ ಸಂವತ್ಸರದ ಕಾರ್ತೀಕ ಶುದ್ಧ ಬಿದಿಗೆ ಸೋಮವಾರದಲ್ಲಿ, ಗುಹೇಶ್ವರ ಲಿಂಗದ[1] ಲ್ಲಿ[1] ಪ್ರಭುದೇವರು ಐಕ್ಯವಾದದ್ದು. ಕಲಿವರುಷಗಳು (೩೯೧೧) ಮೂರು ಸಾವಿರದ ಒಂಬೈನೂರ ಹನ್ನೊಂದನೆ ವರುಷವಿದ್ದರೆ,

---

* ಈ ಕಾಲಜ್ಞಾನದ ಪ್ರಾರಂಭದಲ್ಲಿ ಹೀಗೆ ಬರೆದಿದೆ. "ದುಂದುಭಿನಾಮ ಸಂವತ್ಸರದ ಜ್ಯೇಷ್ಠ ಶುದ್ಧ, ಪಂಚಮಿಯ ಸೋಮವಾರದ ದಿವಸ, ಶ್ರೀ ಶೈಲ ಪರ್ವತದಲ್ಲಿ ಉದ್ಭವಿಸಿತು." ಎಂದು (ಉ, ಎ, ಒ, ಗ.) ಪ್ರತಿಗಳಲ್ಲಿ ಇದೆ.

[1] ಲ್ಲು (ಅ, ಇ, ಎ, ಒ, ಕ.)

ರಾಕ್ಷಸನಾಮಸಂವತ್ಸರದ ಮಾರ್ಗಶಿರ ಶುದ್ಧ ಪಾಡ್ಯಮಿ ಮಂಗಳವಾರದ ದಿವಸ ಘಳಿಗೆ ಇಪ್ಪತ್ತೆಂಟಕ್ಕೆ ಕಪ್ಪಡಿ ಸಂಗಮೇಶ್ವರನೊಳಗೆ ಬಸವಣ್ಣನವರು ಐಕ್ಯವಾದದ್ದು. ತಮ್ಮ ಇಷ್ಟಲಿಂಗದಲ್ಲಿ ನೀಲಲೋಚನೆ ಹಡಪದಅಯ್ಯಗಳು ಸಹ ಐಕ್ಯವಾಗಿ ಶಿವಲೋಕಕ್ಕೈದಿದರು. ಇದೆ ರಾಕ್ಷಸನಾಮಸಂವತ್ಸರದ ಫಾಲ್ಗುಣ ಶುದ್ಧ ಪೌರ್ಣಮಿ ಮಂಗಳವಾರದ ದಿವಸ, ರಾತ್ರಿ ೧೮ ಘಳಿಗೆಗೆ, ರೋಹಿಣಿನಕ್ಷತ್ರದಲ್ಲಿ, (೭೭೦) ಏಳನೂರ ಎಪ್ಪತ್ತು ಅಮರಗಣಂಗಳು, ಅರವತ್ತು ಮೂರು ಪುರಾತನರು. ಹನ್ನೆರಡು ಸಾವಿರ ಜಂಗಮವು ಸಹಿತ, ಬಿಜ್ಜಳನ ವಧೆಯಂಮಾಡಿ, ಚೆನ್ನಬಸವಣ್ಣನವರು, ಮಡಿವಾಳ ಮಾಚಯ್ಯನವರು ಮುಂತಾಗಿ, ಉಳುವಿಗೆ ಹೋದರೆಂಬುದೆ ಪ್ರಸಿದ್ಧಮಸ್ತು. (ಇನ್ನು ಚೆನ್ನಬಸವಣ್ಣನವರು, ಕಲ್ಯಾಣಕ್ಕೆ ಬಿಜಯಂಗೈಸುವರು. ಹನ್ನೆರಡು ಆನಂದಹೋಗಿ, ಹದಿಮೂರನೆಯ ಆನಂದಕ್ಕೆ, ಬಂದರೆಂಬುದೇ ಕುರುಹು.) ಈ ಕುರುಹಿಗೆ ಬಾರದಿರ್ದಡೆ, ಬಂದರಯ್ಯ ಆನಂದವೆಂಬೊ ಆದರೊಳಗೆ ಕಲಿವರುಷ (೪೯೬೭) ನಾಲ್ಕು ಸಾವಿರದ ಒಂಬೈನೂರ ಅರವತ್ತೇಳನೆಯ, ಅಕ್ಷಯನಾಮಸಂವತ್ಸರಕ್ಕೆ, ಚೆನ್ನಬಸವೇಶ್ವರ ದೇವರು, ಕಡೆಗೆ ಬರುವರೆಂದು ಹೇಳಿ, ಇಷ್ಟರೊಳಗೆ ಆಗುವಂಥ ಕುರುಹು ಏನೆಂದೊಡೆ:—ಚೆನ್ನದಂಡನಾಯಕರ ಪ್ರಸಾದವಾಕ್ಯವು. ಅಳಿಯಬಿಜ್ಜಳನಳಿದಮೇಲೆ, ಪ್ರತಾಪರುದ್ರನಾಳುವನು. ಈತನಳಿದಬಳಿಕ, ಶಿವನಲ್ಲಿ ಪಡೆದುಕೊಂಡ, ದೈತ್ಯರು ಮುಂತಾಗಿ ಇಪ್ಪತ್ತೊಂದು ಜನ ಮುಸಲಮಾನ್ನರು ಡಿಳ್ಳಿಗೆ ಅರಸಾಗುವರು. ನವಬಲ್ಲಾಳರೊಳಗಣ, ಕಪಿಲರಾಯಂಗೆ ಹಂಪೆಯ[1]ಲ್ಲಿ[1] ಪಟ್ಟವಾಗಿ ರಾಜ್ಯವನ್ನಾಳುವ. ಕಡೆಗೆ ರಾಯಪಟ್ಟವಳಿದು ಪಾಪ ಹುಟ್ಟಿ ಕಲಿ ಉರವಣಿಸಿ ಬರುವುದು. ಕುರುಹು ಏನೆಂ[2]ದರೆ[2] :—

**ಪದ**

ಕರ್ಮವು ಹೆಚ್ಚಿತು ಕಡೆಮೊದಲಿಲ್ಲದೆ । ಧರ್ಮವ ಬಿಡಬೇಡಿರಣ್ಣಾ ।
ಮರ್ಮವ ಕೇಳುವ ವಸ್ತಾದಿಬರುತಾನೆ । ನಿರ್ಮಲದಲ್ಲಿರಿರಣ್ಣಾ ॥ ೧ ॥

[1] ಲ್ಲು (ಅ, ಇ, ಒ, ಕ, )  [2] ದೊಡೆ (ಅ, ಇ, ಒ, ಕ.)



**ವಚನ** ॥ ಕಲಿವರುಷದೊಳಗಣ (೪೮೧೮) ನಾಲ್ಕು ಸಾವಿರದ ಎಂಟನೂರ ಹದಿನೆಂಟನೆಯ ಹೇವಿಳಂಬಿನಾಮಸಂವತ್ಸರದಲ್ಲಿ ಹೆಮ್ಮಾರಿ ದುರ್ಗಿ ಹುಟ್ಯಾಳು ಕ್ಷೇಮವಾದಂಥ ದೊರೆಗಳ ರಾಜ್ಯವಂ ಆಳುವಳು.

**ಪದ**

ಮುಂದಿನ ದಿನವಿನ್ನು ಬಲುಕೆಟ್ಟು ಬರುತೀದೆ ಕೇಳಿರಣ್ಣಾ ।
ಕಂದನ ದುರ್ಗವ ಕೈಸೆರೆ ಹಿಡಿದಾರು ಕೇಳಿರಣ್ಣಾ ॥ ೧ ॥
ಅಂದು ಇಂದೆನಬೇಡಿ ಬಂದಿತು ಮುಂದೆಯು ಕೇಳಿರಣ್ಣಾ ।
ಎಂದು ಪೇಳಿದವಾಕ್ಯ ಸಂದೇಹವಿಲ್ಲವು ಕೇಳಿರಣ್ಣಾ ॥ ೨ ॥

**ವಚನ** ॥ ಕಲಿವರುಷದೊಳಗಣ (೪೮೭೧) ನಾಲ್ಕು ಸಾವಿರದ ಎಂಟನೂರ ಎಪ್ಪತ್ತೊಂದನೆಯ ವಿಕೃತಿನಾಮಸಂವತ್ಸರದ ಮಾರ್ಗಶಿರ ಶುದ್ಧ, ಪಂಚಮಿಯ ಗುರುವಾರ ಉತ್ತರಾಷಾಡ ನಕ್ಷತ್ರದಲ್ಲಿ ಆದಿ ಬಸವೇಶ್ವರ ದೇವರ ಶ್ರೀಪಾದವನ್ನು ಸೋಂಕಿದ ಭಕ್ತಂಗೆ, ಸ್ತ್ರೀಹತೆಯಿಂದ ಮುಕ್ತವಾಯಿತು. ದುರ್ಭಿಕ್ಷವಾದೀತು. ಇದೇ ಕಡೆಯು. ಇನ್ನು ಮುಂದೆ ಪಾಪ ಘನವಾದೀತು.

**ಪದ**

ಮಾಳಿ[1]ಗಳು ಅಡಗ್ಯಾ[1]ವು ಬೆಳೆಗಳು ನಿಂತಾವು ಕೇ[2]ಡನೋಡಿ[2] ।
ಬಲು ಘನವಾದೀತು ಮಾರಿರ ಕಾಟವು ಕೇ[3]ಡನೋಡಿ[3] ॥ ೧ ॥
ಇಳೆಯೊಳಗೆಚ್ಚಿದ ಒಬ್ಬರಿಗೊಬ್ಬರು ಕೇಡನೋಡಿ ।
ಚಿ[4]ಳ[4]ಪಿಳ ಮಾಡ್ಯಾರು ಒಬ್ಬರ ಗಂಟನ್ನು ಕೇಡನೋಡಿ ॥ ೨ ॥

**ವಚನ** ॥ ಶಿವಭಕ್ತಿಯೆಂಬುದು ಕೆಡುವುದು, ಗುರು ಲಿಂಗ ಜಂಗಮವ ಕಂಡರೆ ನಿಂದಿಸಿ ನಗುವರು, ಭಕ್ತ ಶರಣರು ಎನ್ನದೆ ಅವರ ಕೈಯ್ಯಲ್ಲಿ,

[1] ಗಾಳಿ ಅಳಿದಾ.  [2] [3] ಳಿರಣ್ಣ (ಅ. ಇ, ಒ, ಕ.)
[4] ಳ (ಅ, ಇ, ಒ, ಕ.)

ಕೆಲಸವಂ ಮಾಡಿಸುವರು, ಗುರುಗಳಂ, ಜಂಗಮನಂ ಕಂಡರೆ ಹೀಯಾಳಿಸಿ, ಬೈದು ಕಾಲಿನಲ್ಲಿ ಒದೆಯುವರು, ಮುಖ್ಯ ಗುರುವಂ ಬಿಟ್ಟು ಪ್ರತಿಬಂಧಕ ವಾದವರನ್ನು ಗುರುವೆಂದು ಸೇರುವರು. ಲಿಂಗವಂತರೆಲ್ಲ, ಸುರೆಮಾಂಸವನ್ನು ತಿನ್ನುವರು. ವ್ರತತಪ್ಪಿ ಅನಾಚಾರಂಗಳಂ ನಡಸುವರು. 1ಇಂಥ1 ದುರ್ಗತಿಗಳಲ್ಲಿ ಜನಗಳು ನಡೆಯುವರು.

ಪದ

ಶ್ರೀ ಶೈಲ ಗಿರಿಯಮೇಲೆ ಶಿಖರದ ತೊಟ್ಟಿ[2] ಯು[2] ಕೇಳಿರಣ್ಣಾ ।
ಬಸವನ ಕರ್ಣದಿ ಹುಟ್ಟಿತು ಜಗವೆಲ್ಲ ಕೇಳಿರಣ್ಣಾ ॥ ೧ ॥

ವಸುಧೆಗೆ ಇದು ಗುರುತು ಅರಿವಂಥ ಜನರಿಗೆ ಕೇಳಿರಣ್ಣಾ ।
ಅಸಮಲೋಚನ ಶಿವ ಶರಣಾರು ಬರುತಾರೆ ಕೇಳಿರಣ್ಣಾ ॥ ೨ ॥

ವಚನ ॥ ಕಲಿವರುಷಗಳಲ್ಲಿ (೪೮೯೨) ನಾಲ್ಕು ಸಾವಿರದ ಎಂಟ ನೂರ ತೊಂಬತ್ತೆರಡನೆಯ, ವಿರೋಧಿಕೃತುನಾಮಸಂವತ್ಸರದ ಶ್ರಾವಣ ಬಹುಳ ಪಾಡ್ಯಮಿ ಬುಧವಾರ ಶತಭಿಷಾ ನಕ್ಷತ್ರದಲ್ಲಿ ಶ್ರೀ ಶೈಲಗಿರಿಯ ಭಂಗಾರದ ಮೂಲಬಸವೇಶ್ವರ ದೇವರ ಬಲದ ಕರ್ಣದಲ್ಲಿ ತೊಟ್ಟಿಗಿಡ ಹುಟ್ಟುವುದೇ ಕುರುಹು. ಈ ಕುರುಹು ಮೂಢ ಜನಗಳಗೆ ತಿಳಿಯಲಾರದು.

ಪದ

ಮೀಸೆ ಇಲ್ಲದವರು ದೇಶವನಾಳ್ಯಾರು ಕೇಳಿರಣ್ಣಾ ।
ಘಾಸಿಯ ಮಾಡ್ಯಾರು ರಾಜ್ಯದ ಜನರನ್ನು ಕೇಳಿರಣ್ಣಾ ॥ ೧ ॥

ಮೋಸವ ಮಾಡುತ ರಾಜ್ಯದ ಹಣಗಳ ಕೇಳಿರಣ್ಣಾ ।
ಹೇಸಿಕೆಮನುಜರ್ಗೆ ತಿಳಿಯದು ಈ ವಾಕ್ಯ ಕೇಳಿರಣ್ಣಾ ॥ ೨ ॥

ವಚನ ॥ ವಿರೋಧಿ ಕೃತುನಾಮಸಂವತ್ಸರದ ಶ್ರಾವಣ ಬಹುಳ ಪಾಡ್ಯಮಿ ಬುಧವಾರ ಶತಭಿಷಾ ನಕ್ಷತ್ರದಲ್ಲಿ, ಶ್ರೀ ಶೈಲಗಿರಿಯ ಮೇಲಿರುವ,

1 ಈ (ಅ, ಇ, ಒ, ಕ, ಜ.)  2 ಲ (ಅ, ಇ, ಒ, ಕ, ಜ.)



ಭಂಗಾರದ ಆದಿ ಬಸವೇಶ್ವರನ ಎಡದಪಾರ್ಶ್ವದ ಕರ್ಣದ್ವಾರದಿಂದ ಒಂದು ಮುಳ್ಳುಬೆತ್ತದ ಗಿಡವು ಹುಟ್ಟಿ, ಇನ್ನು ಮುಂದಕ್ಕೆ ಆ ಗಿಡದಿಂದ ಒಂದು ಕಾರಣ ನಡೆಯುತ್ತಿರುವುದು. ಈ ಕುರುಹು ನಮ್ಮ ಪ್ರಭುಲಿಂಗದೇವರ ಭಕ್ತರಾದ ಶರಣರಿಗೆ ತಿಳಿಯುವುದಲ್ಲದೆ, ಭಕ್ತಿಭಾವಂಗಳಿಲ್ಲದ ಪಶುಪಾಷಂಡಿ ಅಧಮರಿಗೆ ತಿಳಿಯಲಾರದು.

ಪದ

ಜೋತಿಷ್ಯಶಕುನವು ಸಟಿಯಾಗಿ ಹೋದಾವು ಕೇ[1] ಡನೋಡಿ[1] ।
ಚಾತುರ್ಯ ಹೆಚ್ಚಿತು ಕಲಿಕೆಟ್ಟು ಹೋದೀತು ಕೇ[2] ಡನೋಡಿ[2] ॥ ೧ ॥

ಅತ್ತೆಯ ಸೊಸೆಬಂದು ಕಾಲಲ್ಲಿ ಒದೆವಾಳು ಕೇ[3] ಡನೋಡಿ[3] ।
ನಿತ್ಯನೇಮವು ಜಪ ತಪಗಳು ಅಳಿವುದು ಕೇಡನೋಡಿ ॥ ೨ ॥

ಕೆಟ್ಟು ಭ್ರಷ್ಟಾಗುವರು ಮಠಮಾನ್ಯದವರೆಲ್ಲ ಕೇಡನೋಡಿ ।
ತೊಟ್ಟಿಲ ಕಟ್ಟುವರು ವಿರಕ್ತಮಠದಲ್ಲಿ ಕೇಡನೋಡಿ ॥ ೩ ॥

ಅಟ್ಟಾಡಿ ಮುಂಡೆಯರ ಇಟ್ಟುಕೊಂಡಾಳುವರು ಕೇಡನೋಡಿ ।
ಕಷ್ಟಾವು ಮರ್ತ್ಯದ ದುಷ್ಟಜನರಿಗೆಲ್ಲ ಕೇಡನೋಡಿ* ॥ ೪ ॥

ಜಂಗುಳಿದೈವಕ್ಕೆ ಜನ್ನಿಗೆ ಬಿಟ್ಟಾರು ಕೇಡನೋಡಿ ।
ತಂಗಿಯ ಒಡನಾಡಿ ಸಂಗವ ಮಾಡ್ಯಾರು ಕೇಡನೋಡಿ ॥ ೫

ಲಿಂಗ ಉಳ್ಳವರಿನ್ನು ಹೊಲತಿಯ ನೊಯ್ವರು ಕೇಡನೋಡಿ ।
ಲಿಂಗ ಧರಿಸಿದವರು ಮಾಂಸವ ತಿನ್ನುವರು ಕೇಡನೋಡಿ ॥ ೬ ॥

ಭಂಗಿಪಾನವಮಾಡಿ ಲಿಂಗವ ಮರತಾರು ಕೇಡನೋಡಿ ।
ಅಂಗೈ ಶಿವನರಿಯದೆ ಮಂಗಗಳಾದಾರು ಕೇಡನೋಡಿ ॥ ೭ ॥

ವಚನ ॥ ಲಂಡಭಂಡರು, ಕಳ್ಳರು, ಗುರುಹಿರಿಯರಿಗೆ ದ್ರೋಹ ಅಪವಾದಗಳ ನಡಸುವರು. ಭಂಡಜನರು ಘನವಾದರು. ಸತ್ಯವು ಅಡ

1 2 3 ಳಿರಣ್ಣ (ಅ, ಇ, ಒ, ಕ, ಜ.)  * ಈ ಅರ್ಧ ಪದ್ಯ (ಎ.) ಪ್ರತಿಯಲ್ಲಿಲ್ಲ.

ಗಿತು. ಅಸತ್ಯವು ಹೆಚ್ಚಿತು. ಶುಭವಾಗಿರುವುದು, ಅಶುಭವಾದೀತು. ಅಶುಭವಾದದ್ದು, ಶುಭವಾದೀತು. ಮಳೆ ಬೆಳೆ ಮಟ್ಟಾದೀತು. ಭೂಮಿಯಲ್ಲಿ ಬೆಳೆ ಹುಸಿಯಾದೀತು. ಆಗಿಂದಾಗ್ಗೆ, ಬರಗಾಲಗಳು ಬರುವವು. ಜನರಿಗೆ ಹರುಷ ನಿಂತೀತು. ಇಂತಿ ಕುರುಹುಗಳ ತಿಳಿಯಲಾರದೆ, ನಾವು ದೊಡ್ಡವರೆಂಬ ಗರ್ವದಿಂದ ಭ್ರಷ್ಟರಾಗಿ ನರಕದಲ್ಲಿ ಹೊರಳುವರು.

**ಪದ**

ಊರಿಗೆ ಹೋದವರು ಊರಲ್ಲೆ ಸತ್ತಾರು ಕೇಡನೋಡಿ।
ನೀರಿಗೆ ಹೋದವರು ನೀರಲ್ಲೆ ಸತ್ತಾರು ಕೇಡನೋಡಿ ॥ ೧ ॥
ಕೇರಿಗೆ ಹೋದವರು ಕೇರಿಯಲೆ ಸತ್ತಾರು ಕೇಡನೋಡಿ।
ರಾತ್ರಿಯಲಿ ಸಾಯುವರು ಯಾರಿನ್ನು ತಿಳಿಯಾರು ಕೇಡನೋಡಿ ॥ ೨ ॥

**ವಚನ** ॥ ಕಲಿವರುಷದಲ್ಲಿ (೪೯೧೭) ನಾಲ್ಕು ಸಾವಿರದ ಒಂಬೈನೂರ ಹದಿನೇಳನೆಯ ಧಾತುನಾಮಸಂವತ್ಸರದ ಆಶ್ವೀಜ ಶುದ್ಧ ಸಪ್ತಮಿಯ ಮೂಲನಕ್ಷತ್ರದಲ್ಲಿ, ಶಿವನಾಜ್ಞೆಯಿಂದ ಕಾಳಿಯೆಂಬ ದುರ್ಗಿಬಂದು, ಮರ್ತ್ಯ ಲೋಕದಲ್ಲಿ, ಕರ್ಮದ ಪಾಪಿ ಜನಂಗಳ ಸಂಹಾರ ಮಾಡುವಂಥಾ ವರುಷುಗಳು ಮೂವತ್ತಾರು ವರುಷ ಪರಿಯಂತ, ಇರ್ದು ಸಾವುಗಳಿಂ, ಹಿಂಸೆಗಳಿಂ, ನಾನಾ ಉಪದ್ರಗಳಿಂ ಮಪ್ನತೆಯಿಂದಿರುವ ಕರ್ಮಿಗಳ ಲಾಲಿಸುತ್ತಾ ಬರುವಳು.

**ಪದ**

ಮುಂದಿನ ಸೂಚನೆ ಚನ್ನಾಗಿ ಪೇಳುವೆ ಕೇಡನೋಡಿ।
ಚಂದ್ರನಮೇಲಿನ್ನು ಚುಕ್ಕಿತಾ ಮೂಡುವುದು ಕೇಡನೋಡಿ ॥ ೧ ॥
ಬಂಧ ಬ್ರುಹಸ್ಪತಿ ಚಂದ್ರನ ರಥದೊಳು ಕೇಡನೋಡಿ।
ಹಂದಿಮನುಜರಿಗೆ ತಿಳಿಯಾದು ಈ ಮಾತು ಕೇಡನೋಡಿ ॥ ೨ ॥
ಕುಂದನ ಮಾರ್‍ಯಾರು ಮರ್ತ್ಯದ ಜನರಿನ್ನು ಕೇಡನೋಡಿ।
ಸುಂದಾವುದಿನ ಶಿವ ಶರಣಾರು ಬರುತಾರೆ ಕೇಡನೋಡಿ ॥ ೩ ॥



**ವಚನ** ॥ ಕಲಿವರುಷದಲ್ಲಿ (೪೯೩೦) ನಾಲ್ಕು ಸಾವಿರದ ಒಂಬೈನೂರ ಮೂವ್ವತ್ತನೆಯ ವಿರೋಧಿ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿ ಸ್ಥಿರವಾರದ ರೇವತಿನಕ್ಷತ್ರದಲ್ಲಿ ಚಂದ್ರನಮೇಲೆ, ಬ್ರುಹಸ್ಪತಿ ಎಂಬ ಚುಕ್ಕಿ ಬರುವುದು. ಈ ಕುರುಹನ್ನು ನಮ್ಮ ಶರಣರಾದವರಿಗಲ್ಲದೆ, ಪಾಪಿ ಪಾಷಂಡಿ ಕರ್ಮಿಗಳಾದ, ಅಜ್ಞಾನ ಮೂರ್ಖ ಮನುಜರಿಗೆ ತಿಳಿಯದು ಕಾಣಿರಯ್ಯ.

**ಪದ**

ಆಗಾಗ್ಗೆ ಬಂದಾವು ದಿನಮಾನಗಳು ಕೆಟ್ಟು ಕೇಡನೋಡಿ।
ಸೋಗೆನವಿಲಿನಂತೆ ಬರಿಮೋಡ ತಿರುಗ್ಯಾವು ಕೇಡನೋಡಿ ॥ ೧ ॥
ಮೇಘದ ನೀರನ್ನು ಮಾಯೆ ತಾ ನುಂಗ್ಯಾಳು ಕೇಡನೋಡಿ।
ಸಾಗಾದು ಜನರಿಗೆ ಕಷ್ಟಗಳು ತೋರ್‍ಯಾವು ಕೇಡನೋಡಿ ॥ ೨ ॥
ಭೂಮಿ ಮೇಗಣ ವೃಕ್ಷ ಎಲ್ಲಾವು ಉರಿದಾವು ಕೇಡನೋಡಿ।
ಸೀಮೆಗಳೆಲ್ಲವು ಹಾಳಾಗಿ ಹೋದಾವು ಕೇಡನೋಡಿ ॥ ೩ ॥
ರಾಮುರ ಕಾಳಾಗವಾದಾವು ಮರ್ತ್ಯದಿ ಕೇಡನೋಡಿ।
ವ್ಯೋಮಕೇಶ ಶಿವ ಶರಣರು ಬರುತ್ತಾರೆ ಕೇಡನೋಡಿ ॥ ೪ ॥

**ವಚನ** ॥ ಕಲಿವರುಷಗಳಲ್ಲಿ (೪೯೩೧) ನಾಲ್ಕು ಸಾವಿರದ ಒಂಬೈನೂರ ಮೂವ್ವತ್ತೊಂದನೆಯ ವಿಕ್ರುತುನಾಮಸಂವತ್ಸರದ ಆಷಾಡ ಶುದ್ಧ ಆರನೆಯ ಮಂಗಳವಾರ ರಾತ್ರಿಯಿಂದ ಬೆಳಗ್ಗೆ ಸೂರ್ಯೋದಯವಾದ, ಎರಡೂವರೆ ಗಳಿಗೆ ಪರಿಯಂತರದಲ್ಲಿ, ನಕ್ಷತ್ರಗಳು ಉದುರುವುದೆ ಕುರುಹು. ಈ ಕುರುಹು ಬಲ್ಲಂಥ ನಮ್ಮ ಶರಣಾದಿಗಳಿಗಲ್ಲದೆ, ಮಿಕ್ಕಿನ ಪಾಮರ ಪಾಪಿಗಳಿಗೆ ತಿಳಿಯಲಾರದು.

**ಪದ**

ಚೆನ್ನಬಸವಣ್ಣನು ಬರುವ ಸೂಚನೆಗಿನ್ನು ಕೇಳರಣ್ಣಾ।
ಹೊನ್ನಿಗೆ ಬಸವಣ್ಣನ ಧ್ಯಾನವ ಮಾಡ್ಯಾರು ಕೇಳರಣ್ಣಾ ॥ ೧ ॥

ಚಿನ್ನ ಬಣ್ಣವನೆಲ್ಲ ಮಾರುತ್ತ ತಿನ್ನುವರು ಕೇಳಿರಣ್ಣಾ ।
ಅನ್ನವ ಕಾಣಾದೆ ಮನೆ ಮನೆ ತಿರುಗ್ಯಾರು ಕೇಳಿರಣ್ಣಾ ॥ ೨ ॥

**ವಚನ** ॥ ಕಲಿವರುಷದೊಳಗಣ (೪೯೩೨) ನಾಲ್ಕುಸಾವಿರದ ಒಂಬೈನೂರ ಮೂವ್ವತ್ತೆರಡನೆಯ ಖರಸಂವತ್ಸರದ ಕಾರ್ತಿಕಮಾಸ ಮೊದಲುಗೊಂಡು, ವಿಜಯಸಂವತ್ಸರದ, ಆಷಾಡ ಬಹುಳ ಅಮಾವಾಸ್ಯೆ ಪರಿಯಂತರ, ಕಲ್ಯಾಣಮಂಡಲ ಸೀಮೆ, ದುರ್ಭಿಕ್ಷವಾಗುವುದು. ಇದೇ ಕುರುಹು.

**ಪದ**

ಆಕಾಶ ವದರೀತು ಭೂಕಾಂತೆ ನಡುಗ್ಯಾಳು ಕೇಳಿರಣ್ಣಾ ।
ಲೋಕಕ್ಕೆ ಮೀರಿದ ದೊರೆಗಾಳು ಬರುವಾರು ಕೇಳಿರಣ್ಣಾ ॥ ೧ ॥
ಯಾರಾಟ ನಡೆಯಾದು ಹೋರಾಟ ನಡೆದೀತು ಕೇಳಿರಣ್ಣಾ ।
ವೀರ ವಸಂತನು ಬರುವ ಸೂಚನೆಗಿನ್ನು ಕೇಳಿರಣ್ಣಾ ॥ ೨ ॥

**ವಚನ** ॥ ಕಲಿವರ್ಷದಲ್ಲಿ (೪೯೪೯) ನಾಲ್ಕುಸಾವಿರದ ಒಂಬೈನೂರ ನಲವತ್ತೊಂಬತ್ತನೆಯ ಕೀಲಕನಾಮುಸಂವತ್ಸರದಲ್ಲಿ, ಕಿರೀಟ ರಾ[1]ಮ ರಾಜನು ಬೈಲಿಗೆ ಬಂದದ್ದೆ ಕುರುಹು. ಇವನು ಬಂದ ಆರು ತಿಂಗಳು ಕಲ್ಯಾಣಮಂಡಲ ಸೀಮೆ ಶುಭವಾಗುವುದು.

**ಪದ**

ದಣಿಗಳು ಬರುವರು ದಾತವ ಮುರಿವರು ಕೇಳಿರಣ್ಣಾ ।
ಎಣಿಕೆಯ ಕೇಳ್ಯಾರು ಎಳದಾಟವಾದೀತು ಕೇಳಿರಣ್ಣಾ ॥ ೧ ॥
ಹೆಚ್ಚಿದ ಸ್ತ್ರೀಯರ ಮೆಚ್ಚುಗಳ ಮಾಡ್ಯಾರು ಕೇಳಿರಣ್ಣಾ ।
ಅಚ್ಚಲಿಚ್ಚಿಗಳಲ್ಲಿ ಬೈಗಳ ಬೈವರು ಕೇಳಿರಣ್ಣಾ * ॥ ೨ ॥

1 ಜಾ (ಅ, ಇ, ಎ, ಒ, ಕ.) * ಈ ಪದ್ಯ (ಎ.) ಪ್ರತಿಯಲ್ಲಿಲ್ಲ.



**ವಚನ** ॥ ಕಲಿವರ್ಷಗಳಲ್ಲಿ (೪೯೫೩) ನಾಲ್ಕುಸಾವಿರದ ಒಂಬೈನೂರ ಐವತ್ತಮೂರನೆಯ, ಪರಿಧಾವಿ ನಾಮುಸಂವತ್ಸರದ ಚೈತ್ರಮಾಸ ಪ್ರಾರಂಭಮಾಡಿಕೊಂಡು, ಕಾರ್ತೀಕ ಶುದ್ಧ ಪಾಡ್ಯಮಿ ಪರಿಯಂತರದಲ್ಲಿ, ದಕ್ಷಿಣಭಾಗದಿಂದ ದವಸಕ್ಕೆ ದ್ರವ್ಯವಂ ಕೊಟ್ಟುಕೊಂಡು ಬಂದುದೇ ಕುರುಹು. ಕಚ್ಚ ಸೇರಿನ ಮಾನದಲ್ಲಿ ಹದಿನೆಂಟು ದಿನಸಿ ಮಾರಿದ್ದೇ ಸಾಕ್ಷಿ (೪೮೮೮೦೦೦) ನಲವತ್ತೆಂಟುಲಕ್ಷದ ಎಂಬತ್ತೆಂಟುಸಾವಿರದ ಜನಗಳು ಅನ್ನವ ಕಾಣದೆ ಲಯವಾಗಬೇಕು. ಭೂಮಿಯೆದ್ದು ನಡುಗಬೇಕು. ಇದು ಯಾವಾಗ ಎಂದರೆ; ಪರಿಧಾವಿನಾಮುಸಂವತ್ಸರದ ಜೇಷ್ಠ ಶುದ್ಧ ಸಪ್ತಮಿ ಮಂಗಳವಾರ ಉಬ್ಬಾನಕ್ಷತ್ರದಲ್ಲಿ, ಹನ್ನೊಂದು ತಾಸಿಗೆ ನಡುಗುವುದು. ಚಂದ್ರನ ಮೇಲೆ ಚುಕ್ಕಿ ಮೂಡಿದ್ದೇ ಕುರುಹು. ಅಲ್ಲಿಂದ ಮೂರು ವರ್ಷ ಮಳೆ ಬೆಳೆ ಕಂಡ ಮಂಡಲವಾದದ್ದೆ ಕುರುಹು.

**ಪದ**

ಕಲ್ಯಾಣ ಪಟ್ಟಣವು ಕಟುಗೇರಿಯಾದೀತು ಕೇಡನೋಡಿ ।
ಕಲ್ಲು ಕಲ್ಲಲ್ಲಿ ಒಂದು ಕುದುರೆಯ ಕಟ್ಯಾರು ಕೇಡನೋಡಿ ॥ ೧ ॥
ಮುಲ್ಲೆ ಮುಸಲಮಾನರೆಲ್ಲರು ಆಳಿವರು ಕೇಡನೋಡಿ ।
ಬಲ್ಲಿದ ವೀರ ವಸಂತನು ಬರುತಾನೆ ಕೇಡನೋಡಿ ॥ ೨ ॥

**ವಚನ** ॥ ಪರಿಧಾವಿನಾಮುಸಂವತ್ಸರದ ಜೇಷ್ಠ ಶುದ್ಧ ಸಪ್ತಮಿ ಮಂಗಳವಾರದ ದಿವಸ, ಉಬ್ಬಾನಕ್ಷತ್ರದಲ್ಲಿ ಹದಿನೆಂಟಕ್ಕೆ ಸಿಂಹಲಗ್ನದಲ್ಲಿ, ದೇವಕೀ ದೇವರ ಸ್ವಗರ್ಭದಲ್ಲಿ ಹುಟ್ಟುತಿಹ. ಆತನ ರೂಪು ಡಮರುಗಹಸ್ತ, ಊರ್ಧ್ವರೋಮವು, ಸೌಂದರ್ಯರೂಪು. ಹಣೆಯಲ್ಲಿ ಹಸುರುನರ ಎದ್ದು, ಇದ್ದಂಥ ವೀರ ವಸಂತರಾಯನು, ಹುಟ್ಟುತಿರ್ಪನು. ಈತನ ಜನನ ಕಾಲದಲ್ಲಿ ನಕ್ಷತ್ರಗಳು ಸುರಿಯಬೇಕು. ಮತ್ತು ಮಳೆ ಸೂರ್ಯೋದಯ ವಾದ ಮೂರು ಘಳಿಗೆ ಪರಿಯಂತರಕ್ಕೂ ಸುರಿಯಬೇಕು. ಈತನು ಹುಟ್ಟಿದ ನಕ್ಕೆ ಕೇಡು ಏನೆಂದರೆ:—ಬಿದುರುಕೋಟೆಯಲ್ಲಿ (೯೦೦೦೦೦).

ಒಂಬತ್ತು ಲಕ್ಷ ದಂಡು ಮಡಿಯಬೇಕು. ಎಡತಂಟನಾಜ್ಞೆಯಲ್ಲಿ ಹನ್ನೆರಡು ವರುಷ ಇರಬೇಕು. ಇದೇ ಸೂಚನೆ.

ಪದ

ಸಣ್ಣ ನಾಮದವರು ಪಟ್ಟವನಾಳ್ಯಾರು ಕೇಡನೋಡಿ ।
ಆಟ್ಟ ವ್ಯಸನ ಬಹು ನಿಲ್ಲದೆ ತಡೆದಾರು ಕೇಡನೋಡಿ ॥ ೧ ॥
ಕೆಟ್ಟ ಕುಲಜರು ತಾವು ನಡೆದಂಥ ಕಾಲಕ್ಕೆ ಕೇಡನೋಡಿ ।
ಭ್ರಷ್ಟಾಗಿ ಹೋದರು ಒಂದೆರಡುಮೂರು ಪಟ್ಟಕ್ಕೆ ಕೇಡನೋಡಿ ॥ ೨ ॥
ಇಳೆಯೊಳು ಸ್ತ್ರೀಯರ ಕುಲ ಹೆಚ್ಚು ಆದೀತು ಕೇಡನೋಡಿ ।
ಉಳ್ಳೆ ಗೆಡ್ಡೆಗೆ ಒಂದು ಹೆಣ್ಣುಗಳಾದಾವು ಕೇಡನೋಡಿ ॥ ೩ ॥
ಒಳ್ಳೆ ಪುರುಷರೊಳು ವಗೆತನ ಬಿಟ್ಟಾರು ಕೇಡನೋಡಿ ।
ಮೂಳ ನಾರಿಗೆಲ್ಲ ಹಾದರ ಘನವಾಯ್ತು ಕೇಡನೋಡಿ ॥ ೪ ॥

ವಚನ ॥ ಕಲಿವರುಷದೊಳು (೪೯೫೫) ನಾಲ್ಕುಸಾವಿರದ ಒಂಬೈನೂರು ಐವತ್ತೈದನೆಯ ಆನಂದ ನಾಮಸಂವತ್ಸರದ ಫಾಲ್ಗುಣ ಶುದ್ಧ ಪೌರ್ಣಿಮಿ ದಿವಸ ಹಗಲು ಆರು ತಾಸಿನ ಒಳಗೆ ರಕ್ತದ ಕಾಲುವೆ ಹರಿಯಬೇಕು. ರಾಕ್ಷಸ ನಾಮಸಂವತ್ಸರಕ್ಕೆ, ಅರಸುಗಳು ದೇಶಾಧಿಪತಿಗಳು, ಪಂಚತ್ವವನೈದುವರು. ಮೂರು ಗ್ರಹಣದ ಫಲವು ತೋರುವವು. ನಳಸಂವತ್ಸರದಲ್ಲಿ, ಮಕ್ಕಳೇಶ್ವರನ ಅಗಳಿಗೆ ರಾಜ್ಯವಾದದ್ದೇ ಕುರುಹು.

ಪದ

ಮೇಲಗೆಲಿದ್ದವರು ಕೀಳಿಗೆ ಬಂದಾರು ಕೇಳಿರಣ್ಣಾ ।
ಕೀಳಾಗಿದ್ದವರೆಲ್ಲ ಮೇಲಿಗೆ ಸೇರ್ಯಾರು ಕೇಳಿರಣ್ಣಾ ॥ ೧ ॥
ಡಿಳ್ಳಿ ಶಿವಗಂಗೆಗೆ ಏಕ ಜಾಡ್ಯವು ಬಿದ್ದೀತು ಕೇಳಿರಣ್ಣಾ ।
ಹಾಳಾಗಿ ಮರ್ತ್ಯದ ಜನ ನಷ್ಟವಾದೀತು ಕೇಳಿರಣ್ಣಾ ॥ ೨ ॥



ಹಗಲು ಕತ್ತಲೆ ಮುಂದೆ ರಾಜ್ಯಕ್ಕೆ ಮುಸುಕೀತು ಕೇಳಿರಣ್ಣಾ ।
ಮುಗಿಲು ಘರ್ಜನೆಗಿನ್ನು ಜಗವೆಲ್ಲ ನಡುಗೀತು ಕೇಳಿರಣ್ಣಾ ॥ ೩ ॥
ಹಗಲು ಕೆಂಡದ ಮಳೆ ಪ್ರತಿಸೂರ್ಯರು ಮೂಡ್ಯಾರು ಕೇಳಿರಣ್ಣಾ ।
ಜಗಕೊಡೆಯ ಶರಣಾರು ಬರುವ ಸೂಚನೆಗಿನ್ನು ಕೇಳಿರಣ್ಣಾ ॥ ೪ ॥

ವಚನ ॥ ಕಲಿವರುಷಗಳಲ್ಲಿ (೪೯೫೮) ನಾಲ್ಕುಸಾವಿರದ ಒಂಬೈನೂರ ಐವತ್ತೆಂಟನೆಯ ಪೈಂಗಳನಾಮಸಂವತ್ಸರದ ಆಶ್ವೀಜ ಶುದ್ಧ ಪೌರ್ಣಿಮಿಯಲ್ಲಿ, ಹಗಲು ಆಕಾಶ ಒದರಿತು. ಭೂಮಿ ನಡುಗಿತು. ಆಶ್ವೀಜ ಬಹುಳ, ಅಮಾವಾಸ್ಯೆವರಿವಿಗೆ, ಹಗಲು ಕೆಂಡದ ಮಳೆ ದಂಡು ಗುಂಡದ ಸುತ್ತ ಬಂದಿತು. ಈ ದಿನ ಪ್ರತಿಸೂರ್ಯರು, ಸರ್ವರು ನೋಡುವಂಥವರಾಗಿ, ಮೂಡಿದ್ದೇ ಕುರುಹು. ಎಂದು ತಿಳಿದುಕೊಳ್ಳಿರಣ್ಣಾ, ಅಜ್ಞಾನಮಾನವರಿಗೆ ಈ ಕುರುಹು ತಿಳಿಯದಣ್ಣಾ.

ಪದ

ಹಮ್ಮಿನ ದುರ್ಗಕ್ಕೆ ಅಮ್ಮಾಜಿ ಬರುತಾಳೆ ಕೇಡನೋಡಿ ।
ಕರ್ಮದ ಪಾಪಿಗಳ ನಿರ್ಮೂಲ ಮಾಡ್ಯಾಳು ಕೇಡನೋಡಿ ॥ ೧ ॥
ಅಮ್ಮ ಅಪ್ಪಗಳನ್ನು ಗುಮ್ಮಾಡಿ ಬಿಟ್ಟಾಳು ಕೇಡನೋಡಿ ।
ತಮ್ಮ ಮಕ್ಕಳ ತಾವೆ ಮಾರುತ್ತ ತಿಂದಾರು ಕೇಡನೋಡಿ ॥ ೨ ॥
ಮಾರಿ ವಿಷದುರ್ಗಿಯು ಸವರುತ್ತ ಬರುತಾಳೆ ಕೇಡನೋಡಿ ।
ಅರವತ್ತು ಗಾವುದ ನೀಟಾಗಿ ಬೆಳೆದಾಳು ಕೇಡನೋಡಿ ॥ ೩ ॥
ನಾರಿ ಐವತ್ತು ಗಾವುದ ಅಡ್ಡಗಾಲಲ್ಲಿ ಬರುತಾಳೆ ಕೇಡನೋಡಿ ।
ಮಾರಿಯೊಂಬಳು ಇನ್ನು ಮರ್ತ್ಯಕ್ಕೆ ಬಂದಳು ಕೇಡನೋಡಿ ॥ ೪ ॥
ನಾರಿಯ ನಾಲಿಗೆ ಏಳು ಗಾವುದದುದ್ದ ಕೇಡನೋಡಿ ।
ಮಾರಿಯ ಉಸುರಿನ್ನು ಅರವತ್ತು ಗಾವುದ ಕೇಡನೋಡಿ ॥ ೫ ॥
ಅರವತ್ತು ಸಾವಿರ ಹೆಣ ಅಲ್ಲಲ್ಲಿ ಹಿಡಿದಾಳು ಕೇಡನೋಡಿ ।
ಆರಾಟ ನಡೆಯಾದು ಎಣಿಕೆಯ ತೋರ್‍ಯಾಳು ಕೇಡನೋಡಿ ॥ ೬ ॥

**ವಚನ** ॥ ಪೈಂಗಳನಾಮಸಂವತ್ಸರದ ಮಾರ್ಗಶಿರ ಬಹುಳ ಸಪ್ತಮಿ ಸೋಮವಾರ ಉಬ್ಬಾ ನಕ್ಷತ್ರದಲ್ಲಿ, ಈಶ್ಯಾನ್ಯ ದಿಕ್ಕಿನಲ್ಲಿ ಹುಟ್ಟಿ ಪಶ್ಚಿಮ ದಿಕ್ಕಿಗೆ ಹಾರ್‍ಯಾಳು, ನಾಲ್ಕು ತಿಂಗಳು ಇದ್ದಳು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಾಲ್ಕು ದಿಕ್ಕಿನೊಳಗೆ ಎರಡೆರಡು ಮಾಸ ಸಮನಾಗಿ ಇರುವಳು. ಈಕೆ ದೆಸೆಯಿಂದ (೮೮೪೬೫೪೯) ಎಂಬತ್ತೆಂಟುಲಕ್ಷದ, ನಲವತ್ತಾರುಸಾವಿರದ ಐದುನೂರನಲವತ್ತೊಂಬತ್ತು ಪ್ರಜೆಗಳು ಲಯವಾಗುವರು. ಹಂಪೆ ಸ್ಥಳದಲ್ಲಿ ಹದಿನೆಂಟುಲಕ್ಷ ಮಾರ್ಬಲ ಕೂಡಿದ್ದೀಕುರುಹು. ಅಲ್ಲಿಂದ ರುದ್ರರು ಕೂಡಬೇಕು. ಅಶ್ವಪತಿ, ಗಜಪತಿ, ನರಪತಿ, ಇಂಗ್ರೀಜ್, ತಾಂಬ್ರದ ಮೋರೆಯವರು, ಕಿರೀಟ ರಾಮರಾಜು, ಡಿಲ್ಲಿ ಸುಲ್ತಾನ್ ಪಾದಶಾಂಬವನ ಕಡೆಯವರು ಮುಂತಾದ ಎಪ್ಪತ್ತೇಳು ಜನ ಪಾಳ್ಯಗಾರರು, ವಿಸಿಷ್ಟು ಕೂಡುವುದು. ಅವರು ಕೂಡುವ ಕಾಲದಲ್ಲಿ, ಕಾಶಿ ಕಡೆಯಿಂದ ಹರೆಯದ ಹೆಣ್ಣು, ಮದಲಿಂಗನ ಕರೆದುಕೊಂಡು, ಆ ಸ್ಥಳಕ್ಕೆ ಬರುವಳು. ಆಕೆ ದೆಸೆಯಿಂದ ರಾಯರಾಯರಿಗೆಲ್ಲ ಜಗಳವಾದೀತು. ಬಿದುರುಕೋಟೆಯ ಕಲ್ಲು ವಲೆ ಗುಂಡಿಗೆ ಸಾಲದೆ ಹೋದೀತು. ಹಂಪೆ ವಿರುಪಾಕ್ಷನಲ್ಲಿ, ಹದಿನೆಂಟುಲಕ್ಷ ದಂಡು ಜಮೆ ಆಗುವುದೆ ಸಾಕ್ಷಿ. ರಕ್ತದ ಕಾಲುವೆ ಹರಿಯುವುದು. ಹನ್ನೆರಡು ಖಂಡುಗ ಬಳೆ ಹೊಡೆದೀತು. ಇದು[1] ಯಾವಾಗ ಎಂದರೆ[1] ಕಲಿವರ್ಷದಲ್ಲಿ (೪೯೬೦) ನಾಲ್ಕುಸಾವಿರದ ಒಂಬೈನೂರ ಅರವತ್ತನೆಯ ಸಿದ್ಧಾರ್ಥಿನಾಮಸಂವತ್ಸರದ ಫಾಲ್ಗುಣ ಶುದ್ಧ ತದಿಗೆದಿವಸ ಆದೀತು. ಜಾಲೇಂದ್ರ ಪರ್ವತದೊಳಗಿರ್ದ ಜ್ಞಾನ ಸುಗುಣಮಣಿಯೆಂಬ ಒಬ್ಬ ಋಷಿ ಬಂದು ವಾಲಿಭಂಡಾರ ನರಮಾನ್ಯರಿಗೆ ಸಾಧ್ಯವಾಗದೆಂದು ಹೇಳಿದರು ಕೇಳದೆ, ವಾಲಿಭಂಡಾರಕ್ಕೆ, ಆಹುತಿಯಂ ಕೊಡುವರು. ಆ ಋಷೀಶ್ವರನು ಅದೃಶ್ಯನಾಗುವನು.

---

1 ಯಂಕೆಂದೊಡೆ (ಅ, ಇ, ಬ, ಜ, ಕ.)



**ಪದ**

ಸಾವಿರದಿಪ್ಪತ್ತೈದು ಖಂಡಿಗದನ್ನದ ಆಹುತಿ ಕೇಳಿರಣ್ಣಾ ।
ಆರುಸಾವಿರ ಮಣ ಮೆಣಸಿನಚೂರಿನ್ನು ಕೇಳಿರಣ್ಣಾ ॥ ೧ ॥

ಎರಡುಸಾವಿರ ಮಣ ತುಪ್ಪದ ಆಹುತಿ ಕೇಳಿರಣ್ಣಾ ।
ನೂರುಸಾವಿರ ಮಣ ದೀಪದ ಎಣ್ಣೆಯು ಕೇಳಿರಣ್ಣಾ ॥ ೨ ॥

ಸಾವಿರ ಖಂಡಿಗ ದಧಿ ಕ್ಷೀರದಾಹುತಿ ಕೇಳಿರಣ್ಣಾ ।
ಮೂರುಕೋಟಿ ತೆಂಗಿನಕಾಯಿ ನೆನೆಯಕ್ಕಿ ನೆನಗಡಲೆ ಕೇಳಿರಣ್ಣಾ ॥ ೩ ॥

ಹನ್ನೆರಡುಸಾವಿರ ಕನ್ಯಯರ ಆಹುತಿ ಕೊಡುತಾರೆ ಕೇಳಿರಣ್ಣಾ ।
ಮುನ್ನೂರುಎಂಬತ್ತು ಗರ್ಭಿಣಿಯರಾಹುತಿ ಕೇಳಿರಣ್ಣಾ ॥ ೪ ॥

ಮೂರುಲಕ್ಷದ ಸಂಖ್ಯೆ ಕೋಣಗಳಾಹುತಿ ಕೇಳಿರಣ್ಣಾ ।
ಆರುಲಕ್ಷದ ದಶ ಸಂಖ್ಯೆ ಕುರಿಗಳಾಹುತಿ ಕೇಳಿರಣ್ಣಾ ॥ ೫ ॥

**ವಚನ** ॥ ಇಪ್ಪತ್ತೈದುಸಾವಿರ ಖಂಡಿಗದ ಅಕ್ಕಿ ಅನ್ನ, ನೂರು ಖಂಡಿಗ ದೀಪದ ಎಣ್ಣೆ, ಇಪ್ಪತ್ತೈದು ಮಣ ಅರಿಸಿನದ ಪುಡಿ, ಅರವತ್ತೈದು ಮಣ ಮೆಣಸಿನ ಚೂರ್ಣ, ಎರಡುಸಾವಿರ ಮಣ ಘೃತ, ಒಂದುಸಾವಿರ ಖಂಡಿಗ ದಧಿಕ್ಷೀರ, (೩೦೦೦೦೦೦೦) ಮೂರುಕೋಟಿ ತೆಂಗಿನಕಾಯಿ, ನೆನೆಯಕ್ಕಿ ನೆನಗಡಲೆ ಇನ್ನು ಮುಂತಾದ್ದನ್ನು ಆಹುತಿ ಕೊಟ್ಟರು, ಅವರಿಗೆ ಸಾಧ್ಯವಾಗದು. ಅದು ಏನಾಗುವುದೆಂದರೆ :—

**ಪದ**

ಕನಕವರ್ಣವನುಳ್ಳ ಸೂಕರ[1] ಹೊರಟೀತು ಕೇಡನೋಡಿ ।
ಮನಸಿಗೆ ಬಂದಂತೆ ಮಾರ್ಬಲ ಕೊಂದಿತು ಕೇಡನೋಡಿ ॥ ೧ ॥

ಕನ್ನಿಕೆಯಾದೀತು ಐದುಗಜದ ಹಂದಿ ಕೇಡನೋಡಿ ।
ಎನಗೆ ತನಗೆಯೆಂದು ತಲೆತಲೆ ಮಡಿದಾವು ಕೇಡನೋಡಿ ॥ ೨ ॥

---

1 ಹುಟ್ಟೀ (ಅ, ಇ, ಬ, ಕ, ಚ.)

ತಿರುಪತಿತಿಮ್ಮಪ್ಪ ತಿಗುಡತ್ತನಾಡ್ಯಾನು ಕೇಡನೋಡಿ ।
ಪರುವತ್ತಮಲ್ಲಯ್ಯ ಪಾರೆದ್ದು ಹೋದಾನು ಕೇಡನೋಡಿ ॥ ೩ ॥

ಇರುವಂಥ ದೈವವು ಗಾಳಿಪೂಜೆ ಸೇರ್ಯ್ಯಾವು ಕೇಡನೋಡಿ ।
ಪರುವತ್ತಗಿರಿಗಾಗಿ ಹೋದಿತು ಆ ಲಕ್ಷ್ಮಿ ಕೇಡನೋಡಿ ॥ ೪ ॥

ವಚನ ॥ ಲಕ್ಷ್ಮಿಯು ಕಂಡು ಘಾಸಿಯಾಗಿ ಎಷ್ಟು ದುಮ್ಮಲೆದ್ದು ಹೋದರೂ, ಆ ಲಕ್ಷ್ಮಿ ಗಿರಿಯ ಹೊಕ್ಕಳು, ಶ್ರೀ ಗಿರಿಯ ಮಲ್ಲಿಕಾರ್ಜುನನ ಗುಡಿಯಲ್ಲಿ, ಅದೃಶ್ಯವಾಗುವಳು. ಮುಸಲ್‌ಮಾನರವರು ಬಿಡುವುದಿಲ್ಲವೆಂದು ಗುಡಿಸುತ್ತ ಮುತ್ತಿಗೆ ಹಾಕ್ಯಾರು, ಆ ಶ್ರೀ ಗಿರಿಮಲ್ಲಿಕಾರ್ಜುನ ದೇವರು, ಆ ಲಕ್ಷ್ಮಿಯು ಸ್ವಪ್ನದಲ್ಲಿ ನಿನ್ನನಿವರು ಬಿಡುವುದಿಲ್ಲವೆಂದು ಹೇಳುವನು. ಆ ಲಕ್ಷ್ಮಿಯು ಶ್ರೀ ಗಿರಿಯಂ ಬಿಟ್ಟು, ಗೋಲು ಗಿರಿಗೆ ನಡೆವಳು. ಮುಸಲ್‌ಮಾನರು, (ಆಕೆಯ ದೆಸೆಯಿಂದ ಮಲ್ಲಿಕಾರ್ಜುನನ ಕಿತ್ತು ಹಾಕುವರು.) ಆ ಬಳಿಕ ಬೆಳಗ್ಗೆ ಏನುಮಾಡುವರೆಂದರೆ:—

ಪದ

ಉರುಶಿಂಗೆ ಮಾಡ್ಯಾರು ಆಕಳ ಕೊಯ್ವ್ಯಾರು ಕೇಡನೋಡಿ ।
ಸುರೆಪಾನ ಮಾಡ್ಯಾರು ಸೂಳೆಯರ ಒಡಗೂಡಿ ಕೇಡನೋಡಿ ॥ ೧ ॥

ಸುರತವ ಮಾಡುವರು ಸೂಳೆಯರ ಮುದ್ದಿಸಿ ಕೇಡನೋಡಿ ।
ತರುಗುಲ್ಮ ಬೆಳೆದೀತು ಅರಣ್ಯವಾದೀತು ಕೇಡನೋಡಿ ॥ ೨ ॥

ವಚನ ॥ ಕಲಿವರುಷದೊಳಗೆ (೪೯೬೧) ನಾಲ್ಕುಸಾವಿರದ ಒಂಬೈಸೂರ ಅರವತ್ತೊಂದನೆಯ ರೌದ್ರಿ ಸಂವತ್ಸರದ ವೈಶಾಖಬಹುಳ ಮೂರನೆ ಆದಿತ್ಯವಾರ, ರೋಹಿಣಿನಕ್ಷತ್ರದಲ್ಲಿ ಮುಸಲ್‌ಮಾನರು ಶ್ರೀ ಗಿರಿಯಲ್ಲಿ ಮಸೀತಿ ಕಟ್ಟುವರು, ಭಂಗಾರದ ಮೂಲಬಸವೇಶ್ವರ ದೇವರ ವರದಿಂದ ಆ ಬಸವೇಶ್ವದೇವರ ಬಲದ ಕರ್ಣದಲ್ಲಿ ಒಂದು ತೊಟ್ಟೇಗಿಡ ಹುಟ್ಟಿ ಒಂದೇ ದಿವಸದಲ್ಲಿ ಮಲ್ಲಿಕಾರ್ಜುನನ ಗುಡಿಯ ಸುತ್ತಾ ಹಬ್ಬೀತು. ಮತ್ತು ಸರ್ಪ ಭೂಷಣನ ಬೆಟ್ಟದೊಳಗಿನಿಂದ ಒಂದುನೂರು ಗಜ ಪ್ರಮಾಣವುಳ್ಳ, ನಾಗೇಂದ್ರನು ಬಂದು ಗುಡಿಯೊಳಗೆ ಸೇರುವನು. ಮತ್ತು ಹತ್ತು ಗಜ ಪ್ರಮಾಣವುಳ್ಳ, ಕರಿ ವ್ಯಾಘ್ರ ಬಂದು ಸೇರುವುದು. ಆ ವ್ಯಾಘ್ರನ ದೆಸೆಯಿಂದಲೂ, ಆ ಸರ್ಪನ ದೆಸೆಯಿಂದಲೂ, ಆ ಮಹಾ ಮಾರ್ಬಲ ಜನಗಳು ಬಹು ಭಯಂಕರದಿಂದ ಆರ್ಭಟಿಸಿ ಲಯವಾದೀತು. ಅಲ್ಲಿಂದ ತಿರುಪತಿ ತಿಮ್ಮಪ್ಪನ ನಾಭಿಯಲ್ಲಿರ್ದ ರತ್ನವ ತೆಗೆಯಬೇಕೆಂದು, ಅರ್ಧ ಮಾರ್ಬಲ ಹಿಂದಕ್ಕೆ ತಿರುಗುವುದು.



ಪದ

ಹೆಬ್ಬುಲಿ ಗುಡಿಸುತ್ತ 1 ಸೂಕರ 1 ತಿರುಗ್ಯಾವು ಕೇಡನೋಡಿ ।
ಪಬ್ಬೀತುಕಾನನ ತುಂಗಭದ್ರೆಯ ತನಕ ಕೇಡನೋಡಿ ॥ ೧ ॥

ಒಬ್ಬರು ಶ್ರೀ ಗಿರಿಗೆ ಹೋಗದೆ ಇರುವರು ಕೇಡನೋಡಿ ।
ತಬ್ಬುಬ್ಬಿಗೊಂಡಾರು ಹೋಗಲು ದಾರಿಲ್ಲ ಕೇಡನೋಡಿ * ॥ ೨ ॥

ವಚನ ॥ ರೌದ್ರಿನಾಮಸಂವತ್ಸರದ ಜ್ಯೇಷ್ಠ ಶುದ್ಧ ಅಷ್ಟಮಿಯ ಬುಧವಾರದ ದಿವಸ ಮೂರು ಜಾತಿಯವರು, ಗಿರಿಯಂ ಏರಲಾಗಿ, ಶ್ರೀ ವೆಂಕಟೇಶ್ವರನು, ಕೊಲ್ಲಿ ಪಾಕಿ ಸೋಮಾರಾಧ್ಯರಲ್ಲಿಗೆ, ಹೋಗುವನು. ಈ ಮುಸಲ್‌ಮಾನರು ಒಂದು ಗಳಿಗೆ ಒಳಗಾಗಿ ಶ್ರೀ ವೆಂಕಟೇಶ್ವರನ ಅಡಿಯಲ್ಲಿರುವ (೮೦೦೦೦೦೦೦೦) ಎಂಬತ್ತು ಕೋಟಿ ದ್ರವ್ಯವ ತೆಗೆಯಲಿಕ್ಕಾಗಿ, ಆ ದ್ರವ್ಯವು ಇದ್ದಲಾದೀತು. ಬ್ರಹ್ಮನಿ[2]ಟ್ಟಿಹ ಆ ಕುಂಡ,[2] ಅದೃಶ್ಯವಾದೀತು. ಶಿಲಾಮೂರ್ತಿಯು ಅದೃಶ್ಯವಾದೀತು. ಅಲ್ಲಿಂದ ಹಂಪೆಗೆ ಬಂದಾರು. ಮುತ್ತುಗ ಪರ್ವತದಲ್ಲಿ, ಮಶೀತಿ ಕಟ್ಟಿಶ್ಯಾರು. ಶಿತಾಂಗಿ ಅಂದಿನ ಗುಮ್ಮಟವಳಿದಾರು. ರೌದ್ರಿನಾಮಸಂವತ್ಸರದ, ಶ್ರಾವಣ ಬಹುಳ ಚೌತಿ ಮಂಗಳವಾರ ರೇವತಿನಕ್ಷತ್ರ ಹಗಲು ಐದು ಗಳಿಗೆಮೇಲೆ, ಶ್ರೀ ವಿರುಪಾಕ್ಷನ ಪೂಜೆ ನಿಂತೀತು. ಆ ಬಳಿಕ ಕರ್ಮ ಸೂಚನೆ ಪೇಳುವೆವು.

---

1 ಸುತ್ತುತ್ತ (ಚ.) * ಈ ಪದ್ಯ (ಎ.) ಪ್ರತಿಯಲಿಲ್ಲ. 2 ಟ್ಟಲ ಕುಂಡ (ಎ.): ಷ್ಟ ಅಖಂಡ (ಅ,ಇ,ಒ,ಕ.)

**ಪದ**

ಹಣವ ಗಳಿಸಿದೆವೆಂದು ಹಮ್ಮಿನೊಳಗಿರಬೇಡಿ ಕೇಳಿರಣ್ಣಾ ।
ಉಣಲಿಕೆ ಇಲ್ಲ[1]ದೆ[1] ಉರುಳಿಹೋದೀತಿನ್ನು ಕೇಳಿರಣ್ಣಾ ॥ ೧ ॥
ಹೆಣ್ಣನೆ ನೆಚ್ಚಿಕೊಂಡು ಭ್ರಮೆಗೆಟ್ಟು ಹೋದಾರು ಕೇಳಿರಣ್ಣಾ ।
ಕಣ್ಣು ಕಾಣದೆ ಪ್ರಜೆ ಲಯವಾಗಿ ಹೋದೀತು ಕೇಳಿರಣ್ಣಾ ॥ ೨ ॥

**ವಚನ** ॥ ಹಂಗ, ಹರಿಣ, ಮುಂಗುಲಿ, ನಾಯಿ, ಮೊಲ, ಬೆಕ್ಕು, ಒಬ್ಬ ದ್ವಿಜನು, ಕಾಷ್ಠ [2]ದ ಹೊರೆ[2] ಬಂದರೆ ಶಕುನ ಶುಭವಾದೀತು. ಜೋಡು ಮುತ್ತೈದೆಯರು, ತುಂಬಿದ ಕೊಡ ಹೊತ್ತುಕೊಂಡು ಬಂದರೆ ಅವಶಕುನವಾದೀತು. ಇಂಥ ಕರ್ಮಸೂಚನೆಗಳು ಹೆಚ್ಚಿ ಬಂದೀತು.

**ಪದ**

ನಾರಿರು ಮುದುಕಿರು ಪಾರಾಗಿ ಹೋದಾರು ಕೇಡನೋಡಿ ।
ಹಾರುವರ ಹೆಣ್ಣೆಲ್ಲ ಜಾರೆದ್ದು ಹೋದಾವು ಕೇಡನೋಡಿ ॥ ೧ ॥
ಮಾರನಾಟವು ಬಹಳ ಹೆಚ್ಚಿತು ಜಗದೊಳು ಕೇಡನೋಡಿ ।
ಮಾರ್‍ಯಾರು[3]ಛತ್ರಿಯ ನೆರಳಲ್ಲಿ ಎತ್ತೆಮ್ಮೆ[3] ಕೇಡನೋಡಿ ॥ ೨ ॥
ತಂದೆಗು ಮಗನಿಗು ಒಬ್ಬಳೆ ಹೆಂಡತಿ ಕೇಡನೋಡಿ ।
ತಂದೆಯ ಕೊಂದು ತಾ ಮಗ ರಾಜ್ಯವಾಳ್ಯಾನು ಕೇಡನೋಡಿ ॥ ೩ ॥
ಒಂದಲ್ಲ ಗುರು ಶಿಷ್ಯ ತಂದೆ ಮಕ್ಕಳ ನ್ಯಾಯ ಕೇಡನೋಡಿ ।
ಒಂದು ಹಾವು ಮೂರು ಜಗವೆಲ್ಲ ನುಂಗಿತು ಕೇಡನೋಡಿ ॥ ೪ ॥

**ವಚನ** ॥ ರೌದ್ರಿನಾಮಸಂವತ್ಸರದತನಕ ಎತ್ತು ಎಮ್ಮೆ ಹೇಗೆ ಮಾರುವವೆಂದರೆ :- ಐವತ್ತು ವರಹಕ್ಕೆ ಒಂದು ಆಕಳು, ನೂರು ವರಹಕ್ಕೆ

1 (ಅ, ಇ, ಒ, ಕ, ಚ.) 2 ಬರ (ಅ, ಇ, ಎ, ಒ, ಕ.)
3 ಎತ್ತು ಎಮ್ಮೆ ಚತ್ರಿಯ ನೆರಳೊಳು (ಅ, ಇ, ಒ, ಕ.)



ಒಂದು ಎಮ್ಮೆ, ನೂರಇಪ್ಪತ್ತು ವರಹಕ್ಕೆ ಒಂದು ಎತ್ತು ಈ ಪ್ರಕಾರ ಕಲ್ಯಾಣ ಪ್ರಾಂತ್ಯದಲ್ಲಿ ಮಾರುವುದು.

**ಪದ**

ಹುಟ್ಟಿದ ಕೂಸಿನ್ನು ಪಕಪಕನೆ ನಗುತಾದೆ ಕೇಡನೋಡಿ ।
ತೊಟ್ಟಿಲ ಶಿಶುವಿನ್ನು ವ್ಯಾಜ್ಯವ ಹರಿಸೀತು ಕೇಡನೋಡಿ ॥ ೧ ॥
ಸೃಷ್ಟಿಯೊಳ್ ಸ್ತ್ರೀಯಾರ ಬಿಟ್ಟನ್ನು ಪುರುಷರು ಕೇಡನೋಡಿ ।
ಕಟ್ಟಿಕೊಂಡರು ವೇಶಿ ಗೆಣತಿಯೆಂಬುವರನ್ನು ಕೇಡನೋಡಿ ॥ ೨ ॥

**ವಚನ** ॥ ಹೊಣೆಯಾದವರನ್ನು ಕೆಡಿಸ್ಯಾರು. ಮೋಸವ ಮಾಡಿ ಪರದ್ರವ್ಯವ ಪರಸ್ತ್ರೀಯರ ಅಪಹರಿಸ್ಯಾರು. ಅಣಕಿಸಿ ಗುರುಹಿರಿಯರ ಕುಣಿಸಾಡುವರು. ಪಾಪವ ಕಟ್ಟಿಕೊಂಡು ಮುಳುಗಿ ಹೋದಾರು. ಯಮಪುರಿಪಟ್ಟಣದಿ, ಇನ್ನು ಬಾಲಕಿ ಎಂಬ ಪಟ್ಟಣದಲ್ಲಿ, ಒಬ್ಬ ಶಿವಭಕ್ತನಾದ ಬಸವಶೆಟ್ಟಿ ಎಂಬ ತಂದೆ, ಲಿಂಗಶೆಟ್ಟಿ ಎಂಬ ಮಗನು, ತಂದೆಯ ಕೊಂದು ತಾಯಿಸಂಗಡ ಸಂಭೋಗಪಡುತ್ತಾ ಕಲ್ಯಾಣ ಪ್ರಾಂತ್ಯದಲ್ಲಿ, ಕಾರ್ಯಭಾರ ಮಾಡಿದ್ದೇ ಕುರುಹು. ಮತ್ತು ಒಂದು ತಿಂಗಳು, ಮತ್ತೊಂದು ತಿಂಗಳಿಗೆ ಒಬ್ಬ ಪುರುಷಂಗೆ ಒಂಬತ್ತು ಮಂದಿ ಸ್ತ್ರೀಯರು [1]ಬೆ[1]ಂಬಲುಬಿದ್ದು ಹೋದಾರು. ಇಷ್ಟು ಜಾರಾತುರದಿಂದ ಕಾಮದ ಗುಣಗಳು ಸ್ತ್ರೀಯರಿಗೆ ಹೆಚ್ಚಿ, ಆ ಪುರುಷನ ಹಿಂದೆ ಹೋಗುವ ಕಾಲದಲ್ಲಿ, ಅವನು ಬೇಸತ್ತು ಒಲ್ಲೆನೆಂದು ಮರವನ್ನೇರಿಕೊಂಡರೂ, ಬಿಡದೆ ಕಲ್ಲುಗಳಲ್ಲಿ ಹೊಡೆದು, ಕೆಳಕ್ಕೆ ಇಳಿಸಿಕೊಂಡು ಸ್ತ್ರೀಯರು ತಮ್ಮ ರತಿ ಮೊದಲಾದ ಕ್ರೀಡೆಗಳ ನಡಸ್ಯಾರು. ಹೀಗೆ ಭಂಡ ಸ್ತ್ರೀಯರ ರೌದ್ರ ಹೆಚ್ಚುವುದು.

**ಪದ**

ಮೋಡೂರು ಸ್ಥಳದಲ್ಲಿ ಚಂದ್ರ ಸೂರ್ಯರು ನಿಂತು ಕೇಡನೋಡಿ ।
ಮೂರು ದಿನಗಳು ಕತ್ತಲೆ ಕವಿವುದು ಕೇಡನೋಡಿ ॥ ೧ ॥

1 ದು (ಅ, ಇ, ಎ, ಒ, ಕ.)

ಮಾರಹರನು ತಂದ ಕಷ್ಟವು ನರರಿಗೆ ಕೇಡನೋಡಿ ।
ಪಾರು ಆದೆವೆಂದು ಪಾಪಕ್ಕೆ ಸಿಕ್ಕ್ಯಾರು ಕೇಡನೋಡಿ ॥ ೨ ॥

ವಚನ ॥ ದುರ್ಮುಖಿನಾಮಸಂವತ್ಸರದ ಮಾರ್ಗಶಿರ ಶುದ್ಧ ನವಮಿ ಸೋಮವಾರ ಉತ್ರಾಷಾಡನಕ್ಷತ್ರದಲ್ಲಿ ರಾಯಚೂರ ಸುತ್ತ ಕತ್ತಲೆ ಕವಿದೀತು. ಮುಚ್ಚಿದ ಕದುಗಳು ತೆಗೆಯದೆ ಗುಡುಗುಂ1ಡ1 ಸೀಮೆ, ನಿರ್ಬಯಲಾದೀತು. ರಣಭೂತವು ಘನವಾಗಿರುವವು. ಮಿಡಿಚೆದಂಡು ವೆಗ್ಗಳವಾದೀತು. ಗಾಣದ ಒಳಗಣ ಎಣ್ಣೆಯನ್ನು, ಗಾಣವೆ ನುಂಗೀತು. ರಾಣಿ ನುಂಗ್ಯಾಳು ಮದುವೆಯಾದವನ. ರಾವುತ ನುಂಗ್ಯಾನು ಮದಗಜ ಆನೆಯ. ರಾವುತನ ತುರುಗವೆ ನುಂಗೀತು. ಹನ್ನೆರಡು ಟೆಂಕೆಗೆ ಒಂದು ಬಿಳಿಪಟ್ಟೆ ಮಾರೀತು. ವರಹ ಒಂದಕ್ಕೆ ಒಂದೇ ಸೇರು ಎಣ್ಣೆ ಮಾರೀತು. ಇದಿಷ್ಟು ಯಾವಾಗ, ಎಂದರೆ:—ದುರ್ಮುಖಿ ನಾಮಸಂವತ್ಸರದ ಪುಷ್ಯ ಮಾಸದೊಳಗೆ ಆಗುವುದು.

ಪದ

ಹೇಳುವೆ ನಾನಿನ್ನು ಜನರಿಗೆ ಆಶ್ಚರ್ಯ ಕೇಳಿರಣ್ಣಾ ।
ಏಳು ವರುಷದ ಕನ್ನೆ ಹೆತ್ತಳು ಮಕ್ಕಳ ಕೇಳಿರಣ್ಣಾ ॥ ೨ ॥

ಕೇಳವರೊಳಗೊಂದು ಪಿಂಡ ತಾ ಹುಟ್ಟುವುದು ಕೇಳಿರಣ್ಣಾ ।
ಹೇಳುತ್ತ ಬರುವುದು ಹಿಂದುಮುಂದಣ ಸುದ್ದಿ ಕೇಳಿರಣ್ಣಾ ॥ ೨ ॥

ವಚನ ॥ ಕಲ್ಯಾಣ ಪಟ್ಟಣಕ್ಕೆ ಉತ್ತರದಿಕ್ಕಿನಲ್ಲಿ, ಖಾನರ ದೇಶದಲ್ಲಿ, ಶ್ರೀ ಮಾಚಲವೆಂಬ ಪುರದಲ್ಲಿ ಒಬ್ಬ ಶಿವಬ್ರಾಹ್ಮಣನ ಹೊಟ್ಟೆಯಲ್ಲಿ, ಒಂದು ಹೆಣ್ಣುಮಗು ಹುಟ್ಟೀತು. ಆ ಬಾಲಕನ್ನಿಕೆಗೆ ಏಳು ವರುಷ ಪ್ರಾಯದಲ್ಲಿ, ಗಂಡನಿಲ್ಲದೆ ಒಂಬತ್ತು ಮಕ್ಕಳ ಒಂದೇ ಗರ್ಭದಲ್ಲಿ ಹೆರುವಳು. ಆವರೊಳಗೆ ಎಂಟು ಲಯವಾಗುವವು. ಒಂದು ಹಿಂದೆ ಹುಟ್ಟಿದ ಶಿಶು ವೀರವ2 ಸಂತರಾಯ 2ನು, ಚೆನ್ನದಂಡನಾಯಕರು

1 ಟ (ಎ.) 2 ಸುಂದರ (ಅ, ಇ, ಒ, ಕ, ಚ.)



ಬರುವಂಥ ಕುರುಹುಗಳನ್ನೆಲ್ಲ ಹೇಳುವುದು. ಕಲಿವರುಷಗಳಲ್ಲಿ (೪೯೬೩) ನಾಲ್ಕುಸಾವಿರದ ಒಂಬೈನೂರ ಅರವತ್ತಮೂರನೆಯ ದುಂದುಭಿನಾಮ ಸಂವತ್ಸರದ ಶ್ರಾವಣ ಶುದ್ಧ ಅಷ್ಟಮಿ ಗುರುವಾರ ವಿಶಾಕನಕ್ಷತ್ರದಲ್ಲಿ, ಈ ವಾರ್ತೆಯನ್ನು ಹೇಳಿ ಲಯವಾಗುವುದು.

ಪದ

ಕರ್ಮವು ಹೆಚ್ಚೀತು ಕಡೆಮೊದಲಿಲ್ಲದೆ ಕೇಳಿರಣ್ಣಾ ।
ಕ್ರಮವಾಗಿ ಬಂದೀತು ಬೌದ್ಧಾವತಾರವು ಕೇಳಿರಣ್ಣಾ ॥ ೧ ॥

ಭ್ರಮೆಗೆಟ್ಟು ಹೋದೀತು ಕಲ್ಕ್ಯವತಾರವು ಕೇಳಿರಣ್ಣಾ ।
ಅಮ್ಮಮ್ಮ ಬಾಳುವರಿಗೆ ಅಸಾಧ್ಯವದಾಯಿತು ಕೇಳಿರಣ್ಣಾ ॥ ೨ ॥

ವರುಷ ಐದುಸಾವಿರ ಕಲಿಯುಗದೊಳಗಿನ್ನು ಕೇಳಿರಣ್ಣಾ ।
ಪರಶುರಾಮರ ಶಾಪ ಪ್ರತ್ಯಕ್ಷವಾದೀತು ಕೇಳಿರಣ್ಣಾ ॥ ೩ ॥

ಹಾರುವರ ಹಾರಾಟ ಅಲ್ಲಲ್ಲೆ ನಿಂತೀತು ಕೇಳಿರಣ್ಣಾ ।
ಹರ ಮತ ಕೆಟ್ಟೀತು ಹರಿ ಮತ ಹೆಚ್ಚೀತು ಕೇಳಿರಣ್ಣಾ ॥ ೪ ॥

ವಚನ॥ ಹದಿನೆಂಟು ಪಣಕಟ್ಟು ನೂರೊಂದು ಕುಲವು ಒಂದೇ ಆದೀತು. ಮಾಸ ಪಕ್ಷದೊಳಗೆ, ಎರಡು ಗ್ರಹಣ ಹಿಡಿದಾವು. ಇದು ಯಾವಾಗೆಂದರೆ:–ದುಂದುಭಿನಾಮಸಂವತ್ಸರದ ಮಾಘ ಶುದ್ಧ ಪೌರ್ಣಿಮ ರಾತ್ರಿ ಚಂದ್ರಗ್ರಹಣ ಮೂರು ತಾಸಿಗೆ ಹಿಡಿಯುವುದು. ಆರು ತಾಸಿಗೆ ಬಿಡುವುದು. ಮಾಘ ಬಹುಳ ಹದಿನೈದನೆ ಮಂಗಳವಾರ ಸೂರ್ಯಗ್ರಹಣ ಮೂರು ಘಳಿಗೆ ಮೇಲೆ ಹಿಡಿಯುವದು. ಆರು ಘಳಿಗೆಗೆ ಬಿಡುವುದು.

ಪದ

ಏಳು ಚಕ್ರವ ಮುರಿದು ಏಕಚಕ್ರವನಾಳ್ಯಾರು ಕೇಳಿರಣ್ಣಾ ।
ಏಳು ಊರಿಗೆ ಒಂದು ಊರುಗಳಾದಾವು ಕೇಳಿರಣ್ಣಾ ॥ ೧ ॥

ಜೋಳವ ಕಾಣದೆ ಹಾಳಾಗಿ ಹೋದರು ಕೇಳಿರಣ್ಣಾ ।
ನಾಳೆಯೆಂದೆನಬೇಡಿ ಈಗಲೆ ಬಂತಿನ್ನು ಕೇಳಿರಣ್ಣಾ ॥ ೨ ॥

**ಗದ್ಯ :**—ಶ್ರೀಮತ್‌ಸದಾಶಿವ ಸಚ್ಚಿದಾನಂದ ಪರಬ್ರಹ್ಮ ಶ್ರೀಮತ್ಪರಿ
ವ್ರಾಜಕಾಚಾರ್ಯ ಶ್ರೀ ರುದ್ರಮುನಿಸ್ವಾಮಿ ವಾಙ್ಮನೋತೀತ
ಶ್ರೀ ಗುರು ಗುಹೇಶ್ವರ ಬಸವಾದಿಪ್ರಮಥರ ಶಿವಶರಣ
ಪ್ರಸಾದಿಯಾದ ಶ್ರೀ ರುದ್ರಮುನಿಸ್ವಾಮಿ
ನಿರೂಪಿಸಿದ ಕಾಲಜ್ಞಾನ
ಕಾಲ ಸೂಚನೆ ಪ್ರಥಮಸ್ಥಲ
ಸಮಾಪ್ತಂ

---

## ದ್ವಿತೀಯ ಸ್ಥಲ

---

**ಪದ**

ರಕ್ಷಿಸುವನು ಈಗ ತಂದಂಥ ಕೇಡನು ಕೇಳಿರಣ್ಣಾ ।
ಮುಕ್ಷುಭಿಗಳಿಗೀಗ ತಳಮಳವಾದೀತು ಕೇಳಿರಣ್ಣಾ ॥ ೧ ॥

ಪಕ್ಷಿಗಾವುದಕೊಂದು ಪಟ್ಟಣ ನಿಂತೀತು ಕೇಳಿರಣ್ಣಾ ।
ಅಕ್ಷಿಗಾವುದಕೊಂದು ಜ್ಯೋತಿಗಳಾದವು ಕೇಳಿರಣ್ಣಾ ॥ ೨ ॥

ಆರುಗಾವುದಕೊಂದು ಸಂತೆಗಳಾದವು ಕೇಳಿರಣ್ಣಾ ।
ಮೂರುಗಾವುದಕೊಂದು ನೀರಿನ ಕೊಳಗಳು ಕೇಳಿರಣ್ಣಾ ॥ ೩ ॥

ನಾರಿ ಪುರುಷರ ಕೊಬ್ಬು ಮುರಿವಂಥ ಕಾಲವು ಕೇಳಿರಣ್ಣಾ ।
ಊರು ಮನೆ ಸಿಕ್ಕಾದೆ ಗಾರಾಗಿ ತಿರುಗ್ಯಾರು ಕೇಳಿರಣ್ಣಾ ॥ ೪ ॥

ಉಳುವಿಯ ಮೂಲೆಲಿ ಉರುಳಿತು ಗುಂಡೊಂದು ಕೇಳಿರಣ್ಣಾ ।
ತಿಳಿಯದೆ ಹೋದೀತು ಮರ್ತ್ಯದ ಜನರಿಗೆ ಕೇಳಿರಣ್ಣಾ ॥ ೫ ॥

**ವಚನ** ॥ ಕಲಿವರುಷಗಳಲ್ಲಿ (೪೯೬೪) ನಾಲ್ಕುಸಾವಿರದ ಒಂಬೈನೂರ ಅರವತ್ತನಾಲ್ಕನೆಯ ರುಧಿರೋದ್ಗಾರಿ ನಾಮಸಂವತ್ಸರದ, ಶ್ರಾವಣ ಬಹುಳ ತದಿಗೆ ಸೋಮವಾರ ಉತ್ರ ಭಾದ್ರಪದನಕ್ಷತ್ರದಲ್ಲಿ ಐದು ಘಳಿಗೆ ಮೇಲೆ ಉತ್ತರದಿಂದ ದಕ್ಷಿಣಕ್ಕೆ ಉಳುವಿಯಿಂದ ಗುಂಡು ಉರುಳಿ, ಕಾಶಿ ವಿಶ್ವೇಶ್ವರನ ಎದುರಿಗೆ ನಿಂತೀತು. ಅಲ್ಲಿ ಚಂಡಮಾರ್ತಾಂಡನೆಂಬ ಗಾಳಿ ಬೀಸೀತು.

**ಪದ**

ಗಂಧ ಕಸ್ತುರಿ ಪುನುಗು ಪರಿಮಳಗಳಡಗ್ಯಾವು ಕೇಳಿರಣ್ಣಾ ।
ಚಂದದಿಂದಲಿ ಬೆಲ್ಲ ವಿಷವಾಗಿ ತೋರ್ಪುದು ಕೇಳಿರಣ್ಣಾ ॥ ೧ ॥

ನಿಂದ ಬೇವಿನಗಿಡ ಅಮೃತವೆ ಸುರಿದೀತು ಕೇಳಿರಣ್ಣಾ ।
ಇಂದುಧರ ಶಿವಶರಣರು ಬರುವಂಥ ಕಾಲಕ್ಕೆ ಕೇಳಿರಣ್ಣಾ ॥ ೨ ॥

**ವಚನ**॥ ರುಧಿರೋದ್ಗಾರಿ ನಾಮಸಂವತ್ಸರದ ಆಶ್ವೀಜ ಶುದ್ಧ ದಶಮಿ ಆದಿತ್ಯವಾರ ಶ್ರವಣನಕ್ಷತ್ರದಲ್ಲಿ, ಎರಡು ಘಳಿಗೆ ಮೇಲೆ ವಿಷ ಸವಿಯಾದೀತು. ಸವಿ ವಿಷವಾದೀತು. ಆಮೇಲೆ ವಿಷವೆ ವಿಷವಾದೀತು. ಅಮೃತ ಅಮೃತವಾದೀತು.

**ಪದ**

ದುಂಡು ಗುಂಡದ ಸುತ್ತ ಕೆಂಡದ ಮಳೆಗರೆದು ಕೇಳಿರಣ್ಣಾ ।
ಮುಂಡಲದೊಳು ಮೂರುಗಾವುದ ಹಗಲಾದೀತು ಕೇಳಿರಣ್ಣಾ ॥ ೧ ॥

ದಂಡ ನಾಯಕರು ಬರುವ ಕಾಲ ಸೂಚನೆಗಿನ್ನು ಕೇಳಿರಣ್ಣಾ ।
ಬೆಂಡಾಗಿ ಹೋದರು ಮರ್ತ್ಯದ ಜನರಿನ್ನು ಕೇಳಿರಣ್ಣಾ ॥ ೨ ॥

**ವಚನ**॥ ರುಧಿರೋದ್ಗಾರಿ ನಾಮಸಂವತ್ಸರದ ಆಶ್ವೀಜ ಶುದ್ಧ ಏಕಾದಶಿ, ಸ್ಥಿರವಾರದ ಧನಿಷ್ಠಾನಕ್ಷತ್ರದಲ್ಲಿ ಮೂರು ಘಳಿಗೆ ಮೇಲೆ ದುಂಡುಗುಂಡದ ಸುತ್ತ ಮೂರುಗಾವುದ ಕೆಂಡದ ಮಳೆ ಸುರಿದದ್ದೇ ಕುರುಹು.

**ಪದ**

ಪಟ್ಟಪಟ್ಟಾವಳಿ ಉಟ್ಟಾವರೆಲ್ಲಾರು ಕೇಳಿರಣ್ಣಾ ।
ಥಟ್ಟನೆ ಕೆಟ್ಟಾರು ಅರುವೆಯು ಕಾಣದೆ ಕೇಳಿರಣ್ಣಾ ॥ ೧ ॥

ಕೋಟೆಯ ಕಲ್ಲಲ್ಲಿ ಮೂರ್ಖನು ಹುಟ್ಟುತಾನೆ ಕೇಳಿರಣ್ಣಾ ।
ಹುಟ್ಟುವ ಮುಂ1 ದಿನ್ನು1 ಸೊನ್ನಲಾಪುರದಲ್ಲಿ ಕೇಳಿರಣ್ಣಾ ॥ ೨ ॥

ಯಾತಗಿರಿಯ ಸುತ್ತ ಭೂತವು ಹೆಚ್ಚಾವು ಕೇಳಿರಣ್ಣಾ ।
ಶೀತಳ ಉರಿಯೆದ್ದು ಪಾತಾಳಕಿಳಿದಾವು ಕೇಳಿರಣ್ಣಾ ॥ ೩ ॥

ಈ ಮಾತು ತಪ್ಪಿದರೆ ಬಸವಣ್ಣನಾಣೆಯು ಕೇಳಿರಣ್ಣಾ ।
ಶೀತಳ ಸಮರತಿ ಉಪ್ಪುಗಳಾದವು ಕೇಳಿರಣ್ಣಾ ॥ ೪ ॥

---

1 ದೀಗ (ಅ,ಇ,ಒ,ಕ,ಚ.)



**ವಚನ** ॥ ರುಧಿರೋದ್ಗಾರಿನಾಮಸಮಂತ್ಸರದ ಆಶ್ವೀಜ1 ಶುದ್ಧ 1 ಏಕಾದಶಿ ರವಿವಾರ ಉತ್ರಾಷಾಡನಕ್ಷತ್ರದಲ್ಲಿ, ಹಗಲು ನಾಲ್ಕು ಘಳಿಗೆ ಮೇಲೆ, ಗುಂಡುಗಳು ತೇಲ್ಯಾವು. ಬೆಂಡುಗಳು ಮುಳುಗ್ಯಾವು. ಮತ್ತು ಆಶ್ವೀಜ ಶುದ್ಧ ಚತುರ್ದಶಿಯ ಕುಜವಾರ ಚಿತ್ತಾನಕ್ಷತ್ರದಲ್ಲಿ, ಏಳು ಘಳಿಗೆ ಮೇಲೆ ಮಜ್ಜಿಗೆಯೊಳಗಣ ಬೆಣ್ಣೆ ಕರತಳಕ್ಕೆ ಮುಳುಗಬೇಕು. ಕಾರ್ತೀಕ ಶುದ್ಧ ಹದಿನೈದನೆಯ ಬುಧವಾರ ಸಂಪೂರ್ಣ ತೇಲಬೇಕು. ಮುಳುಗಿದ್ದೇ ಕರ್ಮ, ತೇಲಿದ್ದೆ ಧರ್ಮವೆಂದು ತಿಳಿಯಬೇಕು. (ಕೊಟ್ಟದ್ದು ತನ್ನದು, ಬೈಚಿಟ್ಟದ್ದು ಪರರದು,) ಎಣಿಕೆಯಿಂದ ಕೊಟ್ಟದ್ದು ಬಾರದು. ನೆಲದೊಳಗೆ ಬೈಚಿಟ್ಟದ್ದು ಬೈಲಾದೀತು. ಇದು ಸಿದ್ಧಾಂತವೆಂದು ತಿಳಿಯತಕ್ಕದ್ದು.

**ಪದ**

ದಕ್ಷಿಣ2 ದಿಕ್ಕಿನ2 ಲಿ ಹುಟ್ಟುವನು ಎಡತುಂಟ ಕೇಳಿರಣ್ಣಾ ।
ರಕ್ಷಿಸುವನು ತನ್ನ ನಂಬಿದ ಜನರನ್ನು ಕೇಳಿರಣ್ಣಾ ॥ ೧ ॥

ಕಿತ್ತು ಹಾಕುವನು ಠಾಣ್ಯ ಠಾಣ್ಯಗಳೆಲ್ಲವ ಕೇಳಿರಣ್ಣಾ ।
ಗುತ್ತಿಗೆಸೀಮೆಯ ಮುತ್ತಿಗೆ3 ಹಾಕ್ಯಾ3ನು ಕೇಳಿರಣ್ಣಾ ॥ ೨ ॥

4 ಹೊ4 ತ್ತು ಮಾರುವರಿಗೆ ಪಟ್ಟವ ಕಟ್ಟ್ಯಾನು ಕೇಳಿರಣ್ಣಾ ।
ಮಿತ್ತಾಗಿ ಬಂದಾನು ರಾಜ್ಯವ ಕೆಡಿಸುತ್ತ ಕೇಳಿರಣ್ಣಾ ॥ ೩ ॥

ಧೂಮಕೇತುವು ಮೂಡಿ ರೋಮದ ಹೆಣ ಮಯ ಕೇಳಿರಣ್ಣಾ ।
ಸೋಮಸೂರ್ಯರು ತಾವು ದಾರಿಯ ತಪ್ಪ್ಯಾರು ಕೇಳಿರಣ್ಣಾ ॥ ೪ ॥

ಆ ಮಹ ನಕ್ಷತ್ರ ಹಗಲಲ್ಲೆ ಕಂಡಾವು ಕೇಳಿರಣ್ಣಾ ।
ಪ್ರೇಮವು ಜಗಕೆಲ್ಲ ಕಷ್ಟಗಳು ತೋರ‍್ಯಾವು ಕೇಳಿರಣ್ಣಾ ॥ ೫ ॥

---

1 ಬಹುಳ (ಅ,ಇ,ಒ,ಕ.) 2 ದ (ಅ,ಇ,ಒ,ಕ.)
3 ನಾಡ್ಯಾ (ಅ,ಇ,ಒ,ಕ.) 4 ಎ (ಎ.)

**ವಚನ** ॥ ಶಿಖೇಂದ್ರಬಾದುಶೇನನ ರಾಜ್ಯ ಬೀಳಬೇಕು. ರಕ್ತಾಕ್ಷಿನಾಮಸಂವತ್ಸರದ ಆಷಾಡ ಶುದ್ಧ ಪಂಚಮಿಯ ಸೋಮವಾರ ಉಬ್ಬಾ ನಕ್ಷತ್ರ ಏಳು ಘಳಿಗೆ ಮೇಲೆ, ವಿಜಯಪುರದ ಕರ್ತ್ರ್ರ ಏರಿ, ಮೂರು ತಿಂಗಳು ರಾಜ್ಯವನ್ನಾಳುವರು. ಅಷ್ಟರಲ್ಲಿ ಕಿರೀಟ ರಾಮರಾಯನು (೪೯೦೦೦೦೦) ನಲವತ್ತೊಂಬತ್ತು ಲಕ್ಷ ದಂಡು ಬಂದು, ಮೂರು ದಿವಸ ವಿಜಾಪುರದ ಸುತ್ತ ಚೌಕಿಯ ಮಾಡ್ಯಾರು. ಶಿಖೇಂದ್ರಬಾದುಶೇನನ್ನು, ಕಿರೀಟ ರಾಮರಾಯರು ತನ್ನ ಚಂದ್ರಾಯುಧದಿಂದ ಆತನ ತಲೆ ಹೊಡೆಯಲು ಆ ತಲೆ ಖೋ ಎಂದು ಕೂಗಿತು. ಆಮೇಲೆ ಕಿರೀಟ ರಾಮರಾಜನ ಮಾರ್ಬಲದಲ್ಲಿ ತನ್ನ ಸಂದು ಸಂದಿಗೆ ಸಹ ಹೆಣಗಳು ಮಡಿದಾವು. ರಕ್ತಾಕ್ಷಿನಾಮ ಸಂವತ್ಸರದ, ಭಾದ್ರಪದ ಬಹುಳ ನವಮಿ ಶುಕ್ರವಾರ ಏಳು ಘಳಿಗೆ ಮೇಲೆ ಆತನ ತಲೆಯ, ಹಸ್ತದ ಮೇಲೆ ಇಟ್ಟು ಅಂಬಾರಿಯೊಳಗೆ ಮೆರೆಸುತ್ತ, ರಾಜಬೀದಿಯೊಳಗೆ ಬಂದು ಸಿಂಹಾಸನದಲ್ಲಿಟ್ಟು, ಗೋರಿ ಕಟ್ಟಿಸಿ ಒಂಬತ್ತು ಭಾರಿ ಭಂಗಾರ ಕಲಶವಿಟ್ಟು ಗುಮ್ಮಟವ ಕಟ್ಟಿಸ್ಯಾನು. ಆ ಗೋರಿ ಮೇಲೆ ಶ್ರೀ ಕೈಲಾಸದಿಂದ ಕುಸುಮ ವೃಷ್ಟಿಸುರಿದಾವು. ಕೊರಡು ಚಿಗುರೀತು. ಬರಡು ಹೈನಾಗುವುದು. ಒಂದು ಮಾಸ ದೇವರಾಗಿ ಪೂಜೆಗೊಂಬುದು. ಕಲ್ಲುಬುರುಗಿ [1]ಭಂಡೇ[1] ನಿವಾಜಿನ ಪೂಜೆ ನಿಲ್ಲುವುದು. ಆಮೇಲೆ ಶಿಖೇಂದ್ರಬಾದುಶೇನನ ಪೂಜೆ ನಿಂತೀತು. ಈ ಪ್ರಕಾರದಿಂದ ನಡೆಯುವುದು. ಅಷ್ಟರಮೇಲೆ ನಮ್ಮ ಗಣಂಗಳು ಬರುವ ಸೂಚನೆ ಪೇಳುವೆವು.

**ಪದ**

ಚಂಗಲ್ವ ಮಂಟಪದಿ ರುದ್ರ ಮುನಿಯು ಪೇಳೆ ಹುಯ್ಯಲೊ ಡಂಗುರವ ।
ಸಂಗನ ಶರಣರ ಕಾಲಸೂಚನೆ ಮುಂದೆ ಹುಯ್ಯಲೊ ಡಂಗುರವ ॥ ೧ ॥
ಮುಂಗಳ ಮಹಿಮರು ನಿಲ್ಲದೆ ಬರುವರು ಹುಯ್ಯಲೊ ಡಂಗುರವ । ॥ ೨ ॥
ಬಂದಾರು ನಿಲ್ಲಾರು ನಿಲ್ಲದೆ ಬರುವ[2]ಂಥ[2] ಕುರುಹೀಗ ಹುಯ್ಯಲೊ ಡಂಗುರವ

1 ಬಾಜೆ (ಎ.) ; ಬಂಜೆ (ಚ.)  2 ದೆ (ಅ, ಇ, ಒ, ಕ, ಚ.)



**ವಚನ** ॥ ಕ್ರೋಧಿ ನಾಮಸಂವತ್ಸರದಲ್ಲಿ ಮಹಾಘನತೆ ವೇಷವಂತಾಳಿ ಬರುವರು. ಅಂಗೈಯೊಳಗೆ ಕಣ್ಣು ಇದ್ದವರು, ಮೈಯೆಲ್ಲಾ ಕಣ್ಣು ಇದ್ದವರು, ಉಂಡ ಊಟ, ಕಂಡ ಕನಸು ಹೇಳುವವರು, ತಲೆ ಮೇಲೆ ಕೋಡು ಮೂಡಿದವರು, ಹುಲಿವಾಹನವ ಏರಿದವರು, ಅಗ್ನಿಸ್ತಂಭ, ಜಲಸ್ತಂಭ, ಕಾಯಸ್ತಂಭ, ದೂರ ದೃಷ್ಟಿ, ದೂರ ಶ್ರವಣ, ತ್ರಿನೇತ್ರ, ಪಂಚಮುಖ, ದಶಭುಜ, ನಾನೆ ಚೆನ್ನಬಸವಣ್ಣ, ನಾನೆ ವೀರ ವಸಂತನು, ಎಂದು ಬಂದ ಕಾಲಕ್ಕೂ ನಂಬಲಾಗದು. ಇನ್ನು ಅವರ ಸೂಚನೆ ಎಂತೆಂದೊಡೆ :—ಅಕ್ಷಯನಾಮಸಂವತ್ಸರದ ಶ್ರಾವಣಶುದ್ಧ ಪಾಡ್ಯಾಮಿ ಗುರುವಾರ ರೇವತಿನಕ್ಷತ್ರದಲ್ಲಿ, ಹಂಪೆ ವಿರುಪಾಕ್ಷನ ಹೇಮ ಕೂಟದ ಮಠಕ್ಕೆ ಬಂದರು ಐದುಸಾವಿರ ಮಂದಿ ಶ್ರೀ ವೈಷ್ಣವರು. ಸೊನ್ನಲಾಪುರದ ಸಿದ್ಧರಾಮೇಶ್ವರನ ಕೆರೆಯೊಳಗೆ ಬಿಳಿಯಾನೆ ಹುಟ್ಟೀತು. ಆ ಬಿಳಿಯಾನೆ ತೆಗೆದುಕೊಂಡು ಬಂದು ವೀರ ವಸಂತನಿಗೆ ಕೊಟ್ಟಾರು ಆತನು ಏನು ಮಾಡುವನೆಂದರೆ :—

**ಪದ**

ವೀರವಸಂತನು ರಾಜ್ಯಕ್ಕೆ ದೊರೆ ಬಂದ ಹುಯ್ಯಲೊ ಡಂಗುರವ ।
ಪೂರೈಸಿ ಲಿಂಗ ನಿರ್ಣಯವ ಕೇಳುವೆನೆಂದು ಹುಯ್ಯಲೊ ಡಂಗುರವ ॥ ೧ ॥
ವರಭಸಿತವಿಟ್ಟವರ ಹಣೆಗಳ ಕೆತ್ತಿಸ್ಯಾನು ಹುಯ್ಯಲೊ ಡಂಗುರವ ।
ಯಾರ್‍ಯಾರು ಉತ್ರವ ಕೊಡುವರಸಾಧ್ಯವು ಹುಯ್ಯಲೊ ಡಂಗುರವ ॥ ೨ ॥
ವೀರಶೈವದ ಜನರ ಕಂಡವರ ಬಾಧಿಸುವ ಹುಯ್ಯಲೊ ಡಂಗುರವ ।
ಲಿಂಗ ಕಟ್ಟಿದವರ ಕೊರಳನ್ನೆ ಕೊಯಿಸುವ ಹುಯ್ಯಲೊ ಡಂಗುರವ ॥ ೩ ॥
ಹಾರುವರ ಜುಟ್ಟಿಗೆ ಹಗ್ಗವ ಕಟ್ಟಿಸ್ಯಾನು ಹುಯ್ಯಲೊ ಡಂಗುರವ ।
ಹೋರಾಟವಾದೀತು ಸಂಧ್ಯಾವಂದನೆ ಜಪ ಹುಯ್ಯಲೊ ಡಂಗುರವ ॥ ೪ ॥
ಸೂರ್ಯನ ತಳಗಿನ್ನು ಸುರಚಾಪ ಮೂಡಿತು ಹುಯ್ಯಲೊ ಡಂಗುರವ ।
ಸಾರುತ್ತ ಜಗವನ್ನು ಸರಿಕಟ್ಟು ಮಾಡ್ಯಾನು ಹುಯ್ಯಲೊ ಡಂಗುರವ ॥ ೫ ॥

ವಚನ॥ ಈ ಪ್ರಕಾರದಿಂದ ವೀರ ವಸಂತನು ಸಕಲ ಜನರನ್ನು ವಿಚಾರಣೆಯಿಲ್ಲದೆ, ವಾದಿಸುವರ ವರ್ತಮಾನವನ್ನು ತಿಳಿದು ಸಣ್ಣ ವಾಜಿಯುಳ್ಳವರಿಗೆ ಪಟ್ಟವ ಕಟ್ಟ್ಯಾರು. ಮೂರು ಜಗವು ಕೆಟ್ಟೀತು ಎಂಬದಾಗಿ ಸಕಲ ಪ್ರಮಥಗಣ ಸಮೇತದಿಂದ ಚೆನ್ನಬಸವೇಶ್ವರ ದೇವರು ಆಗ ಬಿಜಯಂಗೈಯ್ಯುವರು.

ಪದ

ಪನ್ನಗಧರ ಶಿವನ ಪಣೆಗಣ್ಣಿನಿಂದಲಿ ಹುಯ್ಯಲೊ ಡಂಗುರವ ।
ಚೆನ್ನಬಸವರಾಜ ಬಂದಾರು ಮರ್ತ್ಯಕ್ಕೆ ಹುಯ್ಯಲೊ ಡಂಗುರವ ॥ ೬ ॥

ಮಾನವರ ಪಾಪಗಳು ನಿ[1]ಮೂ೯[1]ಲವಾದೀತು ಹುಯ್ಯಲೊ ಗಂಗುರವ ।
ಇಂದುಧರ ಶರಣರು ಹನ್ನೆರಡುಸಾವಿರ ಹುಯ್ಯಲೊ ಡಂಗುರವ ॥ ೨ ॥

ಬಂದರು ದಂಡನಾಯಕರ ಸಮೂಹದಿ ಹುಯ್ಯಲೊ ಡಂಗುರವ । ॥ ೩ ॥
ಚಂ[2]ದಚಂದದ ರುದ್ರಾಕ್ಷಿಗಳ ಕೊರಳಿ[2]ಗೆ ಧರಿಸಿ ಹುಯ್ಯಲೊ ಡಂಗುರವ

ನಿಂದಕಜನರನ್ನು ಸಂಹಾರಮಾಡುತ್ತ ಹುಯ್ಯಲೊ ಡಂಗುರವ ।
ನಂದಿಯ ಮುದ್ರಿಕೆ ಬೆರಳಲ್ಲಿ ತಾಳಿನ್ನು ಹುಯ್ಯಲೊ ಡಂಗುರವ ॥ ೪ ॥

ಕಂದರನೆಲ್ಲರ ಸಲಹಬೇಕೆನುತಲಿ ಹುಯ್ಯಲೊ ಡಂಗುರವ ।
ಚಂದಚಂದದ ವಾದ್ಯ ರಭಸಗಳಿಂದಲಿ ಹುಯ್ಯಲೊ ಡಂಗುರವ ॥ ೫ ॥

ಮುಂದಿನ್ನು ಭಕ್ತಿಯನುಂಟುಮಾಡುವೆನೆಂದು ಹುಯ್ಯಲೊ ಡಂಗುರವ ।
ಚಂದದಿ ಶರಣರೊಳ್ಬೆರೆಯುತ್ತ ಬಂದರು ಹುಯ್ಯಲೊಡಂಗುರವ ॥ ೬ ॥

ವಚನ ॥ ಕಲಿವರುಷಗಳೊಳು (೪೯೬೭) ನಾಲ್ಕುಸಾವಿರದ ಒಂಬೈನೂರ ಅರವತ್ತೇಳನೆಯ ಅಕ್ಷಯನಾಮಸಂವತ್ಸರದ ಕಾರ್ತೀಕ ಶುದ್ಧ ಪಾಡ್ಯಮಿಯ ಗುರುವಾರ ಸ್ವಾತಿನಕ್ಷತ್ರದಲ್ಲಿ ಹದಿನೆಂಟು ಘಳಿಗೆಗೆ

1 ಮೂ೯ (ಅ, ಇ, ಒ, ಕ.) 2 ದ್ರಾದಿ ರುದ್ರಾಕ್ಷಿ ಟೀ ಜೀಳಿ (ಅ, ಇ, ಒ, ಕ, ಚ.)



ಎನ್ನೊಡೆಯ ಬಸವಪ್ರಿಯ ಚೆನ್ನದಂಡನಾಯಕರು ತ್ರಿಜಗದ್ವಲ್ಲಭನು, ಬಿಜಮಾಡುತ್ತ, ಅಮೃತವ ಪೃಥ್ವಿಗೆ ಬೀರುತ್ತ ಹನ್ನೆರಡುಸಾವಿರ ಕುದುರೆಗೆ ರುದ್ರಾಕ್ಷಿ ಜೀನುಗಳಿಂದ ಹನ್ನೆರಡುಸಾವಿರ ಜಂಗಮವು ಸಂಗಡ ಏಳನೂರು ಎಪ್ಪತ್ತು, ಅಮರ ಗಣಂಗಳು. ಅರವತ್ತಮೂರು ಪುರಾತನರು. ಸಹವಾಗಿ ಶ್ರೀ ಚೆನ್ನದಂಡನಾಯಕರು ಹಸುರುತೇಜಿಯನ್ನೇರಿಕೊಂಡು ಕರಿಗೊಂಗಡಿ ಕಂತೆ ಕಾಮನ ಭಸ್ಮಪರಿಪೂರ್ಣ. ಪರಮ ರುದ್ರಾಕ್ಷಿ, ಪ[1]ರಶು[1]ಗೊಡಲಿಯ ಪೂಜೆ. ಬೆರಳಿನಲ್ಲಿ ಬಸವನಮುದ್ರೆ. ನಾಗಬೆತ್ತವ ಪಿಡಿದು ಮೂರು ಕಾಲಿನ ಮಂಚ. ಉಕ್ಕಿನಪೂಜೆ, ಪರಮ ಪರಾತ್ಪರ ಚಿದ್ಘನಮೂರ್ತಿ ಚೆನ್ನದಂಡನಾಯಕರು, ಪ್ರಮಥಗಣ ಸಮೂಹದಿಂದ ಉಳುವಿಯ ಮಹಾಮನೆಯಂ ಬಿಟ್ಟು ನಂದಿಜಲಕ್ಕೆ ಬಿಜಯಂಗೈಸಿದರು. ನಂದೀಶ್ವರನ ದರುಶನವ ತೆಗೆದುಕೊಂಡು ಅಲ್ಲಿ ಜಂಗಮಾರ್ಚನೆಯಂ ನಡೆಸುವರು.

ಪದ

ಪರಮಪಾವನ ಮೂರ್ತಿ ನಂದೀಶನೊಡಗೊಂಡು ಹುಯ್ಯಲೊ ಡಂಗುರವ ।
ಇರದೆ ಪಯಣವು ಜಂಗಮ ಸಹವಾಗಿ ಹುಯ್ಯಲೊ ಡಂಗುರವ ॥ ೧ ॥

ವಿರುಪಾಕ್ಷನ ಹೇಮಕೂಟದ ಮಠಕಿನ್ನು ಹುಯ್ಯಲೊ ಡಂಗುರವ ।
ವೀರವಸಂತನು ಕಂಡು ಪ್ರಸಂಗವ ಮಾಡ್ಯಾನು ಹುಯ್ಯಲೊ ಡಂಗುರವ* ॥ ೨ ॥

ಭವಹರನ ಕರುಣದಿ ಬಂದಾರು ಮರ್ತ್ಯಕ್ಕೆ ಹುಯ್ಯಲೊ ಡಂಗುರವ ।
ಶಿವಭಕ್ತರನೆಲ್ಲ ಬಂಧಿಸುವ ಕಾರಣವೇನು ಹುಯ್ಯಲೊ ಡಂಗುರವ ॥ ೩ ॥

ಇವರಿಗೆ ವೀರತ್ವ ಇರುವ ಕಾರಣವೇನು ಹುಯ್ಯಲೊ ಡಂಗುರವ ।
ವಿವರದೊಳಗೆ ಪೇಳಿ ಅಂಜದೆ ನಮ್ಮೊಳು ಹುಯ್ಯಲೊ ಡಂಗುರವ ॥ ೪ ॥

ವಚನ ॥ ಶಿವಭಕ್ತರನೆಲ್ಲ ನಿರ್ಮೂಲವ ಮಾಡಿಸಿ, ವಿಷ್ಣುಭಕ್ತರನೆಲ್ಲ ಪ್ರಬಲವಂ ಮಾಡಿದ್ದು ಏನು ಕಾರಣವೆಂದು ಕೇಳಿದುದಕ್ಕೆ, ವೀರ

1 ಂ (ಅ, ಇ, ಒ, ಕ, ಚ.) * ಈ ಪದ್ಯ (ಎ.) ಪ್ರತಿಯಲ್ಲಿಲ್ಲ.

ವಸಂತನು, ವಿಷ್ಣು ಪಾದದಲ್ಲಿ ಗಂಗೆ ಪುಟ್ಟಿದಳೆಂದು ಪುರಾಣದಲ್ಲಿ ಹೇಳುತಿರ್ದ ಕಾರಣ! ಶಿವಭಕ್ತರನೆಲ್ಲ ಅಳಿದು ವಿಷ್ಣುಭಕ್ತರನೆಲ್ಲ ಪ್ರಬಲವಂ ಮಾಡುತಿರ್ದನೆಂದು, ತಂದೆ ಚೆನ್ನದಂಡನಾಯಕರಲ್ಲಿ ಪ್ರತಿವಾದಿಸುತಿರ್ದಾಗ, ಎಲೆ ಮರುಳೆ ಕೇಳು ಇಪ್ಪತ್ತೊಂದು ಯುಗದಲ್ಲಿ, ಮಾಯೆ ಹುಟ್ಟಿದಳು. ಹತ್ತು ಯುಗದಲ್ಲಿ ವಿಷ್ಣು ಪುಟ್ಟಿದನೆಂದು ಪೇಳಿದುದಕ್ಕೆ ಹಾಗಲ್ಲವೆಂದು ವೀರವಸಂತನು ವಾದವಂಮಾಡುತ್ತ ಶ್ರೀ ವಿರುಪಾಕ್ಷನ ಸ್ಥಳವಂ ಬಿಟ್ಟು ಮುಂದಕ್ಕೆ ನಡೆಯುವನು.

ಪದ

ವಿರುಪಾಕ್ಷನ ಸ್ಥಳವ ಬಿಟ್ಟನ್ನು ಮುಂದಕ್ಕೆ ಕೇಳಿರಣ್ಣಾ* ।
ವೀರವಸಂತನು ಚೆನ್ನಬಸವರಾಜ ಕೇಳಿರಣ್ಣಾ ॥ ೧ ॥

ಹರಮತಕೆ ಹರಿಮತಕೆ ವಾದವ ನಡಸುತ್ತ ಕೇಳಿರಣ್ಣಾ ।
ಹೊರಟಾರು ಪಾತಾಳ ಗಂಗೆಗೆ ತಾವಿನ್ನು ಕೇಳಿರಣ್ಣಾ ॥ ೨ ॥

ವಚನ॥ ಅಕ್ಷಯನಾಮಸಂವತ್ಸರದ ಮಾರ್ಗಶಿರ ಶುದ್ಧ ದಶಮಿ ಸೋಮವಾರದ ರಾತ್ರಿ ಮೂರು ತಾಸಿಗೆ ಶ್ರೀಗಿರಿಪಾತಾಳ ಗಂಗೆಗೆ ಬರುವರು. ಆ ಸ್ಥಳಕ್ಕೆ ಕದಳಿವನದಿಂದ, ಪ್ರಭು ಸ್ವಾಮಿಗಳು ಬರುವರು. ಚೆನ್ನಬಸವೇಶ್ವರ ದೇವರು ಕಂಡು, ಸಾಷ್ಟಾಂಗ ಬಿನ್ನಹವಂ ಮಾಡಿ ಕರುಣ ಪ್ರಸಾದವಾಕ್ಯವಂ ಕೈಕೊಂಡು ತದನಂತರದೊಳು ಪಾತಾಳ ಗಂಗೆಯಲ್ಲಿ ಪಾದವ ಇಡಲಿಕ್ಕಾಗಿ, ಏಕಾದಶಿಯ ಮಂಗಳವಾರ ಮೂರು ಘಳಿಗೆಯ ಮೇಲೆ ನಡೆಯುವ ಕಾರ್ಯಗಳು ಏನೆಂದರೆ :—

ಪದ

ಪ್ರತಿಸೂರ್ಯ ಕಿರಣಂಗಳು ಬಿದ್ದೀತು ಹುಯ್ಯಲೊ ಡಂಗುರವ ।
ಪಾತಾಳ ಗಂಗೆಯ ಜಲಬತ್ತಿ ಹೋಯಿತು ಹುಯ್ಯಲೊ ಡಂಗುರವ ॥ ೧ ॥

* ಈ ಅರ್ಧಪದ್ಯ (ಎ.) ಪ್ರತಿಯಲ್ಲಿಲ್ಲ.



ಶೀತಳದೊಳಗಿರ್ದ ಚಂದ್ರಗುಪ್ತರಾಜ ಹುಯ್ಯಲೊ ಡಂಗುರವ ।
ಆತನು ಬೈಲಿಗೆ ಬಂದಾನು ಕೇಳೆಂದು ಹುಯ್ಯಲೊ ಡಂಗುರವ ॥ ೨ ॥

ಚಿ1ಲುಮೆಯ1 ತೆಗೆದಾನು ಚೆನ್ನಬಸವರಾಜ ಹುಯ್ಯಲೊ ಡಂಗುರವ ।
ಕಲ್ಲೇಳು ಗಜವಾದ ರಾಜನು ಮೇಲಕ್ಕೆ ಹುಯ್ಯಲೊ ಡಂಗುರವ ॥ ೩ ॥

ಉಲ್ಲಾಸದಿಂದಲಿ ಪವಾಡವ ಮೆರೆವಾನು ಹುಯ್ಯಲೊ ಡಂಗುರವ ।
ಸಿಲ್ಲದೆ ಹೋಯಿತು ಶಾಪ ನಿಶ್ಚಯವಾಗಿ ಹುಯ್ಯಲೊ ಡಂಗುರವ ॥ ೪ ॥

ವಚನ ॥ ಆ ವೇಳೆಯಲ್ಲಿ ವೀರ ವಸಂತರಾಯಂಗೆ ಭಕ್ತಿಯು ಪುಟ್ಟಿ ಚೆನ್ನಬಸವೇಶ್ವರನ ಪಾದಕ್ಕೆರಗಿ ಸಾಷ್ಟಾಂಗನಮಸ್ಕಾರವಂ ಮಾಡಿ ಕರಕಮಲವಂ ಮುಗಿದು ಶ್ರೀ ಮಹಾದೇವನೆ ಪಾಷಂಡಿಯಾದೆನ್ನ ಭವಿತನವಂ ಹಿಂಗಿಸಿ, ಲಿಂಗಧಾರಣೆಯಂ ಮಾಡಿ ನಿಮ್ಮ ಪಾದದ ಭಕ್ತನ ಮಾಡಿಕೊಳ್ಳಬೇಕು. ಎಂಬುದಾಗಿ ಪ್ರಾರ್ಥಿಸುತ್ತ ಬಿನ್ನಹಂಗೈದು, ನಿಂದಿರ್ದ ವೀರ ವಸಂತರಾಯನಿಗೆ ಚೆನ್ನಬಸವೇಶ್ವರ ದೇವರು, ತಮ್ಮ ಕೃಪಾವಲೋಚನದಿಂ ನೋಡಿ, ಅಂಜದಿರು ಎಂದು ಅಭಯವಂ ಕೊಟ್ಟು ಲಿಂಗಧಾರಣೆಯಂ ಮಾಡುವರದೆಂತೆನೆ :—

ಪದ

ಹದಿನಾರು ಕಂಭದ ಚಪ್ಪರದ ಹೊದಿಕೆಯು ಹುಯ್ಯಲೊ ಡಂಗುರವ ।
ಚದುರ ಮಂಟಪ ನಡುವೆ ಚೆನ್ನಾಗಿ ಕಟ್ಟ್ಯಾರು ಹುಯ್ಯಲೊ ಡಂಗುರವ ॥ ೧ ॥

ಮದಹರನ ಮಂಟಪ ಪದುಳದಿಂ 2ರಚಿಸ್ಯಾರು2 ಹುಯ್ಯಲೊ ಡಂಗುರವ ।
ಮುದದಿಂದ ರಚಿಸ್ಯಾರು ಸದಮಲ ಶರಣರು ಹುಯ್ಯಲೊ ಡಂಗುರವ ॥ ೨ ॥

ಸೃಷ್ಟಿಗಾಶ್ಚರಿಯಾದ ಪಟ್ಟಾವಳಿಗ3ಳ3ನ್ನು ಹುಯ್ಯಲೊ ಡಂಗುರವ ।
ಕಟ್ಟ್ಯಾರು ಚಪ್ಪರಕೆ ಬಹಳ ಸುಂದರವಾಗಿ ಹುಯ್ಯಲೊ ಡಂಗುರವ ॥ ೩ ॥

1 ಲಿಪಾಲು (ಅ, ಇ, ಒ, ಕ, ಚ.) 2 ವಿರಚಿಸಿ (ಅ, ಇ, ಒ, ಕ.)
3 ಳ (ಅ, ಇ, ಒ, ಕ, ಚ.)

ಅಷ್ಟದಿಕ್ಕಿಲಿ ಫಲ ಪುಷ್ಪವ ಕಟ್ಟುವರು ಹುಯ್ಯಲೊ ಡಂಗುರವ ।
ಸೃಷ್ಟಿಗೀಶ್ವರತಾನು ಮೆಚ್ಚುವ ತೆರದೊಳು ಹುಯ್ಯಲೊ ಡಂಗುರವ* ॥ ೪ ॥

ಮುತ್ತು ಮಾಣಿಕವಜ್ರ ಪಚ್ಚೆಗೋಮೇಧಿಕ ಹುಯ್ಯಲೊ ಡಂಗುರವ ।
ರತ್ನ ತೋರಣ ಸುತ್ತ ಸಕಲಾತಿ ಪವಳದ ಝುಲ್ಲಿ ಹುಯ್ಯಲೊ ಡಂಗುರವ ॥ ೫ ॥

ಮುತ್ತು ಪೂಮಾಲೆಯು ವಸ್ತ್ರನಾಣ್ಯಗಳಿನ್ನು ಹುಯ್ಯಲೊ ಡಂಗುರವ ।
ಅರ್ಥಿಯಲಿ ಕಟ್ಟಿದರು ಸಕಲ ಶೃಂಗರವಾಗಿ ಹುಯ್ಯಲೊ ಡಂಗುರವ ॥ ೬ ॥

ವಚನ ॥ ವೀರ ವಸಂತರಾಯಂಗೆ ರುದ್ರಕಂಕಣವಂ ಕಟ್ಟಿ ಪಂಚಾಚಾರ್ಯರು, ಏಕೋರಾಮಾರಾಧ್ಯರು, ಪಂಡಿತಾರಾಧ್ಯರು, ಮರುಳಾರಾಧ್ಯರು, ರೇವಣಾರಾಧ್ಯರು, ಸಿದ್ಧಸಂಜೆಸ್ವಾಮಿಗಳು ಮುಂತಾದ, ಪ್ರಮಥಾದಿಗಳು ಕೂಡಿ, ದೀಕ್ಷೆಗೆ ಅನುವ ಮಾಡುವಲ್ಲಿ ಐದುನೂರು ಜನ ಶ್ರೀ ವೈಷ್ಣವರು, ಜುಟ್ಟು ಜನಿವಾರವಂ ಕಿತ್ತುಹಾಕಿ ಬಂದು, ಶ್ರೀ ಚೆನ್ನದಂಡನಾಯಕರಲ್ಲಿ, ನಮಸ್ಕಾರ ಬಿನ್ನಹವಂ ಗೈದು ಲಿಂಗ ಧಾರಣೆಯಂ ಮಾಡಿ ನಮ್ಮ ರಕ್ಷಿಸಬೇಕೆಂದು, ದೈನ್ಯದಿಂ ಕರಕಮಲವಂ ಮುಗಿದು ನಿಂದಿರ್ದ ವಿಪ್ರರಿಗೆಲ್ಲ, ಪಂಚಗವ್ಯ ಪ್ರಾಯಶ್ಚಿತ್ತದಿಂದ, ರುದ್ರ ಕಂಕಣವಂ ಕಟ್ಟಿ ದೀಕ್ಷೆಗೆ ಅನುಗ್ರಹವಂ ಮಾಡ್ಯಾರು. ಮಾರ್ಗಶಿರ ಶುದ್ಧ ಪೌರ್ಣಮಿ [1] ರವಿ [1] ವಾರದ ರಾತ್ರಿ ಇಪ್ಪತ್ತೆಂಟು ಘಳಿಗೆ ಮೇಲೆ ವೀರ ವಸಂತರಾಯಂಗೂ ಮತ್ತು ಐದುನೂರುಜನ, ಶ್ರೀ ವೈಷ್ಣವರಿಗೂ ಒಂದುಸಾವಿರದ ಮುನ್ನೂರುಹದಿನೈದು ಜನ ಮುಸಲ್ಮಾನರಿಗೂ, ಇನ್ನೂ ಕಡಮೆ ಸಕಲ ಜಾತಿಯವರಿಗೂ ಸಹ ಲಿಂಗಧಾರಣೆಯಂ ಮಾಡುವರು.

ಪದ

ಗದ್ಯಾಣ ವಿಭೂತಿ ವರಹಕ್ಕೆ ಮಾರೀತು ಹುಯ್ಯಲೊ ಡಂಗುರವ ।
ಐದುವರಹಕೆ ಒಂದು ಲಿಂಗವು ಮಾರೀತು ಹುಯ್ಯಲೊ ಡಂಗುರ ॥ ೧ ॥

* ಈ ಅರ್ಧ ಪದ್ಯ (ಎ.) ಪ್ರತಿಯಲಿಲ್ಲ. 1 ಸ್ಥಿರ (ಅ, ಇ, ಒ, ಕ, ಚ.)



[1] ಮೂರುವರಹಕೆ ಒಂದು ರುದಾಕ್ಷಿಮಾರೀತು [1] ಹುಯ್ಯಲೊ ಡಂಗುರವ ।
ಹದಿನೆಂಟು ಪಣ [2] ಕ [2] ಟ್ಟು ಶಿವಭಕ್ತರಾದಾರು ಹುಯ್ಯಲೊ ಡಂಗುರವ ॥ ೨ ॥

ಶ್ರೀ ಮಲ್ಲಿಕಾರ್ಜುನನ ಸ್ಥಾಪನವ ಮಾಡ್ಯಾರು ಹುಯ್ಯಲೊ ಡಂಗುರವ ।
ಚೆನ್ನಾಗಿ ಅ [3] ಷ್ಟವಿಧ ಷೋಡಶೋಪಚಾರವು [3] ಹುಯ್ಯಲೊ ಡಂಗುರವ ॥ ೩ ॥

ಚೆನ್ನ ಮಲ್ಲೇಶ್ವರನ ಪೂಜೆಯ ನಡಸ್ಯಾರು ಹುಯ್ಯಲೊ ಡಂಗುರವ ।
ಇನ್ನು ಕೂಗಿನಮಾರಿ ಬೈಲಿಗೆ ಬಂದಾನು ಹುಯ್ಯಲೊ ಡಂಗುರವ ॥ ೪ ॥

ನೆಲಬಿಲ ಜನಸಮಾಧಿಯೊಳಿದ್ದ ವರೆಲ್ಲರು ಹುಯ್ಯಲೊ ಡಂಗುರವ ।
ಕಲಿಯುಗದೊಳಗಿನ್ನು ಚೆನ್ನದಂಡಾಧೀಶ ಹುಯ್ಯಲೊ ಡಂಗುರವ ॥ ೫ ॥

ಕಲ್ಯಾಣ ಪಟ್ಟಣಕೆ ಬಿಜಯಮಾಡುವ ಕಾಲ ಹುಯ್ಯಲೊ ಡಂಗುರವ ।
ನಿಲ್ಲದೆ ಬನ್ನಿರಿ ಬಿನ್ನಪವೆಂದ [4] ನು [4] ಹುಯ್ಯಲೊಡಂಗುರವ ॥ ೬ ॥

ವಚನ ॥ ಕೂಗಿನಮಾರಿ ತಂದೆಯು, ಗಣಂಗಳನೆಲ್ಲಾ ಕೂಗಿ ಕರಿಯಲು, ಆ ಶ್ರಿಶೈಲಗಿರಿಯೊಳಗಿರ್ದ, ಶಿವಗಣ ಸಮೂಹವೆಲ್ಲ ನೆರದೀತು. ನಲವತ್ತೆಂಟುಸಾವಿರ ಜಂಗಮಾರ್ಚನೆಯಂ ಮಾಡಿಸಿ ಚೆನ್ನಬಸವೇಶ್ವರ ದೇವರು, ವೀರವಸಂತನು ಗಣಸಮೂಹ ಸಹಿತವಾಗಿ, ತಿರುಪತಿ ವೆಂಕಟ ರಮಣನಲ್ಲಿಗೆ ಬಂದು, ಲಿಂಗಧಾರಣೆಯನ್ನು ಮಾಡಿ, ಒಂದು ಕೋಟಿ ದ್ರವ್ಯದ ಪಾದಗಾಣಿಕೆಯಂ ತೆಗೆದುಕೊಂಡು ಹಂಪೆಗೆ ಬರುವರು. ಹಂಪೆ ಸುತ್ತ ಮೂರು ಗಾವುದಕ್ಕೆ ತಗಡಿನ ಕೋಟೆಯಂ ಕಟ್ಟಿಸ್ಯಾರು. ಮಾತಂಗ ಧ್ರು [5] ವ [5] ನ ಸ್ಥಾಪ್ಯವ ಮಾಡ್ಯಾರು. [6] ಗುಡಿ [6] ಗೋಪುರವ ಕಟ್ಟಿಸ್ಯಾರು. ಅಲ್ಲಿ ಐದುಸಾವಿರ ಜಂಗಮಾರ್ಚನೆಯಂ ಮಾಡಿಸಿ, ಶ್ರೀ ವಿರೂಪಾಕ್ಷ

1 ಒಂದು ರುದ್ರಾಕ್ಷಿಗೆ ಮೂರು ವರಹ ಕ್ರಯ (ಎ, ಚ.) 2 ಕೆ (ಎ, ಚ.) 3 ಷ್ಟೋಪಚಾರವ ಮಾಡ್ಯಾರು (ಅ, ಇ, ಒ, ಕ.) 4 ರು (ಅ, ಇ, ಒ, ಕ.) 5 ಯ. 6 ಗಾಳಿ (ಅ, ಇ, ಒ, ಕ, ಚ.)

ದೇವರಿಗೆ ಅಷ್ಟವಿಧ ಷೋಡಶೋಪಚಾರ ಪೂಜೆಯಂ ಮಾಡಿಸಿ, ಆ ಲೋಕಪಾವನ ಮೂರ್ತಿಯಾದ ಪ್ರಭುಸ್ವಾಮಿಗಳು ಮೂಹೂರ್ತವಂ ಮಾಡುವರು.

ಪದ

ಅಲ್ಲಮಾಪ್ರಭುವನ್ನು ಕಲ್ಲುತೇರಿನ ಮೇಲೆ ಹುಯ್ಯಲೊ ಡಂಗುರವ ।
ನಿಲ್ಲದೆ ನಡಸ್ಯಾರು ಚೆನ್ನವೀರವಸಂತರು ಹುಯ್ಯಲೊ ಡಂಗುರವ ॥ ೧ ॥

ಅಲ್ಲಿಂದ ವಾಲಿ ಭಂಡಾರಕ್ಕೆ ಬರುವಾರು ಹುಯ್ಯಲೊ ಡಂಗುರವ ।
ಅಲ್ಲಿದ್ದ ಲಕ್ಷ್ಮಿಯು ಬಂದು ನಿಲ್ಲುವಳೆಂದು ಹುಯ್ಯಲೊ ಡಂಗುರವ ॥ ೨ ॥

ಆ ಮಹಾದೇವನೆ ಚೆನ್ನಬಸವರಾಜ ಹುಯ್ಯಲೊ ಡಂಗುಶವ ।
ವ್ಯೋಮಕೇಶ ಶಿವಶರಣ1ರು ಬರುವಾಗ1 ಹುಯ್ಯಲೊ ಡಂಗುರವ॥ ೩ ॥

ನಿಮ್ಮ ದ್ರವ್ಯವು ನಿಮಗೆ ಮುಟ್ಟಿತು ಎಂದಳು ಹುಯ್ಯಲೊ ಡಂಗುರವ ।
ಆ ಮಹಾ ಶರಣ ಬಸವರಾಜ ಪೇಳಿದ ಹುಯ್ಯಲೊ ಡಂಗುರವ ॥ ೩ ॥

**ವಚನ** ॥ 2ಕಲ್ಲುಬುರುಗಿಯಲ್ಲಿ ಕಲ್ಲು2ಕೋಳಿ ಕೋ ಎಂದು ಕೂಗಿತು. ಆ ಕೋಳಿಗೆ 3ಮು3ಲ್ಲ ಚೂರಿಹಾಕುವನು. ಸುತ್ತ ಮೂರು ಗಾವುದಕ್ಕೆ ಶಬ್ದ ಕೇಳೀತು. ಅಲ್ಲಿಂದ ಕೊಲ್ಲಿಪಾಕಿ ಸೋಮಾರಾಧ್ಯರ ಬಳಿಗೆ ಹೋಗುವರು. ಅಲ್ಲಿ ಅವರ ದರುಶನವ ತೆಗೆದುಕೊಂಡು ಐವತ್ತೆಂಟು ಸಾವಿರ ವೀರಜಂಗಮಾರ್ಚನೆಯಂ ಮಾಡಿ ಕಲ್ಯಾಣಕ್ಕೆ ಬರುವಷ್ಟರೊಳಗೆ ಏನು ಆಗುವುದೆಂದರೆ :—

ಪದ

ಮಳೆಗಾಳಿ ಬಂದೀತು ರಾಜ್ಯದ ಒಳಗೆಲ್ಲ ಹುಯ್ಯಲೊ ಡಂಗುರವ ।
ಕಳೆಯೇರಿ ಜಗವೆಲ್ಲ ಕಲ್ಯಾಣ ತನಕವು ಹುಯ್ಯಲೊ ಡಂಗುರವ ॥ ೧ ॥

ಇಳೆಗೆ ಶಿವಶರಣರು ಬರುವಂಥ ಕಾಲಕ್ಕೆ ಹುಯ್ಯಲೊ ಡಂಗುರವ ।
ಭುವನವೆಲ್ಲ ಭೂ ಕೈಲಾಸವಾದೀತು ಹುಯ್ಯಲೊ ಡಂಗುರವ ॥ ೨ ॥

1 ರ ಪಡೆಲಿದು 2 (ಅ,ಬ,ಕ,ಚ,) 2 ಕುಕ್ಕೂರಿನಲ್ಲಿ 3 (ಮು,ಅ,ಬ,ಕ,)



**ವಚನ** ॥ ಎಲ್ಲಿ ನೋಡಿದರಲ್ಲಿ ಭೋಜನಾಂತರಗಳಾದೀತು. ಅಕ್ಷಯನಾಮಸಂವತ್ಸರದ, ಮಾರ್ಗಶಿರ ಶುದ್ಧ ಪಂಚಮಿಯಲ್ಲಿ, ಬಲ್ಲಿಕೇಶ್ವರ ನಲ್ಲಿಗೆ ಬಂದಾರು. ಬಲ್ಲಿಕೇಶ್ವರನ ದರುಶನವ ತೆಗೆದುಕೊಂಡು ಅಷ್ಟರಲ್ಲಿ, ಮೂರು ಕೋಟಿ ಲಿಂಗವು ಬೈಲಿಗೆ ಬಂದಾವು. ಅಷ್ಟವಿಧಾರ್ಚನೆಯಂ ಮಾಡಿಸಿ ತೊಂಬತ್ತಾರುಸಾವಿರ ಜಂಗಮಾರ್ಚನೆಯಂ ಮಾಡಿ ಅಲ್ಲಿಂದ ಕಲ್ಯಾಣಕ್ಕೆ ದಯಮಾಡಿಸುವರು. ಮತ್ತು ಕಲ್ಯಾಣದ ಜನರು ಮಹಾಶಿವ ಶರಣಾದಿ ಪ್ರಮಥರಂ ಕರೆಯುವುದಕ್ಕೆ ದೊರೆ ಮಂತ್ರಿ ಮಾನ್ಯರು ಮುಂತಾಗಿ ಸಕಲ ಪ್ರಜೆ ಸಹಿತವಾಗಿ ಅಂದಣ ಮುಂತಾದ್ದು ಸಕಲ ಬಿರುದುಗಳಂ ತೆಗೆದುಕೊಂಡು ಬರುವರು.

ಪದ

ದೊರೆ ಮಂತ್ರಿ ಮಾನ್ಯರು ಅಂದಣ ಸಹವಾಗಿ ಹುಯ್ಯಲೊ ಡಂಗುರವ ।
ನೆರೆದೀತು ಗಜತುರಗ ರಾವುತ ಸಹವಾಗಿ ಹುಯ್ಯಲೊ ಡಂಗುರವ ॥ ೧ ॥

ಪರಿವಾರ ಗೌಡ ಶ್ಯಾನುಭೋಗರು ಮುಂತಾಗಿ ಹುಯ್ಯಲೊ ಡಂಗುರವ ।
ಪರಿಪರಿ ವಾದ್ಯವು ಭೇರಿನಿಸ್ಸಾಳವು ಹುಯ್ಯಲೊ ಡಂಗುರವ ॥ ೨ ॥

ಬುರುಗು ತಂಮಟೆಯು ಮೃದಂಗವು ಸಹವಾಗಿ ಹುಯ್ಯಲೊ ಡಂಗುರವ ।
ಸುರಪದವಿ ಮೊದಲಾದ ಸಕಲ 1ಭೋಗ1ಂಗಳು ಹುಯ್ಯಲೊ ಡಂಗುರವ ॥ ೩ ॥

ಗರಿ ಈಟಿ ಛತ್ರಿಚಾಮರಗಳು ಸಹವಾಗಿ ಹುಯ್ಯಲೊ ಡಂಗುರವ ।
ಹರುಷದಿಂ ಇದಿರ್ಗೊಂಬುತ ಬರುವಾರು ಹುಯ್ಯಲೊಡಂಗುರವ ॥ ೪ ॥

**ವಚನ** ॥ ಈ ಪ್ರಕಾರ ಸಕಲ ಸಂಭ್ರಮದಿಂ ಕಲ್ಯಾಣ ಪಟ್ಟಣಕ್ಕೆ ಬಿಜಯಂಗೈಸಿ ಕೂಡಲೇಶ್ವರನ ದರುಶನವ ತೆಗೆದುಕೊಂಡು, ಅನುಭಾವ ಮಂಟಪಕ್ಕೆ ಬಿಜಯಂಗೈಸಿ ಬಂದು ಚೆನ್ನಬಸವಣ್ಣನವರು, ವೀರ ವಸಂತನು, ಅಕ್ಕ ನಾಗಮ್ಮನಲ್ಲಿಗೆ ಬಂದು, ಅವರ ದರುಶನವಂ ತೆಗೆದು

1 ಗಣ (ಎ.)

ಕೊಂಡು, ತರುವಾಯ ಇವರ ನೋಟ ಪರುಷದಿಂದ ಮಾದಲಾಂಬಿಕೆ ತಾಯಿಯವರು, ನರದೇಹವಾದಾರು. ಸಮಸ್ತ ಶಿವಗಣಂಗಳು ಕೂಡಿ ಬಿಜ್ಜಳನ ಅರಮನೆಗೆ ಬಂದಾರು. ಚಪ್ಪರ ಕೊಟ್ಟಿಗೆ ಕಾವಲು ಕೊಟ್ಟ್ಯಾರು. ಒಂಬತ್ತು ಗಜದ ಭೂಮಿ [1]ಬಿ[1]ಚ್ಚಲು ಪ್ರಭು ಸಿಂಹಾಸನ ಹೊರಟೀತು. ಆಮೇಲೆ ಲೋಕಪಾವನ ಮೂರ್ತಿಯಾದ, ಗುರುಗಳನ್ನು ಮೂಹೂರ್ತವ ಮಾಡಿಸ್ಯಾರು. ಆಮೇಲೆ ಬಿಜ್ಜಳನ ಸಿಂಹಾಸನ ಹೊರಟೀತು. ಆ ಸಿಂಹಾಸನಕ್ಕೆ ಮುತ್ತು, ರತ್ನ, ವಜ್ರ, ವೈಢೂರ್ಯ, ಗೋಮೇಧಿಕ, ಪುಷ್ಯರಾಗ, ಹವಳ, ಪಚ್ಚೆ, ನೀಲ, ರತ್ನಗಳನ್ನು ಕೆತ್ತಿಸಿದ ಸಿಂಹಾಸನದ ಮೇಲೆ ಪ್ರಭವ ನಾಮಸಂವತ್ಸರದ, ಚೈತ್ರ ಶುದ್ಧ ಪಾಡ್ಯಮಿ ಸೋಮವಾರ ರೇವತಿನಕ್ಷತ್ರ ಹನ್ನೊಂದು ಗಳಿಗೆ ಮೇಲೆ, ವೀರ ವಸಂತನ ಸಕಲ ಶಾಸ್ತ್ರ ಸಮ್ಮತದಿಂದ ಮೂಹೂರ್ತವಂ ಮಾಡಿಸ್ಯಾರು. ಆ ಸಮಯದಲ್ಲಿ ತ್ರಿಪುರಾಂತ ಕೇಶ್ವರನ ಮುಂದಣ ಕೆರೆನೀರು ಕಪ್ಪು ಆಗುವುದು. ಕಲ್ಲು, ಮುಳ್ಳು, ಮರ, ಗುಲ್ಮಾದಿಗಳು ಸಮನಾಗುವವು. ಹಳ್ಳ ತಿಟ್ಟು ಸಮನಾಗುವುದು. ತ್ರಿಪುರದ ಕೆರೆ ಏರಿಮೇಲಣ ಲಿಪಿಗಳು ತಿಳಿಯುವುದು. ಕರಿಮಲ್ಲಿಗೆ ಪುಷ್ಪವಾಗುವುದು. ಉಮಾಪುರದ ಗಣೇಶ್ವರನ ಕಿತ್ತು ಮೂರುವರೆ ಕೋಟಿ ದ್ರವ್ಯವ [2]ತೆಗೆದು[2] ವೀರ ವಸಂತನಿಗೆ ಕನಕಾಭಿಷೇಕ ಮಾಡುವರು. ಬಿದುರುಕೋಟೆಯಲ್ಲಿ ವೀರ ಸಂಗಯ್ಯನ ಗದ್ದಿಗೆ ಅಡಿಯಲಿರ್ದ ತೊಂಬತ್ತೊಂದುಕೋಟಿ ದ್ರವ್ಯವ ತೆಗೆದು ಇನ್ನು ಸಮಸ್ತ ದ್ರವ್ಯಗಳ ಖರ್ಚುಮಾಡಿಸಿ, ಮಹಾಕಲ್ಯಾಣ ಪಟ್ಟಣವ ಕಟ್ಟಿಸ್ಯಾರು. ದೆಸೆ ದೆಸೆಯಲ್ಲು ಬಳಸಿಬಂದ ಕೋಟೆ ನಲವತ್ತೆಂಟು ಯೋಜನ ಪ್ರಮಾಣ. ತಟ್ಟು ಹನ್ನೆರಡು ಯೋಜನ. ಅದಕ್ಕೆ ಮುನ್ನೂರ ಅರವತ್ತು ಬಾಗಿಲು. ಏಳುನೂರು ಎಪ್ಪತ್ತು ದಿಡ್ಡಿ. ಒಂಬೈನೂರು ಚೋರದಿಡ್ಡಿ. ನವರತ್ನ ಕೆತ್ತಿಸಿದ ಕದಗಳು, ಸೂರ್ಯವೀಧಿ. ಚಂದ್ರವೀಧಿ ಚೆನ್ನಬಸವೇಶ್ವರ ದೇವರ ಮಠದ ವಿಸ್ತೀರ್ಣವೆಂತೆಂದೊಡೆ :—

1 ಬೆ (ಅ, ಇ, ಒ, ಕ, ಚ.) 2 ಕಿತ್ತು (ಅ, ಇ, ಒ, ಕ.)



**ಪದ**

ಚೆನ್ನಬಸವರಾಜನರಮನೆ ನಾಲ್ಕುಯೋಜನ ಹುಯ್ಯಲೊ ಡಂಗುರವ ।
ಜ್ಞಾನ ಜ್ಞೇಯದ ಕೋಟೆ ಹನ್ನೆರಡುಯೋಜನ ಹುಯ್ಯಲೊ ಡಂಗುರವ ॥ ೧ ॥

ಇನ್ನು ಸೋಹಂಭಾವ ಮೂಲಪ್ರಣವ ಇನ್ನು ಹುಯ್ಯಲೊ ಡಂಗುರವ ।
ಚೆನ್ನಾಗಿ ಮೂಲದ [1]ಕುರುಹಿ[1]ನ ಮಠವಿನ್ನು ಹುಯ್ಯಲೊ ಡಂಗುರವ ॥ ೨ ॥

ಮಿಸುನಿಯ ಕೆಲಸದ ಮೇಲು ಗೋಪುರಗಳು ಹುಯ್ಯಲೊ ಡಂಗುರವ ।
ಎಸೆಯುವ ನಂದಿಯ ಧ್ವಜ ಪತಾಕೆಗಳಿಂದ ಹುಯ್ಯಲೊ ಡಂಗುರವ ॥ ೩ ॥

ದೆಸೆ ದೆಸೆಗೆ ಪಂಚಾಕ್ಷರಿಯ ಶಾಸನಗಳು ಹುಯ್ಯಲೊ ಡಂಗುರವ ।
ಎಸೆವದು ಕಲ್ಯಾಣಪುರದ ಮಧ್ಯದೊಳಾಗ ಹುಯ್ಯಲೊ ಡಂಗುರವ ॥ ೪ ॥

**ವಚನ॥** ಶಾಸ್ತ್ರ ಸಂಚಯದ ಜ್ಞಾತ್ರ, ಜ್ಞಾನ, ಜ್ಞೇಯವೆಂಬ ತ್ರಿಪುಟಿಯ ಮೀರಿದ ನಿತ್ಯಾನಂದದರುಹಿನ [2]ನಿ[2]ವೃತ್ತಿಯ ಮಂಟಪದೊಳಗಣ ಚಿದಾನಂದವಾದ, ಚಿದ್ವಿಭೂತಿಯ ಕದ, ಚಿದ್ವಿಭೂತಿಯ ಕವಾಟ, ಚಿದ್ವಿಭೂತಿಯ ಸೂಸಕ, ವಿಭೂತಿಯ ಹೊಸ್ತಲು ಅಲ್ಲಿ ಚಿದಾನಂದವಾದ ಚಿತ್ಕಳೆ ಜ್ಯೋತಿ ಅದು ಸಮಸ್ತವು ಚಿದ್ವಿಭೂತಿಯೆ ಮಯವಾಗಿ ತೋರುತಿರ್ಪವು. ಮತ್ತೊಂದು ಬಾಗಿಲ ವಿಸ್ತೀರ್ಣ ಅದೆಂತೆಂದೊಡೆ ಕಾಲಾಗ್ನಿರುದ್ರನ ಅಕ್ಷಿಗಳಿಂದ [3]ಬಿಂದು ಮಾತ್ರ[3]ದಲ್ಲಿ ಉದ್ಭವಿಸಿದ ಪ್ರಳಯ ರಹಿತವಾದ ರುದ್ರಾಕ್ಷಿ ಕದವು, ರುದ್ರಾಕ್ಷಿ ದಾರವಟ್ಟ, ರುದ್ರಾಕ್ಷಿ ಹೊಸ್ತಲು, ಅತಿ ರಹಸ್ಯವಾದ ಪ್ರಣವ ಪಂಚಾಕ್ಷರಿ ಶಾಸನ, ಈ ಎರಡು ಬಾಗಿಲಲ್ಲಿ ಚಿದಾನಂದದ ಬೆಳಕಿನ ಮೇಲುಕಟ್ಟು, ಮಿಕ್ಕಿನ ಮೇಲುಕಟ್ಟುಗಳು, ಮತ್ತು ಎರಡು ಬಾಗಿಲಲ್ಲಿ ವಜ್ರ, ವೈಡೂರ್ಯ, ಗೋಮೇಧಿಕ, ಪುಷ್ಯರಾಗ, ನಳ, ನೀಲ, ಕೆಂಪು, ಪಚ್ಚೆ, ಮುತ್ತು, ಪವಳ, ರತ್ನಗಳು ನವರತ್ನದಿಂ ಕೆತ್ತಿಸಿದ

1 ಗುರುವಿ (ಎ.) 2 ಪ್ರ (ಅ, ಇ, ಒ, ಕ, ಚ.) 3 ಬಂದು ಮಾತ್ರ (ಎ.)

ಕದಗಳು ಮಾಣಿಕ್ಯದ ತೋರಣ. ಇವು ಸಮಸ್ತವು ಮಿಸುನಿಗೆಲಸದ ಮಾಟ ದೆಸೆ ದೆಸೆಗೆ ನಂದಿಧ್ವಜ ಮುಂತಾದ್ದು ಎಸೆಯುತಿರ್ಪುವು. ಅಲ್ಲಿ ಪರ ಬ್ರಹ್ಮಾನಂದವಾಗಿರ್ದ, ಅಮಲಬೆಳಗಿನ ಘನಮಹಿಮರು, ಶಿವನ ಅಪೇಕ್ಷೆ ಯಿಲ್ಲದವರು, ಆ ಸ್ಥಳದ ಮಹಿಮೆಗಳು, ಅತಿ ಗೋಪ್ಯವಾದುದರಿಂದ ಭವಿ ಜನಗಳಾದ ಅಜ್ಞಾನರೆಂಬ, ಕುರುಡರಿಗೆ ತಿಳಿಯಲಾರದು. ಇನ್ನು ಪುರ ದೊಳಗಣ, ಮಠದ ವಿಸ್ತೀರ್ಣಗಳು ಎಂತೆಂದೆದೊಡೆ:—ಅಚ್ಚ ಪ್ರಸಾದಿ ಗಳ ಮಠ ಹನ್ನೊಂದುಸಾವಿರ. ನಿಚ್ಚಪ್ರಸಾದಿಗಳ ಮಠ ಹನ್ನೆರಡು ಸಾವಿರ. ಸಮಯಪ್ರಸಾದಿಗಳ ಮಠ ಹದಿಮೂರುಸಾವಿರ. ಡೊಳ್ಳುಪವಾಡ ದವರ ಮಠ ಹದಿನಾಲ್ಕುಸಾವಿರ. ಚಿಲುಮಿಯ ಅಗ್ಗವಣಿಯ ಮಠಗಳು ಹದಿನೈದು ಸಾವಿರ. ಲೋಕ ಬಳಿಕೆ ಮಠಗಳು ಹದಿನಾರು ಸಾವಿರ. ಮತ್ತ ಇನ್ನೂ ಏನೆಂದರೆ ಎಂಬತ್ತೆಂಟು ಸಾವಿರ ಪ್ರಮಥ ಗುರು ಲಿಂಗ ಜಂಗಮಕ್ಕೆ ನಡೆಯುವಂಥಾದ್ದು ಏನೆಂದೊಡೆ:—ತನು, ಮನ, ಧನ ಒಲಿದೀವಂಥ ಮಠಗಳು ಲಕ್ಷದಮೇಲೆ ತೊಂಬತ್ತಾರುಸಾವಿರ. ಇಂತಪ್ಪ ಮಹಾ ಕಲ್ಯಾಣ ಮಂ ಮಾಡಿ, ಅವರ ವಂಶವಳಿ ಹನ್ನೆರಡು ಸಾವಿರ ವರುಷ ಆಳುವರು. ಇನ್ನು ಚೆನ್ನದುಡನಾಯಕರು, ಇಲ್ಲಿ ಇರುವುದು ಮೂವತ್ತಾರು ವರುಷ, ವೀರ ವಸಂತರಾಯನು ಇರುವುದು ಅರವ[1]ತ್ತು ಮೂರು[1] ವರುಷ, ಆಮೇಲೆ ಸಾಕಾರ ಮೂರ್ತಿಯಾಗುವರು. ಬೆಳಕಿನೊಳಗಣ ಬೆಳಕು ಬೈಲಾಗು ವಂತೆ ಆದೀತು ಕಣಾ ಎಂದು ನಿರೂಪಿಸಿದರು.

### ಪದ

ಭುವನದೊಳಗೆ ಶಿವಶರಣರ ಸ್ತುತಿಗಳ ಹುಯ್ಯಲೊ ಡಂಗುರವ ।
ತಿಳಿಯದೆ ನುಡಿದರೆ ಬಾಯಲ್ಲಿ ಹುಳಗಳು ಹುಯ್ಯಲೊ ಡಂಗುರವ ॥

ಈ ಪರಿಯಲಿ ಗುರು ಲಿಂಗ ಜಂಗಮದ್ರೋಹ ಹುಯ್ಯಲೊ ಡಂಗುರವ ।
ಪಾಪವು ಬರುವದು ಕಾಶಿಗೋಹತ್ಯದಂತೆ ಹುಯ್ಯಲೊ ಡಂಗುರವ ॥ ೨ ॥

1 ತ್ತಾರು (ಎ.)



ಇದು ಸುಳ್ಳುಯೆಂದರೆ ಶ್ವಾನಸೂಕರ ಜನ್ಮವು ಹುಯ್ಯಲೊ ಡಂಗುರವ ।
ಇದು ಸಟೆಯೆಂದರೆ ಗಾರ್ದಭ ಜನ್ಮವು ಹುಯ್ಯಲೊ ಡಂಗುರವ ॥ ೩ ॥

ಇದ ನಿಂದ್ಯಮಾಡಲು ಪಿತೃ ಮಾತೃದ್ರೋಹವು ಹುಯ್ಯಲೊ ಡಂಗುರವ ।
ಅಜ್ಞಾನದಿಂ ಜರಿದೊಡೆ ಭವಭವ ನರಕವು ಹುಯ್ಯಲೊ ಡಂಗುರವ ॥ ೪ ॥

ಶರಣರ ಸ್ತುತಿಗಳ ಭಕ್ತಿಯಿಂ ಕೇಳ್ದಡೆ ಹುಯ್ಯಲೊ ಡಂಗುರವ ।
ಸುರಪನ ಐಶ್ವರ್ಯ ಧನಧಾನ್ಯ ವೃದ್ಧಿಯು ಹುಯ್ಯಲೊ ಡಂಗುರವ ॥ ೫ ॥

ನರಮಾನ್ಯರಿಗೆ ಇದು ಮುಕ್ತಿಸಾಧನವೆಂದು ಹುಯ್ಯಲೊ ಡಂಗುರವ ।
ಕರೆದು ಗುರುವು ಶಿವ ಶರಣರು ನಿಂದಾಗ ಹುಯ್ಯಲೊ ಡಂಗುರವ ॥ ೬ ॥

**ವಚನ** ॥ ಶ್ರೀಮತ್ಸದಾಶಿವ ಸಚ್ಚಿದಾನಂದ ವರ ಪ್ರಸಾದಿಗಳಾದ ಶ್ರೀಮತ್ಪರಿವ್ರಾಜಕಾಚಾರ್ಯ ಶ್ರೀ ರುದ್ರಮುನಿಸ್ವಾಮಿ ವಾಙ್ಮನೋತೀತ ರಾದ ಶ್ರೀಗುರು ಗುಹೇಶ್ವರ, ಬಸವಾದಿ ಪ್ರಮಥರ ಪ್ರಸಾದದಿಂ ಚಂಗಲ್ವ ಮಂಟಪದಲ್ಲಿ ಕಲ್ಯಾಣ ಪಟ್ಟಣದ ಮಹತ್ತಿನ ಚೆನ್ನಬಸವೇಶ್ವರದೇವರು ಮುಂತಾದ ಪ್ರಭು ಪಾರಂಪರ್ಯದಿಂ ಸಮಸ್ತ ಪ್ರಮಥ ಗಣಂಗಳಂ ಸ್ತುತಿಸಿ ಕಲಿ ಕಾಲಾದಿ ಕಾಲಸೂಚನೆಯಂ ತಿಳಿಯುವಂಥ ಶರಣರಿಗೆ ಮತ್ತು ಮಿಕ್ಕಿನ ನರರಿಗೆ ಸಹ ಹೇಳಿದ ಕಾಲಜ್ಞಾನ ಸಂಪೂರ್ಣಂ ಎಂಬಲ್ಲಿಗೆ ಮುಂದಣ ಕಾವ್ಯಸೂಚನೆ ಏನೆಂದೊಡೆ. ಈ ಕಾಲಜ್ಞಾನವನ್ನು ಉದಯ ಮಧ್ಯಾಹ್ನ ಸಾಯಂಕಾಲ ಮೂರುವೇಳೆಯಲ್ಲು, ಪಠಿಸಿದವರಿಗೆ, ಕೇಳಿದವರಿಗೆ, ಹೇಳಿದವರಿಗೆ, ಧನಕನಕ ವಸ್ತುವಾಹನ, ಪುತ್ರ, ಮಿತ್ರ, ಕಳತ್ರ, ಛತ್ರಿ, ಚಾಮರ, ಪತಾಕೆ, ಮುಂತಾಗಿ, ದಿನದಿನಕ್ಕೆ ವೃದ್ಧಿಯಾಗಿ ಸಕಲೈಶ್ವರ್ಯ ಹೆಚ್ಚಿ ಮಹಾ ನವಮಿಯ ಚಂದ್ರನಕಂಡ ಅಂಬುಧಿಯಂತೆ ಶ್ರೀಗುರು ಅಲ್ಲಮಾ ಪ್ರಭುವಿನ ಕೃಪೆಯಿಂದ, ಭಕ್ತ ಮಹೇಶ್ವರರಿಗೆ ಸುಬುದ್ಧಿಯುಂಟಾಗಿ ಮುಂದಿನ ಕಾಲಸೂಚನೆಯಂ ತಿಳಿಯುವರು. ಇದು ಸಿದ್ಧಾಂತವಾಕ್ಯ. ಈ ಕಾಲಜ್ಞಾನವನ್ನು ಓದಿಸಿ ಕೇಳಿದ ಭಕ್ತಜನಗಳು, ಓದಿ ಅರ್ಥ ಹೇಳಿದವ ರಿಗೆ ತನ್ನ, ಎಥಾಶಕ್ತಿ ಇದ್ದಷ್ಟು ವಂಚನೆಯಿಲ್ಲದೆ ನಾರಿಕೇಳ, ಕದಳೀಫಲ,

ಬಿಲ್ವಪತ್ರೆ, ಪುಷ್ಪ, ಪಾನಕ, ಪ1ನ್ನೀರು, 1ಗಂಧ, ಸಾಂಬ್ರಾಣಿ, ಕರ್ಪೂರ, ತಾಂಬೂಲ, ಕಾಣಿಕೆ, ಸ್ವಯಂಪಾಕ, ವಸ್ತ್ರ ಮುಂತಾದುವುಗಳನ್ನು ಕೊಟ್ಟು ಕೇಳಿದವರಿಗೆ, ಈ ಕಾಲಜ್ಞಾನದ ಫಲ ಕೈಗೂಡುವುದು. ಇದು ಏನೋ ಎಂದು ಅಜ್ಞಾನದಿಂ ತಿಳಿಯದೆ ಭಕ್ತಿನಡೆಸದಂಥ ಮೂಢ ಪಾಪಿ ಪಾಷಂಡಿಗಳಿಗೆ ಒಂದುಸಾವಿರ ಶ್ವಾನನ ಜನ್ಮ, ಒಂದುಸಾವಿರ ಹಂದಿ ಜನ್ಮ, ಒಂದುಸಾವಿರ ಗೂಗೆ ಜನ್ಮ, ಒಂದುಸಾವಿರ ಗಾರ್ದಭ ಜನ್ಮ, ಮತ್ತು ಭವಭವವೆಂಬ ನರಕದಲ್ಲಿ, ಪಶು, ನರ, ಕ್ರಿಮಿ, ಕೀಟ ಜನ್ಮಗಳಲ್ಲಿ, ತೊಳಲಿ ಬಳಲಿ ಹೊರಳಾಡುವರೆಂಬುದು ಸಿದ್ಧಾ. ಇದನ್ನು ನಿಂದಿಸಿದವರಿಗೆ ಕಾಶಿಯಲ್ಲಿ ಒಂದುನೂರು ಗೋಹತ್ಯಮಾಡಿದ ಫಲ, ಒಂದುನೂರು ಬ್ರಹ್ಮಹತ್ಯ ಮಾಡಿದ ಫಲ. ಒಂದುನೂರು ಮಾತೃಪಿತೃಹತ್ಯಮಾಡಿದ ಫಲ, ಒಂದುನೂರು ಶಿಶುಹತ್ಯಮಾಡಿದ ಫಲ. ಈ ಫಲ ಕರ್ಮ ಪಾಪಿಗಳು ಏನೋ ಎಂದು ಒಂದುವಾಕ್ಯ ನಿಂದನೆಮಾಡಿದಡೆ ಮತ್ತೊಂದುವಾಕ್ಯವ ಪೇಳುವಷ್ಟರಲ್ಲಿ, ಬೆನ್ನಹತ್ತಿ ಆ ತಕ್ಷಣವೆ ತೋರುವುದು. ಎಂದು ಪ್ರಭು ಬಸವಾದಿ ಪ್ರಮಥಗಣಂಗಳ ಪಾದ ರೇಣುವಿನಲ್ಲಿ ಬೆರೆದ ಶ್ರೀ ರುದ್ರಮುನಿಸ್ವಾಮಿ ನಿರೂಪಿಸಿದ ಕಾಲಜ್ಞಾನ

**ಕಾಲಸೂಚನೆಗಳು ಸಮಾಪ್ತಂ**

---

1 ಣಿಯಾರ (ಅ, ಇ, ಒ, ಕ.)

# ಎಮ್ಮೆಬಸವಣ್ಣನ ಕಾಲಜ್ಞಾನ

**ಪದ**

ಹು1ಯ್ಯಲೊ ಡಂಗುರವ 2ಹು2ಯ್ಯಲೊ ಡಂಗುರವಾ ।
3ಇದ3 ಹುಸಿಯೆಂ4 ಬ4 ಪರವಾದಿಯ ಬಾಯಮೇಲೆ ಹುಯ್ಯಲೊ ಡಂಗುರವ
॥ ಪ ॥

ಹಬ್ಬಿದ ಬೆಟ್ಟಕ್ಕೆ5 ತೊಟ್ಟಿಲ 5 ಕಟ್ಟ್ಯಾರು ಹುಯ್ಯಲೊ ಡಂಗುರವ–ಅಯ್ಯ ।
ಈ ಸುದ್ದಿ ಪಟ್ಟಣ ಸೆರೆಸೂರೆ ಹೋದೀತು ಹುಯ್ಯಲೊ ಡಂಗುರವ ॥ ೧ ॥

ಎಚ್ಚರ ಮುಂದಣ ದಿನಮಾನ ಕೆಟ್ಟೀತು ಹುಯ್ಯಲೊ ಡಂಗುರವ–ಅಯ್ಯ ।
ಅಚ್ಚ್ಯುತನಾಪಟ್ಟ ಇದೆ ಕಡೆಯಾದುದು ಹುಯ್ಯಲೊ ಡಂಗುರವ ॥ ೨ ॥

ವಶವಲ್ಲ ಬಸವನ ಹೊಸನುಡಿ ಘನವೆಂದು ಹುಯ್ಯಲೊ ಡಂಗುರವ–ತಮ್ಮ ।
ಕುಶಲದ ಶಿಶುವನ್ನು ಬಿಟ್ಟೋಡಿ ಹೋದಾರು ಹುಯ್ಯಲೊ ಡಂಗುರವ ॥ ೩ ॥

ತಮ್ಮರಾಯರನೆಲ್ಲ ಹೆಮ್ಮೆಯ ಮುರಿವಾರು ಹುಯ್ಯಲೊ ಡಂಗುರವ–ಅಯ್ಯ ।
ಸೊಮ್ಮು ಭಂಗಾರವ ಸುಮ್ಮನೆ ಕೊಡುವ6ರೆ 6ಹುಯ್ಯಲೊ ಡಂಗುರವ ॥ ೪ ॥

ಪಟ್ಟಣದಲೊಗುರವ ಮಂಚ ಸುಪ್ಪತ್ತಿಗೆ ಹುಯ್ಯಲೊ ಡಂಗುರವ–ತಮ್ಮ ।
ಪಟ್ಟದ ರಾಣಿಯು ಬಿಟ್ಟೋಡಿ ಹೋದಾರು ಹುಯ್ಯಲೊ ಡಂಗುರವ ॥ ೫ ॥

ದಾಸಿಯ ಮಕ್ಕಳು ದೇಶವನಾಳ್ಯಾರು ಹುಯ್ಯಲೊ ಡಂಗುರವ–ಅಯ್ಯ ।
ವೇಶಿಯರಾದಾರು ರಾಣಿವಾಸದವರೆಲ್ಲ ಹುಯ್ಯಲೊ ಡಂಗುರವ ॥ ೬ ॥

ಭಾಗೂರುವಂಶದ ದೇಶಾಧಿಪತಿಗಳು ಹುಯ್ಯಲೊ ಡಂಗುರವ–ಅಯ್ಯ ।
ಒಂದು ಕಾಸಿಗೆ ಸಲ್ಲಧೆ ದೇಶವ ಬಿಟ್ಟರು ಹುಯ್ಯಲೊ ಡಂಗುರವ ॥ ೭ ॥

---

1. 2 ಹೊ (ಇ, ಒ.) 3 ಅಯ್ಯ (ಗ.) 4 ಬುವ (ಅ, ಎ, ಕ.)
5 ಕಂಬಿಯ (ಚ.) 6 ರು (ಆ, ಇ, ಒ, ಕ.)

ಹಾರುವರ ಕೇರಿಯಲಿ ಹಾದರ ಹೆಚ್ಚಿತು ಹುಯ್ಯಲೊ ಡಂಗುರವ ಅಯ್ಯ ।
ಅಕೃತ್ಯ ದೊರೆಗಳ ಮನೆಯೆಲ್ಲ ಹೊರಳೆದ್ದು ಹೋದೀತು
ಹುಯ್ಯಲೊ ಡಂಗುರವ* ॥ ೮ ॥

ನರಸಿಂಗರಾಯನ ಹಿರಿಯ ಕುಮಾರನು ಹುಯ್ಯಲೊ ಡಂಗುರವ–ಅಯ್ಯ ।
ಅರಸುತನಕೆ ಇನ್ನು ಕಡೆಗಾಲವಾದೀತು ಹುಯ್ಯಲೊ ಡಂಗುರವ ॥ ೯ ॥

ನರಿಬೆಕ್ಕು ಗುಡಿಗುಮ್ಮ ಕರಡಿಸಾರಂಗವು ಹುಯ್ಯಲೊ ಡಂಗುರವ–ಅಯ್ಯ ।
ದೊರೆಗಳ ಮನೆಯಲ್ಲಿ ಹೊರಳೆದ್ದು ಹೋದಾವು ಹುಯ್ಯಲೊ ಡಂಗುರವ ॥ ೧೦ ॥

ಗುಡಿ ಗೋಪುರುಗಳ[1] ಸೊಡರೆ[1]ದ್ದು ಹೋದಾವು
ಹುಯ್ಯಲೊ ಡಂಗುರವ–ಅಯ್ಯ ।
ಜಡೆಮುಡಿ ಮಠಗಳು[2] ಸೂ[2]ರೆದ್ದು ಹೋದಾವು ಹುಯ್ಯಲೊ ಡಂಗುರವ ॥ ೧೧ ॥

ಭಕ್ತಿ ಬರನಾದೀತು ಸತ್ತ್ಯವ ತಪ್ಪ್ಯಾರು ಹುಯ್ಯಲೊ ಡಂಗುರವ–ಅಯ್ಯ ।
ಶ್ರೋತ್ರಿನ ಮಕ್ಕಳಿಗೆ ಪಟ್ಟವ ಕಟ್ಟ್ಯಾರು ಹುಯ್ಯಲೊ ಡಂಗುರವ ॥ ೧೨ ॥

ಜಂಗಮ ಭಕ್ತರು ಮಂಗಗಳಾದರು ಹುಯ್ಯಲೊ ಡಂಗುರವ–ಅಯ್ಯ ।
ಜಂಗುಳಿ ದೈವವ ಪೂಜೆಯ ಮಾಡ್ಯಾರು ಹುಯ್ಯಲೊ ಡಂಗುರವ ॥ ೧೩ ॥

ಚರಪತಿ ಪುರಪತಿ ಪುರಕೆದ್ದು ಹೋದರು ಹುಯ್ಯಲೊ ಡಂಗುರವ–ಅಯ್ಯ ।
ಗುರುಶಿಷ್ಯರು ನ್ಯಾಯವ ತಪ್ಪಿನ್ನು ನಡೆವಾರು ಹುಯ್ಯಲೊ ಡಂಗುರವ ॥ ೧೪ ॥

ಗುರುವಿನ ಸತಿಯಾರ ಶಿಷ್ಯರೆ ಆಳ್ಯಾರು ಹುಯ್ಯಲೊ ಡಂಗುರವ–ಅಯ್ಯ ।
ಅಪರವಾದಿಯ ಛಲವ ಕೂಡಿ ನಡೆವಾರು ಹುಯ್ಯಲೊ ಡಂಗುರವ* ॥ ೧೫ ॥

---

* ಈ ಪದ್ಯ (ಉ, ಎ, ಒ, ಗ, ಚ.) ಪ್ರತಿಗಳಲ್ಲಿಲ್ಲ. 1 ಶೂರೆಹೊಡೆದೆ (ಅ, ಎ, ಕ.) 2 ಸೊಡರೆ (ಇಎ, ಒ, ಕ.)



ಅತ್ತೆ ಅತ್ತಿಗೆ ಸೊಸೆ ನಾದಿನಿ ಮನೆದೊತ್ತು ಹುಯ್ಯಲೊ ಡಂಗುರವ–ಅಯ್ಯ ।
ಭೃತ್ಯರ ಸತಿಯರ ಒಡನಾಡಿ ಹೋದಾರು ಹುಯ್ಯಲೊ ಡಂಗುರವ ॥ ೧೬ ॥

ಕೈಯಲ್ಲಿ ಲಿಂಗವ ಹೇಸದೆ ಕಿತ್ತಾರು ಹುಯ್ಯಲೊ ಡಂಗುರವ–ಅಯ್ಯ ।
ರೋಷದಿ ಶ್ರೀಶೈಲಲಿಂಗವ ಬೇಡ್ಯಾರು ಹುಯ್ಯಲೊ ಡಂಗುರವ ॥ ೧೭ ॥

ಆರು ತಿಂಗಳ ಪಟ್ಟ ಬೇಡನಾಳಿಕೆ[1] ಯೆಂದು[1] ಹುಯ್ಯಲೊ ಡಂಗುರವ–ಅಯ್ಯ ।
ಮೂರುತಿಂಗಳಿಗೆ ಚೆನ್ನಬಸವಣ್ಣ ಬಂದಾನು ಹುಯ್ಯಲೊ ಡಂಗುರವ ॥ ೧೮ ॥

ಭಿಕ್ಷಕ್ಕೆ ಬಂದರೆ ಬಿ[2]ರು[2] ನುಡಿ ನುಡಿವಾರು ಹುಯ್ಯಲೊ ಡಂಗುರವ–ನಮ್ಮ ।
ರಕ್ಷಿಪ ವಿರುಪಾಕ್ಷ ಧರೆಗಿಳಿದು ಹೋದಾರು ಹುಯ್ಯಲೊ ಡಂಗುರವ ॥ ೧೯ ॥

ಚೊಕ್ಕ ಜಂಗಮರೆಲ್ಲ ಡಿಕ್ಕಿಯ ಹಾಕ್ಯಾರು ಹುಯ್ಯಲೊ ಡಂಗುರವ–ಅಯ್ಯ ।
ಕುಕ್ಕನೂರ ಗುಡ್ಡರು ಕುನ್ನಿಗಳಾದರು ಹುಯ್ಯಲೊ ಡಂಗುರವ ॥ ೨೦ ॥

ದಾಸನು ಮೂಡಲ ದೇಶದೊಳ್ಯೆಕ್ಯನು ಹುಯ್ಯಲೊ ಡಂಗುರವ–ಅಯ್ಯ ।
ದೇಶವೆಲ್ಲ ಗೋವಿಂದನ ನೆನೆವಾರು ಹುಯ್ಯಲೊ ಡಂಗುರವ ॥ ೨೧ ॥

ನೂರೆಂಟುಕುಲ ಒಂದು ನೀರನ್ನೆ ಕುಡಿವಾರು ಹುಯ್ಯಲೊ ಡಂಗುರವ–ಇ[3]ದು[3] ।
ಸಾರಿ ಹೇಳಿದ ವಾಕ್ಯ ಸಟೆಯಲ್ಲ ಶಿವನಾಣೆ ಹುಯ್ಯಲೊ ಡಂಗುರವ ॥ ೨೨ ॥

ಆಚಾರ ತಪ್ಪ್ಯಾರು ನೀಚರು ಹೆಚ್ಚ್ಯಾರು ಹುಯ್ಯಲೊ ಡಂಗುರವ–ಅಯ್ಯ ।
[4]ಬಾಜ್ಯರೂಪಾದರು ಖೂಳ ಜಂಗಮರೆಲ್ಲ[4] ಹುಯ್ಯಲೊ ಡಂಗುರವ ॥ ೨೩ ॥

---

ಈ ಅರ್ಧ ಪದ್ಯ (ಉ, ಗ, ಚ.) ಪ್ರತಿಗಳಲ್ಲಿಲ್ಲ. 1 ಸುಂಡು (ಇ, ಒ.) 2 ಯನೆ (ಇ, ಒ, ಚ.) 3 ಡು (ಅ, ಇ, ಒ, ಕ.) 4 ದ (ಒ.)

ಹೋದಾರು ಹೊಲತೀಯ ವೇದವ ಕಲಿ1 ತಾ1 ರು ಹುಯ್ಯಲೊಡಂಗುರವ-
ಅಯ್ಯ ।
ಮಾದಿಗಿತ್ತಿಗೆದೊಡ್ಡಮನೆಯನ್ನೆ ಕಟ್ಟ್ಯಾರುಹುಯ್ಯಲೊ ಡಂಗುರವ ॥ ೨೪ ॥

ರಾಜರಾಜರನೆಲ್ಲ ಪೂಜಿತವಳಿವಾರು ಹುಯ್ಯಲೊ ಡಂಗುರವ-ಅಯ್ಯ
ದುರ್ಬೋಧೆಗಳಲ್ಲಿ ಪುರವರ್ಗವಳಿವಾರು ಹುಯ್ಯಲೊ ಡಂಗುರವ। ॥ ೨೫ ॥

ಗಾಜಿನ ಬಳೆಗಿನ್ನು ,ಗತಿಯಿಲ್ಲದಾದಾರು ಹುಯ್ಯಲೊ ಡಂಗುರವ-ಅಯ್ಯ ।
ಶ್ರೀರಂಗಪಟ್ಟಣ ಶೃಂಗಾರವಳಿ2 ವಾರು 2ಹುಯ್ಯಲೊ ಡಂಗುರವ
॥ ೨೬ ॥

3 ಭರ್ಗ 3ರೂಪಿನಶಿವ ಜಂಗಮರೆಲ್ಲರು ಹುಯ್ಯಲೊ ಡಂಗುರವ-ಅಯ್ಯ ।
ಜಡರೆದ್ದು ಹೋದಾರು ದಕ್ಷಿಣ ದೇಶಕ್ಕೆ ಹುಯ್ಯಲೊ ಡಂಗುರವ ॥ ೨೭ ॥

ಚಿತ್ತರ ಕಲ್ಲಲ್ಲಿ ತೊತ್ತಿನಮಗ ಹೆಚ್ಚಿ ಹುಯ್ಯಲೊ ಡಂಗುರವ-ಅಯ್ಯ ।
ಬೆತ್ತಲೆ ಮಾಡ್ಯಾನು ಬೇಡರವಂಶವ ಹುಯ್ಯಲೊ ಡಂಗುರವ ॥ ೨೮ ॥

ಬೇಡಭಕ್ತಿಯತಾಳಿ ಪಡುವಣ ದೇಶದಿ ಹುಯ್ಯಲೊ ಡಂಗುರವ-ಅಯ್ಯ ।
ಪೂಜಯಮಾಡ್ಯಾನು ಕೊಟ್ಟೂರಬಸವನ ಹುಯ್ಯಲೊ ಡಂಗುರವ ॥ ೨೯ ॥

ಮಾತಂಗಿವಂಶದ ರಾಯರು ಬಂದರು ಹುಯ್ಯಲೊ ಡಂಗುರವ-ಅಯ್ಯ ।
ದೇಶವ4 ನಾಳುವ4ರು ಭಾಷೆಗೆ ತಪ್ಪುವರು ಹುಯ್ಯಲೊ ಡಂಗುರವ
॥ ೩೦ ॥

ಎಕ್ಕಸ ತುರುಕರು ಇಕ್ಕೇರಿ ರಣಭಂಗ ಹುಯ್ಯಲೊ ಡಂಗುರವ-ಅಯ್ಯ ।
ರಕ್ಕಸಿಯೆಂದೆಂಬ5 ಗಂಗೆಯ ತಡಿಯಲ್ಲಿ ಹುಯ್ಯಲೊ ಡಂಗುರವ ॥ ೩೧ ॥

ನನ್ನನುಡಿ ಶಿವನುಡಿ ಹೇಳುವ ದಿನ ಬಂತು ಹುಯ್ಯಲೊ ಡಂಗುರವ-ಅಯ್ಯ।
ಇದಹೇಳಿದ ಜಂಬುಲಿಂಗ ಎಮ್ಮೆಯಬಸವಣ್ಣ ಹುಯ್ಯಲೊ ಡಂಗುರ ॥ ೩೨ ॥

---

1 ಚಾಚ್ಯಾರು ಪಾದವ ಕುರುಬೊಡೆಯ ರಾಗ (ಗ.) 6 ಸ್ಯಾ (ಅ, ಇ, ಗ.)
2 ದೀತು (ಗ.) 3 ಜಡೆ (ಗ.) 4 ನಳಿದಾ (ಅ, ಇ, ಕ, ಗ.) 5 ಯತಿಂಬ
(ಅ, ಎ, ಕ, ಗ.)



ವಚನ॥ ಈರೀತಿಯಲ್ಲಿ ಎಮ್ಮೆಯಬಸವಣ್ಣನವರು ಸಾರುತ್ತಾ ಬರುತ್ತಿರಲು, ಅವರನ್ನು ಪುರವನ್ನಾಳುವ ಕೃಷ್ಣರಾಯ ಹಿಡಿತರಿಸಿ ಪಟ್ಟದ ಆನೆಯ ಮುಂದಕ್ಕೆ ಆ ಎಮ್ಮೆಯ ಬಸವಣ್ಣನವರನ್ನು ನೂಕಿಸಲು, ಆ ಪಟ್ಟದ ಆನೆ ಶರಣೆಂದು ಮಸ್ತಕದಮೇಲೆ ಇಟ್ಟುಕೊಂಡು ಮೂಡಣ ರಾಜ ಬೀದಿಯಲ್ಲಿ ಬರುತ್ತಿರಲು, ಆ ಬಸವಯ್ಯನವರು ಆನಂದದಿಂದ ಸಾರುತ್ತ ಬರುತಿರ್ದರದೆಂತೆನೆ

## ಪದ

ಹಾಕೆಲೊ ಮುಂಡಿಗೆಯ ಹಾಕೆಲೊ ಮುಂಡಿಗೆಯ-ಅಯ್ಯ ।
ನೀಕರಿಸುವ ಪರವಾದಿಯ ಬಾಯಮೇಲಿನ್ನು ಹಾಕೆಲೊ ಮುಂಡಿಗೆಯ ॥ ಪ ॥

ಬಂಡುಗಣಿಮೆಯ ಮೇಲೆ ದಂಡು ಬಿಟ್ಟೀತೆಂದು
ಹಾಕೆಲೊ ಮುಂಡಿಗೆಯ-ಅಯ್ಯ ।
ಬಂಡೆದ್ದು ಗಿರಿಪ1ಟ್ಣ 1ಸೆರೆಸೂರೆ ಹೋದಾವು ಹಾಕೆಲೊ ಮುಂಡಿಗೆಯ ॥ ೧ ॥

ಜಂಬೂಕ ಕೂಗೀತು ಹುಲಿಯೆದ್ದು 2 ನಡುಗೀತು 2
ಹಾಕೆಲೊ ಮುಂಡಿಗೆಯ-ಅಯ್ಯ ।
ಜಂಬುಲಿಂಗ ತಾನು ಜಗಕೆಲ್ಲ ಹೇಳಿದ ಹಾಕೆಲೊ ಮುಂಡಿಗೆಯ ॥ ೨ ॥

ರಣಗಂಭದಸುತ್ತ ಹೆಣಬೀದಿಯಾದೀತು ಹಾಕೆಲೊ ಮುಂಡಿಗೆಯ-ಅಯ್ಯ।
ದಣಿದಾವು ಭೂತವು ಕುಣಿದಾ3ವು ಮುಂದಿನ್ನು 3ಹಾಕೆಲೊ ಮುಂಡಿಗೆಯ
॥ ೩ ॥

ರಾಮನೆಂಬನತಲೆ ಪ್ರೇಮದಿಂ ಹೋದೀತು ಹಾಕೆಲೊ ಮುಂಡಿಗೆಯ-ಅಯ್ಯ।
ರಾಮರತೀರ್ಥವು ಕಾಶಿಯ ತೀರ್ಥಕ್ಕೆ ಹಾಕೆಲೊ ಮುಂಡಿಗೆಯ ॥ ೪ ॥

---

1 ಟ್ಟ (ಅ, ಇ, ಎ, ಕ, ಗ, ಚ.) 2 ಬಂದೀ (ಇ, ಓ.)
3 ಡುವೊನೆಂದು (ಅ, ಎ, ಕ, ಗ, ಚ.)

ಸಂದೇಹಗೊಳಬೇಡಿ ಮುಂದೆಹೇಳುವೆ ವಾಕ್ಯ ಹಾಕೆಲೊ
ಮುಂಡಿಗೆಯ–ಅಯ್ಯ ।
ನಂದಿಯ ಹಬ್ಬಕ್ಕೆ ಬಂದೀತು ಬೇಗೆಯು ಹಾಕೆಲೊ ಮುಂಡಿಗೆಯ ॥ ೫ ॥

ಪಾಂಡುರಂಗ ವಿಠಲನೊಬ್ಬನ ಹಾಕೆಲೊ ಮುಂಡಿಗೆಯ–ಅಯ್ಯ ।
ಕೊಂಡುಬಂದಾನು ಉತ್ತರದಿಕ್ಕಿಗೆ ಹಾಕೆಲೊ ಮುಂಡಿಗೆಯ ॥ ೬ ॥

ಮಂಟಪವೊಂದುಳಿದೀತು ಎಂಟುಕಂಭವು ಹಾಕೆಲೊಮುಂಡಿಗೆಯ–ಅಯ್ಯ ।
ಅಂಟಿಸಿ ಸುಟ್ಟರು ರಂಗಮಧ್ಯವನೆಲ್ಲ ಹಾಕೆಲೊ ಮುಂಡಿಗೆಯ ॥ ೭ ॥

ಗುಡಿಗೋಪುರಗಳ ಸೊಡರೆದ್ದು ಸು[1]ಟ್ಟೀತು[1] ಹಾಕೆಲೊ ಮುಂಡಿಗೆಯ-ಅಯ್ಯ।
[2]ದೃಢಶೀಲಭಕ್ತರು ಮಡುವಿನಲಿ ಧುಮುಕ್ಯಾರು ಹಾಕೆಲೊ ಮುಂಡಿಗೆಯ ॥ ೮ ॥

ಹಳ್ಳಿಪಟ್ಟಣಗಳ ಕೊಳ್ಳಿಲಿಸುಟ್ಟಾರು ಹಾಕೆಲೊ ಮುಂಡಿಗೆಯ–ನಿಮ್ಮ।
ಬೆಳ್ಳಿಭುಂಗಾರವ ಡಿಳ್ಳಿಗೆಹೊಯ್ದಾರು ಹಾಕೆಲೊ ಮುಂಡಿಗೆಯ ॥ ೯ ॥

ಶ್ರೀರಂಗವಳಿದೀತು ಸಿರಿಮುತ್ತೆ ತೊಲಗೀತು ಹಾಕೆಲೊಮುಂಡಿಗೆಯ–ಅಯ್ಯ।
ಮುಂಗಹೋಗಿ ತಾ ಮೈಲಾರನ ನುಂಗೀತು ಹಾಕೆಲೊ ಮುಂಡಿಗೆಯ ॥ ೧೦ ॥

ಕುಂಭಕೋಣದಲ್ಲಿ ಕುರಿಕೋಣಬಿದ್ದಾವು ಹಾಕೆಲೊ ಮುಂಡಿಗೆಯ–ಅಯ್ಯ।
ಕಂಭಸೂತ್ರದಬೊಂಬೆ[3] ಧ[3]ರೆಜನ ನುಂಗೀತು ಹಾಕೆಲೊ ಮುಂಡಿಗೆಯ ॥ ೧೧ ॥

ವಸವಂತನಸೀಮೆ[4]ವಿ[4]ಶ್ರಾಂತವಾದೀತು ಹಾಕೆಲೊ ಮುಂಡಿಗೆಯ–ಅಯ್ಯ।
ಹೊಸಲೂರ ಹೊಲಗೇರಿ ಬಿಸಿಲಲ್ಲಿ ಬೇದವು ಹಾಕೆಲೊ ಮುಂಡಿಗೆಯ ॥ ೧೨ ॥

ಕಿಷ್ಕಿಂದಪರ್ವತದ[5] ರೊ[5]ಕ್ಕವ ತೆಗೆವಾರು ಹಾಕೆಲೊ ಮುಂಡಿಗೆಯ ।
ಅ[6]ದ[6]ರ ಲೆಕ್ಕಕ್ಕೆ ಚೆನ್ನಬಸವಣ್ಣ ಬಂದಾನು ಹಾಕೆಲೊ ಮುಂಡಿಗೆಯ ॥ ೧೩ ॥

---

1 ಸು (ಒ.); ನೆ (ಎ, ಕ, ಗ.) 2 ಟ್ಟಾರು (ಇ, ಒ, ಚ.) 3 ವ್ಯ (ಅ, ಉ, ಎ, ಕ.) 3 ಧೊ (ಅ, ಇ, ಉ, ಎ, ಒ, ಕ.) 4 ಸಿ (ಇ, ಒ, ಚ.) 5 ಲೆ (ಅ) 6 ವ (ಅ, ಇ, ಉ, ಕ,)



ಮೌಲ್ಯವಂತನ ಮುಂದೆ ನವಕೋಟಿದ್ರವ್ಯವು
ಹಾಕೆಲೊ ಮುಂಡಿಗೆಯ–ಅದು ।
ಚೋಳನಕಾಲದ ಹಳೆಹೊನ್ನ ತೆಗೆವಾರು ಹಾಕೆಲೊ ಮುಂಡಿಗೆಯ ॥ ೧೪ ॥

ಕಿನ್ನರೇಶ್ವರನಲ್ಲಿ ಮುನ್ನೂರುಕೋಟಿಯು ಹಾಕೆಲೊ ಮುಂಡಿಗೆಯ–ಅ[1]ಲ್ಲಿ[1]।
ಹೊನ್ನುಮಳೆ ಸುರಿದಕಾರಣದಿಂದ ಹಾಕೆಲೊ ಮುಂಡಿಗೆಯ ॥ ೧೫ ॥

ಜಿನ್ನದೇವರು ತಾನು ಕಾಯ್ದುಕೊಂಡಿರ್ದಾನು
ಹಾಕೆಲೊ ಮುಂಡಿಗೆಯ–ಅದು ।
ಚೆನ್ನಬಸವಣ್ಣನ ಕೈವಶವಾದೀತು ಹಾಕೆಲೊ ಮುಂಡಿಗೆಯ ॥ ೧೬ ॥

ಜಂಬುಲಿಂಗದ ಉತ್ತರಭಾಗದಿ ಹಾಕೆಲೊ ಮುಂಡಿಗೆಯ–ಅದು ।
ಎಂಬತ್ತುಕೋಟಿ ನವಲಕ್ಷದ್ರವ್ಯವು ಹಾಕೆಲೊ ಮುಂಡಿಗೆಯ ॥ ೧೭ ॥

ಸೋಮನಾಥನಲ್ಲಿ ಹೇಮವೆಗ್ಗಳವುಂಟು ಹಾಕೆಲೊ ಮುಂಡಿಗೆಯ–ಅದು ।
ರಾಮ ರಾಮ ರಘುರಾಮರ ಹೊನ್ನದು ಹಾಕೆಲೊ ಮುಂಡಿಗೆಯ ॥ ೧೮ ॥

ವಾಣಿಭದ್ರನಮುಂದೆ ಕ್ಷೋಣಿದ್ರವ್ಯವು ಹಾಕೆಲೊ ಮುಂಡಿಗೆಯ–ಅದು ।
ಕ್ಷೋಣಿಯು ಬಸವನ ಕೈವಶವಾದೀತು ಹಾಕೆಲೊ ಮುಂಡಿಗೆಯ ॥ ೧೯ ॥

ಮತ್ತೆ ಹೇಳುವೆನು ಮನ್ಮಥನಕೊಂಡಕ್ಕೆ ಹಾಕೆಲೊ ಮುಂಡಿಗೆಯ–ಅಯ್ಯ ।
ಯಾತವನಿಕ್ಕ್ಯಾರು ಹೇರಿಕೊಂಡ್ಹೋದರು ಹಾಕೆಲೊ ಮುಂಡಿಗೆಯ ॥ ೨೦ ॥

ಮಾತಂಗಣಾಪುರ ಸಿಡಿಲೆರಗಿ ಪಾತಾಳಕೆ ಹಾಕೆಲೊ ಮುಂಡಿಗೆಯ–ಅಯ್ಯ ।
ಮತ್ತೊಂದು ಹೋದೀತು ತುದಿಮೊದಲು ಪರಿಯಂತ
ಹಾಕೆಲೊ ಮುಂಡಿಗೆಯ ॥ ೨೧ ॥

ಅಚ್ಯುತಕೃಷ್ಣನ ಅರಮನೆಸುಟ್ಟಾರು ಹಾಕೆಲೊ ಮುಂಡಿಗೆಯ–ಅವರ ।
ರಚ್ಚೆಯತಟ್ಟೆಯು ಕಿಚ್ಚಿಲಿಬಿದ್ದೀತು ಹಾಕೆಲೊ ಮುಂಡಿಗೆಯ ॥ ೨೨ ॥

---

1 ದು (ಅ, ಉ, ಎ, ಒ, ಕ, ಗ.)

ರಾಮಲಕ್ಷ್ಮಣರ ಹೇಮವ ತೆಗೆದಾರು ಹಾಕೆಲೊ ಮುಂಡಿಗೆಯ-ಅಯ್ಯ ।
ಸೋಮಸೂರ್ಯರವೀಧಿ ಹೊಗೆಗಳು ಕವಿದಾವು ಹಾಕೆಲೊ ಮುಂಡಿಗೆಯ ॥ ೨೩ ॥

ಅಚ್ಯುತನ ವಂಶವು ಮೊದಲೆದ್ದು ಹೋದೀತು
ಹಾಕೆಲೊ ಮುಂಡಿಗೆಯ-ಅವನು ।
ಬೈಚಿಟ್ಟಭಾಗ್ಯವು ಭ್ರಮೆಯೆದ್ದು ಹೋದೀತು ಹಾಕೆಲೊ ಮುಂಡಿಗೆಯ ॥ ೨೪ ॥

ಬಾ1ಜಿಗ1ನೆಂಬುವ ರಾಜರಗುರುವಿಗೆ ಹಾಕೆಲೊ ಮುಂಡಿಗೆಯ-ಅಯ್ಯ ।
2ಅಚ್ಯುತ3ನಂದನ ಅರಮನೆಯೊಳಗೆಲ್ಲ ಹಾಕೆಲೊ ಮುಂಡಿಗೆಯ ॥ ೨೫ ॥

3ನಚ್ಚಿ3ನಮಂತ್ರಿಗಳು ಕಿಚ್ಚೆದ್ದು ಹೋದಾರು
ಹಾಕೆಲೊ ಮುಂಡಿಗೆಯ-ಅಯ್ಯ ।
ಎಚ್ಚರತಪ್ಪ್ಯರು ಮುಂದಿನ್ನು ಬಂದೀತು ಹಾಕೆಲೊ ಮುಂಡಿಗೆಯ ॥ ೨೬ ॥

ರಾಜಬೀದಿಯ ಕಟ್ಟೆ ಮಾಜದೆ ಸುಲಿವಾರು
ಹಾಕೆಲೊ ಮುಂಡಿಗೆಯ-ಮುಂದೆ ।
ಗಾಜಿನ ಬಳೆಗಿನ್ನು ಘಾಸಿಯಿನ್ನಾಯಿತು ಹಾಕೆಲೊ ಮುಂಡಿಗೆಯ ॥ ೨೭ ॥

ಸೋಜಿಗವನು ಕೇಳಿ ವಿಜಯನಗರವೆಲ್ಲ ಹಾಕೆಲೊ ಮುಂಡಿಗೆಯ-ಅಯ್ಯ ।
ಬಾಜ ಬಜಾರವು ಬಯಲೆದ್ದು ಹೋದೀತು ಹಾಕೆಲೊ ಮುಂಡಿಗೆಯ ॥ ೨೮ ॥

ನಂಬಿರೊ ಜಂಬುಲಿಂಗನ ಪಾದ ಘನವೆಂದು ಹಾಕೆಲೊ ಮುಂಡಿಗೆಯ-ಅಯ್ಯ ।
ನಂಬಿದವರು ಈ ಸುದ್ದಿಯ ಕೇಳಿರಿ ಹಾಕೆಲೊ ಮುಂಡಿಗೆಯ ॥ ೨೯ ॥

ಅಂಬರ ಮುಸಿಕಿತು ಕುಂಭಿನಿ ನಡುಗೀತು ಹಾಕೆಲೊ ಮುಂಡಿಗೆಯ-ಅಯ್ಯ ।
ಜಂಭಾರಿ ಸೋದರ ಬಸವಯ್ಯ ಬರುವಾಗ ಹಾಕೆಲೊ ಮುಂಡಿಗೆಯ ॥ ೩೦ ॥

---

1 ಚಿಗೆ (ಎ, ಚ.) 2 ಆಚಾರ (ಇ, ಒ.) 3 ಸಂಚಿ (ಅ, ಉ, ಎ, ಕ.)



1ಲಾಗಿಂದ1 ಕಲ್ಲುಕೋಳಿಯು ತಾ ಕೂಗೀತು ಹಾಕೆಲೊ ಮುಂಡಿಗೆಯ-ಅಯ್ಯ ।
ಛಲದಂಕ ಎಮ್ಮೆಯ ಬಸವಣ್ಣ ಪೇಳಿದ ಹಾಕೆಲೊ ಮುಂಡಿಗೆಯ ॥ ೩೧ ॥

ವಚನ ॥ ಮತ್ತು ಎಚ್ಚರಿಕೆಯಂ ಪೇಳುತಿರ್ದರದೆಂತೆನೆ.

ಪದ

ಮುಂದಿನ ದಿನಮಾನ ಬಲುಕೆಟ್ಟು ಹೋದೀತು ಎಚ್ಚರಿಕೆಚ್ಚರಿಕೆ ।
ಹೆಚ್ಚಿನ ದೇವತೆ ಮುಚ್ಚಿಕೊಂದಳು ಬೇಗ ಎಚ್ಚರಿಕೆಚ್ಚರಿಕೆ ॥ ಪ ॥

ತುರುಕಾಣ್ಯದೊಳಗಿ2ದ್ದು2 ಮುರುಗಿ ತಾ ಬಂದಳು ಎಚ್ಚರಿಕೆಚ್ಚರಿಕೆ ।
ಕರಿಕರಿ ಮಾಡ್ಯಾಳು ಕರುಣವು ಇಲ್ಲದೆ ಎಚ್ಚರಿಕೆಚ್ಚರಿಗೆ ॥ ೧ ॥

ಮಾಯದಿ ಕೊಂದಳು ಮಾನವರೆಲ್ಲರ ಎಚ್ಚರಿಕೆಚ್ಚರಿಕೆ ।
ಸಾಯದೆ ಉಳಿ3ಯಾ3ರು ಸಂಸಾರ ಮೊದಲಾಗಿ ಎಚ್ಚರಿಕೆಚ್ಚರಿಕೆ ॥ ೨ ॥

ಮದ್ದು ಮಂತ್ರವ ಬಲ್ಲ ಸಿದ್ಧ ಪಂಡಿತರನ್ನು ಎಚ್ಚರಿಕೆಚ್ಚರಿಕೆ ।
ಕದ್ದು ತಾ ಹೊಯ್ದ್ದಾಳು ದುರ್ಗಿಯು ಮೊದಲಿನ್ನು ಎಚ್ಚರಿಕೆಚ್ಚರಿಕೆ ॥ ೩ ॥

ಯಂತ್ರಗಳು ಕೆಟ್ಟಾವು ಮಂತ್ರಗ್ಗಳಳಿದಾವು ಎಚ್ಚರಿಕೆಚ್ಚರಿಕೆ ।
ತಂತ್ರಗಳು ತನತನಗೆ ಬಯಲಾಗಿ ಹೋದಾವು ಎಚ್ಚರಿಕೆಚ್ಚರಿಕೆ ॥ ೪ ॥

ಶಾಂತಿಯ ಮಾಡ್ಯಾರು 4ಹೋ4ಮವನಿಕ್ಕ್ಯರು ಎಚ್ಚರಿಕೆಚ್ಚರಿಕೆ ।
ಮಂತ್ರಿಮಾನ್ನೆಯರೆಲ್ಲ ಮರೆಯಾಗಿ ಹೋದಾರು ಎಚ್ಚರಿಕೆಚ್ಚರಿಕೆ ॥ ೫ ॥

ಮುರುಗಿಯ ಹೆಸ5ರಲ್ಲಿ5 ಮಕ್ಕಳ ಕರೆವಾರು ಎಚ್ಚರಿಕೆಚ್ಚರಿಕೆ ।
ದೊರೆಗಳು ಅರಮನೆ ಬಿಟ್ಟೋಡಿ ಹೋದಾರು ಎಚ್ಚರಿಕೆಚ್ಚರಿಕೆ ॥ ೬ ॥

6ಭಾರಿಭಾರಿ6 ತುರುಕರ ಬಯಲನ್ನೆ ಮಾಡ್ಯಾಳು ಎಚ್ಚರಿಕೆಚ್ಚರಿಕೆ ।
ಪರಿಪರಿಯಲಿ ಮುಂದಿ ಸೆರೆಸೂರೆ ಮಾಡ್ಯಾಳು ಎಚ್ಚರಿಕೆಚ್ಚರಿಕೆ ॥ ೭ ॥

---

1 ಮಲಗಿದ್ದ (ಇ, ಎ, ಕ, ಗ, ಚ.) 2 ರ್ದ (ಎ.) 3 ದಾ (ಚ.) 4 ಹೇ (ಉ, ಎ.) 5 ರಿಲ್ಲ (ಅ, ಉ, ಎ, ಚ.) 6 ಬರಿಯ (ಅ, ಎ, ಕ, ಗ, ಚ.); ಬಂಬಾಯ (ಇ.)

ಮುಚ್ಚಿದ ಕದಗಳ ಬಿಚ್ಚದೆ ಸತ್ತಾರು ಎಚ್ಚರಿಕೆಚ್ಚರಿಕೆ ।
ಕೊಚ್ಚಾಡಿ ಲೋಕವ ಮುಚ್ಚಿ ತಾ ಕೊಂದಳು ಎಚ್ಚರಿಕೆಚ್ಚರಿಕೆ ॥ ೮ ॥

ಕೊಳ್ಳಿಯ ತಕ್ಕೊಂಡು ಡಿಳ್ಳಿಗೆ ಹೋದಾಳು ಎಚ್ಚರಿಕೆಚ್ಚರಿಕೆ ।
ಬಲ್ಲಿದ ಖಾನರ ಉರುಳಿಸಿ ಬಿಟ್ಟಾಳು ಎಚ್ಚರಿಕೆಚ್ಚರಿಕೆ ॥ ೯ ॥

ಹುಲ್ಲು ಉರಿಗೊಂಡಂತೆ ಹುರಿವಾಳು ಡಿಳ್ಳಿಯ ಎಚ್ಚರಿಕೆಚ್ಚರಿಕೆ ।
ಬಂಡಿಲಿ ಎಳೆವಾಳು ಬಯಲನೆ ಮಾಡ್ಯಾಳು ಎಚ್ಚರಿಕೆಚ್ಚರಿಕೆ ॥ ೧೦ ॥

ಬಲ್ಲಿದರನೆಲ್ಲ ಗುಳ್ಳಿಲಿ ಕೊಲುವಳು ಎಚ್ಚರಿಕೆಚ್ಚರಿಕೆ ।
ಸುಳ್ಳರನೆಲ್ಲ ಮ[1]ಸಗಿ ತಾ[1] ಕೊಲುವಳು ಎಚ್ಚರಿಕೆಚ್ಚರಿಕೆ ॥ ೧೧ ॥

ಕುಳ್ಳ ಜೆಳ್ಳರನೆಲ್ಲ ಮಸೆಯುತ್ತ ಕೊಲುವಾಳು ಎಚ್ಚರಿಕೆಚ್ಚರಿಕೆ ।
ಕಳ್ಳರನೆಲ್ಲ ಕೊಳ್ಳಿಲಿ ಕೊಲುವಳು ಎಚ್ಚರಿಕೆಚ್ಚರಿಕೆ ॥ ೧೨ ॥

ದೊರೆಗಳನೆಲ್ಲ [2]ಮುರಿದು[2] ತಾ ಕೊಲುವಳು ಎಚ್ಚರಿಕೆಚ್ಚರಿಕೆ ।
ನರಕುರಿಗಳನು ದುರ್ಗಿ ತಾ ಕೊಲುವಳು ಎಚ್ಚರಿಕೆಚ್ಚರಿಕೆ ॥ ೧೩ ॥

ಪಟ್ಟಣದವರ ತಾ ಮುಟ್ಟದೆ ಕೊಲುವಳು ಎಚ್ಚರಿಕೆಚ್ಚರಿಕೆ ।
[3]ಕೊಟ್ಟ[3]ದ ಬೇಡರ ಕೊಚ್ಚಿ ತಾ ಕೊಲುವಳು ಎಚ್ಚರಿಕೆಚ್ಚರಿಕೆ ॥ ೧೪ ॥

ಹೊಟ್ಟು ಮಾಡುತ್ತ ಈರೇಳು ಲೋಕವ ಎಚ್ಚರಿಕೆಚ್ಚರಿಕೆ ।
ಪೃಥ್ವಿಯ ಭಕ್ತರ ಉಳುಹಿ ತಾ [4]ತೂರ್ಯಾ[4]ಳು ಎಚ್ಚರಿಕೆಚ್ಚರಿಕೆ ॥ ೧೫ ॥

ಬಿಸಿನೀರ ಹೊಯ್ದು ಮನೆಗಳ ಸುಡುವಳು ಎಚ್ಚರಿಕೆಚ್ಚರಿಕೆ ।
ಮುದುಗಲ್ಲು ರಾಚೂರ ಮೊದಲೆ ಕೆಡಿಸ್ಯಾಳು ಎಚ್ಚರಿಕೆಚ್ಚರಿಕೆ ॥ ೧೬ ॥

ನಸುಗುಂದಿ ನರುಗಲ್ಲ ನಾಲ್ವತ್ತು ಚವುಗುಂಡ ಎಚ್ಚರಿಕೆಚ್ಚರಿಕೆ ।
ಕದನದ ಸಂಗ್ರಹವ ಕಲೆತು ತಾ ನಿಲುವಳು ಎಚ್ಚರಿಕೆಚ್ಚರಿಕೆ ॥ ೧೭ ॥

ಮೈಸೂರ ಸೀಮೆಯ ಕೈಸೆರೆ ಹಿಡಿವಳು ಎಚ್ಚರಿಕೆಚ್ಚರಿಕೆ ।
ಕೊಯ್ಸುವಳು ಕುರಿಕೋಣ ಮೂರು ಲಕ್ಷವ ಎಚ್ಚರಿಕೆಚ್ಚರಿಕೆ ॥ ೧೮ ॥

1 ಥನಿಸಿ (ಅ, ಉ, ಎ, ಕ, ಗ, ಚ.) 2 ಮರುಗಿ (ಅ, ಇ, ಉ, ಒ, ಕ, ಗ, ಚ.)
3 ತೋಟ (ಎ.) 4 ಕೊಂದಾ (ಚ.)



ಶ್ರೀರಂಗ ಪಟ್ಟಣದ ಸಿರಿಗ್ಯಾರು ದಿಕ್ಕಿಲ್ಲ ಎಚ್ಚರಿಕೆಚ್ಚರಿಕೆ ।
ಪಾರಂಗಿತವೆಲ್ಲ ಬಯಲಾಗಿ ಹೋದಿತು ಎಚ್ಚರಿಕೆಚ್ಚರಿಕೆ ॥ ೧೯ ॥

ಮಡದಿ ಮಕ್ಕಳು ಅವರೊಡನೆ ಸಾಗುವರು ಎಚ್ಚರಿಕೆಚ್ಚರಿಕೆ ।
ಬೆಡಗಿನ ಬುಡವರಿದು ಮೊದಲೆದ್ದು ಹೋದೀತು ಎಚ್ಚರಿಕೆಚ್ಚರಿಕೆ ॥ ೨೦ ॥

ಬಡಿಗೋಲ ಮಾಡ್ಯಾಳು ಮೂರು ಲೋಕವನೆಲ್ಲ ಎಚ್ಚರಿಕೆಚ್ಚರಿಕೆ ।
ಮೃಡ ಜಂಬುಲಿಂಗ ಎಮ್ಮೆ ಬಸವಣ್ಣ ಪೇಳಿದ ಎಚ್ಚರಿಕೆಚ್ಚರಿಕೆ ॥ ೨೧ ॥

ವಚನ ॥ ಮತ್ತು ಎಂತೆಂದೊಡೆ

ಪದ

ಕೂ ಕೂ ಕೂ ಕುಂಭಿಣಿ ಕೂ ಕೂ ಕೂ ॥ ಪಲ್ಲವಿ ॥

ಜಂಬುಕ ಕೋಡಗ ಜಗಳವ ಮಾಡ್ಯಾವು ಕೂ ಕೂ ಕೂ ।
ಹೊಗೆಭಂಗಿಯತಿಂದು ಜಗವೊಂದಾದೀತು ಕೂ ಕೂ ಕೂ ॥ ೧ ॥

ನಗೆಗೀಡಾಯಿತು ಶ್ರೀರಂಗಪಟ್ಟಣ ಕೂ ಕೂ ಕೂ ।
ಬಗೆಬಗೆ ಜೈನರು ಬ[1]ಲುಹಿಂದ[1] ಕೆಟ್ಟಾರು ಕೂ ಕೂ ಕೂ ॥ ೨ ॥

ಬಲವುಳ್ಳ ಮಂತ್ರಿಯ ಛಲವು ತಾ ಕೆಟ್ಟೀತು ಕೂ ಕೂ ಕೂ ।
ನಮ್ಮ ಛಲದಾಂಕವೀರ ಬಸವಣ್ಣ ಬರುವಾಗ ಕೂ ಕೂ ಕೂ ॥ ೩ ॥

ಖಾನೆಖಾನರೆಲ್ಲ ದಕ್ಷಿಣಕೆ ನಡೆವಾರು ಕೂ ಕೂ ಕೂ ।
ಕಾನನಕೆ ನಡೆದಂತೆ[2] ಮಾಡೀದನವರನ್ನು[2] ಕೂ ಕೂ ಕೂ* ॥ ೪ ॥

ಸೀರ್ಯದ ರಂಗನ ಶಿರವಾನೆ ಕೊಯ್ವಾರು ಕೂ ಕೂ ಕೂ ।
ತೋರಣವ ಕಟ್ಟ್ಯಾರು ಬಾಗಿಲಿಗೆ ಅವನನ್ನು ಕೂ ಕೂ ಕೂ ॥ ೫ ॥

ಹಾರುವರಹೆಣ್ಣುಗಳ ಪಾರನ್ನೆಮಾಡ್ಯಾರು ಕೂ ಕೂ ಕೂ ।
ಜಾರೇರುಹೆಚ್ಚ್ಯಾರು ಜಗವೆಲ್ಲ ಕೆಟ್ಟೀತು ಕೂ ಕೂ ಕೂ ॥ ೬ ॥

1 ಹುವಿಧ (ಚ.) 2 ದಕ್ಷಿಣಭಾಗದಿ (ಚ.) * ಈ ಪದ್ಯ (ಉ.) ಪ್ರತಿಯಲಿಲ್ಲ.

ತುರುಕರದೆಸೆಯಿಂದ ಕರೆಕರೆಯಾದಾವು ಕೂ ಕೂ ಕೂ ।
ಅರ್ಥಉಳ್ಳವರನ್ನು ನೆತ್ತಿಯ1ಹೊಸ್ಕಿ1ವಾರು ಕೂ ಕೂ ಕೂ ॥ ೭ ॥

ಕಾಲನಬಾಧೆಯ ಮರೆತಾರು ತುರುಕರು ಕೂ ಕೂ ಕೂ ।
ಸಾಲುಸಂಕೋಲೆಯ 2 ಜ2ಡಿವಾರು ಮುಂದಿನ್ನು ಕೂ ಕೂ ಕೂ ॥ ೮ ॥

ವಿಜಯನಗರದಲ್ಲಿ ಗೆಜಬಜವಾದಾವು ಕೂ ಕೂ ಕೂ ।
ಮಾಜ್ಯಕಲ್ಯಾಣದಿ ಕೈಸೆರೆಹಿಡಿವಾರು ಕೂ ಕೂ ಕೂ ॥ ೯ ॥

ಬಿದುರೆ ಪ3ರ್ನಾಶಿಯ3ಲಿ ಠಾಣ್ಯವನಿಟ್ಟಾರು ಕೂ ಕೂ ಕೂ ।
ಕುದುರೆ ರಾವುತರೆಲ್ಲ ಕೊಲಿಗೆ ಹೋಗುವರು ಕೂ ಕೂ ಕೂ* ॥ ೧೦ ॥

ಬಡಗಲದೇಶದ ಗಿಡುಗನು ಎದ್ದಾನು ಕೂ ಕೂ ಕೂ ।
ಮಡದಿ ಮಕ್ಕಳು ಸಹವಾಗಿ ಬಂದನು ಕೂ ಕೂ ಕೂ ॥ ೧೧ ॥

ಮುನ್ನೂರುಗಾವುದ ಹೊನ್ನುತಾ ಹೇರ್ಯಾನು ಕೂ ಕೂ ಕೂ ।
ಕನ್ನಡ ದೇಶಕ್ಕೆ ಕಡವೊದಲಿಲ್ಲದೆ ಕೂ ಕೂ ಕೂ ॥ ೧೨ ॥

ಅನ್ಯಾಯಹೆಚ್ಚೀತು ಆತನ ದೆಸೆಯಿಂದ ಕೂ ಕೂ ಕೂ ।
ಹನ್ನೆರಡು ವರುಷಕ್ಕೆ ಕಡೆಗಾಲ ಅವನಿಗೆ ಕೂ ಕೂ ಕೂ ॥ ೧೩ ॥

ರಾಮೇಶ್ವರದಲ್ಲಿ ರಕ್ತವತೊಳೆವಾರು ಕೂ ಕೂ ಕೂ ।
ರಾಮಲಿಂಗನಪೂಜೆ ತಾಮಸವಳಿವಾರು ಕೂ ಕೂ ಕೂ ॥ ೧೪ ॥

ಬತ್ತೀಸಾಯುಧವನ್ನು ರಕ್ತವತೊಳೆವಾರು ಕೂ ಕೂ ಕೂ ।
ಕತ್ತಲೆಕವಿದೀತು ಕಾಣದೆಹೋಗುವರು ಕೂ ಕೂ ಕೂ ॥ ೧೫ ॥

ಸುತ್ತಿ ಸುತ್ತಿ ಕಡಿದಾಡಿ ಸತ್ತಾರು ಇನ್ನು ಕೂ ಕೂ ಕೂ ।
ಎತ್ತಲಿದ್ದವರೆಲ್ಲ ಮತ್ತಿಲಿ ತಿರುಗ್ಯಾರು ಕೂ ಕೂ ಕೂ ॥ ೧೬ ॥

---

1 ಕೊಯ್ದು (ಒ.) 2 ಬ (ಉ.) ಪ್ರತಿಯಲ್ಲಿಲ್ಲ * ಈ ಪದ್ಯ (ಉ.)
3 ನ್ನಾಳಿ (ಇ,ಒ.)



ರಾಮನ ಹೆಸರಿನ 1ನಾಮದವನೆದ್ದಾ1ನು ಕೂ ಕೂ ಕೂ ।
ಆ ಮಹಾಸೇನೆಯು ಬಲವಾಗಿ ಕೂಡೀತು ಕೂ ಕೂ ಕೂ ॥ ೧೭ ॥

ರಾಮನದೆಸೆಯಿಂದ ಸೀಮೆಯಬಿಟ್ಟಾರು ಕೂ ಕೂ ಕೂ ।
ಶೂರಪೂರನ ದ್ರವ್ಯವು ವಶವಿನ್ನು ಆದೀತು ಕೂ ಕೂ ಕೂ ॥ ೧೮ ॥

2ಗುರುಭಕ್ತ2ರಾದಾರು ಗಿಡುಗನದಂಡೆಲ್ಲ ಕೂ ಕೂ ಕೂ ।
ನಡೆದುಹೋದೀತು 3ಡಿಲ್ಲಿಯನ3ದೇಶಕ್ಕೆ ಕೂ ಕೂ ಕೂ ॥ ೧೯ ॥

ರಾಮ ರಾಜನದಂಡು ಸೀಮೆಯಹಿಡಿವಾರು ಕೂ ಕೂ ಕೂ ।
ಕಾಮಲಪುರದ ಬೈಲಲ್ಲಿ ಬಿಟ್ಟಾರು ಮುಂದಿನ್ನು ಕೂ ಕೂ ಕೂ ॥ ೨೦ ॥

ಹೇಮಕೂಟಕ್ಕೆ ಪ್ರೇಮದಿಂ ಬರುವಾರು ಕೂ ಕೂ ಕೂ ।
ಕಾಮಿತ ಫಲಗಳ ಬೇಡಿಕೊಳುವಾರು ಕೂ ಕೂ ಕೂ ॥ ೨೧ ॥

ಹುಗ್ಗಿಯ ಹೊಯಿಸ್ಯಾನು ವಿಜಯನಗರಕ್ಕೆಲ್ಲ ಕೂ ಕೂ ಕೂ ।
ನೆಗ್ಗಿಲಸವರಿ ಮನೆಗಳಮಾಡ್ಯಾರು ಕೂ ಕೂ ಕೂ ॥ ೨೨ ॥

ಸ್ವರ್ಗಲೋಕವಮೆಚ್ಚಿ ರಾಜ್ಯವನಾಳುವನು ಕೂ ಕೂ ಕೂ ।
ಭರ್ಗನಕೃಪೆಯಿಂದ ಎಂಟುವರುಷವಾಳ್ಯಾನು ಕೂ ಕೂ ಕೂ ॥ ೨೩ ॥

ಕಂಟಕಅವನಿಗೆ ಎಂಟನೆಯವರುಷಕ್ಕೆ ಕೂ ಕೂ ಕೂ ।
ಸುಂಟರಗಾಳಿಯು ಸೋಕೀತು ಅವನಿಗೆ ಕೂ ಕೂ ಕೂ ॥ ೨೪ ॥

ಸತ್ಯವನೆಬಿಟ್ಟು ತಾ ಹುಚ್ಚೆದ್ದು ತಿರುಗ್ಯಾನು ಕೂ ಕೂ ಕೂ ।
ಮಚ್ಚರ ರಚ್ಚೆದ್ದು ಮುಸುಕೀತು ಮುಂದಿನ್ನು ಕೂ ಕೂ ಕೂ ॥ ೨೫ ॥

ಆನೆಕುದುರೆಮಂದಿ ಸೇನೆ ಭಂಡಾರವು ಕೂ ಕೂ ಕೂ ।
ತಾನೆದ್ದು ನಡೆದಾನು ಉತ್ತರಭಾಗಕ್ಕೆ ಕೂ ಕೂ ಕೂ ॥ ೨೬ ॥

---

1 ಮಾಧವನೆತಾ (ಅ, ಉ, ಚ.) 2 ಗಿಡಕೊಬ್ಬ (ಗ.) 3 ರೂಢಿಯ
(ಅ, ಇ, ಕ.)

ಬಿಟ್ಟಪಯಣವ ಬಿಡದೆ ತಾ ಹೋದಾನು ಕೂ ಕೂ ಕೂ ।
ಸಟೆಯಲ್ಲ ಈ ಮಾತು ಶಿವನಾಣೆಮುಂದಕ್ಕೆ ಕೂ ಕೂ ಕೂ ॥ ೨೭ ॥

ತುಂಗಭದ್ರೆಯು ಭೀಮರತಿಗಾಗಿ ಕೂ ಕೂ ಕೂ ।
ಗಂಗೆ ಗೋದಾವರಿ ನರ್ಮದತೀರಕ್ಕೆ ಕೂ ಕೂ ಕೂ ॥ ೨೮ ॥

ವಾರಣಾಸಿಯಲ್ಲಿ ರಾಮನಸಿರಸಕ್ಕೆ ಕೂ ಕೂ ಕೂ ।
ಕಾರಣಸ್ಥಿತಿಗಳ ಮಾಡ್ಯಾರು ಮುಂದಿನ್ನು ಕೂ ಕೂ ಕೂ* ॥ ೨೯ ॥

ಪಾಂಡುರಂಗಗೆ ಹೋಗಿ ವಿಠಲನ ತೆಗೆವರು ಕೂ ಕೂ ಕೂ ।
ಕೊಂಡುಬರುವರು ವಿಜಯನಗರಕ್ಕೆ ಕೂ ಕೂ ಕೂ* ॥ ೩೦ ॥

ಕುಂಭಿಣಿಪತಿ ಜಂಬುಲಿಂಗನ ವರದಿಂದ ಕೂ ಕೂ ಕೂ ।
ನಂಬಿಹೇಳಿದ ಎಮ್ಮೆಯಬಸವಣ್ಣ ಕೂ ಕೂ ಕೂ ॥ ೩೧ ॥

**ವಚನ** ॥ ಮತ್ತು ಎಂತೆಂದೊಡೆ

**ಪದ**

ಬಾಳ್ಯ್ಯಾರು ಬದುಕ್ಯ್ಯಾರು ತಲೆಗಳಬೋಳಿಸಿ ಕೊಂಡಾರು ಮಾನ್ಯರು ।
ಬಾಳುವಕಾಲಕ್ಕೆ ಭಿಕ್ಷಕ್ಕೆಬಂದರೆ ಕಲ್ಲಲ್ಲಿಟ್ಯಾರು ಮಾನ್ಯರು ॥ ಪ ॥

ಕೊಂಡ್ಯಾರು ದಿಂಡ್ಯಾರು ಉಂಡಮನೆಗಳ ಕೊಂಡಾರು ಮಾನ್ಯರು ।
ರಂಡೇರು ಹೆಚ್ಚ್ಯಾರು ವೇಶಿಯರುಕೆಟ್ಟ್ಯಾರು ಬಂಡೆದ್ದುಹೋದೀತು ಮಾನ್ಯರು ॥ ೧ ॥

ಹೆತ್ತರುಹೊತ್ತರು ಮಕ್ಕಳ ಮದುವೆಯ ಮಾಡ್ಯಾರು ಮಾನ್ಯರು ।
ಸೊಸೆಬಂದು ನಡೆವಾಗ ಅತ್ತೆಗೆ ಉಳಿವಿಲ್ಲ ಕುಸ್ತಿಗಳಾದಾವು ಮಾನ್ಯರು ॥ ೨ ॥

ಮನೆಯಲ್ಲದುಡಿವರು ಖಂಡುಗಬೀಜವ ಬಿತ್ತ್ಯಾರು ಮಾನ್ಯರು ।
[1]ಹೊಲಗ[1]ಳು ಬೆಳೆದವು ರಾಸಿಗಳಾದಾವುಉಣಲಿಲ್ಲ ಉಡಲಿಲ್ಲ ಮಾನ್ಯರು ॥ ೩ ॥

* ಈ ಪದ್ಯಗಳು (ಉ.) ಪ್ರತಿಯಲ್ಲಿಲ್ಲ. 1 ಹೆಂಗಾ (ಎ.)



ಬಿತ್ತ್ಯಾರುಬೆಳೆವಾರು ಲೋಕವು ತೆತ್ತಾರು ಹೊತ್ತಾರು ಮಾನ್ಯರು ।
ಅರ್ಥಭಂಗಾರವ ದಂಡವ ನಿಕ್ಕ್ಯಾರು ಸತ್ತ್ಯವು ತಪ್ಪೀತು ಮಾನ್ಯರು ॥ ೪ ॥

ಕಟ್ಟ್ಯಾರುಕಾಶಾರು ಬೇಡರ[1] ಮೆಟ್ಟೇ[1]ರು ಹೆಂಡಿರು ಮಾನ್ಯರು ।
ಅಟ್ಟ್ಯಾರು ಸುಟ್ಟ್ಯಾರು ಅಡಿಗೆಯ ಮಾಡ್ಯಾರು ಊಟವ ಉಣಲಿಲ್ಲ ಮಾನ್ಯರು ॥ ೫ ॥

ಹೆ[2]ಮ್ಮ[2]ರು ಗುಮ್ಮರು ಕಾಮಿಸಿ ಹೇಮವ ಬೇಡ್ಯಾರು ಮಾನ್ಯರು ।
ಕೆಮ್ಮದರರಿದರುಹಿರಿಯತನವಬಿಟ್ಟುಸಮ್ಮನೆಕೊಡಬೇಕುಮಾನ್ಯರು ॥೬॥

ಅಕ್ಕರಿ ಕೊಕ್ಕರಿ ಕೊಕ್ಕರಿ ಮೀಸೆಗಳಳಿದಾವು ಮಾನ್ಯರು ।
ದುಃಖ ದುರ್ಜನ ಬೇಡರನ್ನೆಲ್ಲರ [3]ಶಿ[3] ಕ್ಷೆಯ ಮಾಡ್ಯಾರು ಮಾನ್ಯರು ॥ ೭ ॥

[4]ಅನ್ನದಾನವು[4] ಗೋದಾನವು ಆನೆಗುಂದಿಗೆ [5]ತಾವಿ[5]ನ್ನು ಬಂದಾರು ಮಾನ್ಯರು ।
ನಂದಿಯು ಹೊಡೆವಾರು ಬಿಂದಿಗೆ ಹೊನ್ನಿಗೆ ಸಂದಾರು ತುರುಕರು ಮಾನ್ಯರು ॥ ೮ ॥

ಪುರುಷರು ಗಿರುಷರು ಬಣ್ಣಿಸಿಲೊರಸೊರಸಿ ಹೊಡವಾರು ಮಾನ್ಯರು ।
ಮರಗಳನೇರಿದರೆ ಸೀರೆಗಳನು ಸುತ್ತಿ ಪದುಭೀತಿ ಮಾಡುವರು ಮಾನ್ಯರು ॥ ೯ ॥

ಅಣ್ಣನು ಬಣ್ಣನು ಚಿಣ್ಣನ ತುಂಟ[6]ತಾ[6] ಹೆಚ್ಚೀತು ಮಾನ್ಯರು ।
ಹೆಣ್ಣಿನ ಮಾತನ್ನು ಪುರುಷರು ಕೇಳ್ಯಾರು ಅಣ್ಣನ ಕದನವು ಮಾನ್ಯರು ॥ ೧೦ ॥

ವೇದವು ಗೀದವು ವೇದವ [7]ಓದ್ಯಾ[7]ರು ಮಾದಿಗ ಜನರಿನ್ನು ಮಾನ್ಯರು ।
ಯಾದವಗಿರಿಯ ಅಮ್ಮನ ನೆರೆ ಪೂಜಿಸಿ ಭಜನೆಯ ಮಾಡ್ಯಾರು ಮಾನ್ಯರು ॥ ೧೧ ॥

1 ಮೋಟಾ (ಎ.) 2 ಮ್ಮಾ (ಎ, ಕ, ಚ.) 3 ಕಾಂ (ಅ, ಇ, ಒ, ಕ, ಗ.) 4 ಆನಂದ (ಅ, ಕ.) 5 ಕಾದಿ (ಅ.) 6 ತು (ಅ, ಉ, ಕ, ಗ, ಚ.) 7 ನಯ್ದಾ ಇ, ಉ, ಎ (ಬ) ಕ (ಚ.)

ಇಕ್ಕ್ಯಾರು ಬಿ1ಕ್ಕ್ಯಾ1ರು ಒಕ್ಕಲ ಹಕ್ಕಲ ಮಾಡ್ಯಾರು ಮಾನ್ಯರು ।
ಬೆಕ್ಕುಗಳ ಬಿಟ್ಟು ರೊಕ್ಕವ ತಕ್ಕೊಂಡು ದುಃಖವ ನಿಕ್ಕ್ಯಾರು ಮಾನ್ಯರು
॥ ೧೨ ॥

ಮೆಟ್ಟ್ಯಾರು ಕಟ್ಟ್ಯಾರು 2ಇಟ್ಟು2 ಹೊಟ್ಟನು ತೂರ್‍ಯಾರು ಮಾನ್ಯರು ।
ಗುಟ್ಟು ಗುಟ್ಟುಳ್ಳವರ ದಂಡವತಕ್ಕೊಂಡು ಪೆಟ್ಟುಗಳಬೇಡ್ಯಾರು ಮಾನ್ಯರು
॥ ೧೩ ॥

ಉಟ್ಟರು 3ಗಿ3ಟ್ಟರು ಉರುಮಂಜಿ ಕಟ್ಟ್ಯಾರು 4ಕಳದಾ4ರು ಮಾನ್ಯರು ।
ಮು5ಟ್ಟನಾಡಾ5ರು ಮನೆಗಳ ಕೊಂಡಾರು ಕೆಟ್ಟೀತು ಲೋಕವು
ಮಾನ್ಯರು ॥ ೧೪ ॥

ಕಂಡಾರು ಉಂಡಾರು ಮೂಜಗ ಪುಂಡರು ಹೆಚ್ಚ್ಯಾರು ಮಾನ್ಯರು ।
ದಂಡಿಗೆ ಹೋಗುವ ರಾಯರ ಹೆಡಿರು ಬಂಡೆದ್ದು ಹೋದಾರು ಮಾನ್ಯರು
॥ ೧೫ ॥

ಉಟ್ಟ್ಯಾರು ತೊಟ್ಟ್ಯಾರು ತೊಟ್ಟಭುಗಾರವ ನಳಿವಾರು ಮಾನ್ಯರು ।
ಸುಟ್ಟ್ಯಾರು ದುಂದುಭಿ ಕಟ್ಟಬಾಧಿಸಿ ಅತ್ತಲು ಲೋಕವು ಮಾನ್ಯರು ॥ ೧೬ ॥

ನೀಚರು ಹೆಚ್ಚ್ಯಾರು ಹೆಚ್ಚಿನಿರ್ಬೈಲ ಮಾಡ್ಯಾರು ಮಾನ್ಯರು ।
ಯೋಚನೆಗೊಂಡಾರು ಮೂಜಗವೆಲ್ಲ ಸೂಚನೆಹೇಳಿದೆ ಮಾನ್ಯರು ॥ ೧೭ ॥

ಖೇಚರ ಭೂಚರ ಮೂಲೋಕವು ನಾಚಿಕೆಗೊಂಡಾರು ಮಾನ್ಯರು ।
ಆಚಾರಬಿಟ್ಟುನೀಚರುಆದಾರು6ಸೂಚ6ನೆಗೊಂಡಾರುಮಾನ್ಯರು ॥೧೮॥

ಹರದಾರು ಗಿರುದಾರು ಧನಿಕರ ಕೊರೆವಾರು ಕೊಲುವರು ಮಾನ್ಯರು ।
7ಋಣ7 ಬಾಧೆಗಂಜದೆ ಧನಿಕರಕೊಲುವರುಮನಹೀನವಾದೀತು ಮಾನ್ಯರು
॥ ೧೯ ॥

1 ತ್ಯಾ (ಚ.) 2 ಅಷ್ಟು (ಎ.ಚ.) 3 ಬಿ (ಎ.) 4 ತೇಗ್ಯಾ (ಬ.) 5 ಟ್ಟನಾಡೂ (ಇ,ಚ.) 6 ಸೋಜಿಗವ (ಎ,ಚ.) 7 ಮನ (ಎ,ಚ.)



ಒಡೆಯನ ಭಂಟನು ಒಡೆಯನಕಡಿದು ಬೀಸಿಟ್ಟಾನು ಮಾನ್ಯರು ।
ಕಡೆಗಾಲವಾದೀತು ಕರ್ಮವುಹೆಚ್ಚೀತು ನಡೆನುಡಿಯಿಲ್ಲವು ಮಾನ್ಯರು
॥ ೨೦ ॥

ಕರ್ತಾರು ಭೃತ್ಯಾರು ಕರ್ತೃಸತ್ತುಹೋದಾರು ಮಾನ್ಯರು ।
ಕರ್ತೃವಿನಸತಿಯರ ಭೃತ್ಯರು ಆಳ್ಯಾರು ಮರ್ತ್ಯವು ಕೆಟ್ಟೀತು
ಮಾನ್ಯರು ॥ ೨೧ ॥

ವಾ1ವೆ1ಯುತಪ್ಪೀತು ಮನಭಾವವ 2ಜರಿವಾ2ರು ಮಾನ್ಯರು ।
ಭಾವನಹೆಂಡರ ಭ್ರಮೆಗೊಂಡುಹೋಗುವರು ಕಾಮವುಹೆಚ್ಚೀತು ಮಾನ್ಯರು
॥ ೨೨ ॥

ಅಣ್ಯವುಪುಣ್ಯವು ಪುಣ್ಯದನೆಣಗಳುಹೆಚ್ಚ್ಯಾವು ಮಾನ್ಯರು ।
ಅಣ್ಣತಮ್ಮಗಳು ಕಡಿದಾಡಿಸತ್ತಾರು ಹೆಣ್ಣಿನಮಾತಿಗೆ ಮಾನ್ಯರು ॥ ೨೩ ॥

ತಂದೆಯ ಕೊಂದಾರು ತಾಯಿಗೆ ಬಂಧನ ಮಾಡ್ಯಾರು ಮಾನ್ಯರು ।
ಕಂದನಸತಿಯ ಹೊಂದಿ ತಾವಾಳ್ಯಾರು ಹಂದಿಯಹೊತ್ತಾರು ಮಾನ್ಯರು
॥ ೨೪ ॥

ಹೆಂಡರು ಗಂಡರು ಗಂಡರ ಹೆಂಡರು ಕೊಂದಾರು ಮಾನ್ಯರು ।
ರಂಡೆರುಬಸುರಾಗಿ ಮಕ್ಕಳಹಡೆವಾರು ಉಂಡಾಡಿ ರುಹಬ್ಬ್ಯಾವು ಮಾನ್ಯರು
॥ ೨೫ ॥

ವೇಶಿಯರಾದಾರು ಕಾಸಿನ ಆಸೆಯಲಿ ಬದುಕ್ಯಾರು ಮಾನ್ಯರು ।
ಭೂಸುರ ಸನ್ಯಾಸಿಯಾಗಿ ತಾಹೋದಾರು ದೋಷಕ್ಕೆಅಂಜಾರು ಮಾನ್ಯರು
॥ ೨೬ ॥

ಬೊಕ್ಕರು ಗಿಕ್ಕ್ಯಾರು ಬೊಕ್ಕರು ಸಿಕ್ಕ್ಯಾರು ಹೆಣ್ಣಿಗೆ ಮಾನ್ಯರು ।
ಮಿಕ್ಕಮಾತೇನು ಲೋಕದ ಮನುಜರು ಕಾಕುಗಳ ಮಾಡ್ಯಾರು ಮಾನ್ಯರು
॥ ೨೭ ॥

1 ವಿ (ಬ,ಚ.) ದಿ (ಅ, ಇ-ಉ, ಎ, ಕ.) 2 ಬೇಡಾ (ಎ.)

ಜಡೆಗಳುಮುಡಿಗಳು1 ಜ1ಡಿದಾಡಿಪ್ರೊಡವಿಯು ಹೊಡೆವಾರು ಮಾನ್ಯರು ।
ಮಾಡಿದಭಾಷೆಯು ಬೇಡ್ಯಾರು ಲಂಚವ ಮುಂಡೇರು ಹೆಚ್ಚಾರು ಮಾನ್ಯರು
॥ ೨೮ ॥

ಉಂಬಾಳಿ ಬೊಂಬಾಳಿ ಮನಸಿಗೆನಂಬಿಗೆ ತೋರ್ಯಾರು ಮಾನ್ಯರು ।
ಜಂಬುಲಿಂಗ ಎಮ್ಮೆಯುಬಸವಣ್ಣ ಪೇಳಿದ ಅಂಜದಿರೆಂದರುಮಾನ್ಯರು ॥ ೨೯ ॥

ವಚನ ॥ ಮತ್ತು ಎಂತೆಂದೊಡೆ

ಹೇಗೆ ಮಾಡೀತು ಲೋಕ-ಚೆನ್ನ-ಬಸವಣ್ಣ ಬರುವಾಗ ಪಾಕ ।
ಬೆನ್ನಿಲಿಹೊರಿಸ್ಯಾಳು ತೂಕ-ನಿನ್ನ-ಕಣ್ಣಿಲಿ ಬರುವಾದು ಶೋಕ ॥ ೧ ॥

ಉತ್ತರದಿಕ್ಕಿನ ನಾರಿ-ಸತ್ಯ-ಶರಣರ ಪಾದವ ಸೇರಿ ।
ಬತ್ತಿಸಾಯುಧಗಳ ಚೂರಿ-ಜಗ-ಕೊತ್ತುತ್ತ ಬರುತಾಳೆ ನಾರಿ ॥ ೨ ॥

ಅಮ್ಮಾಜಿಬರುತಾಳೆ ನೋಡಿ-ನೀವು-ಉಮ್ಮಾಯದಿಂದಲಿ ಪಾಡಿ ।
ನಿಮ್ಮನಿ2ಮ್ಮನೆ2 ಬೇಡಿ-ನೀವು-ಸುಮ್ಮನೆ ಬಿಟ್ಟೆಯಿಂನೋಡಿ ॥ ೩ ॥

ಅಂಕಡೊಂಕಿನಕಾಲು-ಅವಳ-ಕೈಯಲ್ಲಿ ಬಿಂಕದಕೋಲು ।
ಮುಂಕೊಂಡು ಬರುತಾಳೆ ಮ್ಯಾಲು-ನಮ್ಮ-ಶಂಕರ ಕಳುಹಿದಕೀಲು ॥ ೪ ॥

ಅಡ್ಡದೊಡ್ಡಿನಹಲ್ಲು-ದೊಡ್ಡ-ದೊಡ್ಡ ದೊರೆಗಳಜೊಲ್ಲು ।
ಹೆಡ್ಡಮನುಜರಕೊಲ್ಲು-ನಾರಿ-ಓಡುತ್ತ ಬರುತಾಳೆ ನಿಲ್ಲು ॥ ೫ ॥

ಮೂಡ3ಣ3 ದಿಕ್ಕಿನಚಂಡಿ-ಇನ್ನು-ನೋಡುತ್ತ ಬರುತಾಳೆಮಿಂಡಿ ।
ಉಂಡಹೆಣಗಳಬಂಡಿ-ಇನ್ನು-ಕಾಡುತ್ತ ಬರುತಾಳೆದಿಂಡಿ ॥ ೬ ॥

ತತ್ತಳಸೀರೆಯನುಟ್ಟು-ಮುತ್ತು-ರತ್ನ ಮಾಣಿಕವತೊಟ್ಟು ।
ಉತ್ತಮ ಶರಣರ ಬಿಟ್ಟು-ಹತ್ತಿ-ಬರುತಾಳೆ ಸೀಮೆಯಸುಟ್ಟು ॥ ೭ ॥

ಕುಲದಲ್ಲಿ ಹೊಲೆಯರಹೆಣ್ಣು-ಅವಳ-ತಲೆಯಿಂದ ಮೈಯೆಲ್ಲಕಣ್ಣು ।
ಬಲುಹೊಂದಬಿಟ್ಟಾಳು ಕಣ್ಣು-ಅವಳು-ಮುಲಗಿಸಿ ಹೊಯ್ಯಾಳುಮಣ್ಣು ॥ ೮ ॥

1 ಬ (ಅ.) ರ (ಚ.)  2 ಳ (ಅ., ಉ, ಎ, ಬ, ಕ, ಗ, ಚ.)



ಕೈಯಲ್ಲಿ ಹೆಂಡದಗಡಿಗೆ-ಅವಳ-ಮೈಯಲ್ಲಿ ನಾರುವಹಡಿಕೆ ।
ಹುಯ್ಯಲುಮಾಡ್ಯಾಳು ತುಡುಕೆ-ನಮ್ಮ-ಅಯ್ಯಗಳೆಲ್ಲರುಮಿಡುಕೆ ॥ ೯ ॥

ಜೋಲುತೊಗಲಿನ ಮುದುಕಿ-ಇನ್ನು-ಸೂಲುತ್ತ ಬರುತಾಳೆಬೆದಕಿ ।
ಕಾಲಕರ್ಮವು ದುಡುಕಿ-ನಮ್ಮ-ಚಿಕ್ಕಮನುಜರ ಸದತಿ ॥ ೧೦ ॥

ಮುಲುಗುತ್ತ ಬರುತಾಳೆಪೀಡೆ-ಇನ್ನು-ಗಲಬಿಲಿ ಹುಟ್ಟೀತು ರೂಢೆ ।
ಚೆಲುವ ಮಿಂಡಿಯರ ಕೂಡೆ-ತಲೆ-ನಡುಗುತ್ತ ಬರುತಾಳೆರೂಢೆ ॥ ೧೧ ॥

ಇದು ಎಂದಿನಮಾತೆನ್ನ ಬೇಡಿ-ಕಲ್ಲು-ಕೋಳಿಯು ಕೂಗೀತು ನೋಡಿ ।
ಬಲ್ಲಿದದುರ್ಗಿಯು ಕೂಡಿ-ನಮ್ಮ-ಅಲ್ಲ1ಮ1ಬರುತಾನೆ ನೋಡಿ ॥೧೨॥

ಇದುಎಂದಿನ ಮಾತೆನ್ನ ಬೇಡಿ-ಇನ್ನು-ಮುಂದಕ್ಕೆ ಹನ್ನೊಂದನೋಡಿ ।
ಸಂಧಿಸಿ ಹನ್ನೊಂದ ಕೂಡಿ-ಇನ್ನು-ತಂದೆಯ ಮಗಕೊಂದ ನೋಡಿ ॥ ೧೩ ॥

ಇದು ಬೆಡಗಿನ ಮಾತೆನ್ನ ಬೇಡಿ-ನಿಮ್ಮ-ಗಡುಬದ ದಿನ ಬಂತು ನೋಡಿ ।
ಕಡೆದಿದ್ದ ಬೆಣ್ಣೆಯ ಕೂಡಿ-ಅದು-ತಡೆಯದೆ ಮುಳುಗೀತು ನೋಡಿ ॥೧೪॥

ಮುನ್ನೂರು ಅರವತ್ತು ರೋಗ-ಅವಳು-ಚೆನ್ನಾಗಿ ಬರುತಾಳೆ ಬೇಗ ।
ಮನ್ನಿಸಿ ಹುಯಿವಾಳು ಈಗ-ಅವಳು-ಬೆನ್ನಿಲಿ ತೆಗೆವಾಳು ಬೇಗ ॥ ೧೫ ॥

ಎಚ್ಚತ್ತುಕೊಳ್ಳಿರಿಅಣ್ಣ-ಇನ್ನು-ಮುಚ್ಚಿ ಬರುತಾಳೆ ಕಣ್ಣ ।
ಹಚ್ಚ್ಯಾಳು ನಿಮಗೆಲ್ಲ ಹುಣ್ಣ-ನಮ್ಮ-ಅಚ್ಚ್ಯುತಗಳವಲ್ಲವಣ್ಣ ॥ ೧೬ ॥

ಉಳುವಿಯ ಮುಂದಿನ್ನು ಕೇಳಿ-ಕಾಳ-ರಕ್ಕಸಿ ಬರುತಾಳೆ ಧಾಳಿ ।
ಹಾಳುಮನುಜರ ಸೀಳಿ-ಅವಳು-ಘೋಳಿಟ್ಟು ಬರುತಾಳೆ 2ಕೇ2ಳಿ ॥ ೧೭ ॥

ಮದನ ಶಾಸ್ತ್ರವ ಮಾಡಿ-ಜಾರ-ಸತಿಯರು ನಲವತ್ತು ಕೋಟಿ ।
ಹತವಿನ್ನು ಈ ಲೋಕನೋಡಿ-ಸತ್ಯ-ಶರಣರ ಮಾತನ್ನೆ ಪಾಡಿ ॥ ೧೮ ॥

ಬಸವಣ್ಣ ಪೇಳಿದ ಮಾತು-ನೀವು-ಕುಶಲದಿ ಕೇಳಿರೊ ಸೋತು ।
ವಸವಂತ ಬರುವಾಗ ಧಾತು-ಇನ್ನು-ಕಸನಿಕ್ಕಿ ಗುಡಿಸ್ಯಾಳು ಸೇತು ॥ ೧೯ ॥

1 ಯ್ಯ (ಅ, ಕ, ಗ.)  2 ಹೇ (ಎ, ಬ.)

ಏಳನೂರೆಪ್ಪತ್ತು ವರುಷ-ಇನ್ನು-ಒಪ್ಪೀತು ಈ ಲೋಕ ಹರುಷ ।
ಅಪ್ಪನ ಪಟ್ಟಕ್ಕೆ ಅರಸ-ಇನ್ನು-ಬಪ್ಪನು ಬಸವಣ್ಣ ಹರುಷ ॥ ೨೦ ॥

ಮರೆತಾರು ಈ ಲೋಕವೆಲ್ಲ-ನಮ್ಮ-ಅರುವಿನ ಶರಣರ ಸೊಲ್ಲ ।
ಧರಣಿಗೆ ಎಮ್ಮೆಯ ಬಸವಣ್ಣ-ನೆಲ್ಲ-ಸಾರಿದನು ತ್ರಿಲೋಕಕೆಲ್ಲ ॥ ೨೧ ॥

**ವಚನ** ॥ ಈ ಪರಿಯಲ್ಲಿ ಸಾರುತ್ತ ಬರಲಾಗಿ, ರಾಜಮಾನ್ನೆಯರೆಲ್ಲ, ಹಿಡಿದೊಯ್ದು ಎಮ್ಮೆ ಬಸವಣ್ಣನ ಕಾಲಿಗೆ ಜಂಬುರಿಯಂ ಹಾಕಿ ಮನೆಯ ಹೊಗಿಸಿ, ಬಾಗಿಲಿಗೆ ಬೀಗ ಮುದ್ರೆಯಂ ಬಲಿದು ಕಾವಲಿಟ್ಟು ಇರಲಾಗಿ, ಆ ಬಸವಣ್ಣನು ಮಾಯದಲ್ಲಿ ರಾಜಬೀದಿಗೆ ಬಂದು ಬಯಲಿಗೆ ಬಯಲು ನಿರ್ಭಯಲೆಂದು ಸಾರುತಿರ್ದರದೊತೆನೆ.

**ಪದ**

ಕಣಿಯ ಕೇಳಿರಣ್ಣಗಳಿರ ಕಣಿಯ ಕೇಳಿರೊ-ಶಿವನ
ಮಣಿಹವಿಡಿದು ಸಾರಿ ಬಾದೆ ಕಣಿಯ ಕೇಳಿರೊ ॥ ಪಲ್ಲವಿ ॥

ಆಸೆಯಿಂದ ಅರಸು ಮಗನು ಕಣಿಯ ಕೇಳಿರೊ-ನಾನು ।
ದೇಶವೆಲ್ಲ ಸಾರಿ ಬಂದೆ ಕಣಿಯ ಕೇಳಿರೊ ॥ ೧ ॥

ಭಾಷೆ ತಪ್ಪಿ ತಮಗೆ ತಾವು ಕಣಿಯ ಕೇಳಿರೊ-ಮುಂದೆ ।
ಘಾಸಿಯಾಗಿ ಹೋಗುತಾರೆ ಕಣಿಯ ಕೇಳಿರೊ ॥ ೨ ॥

ವಿದ್ಯನಗರದೊಳಗೆ ಎಲ್ಲ ಕಣಿಯ ಕೇಳಿರೊ-ಇನ್ನು ।
ಹದ್ದು ಕಾಗೆಯಾಡುತಿವೆ ಕಣಿಯ ಕೇಳಿರೊ ॥ ೩ ॥

ಬುದ್ಧಿ 1ತಪ್ಪಿ1 ರಾಜರೆಲ್ಲ ಕಣಿಯ ಕೇಳಿರೊ-ನೀವು ।
ಆಗ ಈಗ ಎನ್ನಬೇಡಿ ಕಣಿಯ ಕೇಳಿರೊ ॥ ೪ ॥

ಕಾಗೆ ಹದ್ದು ನುಂಗುತಾದೆ ಕಣಿಯ ಕೇಳಿರೊ-ಎದ್ದು ।
ಹೋದರು ದಕ್ಷಿಣಕ್ಕೆ ಕಣಿಯ ಕೇಳಿರೊ* ॥ ೫ ॥

1 ವಂತ (ಬ.) * ಈ ಪದ್ಯ (ಉ.) ಪ್ರತಿಯಲ್ಲಿಲ್ಲ.



ಸಾಗಿ ಹೋಗಿ ದಕ್ಷಿಣಕ್ಕೆ ಕಣಿಯ ಕೇಳಿರೊ-ನೀವು ।
ಮೂಗರಂತೆ ಇರಬೇಡಿ ಕಣಿಯ ಕೇಳಿರೊ ॥ ೬ ॥

ಗಾಣದೊರಳು ಗಾಳಗೆದ್ದು ಕಣಿಯ ಕೇಳಿರೊ-ಮುಂದೆ ।
ಕಾಣಬಾರದೆ ಹೋಗುತ್ತೀದೆ ಕಣಿಯ ಕೇಳಿರೊ ॥ ೭ ॥

ಜಾಣ ಮೂಢವನವರೆಲ್ಲ ಕಣಿಯ ಕೇಳಿರೊ-ಅವರು ।
ಕೆಟ್ಟು ಅರಣ್ಯವ ಸೇರುವಾರು ಕಣಿಯ ಕೇಳಿರೊ ॥ ೮ ॥

ಡೊಂಬ ಗಣೆಯ ನೇರುತಾನೆ ಕಣಿಯ ಕೇಳಿರೊ-ಅವನು ।
ಕಂಬ ಮುರಿದು ಲಾಘತಪ್ಪಿ ಕಣಿಯ ಕೇಳಿರೊ ॥ ೯ ॥

ಕುಂಭಾರ ಸಾಲೆಯಂತೆ ಕಣಿಯ ಕೇಳಿರೊ-ಅವನ ।
ಡಿಂಭವೆಲ್ಲ ತಿರುಗುವಾದು ಕಣಿಯ ಕೇಳಿರೊ ॥ ೧೦ ॥

ಮಕ್ಷುಕನು ಹುಲಿಯನುಂಗಿ ಕಣಿಯ ಕೇಳಿರೊ-ಮುಂದೆ ।
ರಾಕ್ಷಸರು ನುಂಗುವರು ಕಣಿಯ ಕೇಳಿರೊ ॥ ೧೧ ॥

ಕಷ್ಟವಾದೀತು ರಾಜ್ಯದೊಳಗೆ ಕಣಿಯ ಕೇಳಿರೊ-ಮುಂದೆ ।
ರೊಕ್ಕವನ್ನು ತೆಗೆವಾರು ಕಣಿಯ ಕೇಳಿರೊ ॥ ೧೨ ॥

ಗುತ್ತಿಯ ಸೀಮೆಯಲ್ಲಿ ಕಣಿಯ ಕೇಳಿರೊ-ಅವರು ।
ಸತ್ಯವ ಮರೆವಾರು ಕಣಿಯ ಕೇಳಿರೊ ॥ ೧೩ ॥

ಚಿತ್ತಲೆ ತಿರುಗ್ಯಾನು ಕಣಿಯ ಕೇಳಿರೊ-ಅವನು ।
ಸತ್ತು ಹೋಗುವಾನು ಮುಂದೆ ಕಣಿಯ ಕೇಳಿರೊ ॥ ೧೪ ॥

ರಾಯದುರ್ಗದ ಗಿರಿಯಲ್ಲಿ ಕಣಿಯ ಕೇಳಿರೊ-ಅಲ್ಲಿ ।
ಮಾಯದ ಸಿದ್ಧರುಗಳು ಕಣಿಯ ಕೇಳಿರೊ ॥ ೧೫ ॥

ಕಾಯ ಸಿದ್ಧಿಗಳನು ಮಾಡಿ ಕಣಿಯ ಕೇಳಿರೊ-ಅವರು ।
ಸಾಯದೆ ಉಳುವಗೆ ಕಣಿಯ ಕೇಳಿರೊ ॥ ೧೬ ॥

ಆರು ಶಾಸ್ತ್ರವ ಓದಿ ಕಣಿಯ ಕೇಳಿರೊ–ಒಬ್ಬ ।
ಆರೂಢ ಮರೆವಾನು ಕಣಿಯ ಕೇಳಿರೊ ॥ ೧೭ ॥

ಮರಳು ಅರಸ ಕರಸಿಕೊಂಡು ಕಣಿಯ ಕೇಳಿರೊ–ಅವನು ।
ಜರಿದು ಹೋಗುವಾನು ಮುಂದೆ ಕಣಿಯ ಕೇಳಿರೊ ॥ ೧೮ ॥

ಬೊಮ್ಮಗುಂಡ ತಿಪ್ಪೆಯೊಳಗೆ ಕಣಿಯ ಕೇಳಿರೊ–ಅಲ್ಲಿ ।
ನೆಮ್ಮ ಭಾಗ1ಪ್ಪಾರು1 ಉಂಟು ಅಲ್ಲಿ ಕಣಿಯ ಕೇಳಿರೊ ॥ ೧೯ ॥

ಸವತಿಯು ನೀಡುವಾಗ ಕಣಿಯ ಕೇಳಿರೊ–ಅಲ್ಲಿ ।
ಶಿವನು ಕಣ್ಣ ತೆರೆವಾನು ಕಣಿಯ ಕೇಳಿರೊ ॥ ೨೦ ॥

ನೂಕಿದೇವರ ಬೆಟ್ಟದಲ್ಲಿ ಕಣಿಯ ಕೇಳಿರೊ–ಆ ।
[illegible]ಕು ಸಿದ್ಧರು ಕೆಟ್ಟಾರೆಂದು ಕಣಿಯ ಕೇಳಿರೊ ॥ ೨೧ ॥

ದಳಪತಿರಾಯನ ದ್ರವ್ಯವೆಲ್ಲ ಕಣಿಯ ಕೇಳಿರೊ–ಅಯ್ಯ ।
ಮೊಳಕಾಲ ಮುರಿದು ತೆಗೆಸ್ಯಾನು ಕಣಿಯ ಕೇಳಿರೊ ॥ ೨೨ ॥

ಗುಡಿಯ ಕೋಟೆ ಬೊಮ್ಮದೇವಿ ಕಣಿಯ ಕೇಳಿರೊ–ಆ ।
ಎಡೆಯಲಿದ್ದ ದ್ರವ್ಯವೆಲ್ಲ ಕಣಿಯ ಕೇಳಿರೊ ॥ ೨೩ ॥

ಪಡೆದ ಮಗನ ಕೊಂದ ಬಳಿಕ ಕಣಿಯ ಕೇಳಿರೊ–ಅಲ್ಲಿ ।
ಕಡಿದಾಡಿ ಸತ್ತರಿನ್ನು ಕಣಿಯ ಕೇಳಿರೊ ॥ ೨೪ ॥

ಜಟಾಂಗಿಯ ಗಿರಿಯಲ್ಲಿ ಕಣಿಯ ಕೇಳಿರೊ–ಅಲ್ಲಿ ।
ಪಟ್ಟದ ಸಿಂಹಾಸನವು ಕಣಿಯ ಕೇಳಿರೊ * ॥ ೨೫ ॥

ಕುಟ್ಟಿ ಕುರಿಕೋಣಗಳ ಕಣಿಯ ಕೇಳಿರೊ–ಅದ ।
ನೆಟ್ಟನೆ ತಿಗೆವಾರು ಕಣಿಯ ಕೇಳಿರೊ ॥ ೨೬ ॥

ಪಟ್ಟದರಸು ಚೆನ್ನಬಸವ ಕಣಿಯ ಕೇಳಿರೊ–ಅದ ।
ಮೆಟ್ಟಿಯೇರಿ ಮೆರೆವಾನು ಕಣಿಯ ಕೇಳಿರೊ ॥ ೨೭ ॥

1 ಪುರ (ಎ,ಗ.) * ಈ ಪದ್ಯ (ಒ.) ಪ್ರತಿಯಲ್ಲಿಲ್ಲ.



ಸ್ವಾಮಿದೇವರ ಬೆಟ್ಟದಲ್ಲಿ ಕಣಿಯ ಕೇಳಿರೊ–ಅಲ್ಲಿ ।
ರಾಮನ ಮುತ್ತಿನ ಚೆಂಡು ಕಣಿಯ ಕೇಳಿರೊ ॥ ೨೮ ॥

ಅಪ್ಪ ಸಂಗನ ಬಸವಣ್ಣ ಕಣಿಯ ಕೇ೨ರೊ–ಹೋಳಿ ।
ನಪ್ಪನ ಸೀಮೆ ನೇಮಿಸಿದನು ಕಣಿಯ ಕೇಳಿರೊ ॥ ೨೯ ॥

ಪೊಂಪಾಂಬಿಕೆಯ ಎಡಗಡೆಯ ಕಣಿಯ ಕೇಳಿರೊ–ಅಲ್ಲಿ ।
ಸೊಂಪಿನ ವಸ್ತುವುಂಟು ಇನ್ನು ಕಣಿಯ ಕೇಳಿರೊ ॥ ೩೦ ॥

ವಾಲಿಯ ಭಂಡಾರವನ್ನು ಕಣಿಯ ಕೇಳಿರೊ–ಅದರ ।
ಕೀಲನೆ ಕಡಿವಾರು ಕಣಿಯ ಕೇಳಿರೋ ॥ ೩೧ ॥

ಬಾಲೆರೇಳ್ನೂರ ಬಲಿಯು ಕಣಿಯ ಕೇಳಿರೊ–ಅದಕೆ ।
ಸಾಲು ಕುರಿ ಕೋಣ ಲಕ್ಷ ಕಣಿಯ ಕೇಳಿರೊ ॥ ೩೨ ॥

ಅಂಜನ ಗಿರಿಯಲ್ಲಿ ಕಣಿಯ ಕೇಳಿರೊ–ಅಲ್ಲಿ ।
ಪಂಜರದ ಪಕ್ಷಿಯುಂಟು ಕಣಿಯ ಕೇಳಿರೊ ॥ ೩೩ ॥

ಮುಂಜುಗವಿದು ಕಲ್ಲುಮಳೆಯು ಕಣಿಯ ಕೇಳಿರೊ–ಅದು ।
ಕುಂಜರದ ಮಣೆಯಂತೆ ಕಣಿಯ ಕೇಳಿರೊ ॥ ೩೪ ॥

ಬಂಡಿಗಣಿಮೆ ಬಸವನಲ್ಲಿ ಕಣಿಯ ಕೇಳಿರೊ–ಅಲ್ಲಿ ।
ರುಂಡ ಮುಂಡ ಹಳಚ್ಯಾರು ಕಣಿಯ ಕೇಳಿರೊ ॥ ೩೫ ॥

ತುಂಡುಗೆಡದು ಉರುಳಿತಿನ್ನು ಕಣಿಯ ಕೇಳಿರೊ–ಮುಂದೆ ।
ಭುಡಾಟವಾದಿತಿನ್ನು ಕಣಿಯ ಕೇಳಿರೊ* ॥ ೩೬ ॥

1 ಕಸವನ1 ಕಣಿಮೆಯಲ್ಲಿ ಕಣಿಯ ಕೇಳಿರೊ–ಅಲ್ಲಿ ।
2 ನೆತ್ತರನ2 ವಸವಂತ 3 ವಾ3 ಡ್ಯಾರು ಕಣಿಯ ಕೇಳಿರೊ* ॥ ೩೭ ॥

* ಈ ಪದ್ಯಗಳು (ಉ.) ಪ್ರತಿಯಲ್ಲಿಲ್ಲ. 1 ಕಾಸಾರ 2 ವೃತ್ಯದ 3 ವನೋ (ಎ,ಚ.)

ಯೋಚನೆಯಗೊಳ್ಳಬೇಡಿ ಕಣಿಯ ಕೇಳಿರೊ-ಮುಂದೆ ।
ಸೂಚನೆಯ ಪೇಳಿದೆವು ಕಣಿಯ ಕೇಳಿರೊ ॥ ೩೮ ॥

ಪಾಂಚಾಲದೇಶದಲ್ಲಿ ಕಣಿಯ ಕೇಳಿರೊ-ಒಂದು ।
ಪಂಚಾಕ್ಷರಿಯ ಪಿಂಡವಾಗಿ ಕಣಿಯ ಕೇಳಿರೊ ॥ ೩೯ ॥

ಪಂಚಾಶತ್ಕೋಟಿ ಭೂಮಿಯಲ್ಲಿ ಕಣಿಯ ಕೇಳಿರೊ-ಅದು ।
ಸಂಚರಿಸಿ ಮೆರೆವುದು ಕಣಿಯ ಕೇಳಿರೊ ॥ ೪೦ ॥

ಕಾಂಚಿಯ ಪಟ್ಟಣದಲಿ ಕಣಿಯ ಕೇಳಿರೊ-ಅಲ್ಲಿ ।
ಲಂಚಿಯರು ಕೆಡಿಸ್ಯಾರು ಕಣಿಯ ಕೇಳಿರೊ ॥ ೪೧ ॥

ಪಂಚಲಿಂಗವ ಪಾಳು ಮಾಡಿ ಕಣಿಯ ಕೇಳಿರೊ-ಅಲ್ಲಿ ।
ಪೌಜುಕಟ್ಟಿ ಬಾಧಿಸ್ಯಾರು ಕಣಿಯ ಕೇಳಿರೊ ॥ ೪೨ ॥

ಪತಿವ್ರತೆಯರು ಕೆಟ್ಟರಿನ್ನು ಕಣಿಯ ಕೇಳಿರೊ-ಅಲ್ಲಿ ।
ವ್ರತಹೀನರಾದರಿನ್ನು ಕಣಿಯ ಕೇಳಿರೊ ॥ ೪೩ ॥

1ಶೆಟ್ಟಿ1 ರಾಜ್ಯದವರೆಲ್ಲ ಕಣಿಯ ಕೇಳಿರೊ-ಇನ್ನು ।
ಹಿಟ್ಟು ಮಾರಿ ತಿನ್ನುತಾರೆ ಕಣಿಯ ಕೇಳಿರೊ ॥ ೪೪ ॥

ಹಿಟ್ಟುಮಾರಿ ತಿ2ನ್ನುವರಿಗೆ2 ಕಣಿಯ ಕೇಳಿರೊ-ಅವರಿಗೆ ।
ಇಟ್ಟಾಳು ಶಾಪವನ್ನು ಕಣಿಯ ಕೇಳಿರೊ ॥ ೪೫ ॥

ಭಕ್ತಿ ಬರನಾಯಿತು ಕಣಿಯ ಕೇಳಿರೊ-ಮುಂದೆ ।
ಸತ್ತ್ಯವ ತಪ್ಪ್ಯರಿನ್ನು ಕಣಿಯ ಕೇಳಿರೊ ॥ ೪೬ ॥

ಸುತ್ತ ಏಳನೂರು ಗಾವುದ ಕಣಿಯ ಕೇಳಿರೊ-ಅ ।
ಸತ್ಯವ ನುಡಿದರಿನ್ನು ಕಣಿಯ ಕೇಳಿರೊ ॥ ೪೭ ॥

ಚಿತ್ತರದ ಬೊಂಬೆಯೆದ್ದು ಕಣಿಯ ಕೇಳಿರೊ-ಅದು ।
ಸುತ್ತ ಸುತ್ತ ಕುಣಿಯುವದಿನ್ನು ಕಣಿಯ ಕೇಳಿರೊ ॥ ೪೮ ॥

1 ಪಟ್ಟ (ಚ.); ಶಾಂತಿ (ಎ.) 2 ಬ ಮುಂದೆ (ಇ,ಬ.)



ಬೆತ್ತಲಿಗೆ ಬೆತ್ತಲೆಯು ಕಣಿಯ ಕೇಳಿರೊ-ಮುಂದೆ ।
ಕತ್ತಲೆ ಕವಿದೀತು ಲೋಕ ಕಣಿಯ ಕೇಳಿರೊ ॥ ೪೯ ॥

ಪೊಂಪ ಪತಿಯ ದೇಗುಲಕ್ಕೆ ಕಣಿಯ ಕೇಳಿರೊ-ಮುಂದೆ ।
ಪ್ರತಿ ಲಿಂಗವ ಕ1ಟ್ಟ್ಯಾ1ರಿನ್ನು ಕಣಿಯ ಕೇಳಿರೊ ॥ ೫೦ ॥

ಸೊಂಪಿನ ಗೋಪುರದ ಮುಂದೆ ಕಣಿಯ ಕೇಳಿರೊ-ಇನ್ನು ।
ಕೆಂಪು ರಕ್ತ ಕಾರಿತಿನ್ನು ಕಣಿಯ ಕೇಳಿರೊ ॥ ೫೧ ॥

ಹೆಚ್ಚೀತು ತುರುಕರ ಬಲವು ಕಣಿಯ ಕೇಳಿರೊ-ಅಲ್ಲಿ ।
ಹೆಚ್ಚುನೂರು ವರುಷವು ಕಣಿಯ ಕೇಳಿರೊ ॥ ೫೨ ॥

ಹುಚ್ಚುಮಾಡು2ವರವರನ್ನು2 ಕಣಿಯ ಕೇಳಿರೊ-ಅವರು ।
ಬಿಚ್ಚಿ ಗುಡಿಗುಂಡಾರವನು ಕಣಿಯ ಕೇಳಿರೊ ॥ ೫೩ ॥

ಯಾತಾಂಗಿಯ ಮಲ್ಲನಲ್ಲಿ ಕಣಿಯ ಕೇಳಿರೊ-ಮುಂದೆ ।
ತೂತು ಮಾಡಿ ತಿವಿದರು ಕಣಿಯ ಕೇಳಿರೊ ॥ ೫೪ ॥

ಮತ್ತಿ ದಂಡುಗುಂಡದಲ್ಲಿ ಕಣಿಯ ಕೇಳಿರೊ-ಒಂದು ।
ಬೇತಾಳನು ಹುಟ್ಟಿತಿನ್ನು ಕಣಿಯ ಕೇಳಿರೊ ॥ ೫೫ ॥

ಉತ್ತರದ ದೇಶದರಸು ಕಣಿಯ ಕೇಳಿರೊ-ಅವನು ।
ಭಕ್ತಿಯನ್ನು ತಾಳಿಯಾನು ಕಣಿಯ ಕೇಳಿರೊ ॥ ೫೬ ॥

ಹತ್ತು ವರುಷ ಪರಿಯಂತ ಕಣಿಯ ಕೇಳಿರೊ-ಆಗ ।
ಬಂದನು ಚೆನ್ನಬಸವಣ್ಣ ಕಣಿಯ ಕೇಳಿರೊ ॥ ೫೭ ॥

ಬಯಲಿಗೆ ಬಯಲು ಮುಂದೆ ಕಣಿಯ ಕೇಳಿರೊ-ನಿ ।
ರ್ಬಯಲು ಗುರುವಾಗಿ ಬಂದ ಕಣಿಯ ಕೇಳಿರೊ ॥ ೫೮ ॥

ಸಾರಿ ಹೇಳುವೆನು ಮುಂದೆ ಕಣಿಯ ಕೇಳಿರೊ-ಮುಂದೆ ।
ಧಾರಿಣಿಯೊಳಗೆಲ್ಲ ಕಣಿಯ ಕೇಳಿರೊ ॥ ೫೯ ॥

1 ಂಡ್ಯಾ (ಎ.) 2 ತ್ತಲಿಹನು (ಎ.); ವನಕ್ಕೈಯ್ಯ (ಇ,ಬ,ಚ.)

ಮಾರಿ ಮಸಣಿ ದುರ್ಗಿಬಂದ ಕಣಿಯ ಕೇಳಿರೊ-ಅವಳು ।
ಗಾರುಮಾಡಿ ಲೋಕವನ್ನು ಕಣಿಯ ಕೇಳಿರೊ ॥ ೬೦ ॥

ಮೀರಿನೂಕುತ್ತ ಬಂದಳು ಕಣಿಯ ಕೇಳಿರೊ-ಅವಳು ।
ತೆರಳ್ಯಾಳು ಅಪ್ಪ ದಕ್ಷಿಣಕ್ಕೆ ಕಣಿಯ ಕೇಳಿರೊ ॥ ೬೧ ॥

ಪಾರುಮಾಡಿ ಮೂರು ಜಗವ ಕಣಿಯ ಕೇಳಿರೊ-ಶರಣ ।
ಸಾರಿದನು ಎಮ್ಮೆಯ ಬಸವಣ್ಣ ಕಣಿಯ ಕೇಳಿರೊ ॥ ೬೨ ॥

ವಚನ ॥ ದುರ್ಗಿಯ ಸ್ವರೂಪಂ ಪೇಳುವನದೆಂತೆನೆ.

ಪದ

ರಕ್ಕಸಿಯಲ್ಲದೆ ಕೊಕ್ಕಸಿಯಲ್ಲವು ನೋಡಿ ನೋಡಿ-ಅದು ।
ಆಕಾರವೆಂಬುದು ಭೀಕರವಾದೀತು ನೋಡಿ ನೋಡಿ ॥ ಪಲ್ಲವಿ ॥

ಕಂಡರೆ ಬದುಕಾರು ತಾಳಿಸಿಕೊಳ್ಳಾರು ನೋಡಿ ನೋಡಿ-ಅದು ।
ಪಂಡಿತರೆಂಬುವರ ಪಡೆಯಲ್ಲ ನುಂಗೀತು ನೋಡಿ ನೋಡಿ ॥ ೧ ॥

ದುಂಡು ಮೋರೆಯು ಒಂದು ಗುಂಡಿನಗಾತರ ನೋಡಿ ನೋಡಿ-ಕಿವಿಗೆ ।
ಬಂಡಿಯ ಗಾಲಿಯ ಪಾಲೆಯ ಸಿಕ್ಕ್ಯಾಳು ನೋಡಿ ನೋಡಿ ॥ ೨ ॥

ಮೂಗುತಿ ಕಂಭವು ಗಾಣದ ಕಣೆಯುದ್ದ ನೋಡಿ ನೋಡಿ-ಅವಳ ।
ಮೂಗುತಿ ಗುಂಡಿನ್ನು ಗಾಣದ ಗಾತರ ನೋಡಿ ನೋಡಿ ॥ ೩ ॥

ಮೊಳದುದ್ದ ಹಲ್ಲುಗಳು ಮಾರುದ್ದ ಕೊರೇಯು ನೋಡಿ ನೋಡಿ-ಅವಳ ।
ನಾಶಿಕ ವಡ್ಡರ ಗುಡುಸಿಲಿನಂದದಿ ನೋಡಿ ನೋಡಿ ॥ ೪ ॥

ಅಮ್ಮನ ಮೊಲೆಗಳು ಎಮ್ಮೆಯ ತಿದಿಗಳು ನೋಡಿ ನೋಡಿ-ಆಕೆ ।
ತಮ್ಮನೆಂಬುವಾತ ತಾಳೆಯ ಮರದುದ್ದ ನೋಡಿ ನೋಡಿ ॥ ೫ ॥

ಅಮ್ಮಾಜಿ ಕೇಳಿರಿ ಹಿಡಂಬಿ ವಂಶವು ನೋಡಿ ನೋಡಿ-ಆಕೆ ।
ಹೆಮ್ಮಾರಿಯೆಂಬುವ ಚೌಡಿಯು ಒಡಗೊಂಡು ನೋಡಿ ನೋಡಿ ॥ ೬ ॥



ಮತ್ತೆ ಹೇಳುವೆನು ಉತ್ತರದೇಶಕ್ಕೆ ನೋಡಿ ನೋಡಿ-ಅವರಿ ।
ಗೆತ್ತಣ ಬಾಧೆಯೊ ಕುರುಬನ ದೆಸೆಯಿಂದ ನೋಡಿ ನೋಡಿ ॥ ೭ ॥

ಬಿತ್ತಿದ ಬೆಳೆಯನ್ನು ಕತ್ತೆಗಳು ಮೇದಾವು ನೋಡಿ ನೋಡಿ-ಅವರ ।
ಬೆತ್ತಲೆ ಮಾಡಿನ್ನು ಬಲಿನೀರ ಹೊಯ್ವಳು ನೋಡಿ ನೋಡಿ ॥ ೮ ॥

ಘೂರ್ಜರದೇಶವ ಲಜ್ಜೆಯ ಕೆಡಿಸ್ಯಾಳು ನೋಡಿ ನೋಡಿ-ಅವರ ।
ಬೊಜ್ಜು ಹೊಟ್ಟೆಯನೆಲ್ಲ ಜೆಜ್ಜಿಕ್ಕಿ ಕುಟ್ಯಾಳು ನೋಡಿ ನೋಡಿ ॥ ೯ ॥

ವಜ್ರವೈಡೂರ್‍ಯದ ಕದಗಳ ಕಿತ್ತಾಳು ನೋಡಿ ನೋಡಿ-ಅವರ ।
ಅಜ್ಜ ಮುಪ್ಪಿನ ಭಾಗ್ಯ ಜಜ್ಜುಮಾಡ್ಯಾಳು ನೋಡಿ ನೋಡಿ ॥ ೧೦ ॥

ಭಂಡಾರವನು ಹೊತ್ತು ಬಾಧಿಸಿ ಸುಲಿವಾಳು ನೋಡಿ ನೋಡಿ-ಅಲ್ಲಿ ।
ಕುಂದಣ ರಾಶಿಯ ಡಿಳ್ಳಿಗೆ ಹೇರ್‍ಯಾಳು ನೋಡಿ ನೋಡಿ ॥ ೧೧ ॥

ಚಂದ್ರಗುತ್ತಿಯನೊತ್ತಿ ತೆಗೆವಾಳು ಭಾಗ್ಯವ ನೋಡಿ ನೋಡಿ-ಅಲ್ಲಿ ।
ಮಾನವರರಿಯಾದ ಮಂಟಪ ಕಿತ್ತಾಳು ನೋಡಿ ನೋಡಿ ॥ ೧೨ ॥

ತೆಲುಗಾಣ್ಯ ದೇಶವ ಸೆರೆಸೂರೆ ಮಾಡ್ಯಾಳು ನೋಡಿ ನೋಡಿ-ಅಲ್ಲಿ ।
ಆಯ್ಯಾಲು ಗುಡಿಸಿಲೊಂದು ಏಕಾಂತ ಮಾಡ್ಯಾಳು ನೋಡಿ ನೋಡಿ ॥೧೩॥

ಕುಂದಣ ವಾಲಿಯ ಕಣಜವನೊಡೆವಾಳು ನೋಡಿ ನೋಡಿ-ಅಲ್ಲಿ ।
ಕಂದನು ಹಾಲನ್ನು ಕುಡಿಯುವ ಹೊತ್ತಿನಲಿ ನೋಡಿ ನೋಡಿ ॥ ೧೪ ॥

ಅಲ್ಲಿಂದ ಮುಂದಕ್ಕೆ ಮಲೆಯನ್ನು ಹತ್ತುತ ನೋಡಿ ನೋಡಿ-ಅಲ್ಲಿ ।
ಕುರಿಕೋಣ ಕೊಯ್ವಾರು ಏಗಂಡಿ ಗುಡಿಯೊಳಗೆ ನೋಡಿ ನೋಡಿ ॥ ೧೫ ॥

ಗುಂಭಾದ ಶರಣರ ದ್ರವ್ಯವು ದೊರೆಯಾವು ನೋಡಿ ನೋಡಿ-ಇದ ।
ಜಂಬುಲಿಂಗ ಎಮ್ಮೆಯ ಬಸವಣ್ಣ ಸಾರಿದ ನೋಡಿ ನೋಡಿ ॥ ೧೬ ॥

**ವಚನ** ॥ ಈ ರೀತಿಯಲ್ಲಿ ಸಾರುತ್ತ ಇರಲಾಗಿ, ದೊರೆಗಳು ನಿರ್ಬಂಧನವಂ ಮಾಡುತ್ತಿರೆ, ಸ್ತ್ತಿವಿದ್ಯಾ ನಗರದ ಪ್ರಜೆ ಪ್ರಭುಗಳು ಬೆರಗಾಗಿ ಯೋಚನೆಗೊಂಡು, ಬಸವಣ್ಣನ ಮಠಕ್ಕೆ ಬಂದು ನಿಂದಿರಲು, ಆ ನೀಲಲೋಚನೆಯು ಭಕ್ತರಿಗೆ ಎದುರಾಗಿ ಬಂದು ನಮಸ್ಕಾರವಂ ಮಾಡಿ ಕುಳ್ಳಿರಿಸಿ, ರಾಜಾನ್ನದ ನೆಲ್ಲಂ ತಂದು ಒರಳಿಗೆ ಹಾಕಿ ತಳಿಸಿ ಪಾಡುತಿರ್ದಳದೆಂತೆನೆ.

ಎಮ್ಮ ಬಸವಣ್ಣನ
ಕಾಲಜ್ಞಾನ ಸಂಪೂರ್ಣಂ

---

# ನೀಲಮ್ಮನ ಕಾಲಜ್ಞಾನ

---

## ಒರಳಕ್ಕಿ ಪದ

ಸುವ್ವಿ ಬಾ 1ಸ1ಂಗಯ್ಯ ಸುವ್ವಿ ಬಾ 2ಲಿ2ಂಗಯ್ಯ
ಸುವ್ವಿ ಬಾ ಚೆನ್ನಬಸವಯ್ಯ ಸುವ್ವಿ ॥ ಪಲ್ಲವಿ ॥

ಸುವ್ವಿ ಬಾ ಚೆನ್ನಬಸವಯ್ಯ ಬರುವಾಗ ಹುಯ್ಯಲುಬೊಬ್ಬೆ ಜಗಕೆಲ್ಲ ಸುವ್ವಿ*
॥ ಅನು ಪ ॥

ಅಕ್ಕ...ಗಮ್ಮನು ಚಿಕ್ಕ ಒನಕೆಯ ಪಿಡಿದು ।
ಅಕ್ಕಿವಮ್ಮಾನ ತೊಳಿಸುತ್ತ ಸುವ್ವಿ ।
ಅಕ್ಕಿವಮ್ಮಾನ ತೊಳಿಸುತ್ತ ಪಾಡಿದಳು ।
ಮುಕ್ಕಣ್ಣ ಶಿವನು ಬರುವಾಗ ಸುವ್ವಿ* ॥ ೧ ॥

ಮಾತಂಗ ವಳಿದಾವು ಮನ್ಮಥ ಕೆಟ್ಟಾವು ।
ಆತನ ಮಾತು ಹುಸಿಯಲ್ಲ ಸುವ್ವಿ ।
ಆತನ ಮಾತು ಹುಸಿಯಲ್ಲ ಹಂಪೆಯ ।
ಗೋಪುರವೆಲ್ಲಾ ಲಯವೆ3ದ್ದೊ3 ಸುವ್ವಿ ॥ ೨ ॥

ಸೊಪ್ಪಿನ ಕಟ್ಟಿಯಲಿ ಸು4ಲಿ4ವಾನು ಪ್ರಜೆಗಳ ।
ತಪ್ಪದೆ ಮನೆಮನೆಗಳನು ಸುವ್ವಿ ।
ತಪ್ಪದೆ ಮನೆಮನೆಗಳನು ಸುಟ್ಟ್ಯಾರು ।
ಒಪ್ಪದಿಂದ ಊರ ಪ್ರಜೆಗಳನು ಸುವ್ವಿ ॥ ೩ ॥

---

1 ಲಿ 2 ಸ (ಇ,ಒ.) * ಈ ಪದ್ಯಗಳು (ಇ,ಉ,ಎ,ಒ.) ಪ್ರತಿಗಳಲ್ಲಿಲ್ಲ.
3 ಬ್ದು (ಇ.) 4 ರಿ (ಇ,ಚ.)

ಹತ್ತು ಬೆರಳಿಗೆ ಬತ್ತಿಯನ್ನು ಸುತ್ತಿ ಸುವ್ವಿ ।
ಹತ್ತಿಸಿ ಎಣ್ಣೆಬತ್ತಿಗಳನು ಸುವ್ವಿ ।
ಹತ್ತಿಸಿ ಎಣ್ಣೆಬತ್ತಿಗಳಿಂದ ದೊರೆಗಳ ।
ನೆತ್ತಿಯಲಿ ಅಂಬ ಹೊಸೆವರು ಸುವ್ವಿ ॥ ೪ ॥

ಬಾಜ ಬಜಾರವು ರಾಜಬೀದಿಯೊಳಗೆ ।
ಗಾಜಿನ ಬಳೆಗಳ ಹೊಡೆವಾರು ಸುವ್ವಿ ।
ಗಾಜಿನ ಬಳೆಗಳ ಹೊಡೆವಾರು ಮುಂದಿನ್ನು ।
ಮೂಜಗವೆಲ್ಲ ಬೆರಗಾಗೆ ಸುವ್ವಿ ॥ ೫ ॥

ಗುಡಿಗೋಪುರಗಳ 1ಹೊಡೆ1ವಾರು ತುರುಕರು ।
ಹೊಡೆವಾರು ದೇವ ಪ್ರತುಮೆಗಳ ಸುವ್ವಿ ।
ಹೊಡೆವಾರು ದೇವ ಪ್ರತುಮೆಗಳ ದೇಗುಲಕ್ಕೆ ।
ಅವ್ವಾವನೆತ್ತಿ ಹೊಡೆವಾರು ಸುವ್ವಿ ॥ ೬ ॥

ಬೆಂದೀತು ಪಟ್ಟಣ ನಿಂದು ದೇಗುಲವೆಲ್ಲ ।
ನಂದಿಯ ಕಂಭವ ಮುರಿವಾರು ಸುವ್ವಿ ।
ನಂದಿಯ ಕಂಭವ ಮುರಿವಾರು ಎಡಬಲದ ।
ಚೊದ್ರ ಶಾಲೆಗಳ ಕೆಡಿಸ್ಯಾರು ಸುವ್ವಿ ॥ ೭ ॥

2ಗು2ಂಡುಗನ ಕೆರೆಯಲ್ಲಿ ಮುಂಡೇರು 3ಬಿ3ದ್ದಾರು ।
ರುಂಡ ಮುಂಡಗಳು ಕೆಡುವವು ಸುವ್ವಿ ।
ರುಂಡ ಮುಂಡಗಳು ಕೆಡುವವು ತೆಲುಗರ ।
ಬುಡು ಮಾಡ್ಯಾರು ತುರುಕರು ಸುವ್ವಿ ॥ ೮ ॥

ಗೌಡಹಿರಿಯ4ರೆಲ್ಲ4 ಗರ್ವದಲ್ಲಿರ ಬೇಡಿ ।
ಪ್ರೌಢರಾದವರು ಕೇಳಿರಯ್ಯ ಸುವ್ವಿ ।

---

1 ಕೆಡು (ಇ,ಒ,ಚ.) 2 ಗ (ಇ,ಎ.) 3 ಸಿ (ಇ.)
4 ರಲ್ಲಿ (ಅ,ಎ,ಒ,ಕ,ಗ.)



ಪ್ರೌಢರಾದವರು ಕೇಳಿ ಶಿವನಾಣೆ ಹುಸಿಯಲ್ಲ ।
ಕಿವ್ಡರಾಗಿರಬೇಡಿ ಕೇಳಿರಣ್ಣ ಸುವ್ವಿ ॥ ೯ ॥

ಮಳೆ ಬಂದಿತೆಂಬ ಮನದೊಳಗೆ ಸಂತೋಷವೆಂ ।
ದುಳದೆವೆಂದನ ಬೇಡಿರಣ್ಣಾ ಸುವ್ವಿ ।
ಬೆಳೆದ ಭತ್ತವನೆಚ್ಚಿ ಭಂಗಾರವನ್ನೆಲ್ಲ ।
ಕಳೆದೆವೆಂದೆನಬೇಡಿ ಕೇಳಿರಣ್ಣಾ ಸುವ್ವಿ ॥ ೧೦ ॥

ಬೆಂಡುಗಳು ಮುಳಿಗ್ಯಾವು ಗುಂಡುಗಳು ತೇಲ್ಯಾವು ।
ಕೆಂಡದ ಮಳೆ ಇನ್ನು ಕರೆವಾವು ಸುವ್ವಿ ।
ಕೆಂಡದ ಮಳೆ ಇನ್ನು ಕರೆವಾವು ಮರ್ತ್ಯವು ।
ಭಂಡಾಗಿ ಹೋದೀತು ಬಸವಣ್ಣ ಸುವ್ವಿ ॥ ೧೧ ॥

ರಾಚೂರು ಕತ್ತಲೆ ಮುದುಗಲ್ಲು ಬೆತ್ತಲೆ ।
ಮಾಚನೂರೆಂಬ ಮಡುವಿನಲಿ ಸುವ್ವಿ ।
ಮಾಚನೂರೆಂಬ ಮಡುವಿನಲಿ ಹಾಕಿದ ।
ಪಾ1ಚು1 ಸುರಗಿಯ ತೆಗೆವಾರು ಸುವ್ವಿ ॥ ೧೨ ॥

ಚಂದ್ರಗುತ್ತಿಯ2ರಾಯ2 ಅಂದಿನ ಪಾಪವು ।
ಸಂದು ಹೋದಾನು ಗಂಗೆಯೊಳಗೆ ಸುವ್ವಿ ।
ಸಂದು ಹೋದವನ ಪಾಪವ ಕಳೆವುದಕೆ ।
ಬಂದನು ಚೆನ್ನಬಸವಣ್ಣ ಸುವ್ವಿ ॥ ೧೩ ॥

ಈಶಾನ್ಯ ಕೋಣೆಯಲಿ ಬೀಸೀತು ಬಿರುಗಾಳಿ ।
ದೇಶದಲಿ ಚ3ಲ್ಲ3ವರಿದಾವು ಸುವ್ವಿ ।
ದೇಶದಲಿ ಚಲ್ಲವರಿದಾವು ಭಾಷೆ ಪಾಲಕ ಚೆನ್ನಬಸವಣ್ಣ ಬರುವಾಗ ।
ಮೋಸವಾದೀತು ಮೂವರಿಗೆ ಸುವ್ವಿ ॥ ೧೪ ॥

---

1 ಚ್ಚ (ಒ.) 2 ರ (ಅ,ಕ,ಗ.); ರಾಜ (ಎ.) 3 ಲ್ಲಿ (ಇ,ಒ.)

ಆರೆತ್ತು ಆರೆಮ್ಮೆ ಆರು[1] ಕಾಲಿ[1]ನ ಬಂಡಿ ।
ದಾಯಾದ್ಯರದಕೆ ಒಡೆಯರು ಸುವ್ವಿ ।
ದಾಯದ್ಯರದಕೆ ಒಡೆಯರು ಮತ್ತಿನ್ನು ।
ವೀರ ಬಸವಣ್ಣ ಬರುವಾಗ ಸುವ್ವಿ ॥ ೧೫ ॥

ಊರಿಗೆ ಹೋದಣ್ಣ ಊರತ್ತಲೆ ಬಯಲು ।
ನೀರಿಗೆ ಹೋದ ಹಿರಿಯಕ್ಕ ಸುವ್ವಿ ।
ನೀರಿಗೆ ಹೋದ ಹಿರಿಯಕ್ಕನ ಮನೆಯಲ್ಲಿ ।
ಬೇರೆ ಕೂಸಿಲ್ಲ ಆಳುತಾರೆ ಸುವ್ವಿ ॥ ೧೬ ॥

ಊರು ಊರಿಗೆ ಹುಯ್ಯಲು ಕೇರಿ ಕೇರಿಗೆ ಜಗಳ ।
ಚೋರರ ಹಾವಳಿ ಘನವೆದ್ದು ಸುವ್ವಿ ।
ಚೋರರ ಹಾವಳಿ ಘನವೆದ್ದು ಲೋಕವ ।
ಹೋರಾಟ ಮಾಡಿ ಕೆಡಿಸ್ಯಾರು ಸುವ್ವಿ ॥ ೧೭ ॥

ಪಾತಾಳ ಬತ್ತೀತು ಓತು ಚಿಪ್ಪಿಲಿ ತುಂಬಿ ।
ಭೂತಾಳ[2] ವೆದ್ದು[2] ಮಡಿದೀತು ಸುವ್ವಿ ।
ಭೂತಳ[3] ವೆದ್ದು[3] ಮಡಿದೀತು ಮೂದಿನ್ನು ।
ಆತ ಚೆನ್ನಬಸವಣ್ಣ ಬರುವಾಗ ಸುವ್ವಿ ॥ ೧೮ ॥

ತುಂಗಭದ್ರೆಯು ಬತ್ತಿ ಸಂಗಮದೆಡೆ[4] ದಾ[4] ವು ಅ ।
ಮಂಗಲವಾದೀತು ಬಸವಣ್ಣ ಸುವ್ವಿ ಅ ।
ಮಂಗಲವಾದೀತು ಬಸವಣ್ಣ ಆದೀಪ ।
ತಿಂಗತಿಂಗಳಿಗೆ ಉದ್ಭವಿಸೀತು ಸುವ್ವಿ ॥ ೧೯ ॥

ಕಪ್ಪಡಿಸಂಗಮ ತಾನು ಹೇಳಿದ ಮಾತು ।
ಅಪ್ಪ ಬಸವಣ್ಣ ಬರುವದನು ಸುವ್ವಿ ।

1 ಕಟ್ಟ (ಅ, ಇ, ಎ, ಒ, ಕ, ಗ, ಚ.) 2-3 ಬಂದು (ಎ, ಚ.)
4 ಪಾ (ಇ, ಒ, ಚ.)



ಅಪ್ಪ ಬಸವಣ್ಣ ಬರುವದು ಏಳ್ನೂರು ।
ಎಪ್ಪತ್ತು ವರುಷಕ್ಕೆ ಬರುತಾನೆ ಸುವ್ವಿ ॥ ೨೦ ॥

ಉದ್ಯಾನ ವೀರಭದ್ರನ ಎಡೆಗಡೆಯ ।
ವಿಧ್ರುಮವಾದ ಪೆಟ್ಟಿಗೆಯು ಸುವ್ವಿ ।
ವಿಧ್ರುಮವಾದ ಪೆಟ್ಟಿಗೆಯೊಳಗಣ ।
ಮುದ್ದು ಮಾಣಿಕವ ತೆಗೆವಾರು ಸುವ್ವಿ ॥ ೨೧ ॥

ಹೇಮಕೂಟದಿ ರಘುರಾಮರ ಕೂಟವ ।
ಧೂಮಕೇತು ಬಂದು ತೆಗೆಸ್ಯಾನು ಸುವ್ವಿ ।
ಧೂಮಕೇತು ಬಂದು ತೆಗೆಸಿದ ವಸ್ತುವ ।
ಸ್ವಾಮಿ ಬಸಪ್ಪನ ಕೃಪೆಯಿಂದ ಸುವ್ವಿ ॥ ೨೨ ॥

ಹೊರ ಊರ ಬೈಲಲ್ಲಿ ಮುಸುಕೀತು ಜಗಳವು ।
ವಸವಂತವಾಡ್ಯಾರು ಶ್ರೋಣಿತವ ಸುವ್ವಿ ।
ವಸವಂತವಾಡ್ಯಾರು ಶ್ರೋಣಿತದ ಭಾಗ್ಯವ ।
ಮಿಸುನಿಯ ಕಣಜವು ಮಿಸುಕೀತು ಸುವ್ವಿ ॥ ೨೩ ॥

ರುದ್ರ ಪಾದದಲ್ಲಿ ಭದ್ರ ಮಂಟಪದಲ್ಲಿ ।
ಸಿದ್ಧರಸದ ಕೊಳವುಂಟು ಸುವ್ವಿ ।
ಸಿದ್ಧರಸದ ಕೊಳವುಂಟು ಸಾಧಿಸಿ ।
ಮುದ್ದು ಬಸವಣ್ಣ ತೆಗೆಸ್ಯಾನು ಸುವ್ವಿ ॥ ೨೪ ॥

ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು ।
ನಂದಿಯ ಹಬ್ಬ ಅಮವಾಸ್ಯ ಸುವ್ವಿ ।
ನಂದಿಯ ಹಬ್ಬ ಅಮವಾಸ್ಯದಿನದಲ್ಲಿ ।
ಚಂದ್ರ ಸೂರ್ಯ[1] ರ[1] ಗ್ರಹಣವು ಸುವ್ವಿ ॥ ೨೫ ॥

1 ರು (ಇ.)

ನಾರಿ ಒಬ್ಬಳು[1] ಒಂದು[1] ಭಾರಿಗಪ್ಪರ ಹೊತ್ತು ।
ಆರೂಢ ಭಿಕ್ಷವ ಬೇಡ್ಯಾಳು ಸುವ್ವಿ ।
ಆರೂಢ ಭಿಕ್ಷವ ಬೇಡ್ಯಾಳು ಮುಂದಿನ್ನು ।
ವೀರ ಬಸವಣ್ಣ ಬರುವಾಗ ಸುವ್ವಿ ॥ ೨೬ ॥

ಅಂದಿಗೆ ಬಸವಣ್ಣ ಬಂದನು ಎಂಬುದಕೆ ।
ಒಂದು ಸೂಚನೆಯ ಪೇಳಿದೆನು ಸುವ್ವಿ ।
ಒಂದು ಸೂಚನೆಯ ಪೇಳೇನು ಕೇಳಣ್ಣ ।
ಮುಂದೆ ಸಾರುವ ದಿನಗಳನು ಸುವ್ವಿ ॥ ೨೭ ॥

ರಾಮರೆಂಬರ ಮೂವರ ತಲೆಗಳ ।
ನೇಮಿಯ ಸೀಮೆಯ ಕಾಶಿಯಲ್ಲಿ ಸುವ್ವಿ ।
ನೇಮಿಯ ಸೀಮೆಯ ಕಾಶಿಯಲಿ ಕೂಡಿದರೆ [2]ರಘು[2] ।
ರಾಮಲಿಂಗವು ಆದವು ಸುವ್ವಿ ॥ ೨೮ ॥

ಒಂಬತ್ತು ಕೆರೆಯಲ್ಲಿ ಒಂಬತ್ತು ರತ್ನವು ।
ಎಂಬುದ ಪರಶಿವ ತಾ ಬಲ್ಲ ಸುವ್ವಿ ।
ಎಂಬುದ ಪರಶಿವ ತಾ ಬಲ್ಲ ರತ್ನವ ।
ಕುಂಭಿಣಿಗೆಲ್ಲ ತೋರಿಸ್ಯಾನು ಸುವ್ವಿ ॥ ೨೯ ॥

ಪರ್ವತಗೇರಿಯಲಿ ಪರಿಣಾಮ ಕೆಟ್ಟೀತು ।
[3]ಸ[3]ರ್ವವು ಎಲ್ಲ ವ್ರತಗೆಟ್ಟು ಸುವ್ವಿ ।
[4]ಸ[4]ರ್ವವು ಎಲ್ಲ ವ್ರತಗೆಟ್ಟು ಹೋಗುವರು ।
ಸುರ ಪಾನವೆಲ್ಲ ಮಾಡ್ಯಾರು ಸುವ್ವಿ ॥ ೩೦ ॥

ಮಹಂಕಾಳಿಯ ಮುಂದೆ ಆಕಳ [5]ಕೊ[5]ಯ್ವ್ಯಾರು ।
ಲೋಕವನಾಳುವ ರ[6]ಣ[6] ದೇವ ಸುವ್ವಿ ।

---

1 ಮುಂದೆ (ಉ.) 2 ಆದು (ಎ,ಬ.) 3 4 ಗ (ಎ,ಚ,)
5 ಹೊ (ಇ,ಬ,ಜ.) 6 ಣ್ಣ (ಅ,ಉ,ಎ,ಕ,ಗ)